ಬುಧವಾರ, ಸೆಪ್ಟೆಂಬರ್ 14, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಟ್ರೇಲರ್ ಬಿಡುಗಡೆ

ಮುಂಬೈನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ಹುಶ್ ಹುಶ್' ವೆಬ್ ಸರಣಿಯ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ಸೋಹಾ ಅಲಿ ಖಾನ್ ಪಾಲ್ಗೊಂಡಿದ್ದರು

JEE (Advanced) 2022

ಆಕಾಶಿಯನ್ನರು ಮತ್ತೆ ಪ್ರಜ್ವಲಿಸುತ್ತಿದ್ದಾರೆ

Aakash + BYJU'S

ALL INDIA RANK (Female) 1

Tanishka Kabra AIR 16 (CRL)
4 Year Classroom Program

1872* Aakashians Qualified in JEE (Advanced) 2022
1563 Classroom, 309 Distance & Digital

35 in Top 100 AIR (All India Rank)
131 in Top 500 AIR (All India Rank)
247 in Top 1000 AIR (All India Rank)

Including Classroom, DLP / Digital students in all categories
*Still Counting

ZONE TOPPER (Female) IIT Bombay Zone AIR 32
Jaladhi Joshi
5 Year Classroom Program

TOP 5 in ZONE (IIT Kanpur Zone) AIR 189
Kanak Barfa
2 Year Classroom Program

ತರಗತಿಯ ಕಾರ್ಯಕ್ರಮದಿಂದ ಅತ್ಯುತ್ತಮ ಶ್ರೇಣಿಯಿಂದ ಉತ್ತೀರ್ಣರಾದ ವಿದ್ಯಾರ್ಥಿಗಳು

AIR 91 Ananya Rao, 2 Yr. Classroom
AIR 99 Hemanshu Garg, 5 Yr. Classroom
AIR 136 Apoorv Tandon (Our Karnataka Topper), 2 Yr. Classroom
AIR 148 Mridul Gupta, 4 Yr. Classroom
AIR 159 Anshuman Jindal, 2 Yr. Classroom
AIR 207 Sayandeep B., 1 Yr. Classroom
AIR 218 Vedant A. Tayade, 2 Yr. Classroom
AIR 242 Sahil Kumar, 3 Yr. Classroom
AIR 248 Sujan Jain, 3 Yr. Classroom
AIR 311 Atish Kumar Sahoo, 4 Yr. Classroom
AIR 318 Dev Elvis Kannath, 2 Yr. Classroom
AIR 321 Aryaman A., 2 Yr. Classroom
AIR 363 Nimay Upen Shah, 1 Yr. Classroom
AIR 410 Mrigank Pawagi, 2 Yr. Classroom
AIR 431 Anubhav Pandey, 4 Yr. Classroom
AIR 450 Anamika, 2 Yr. Classroom
AIR 465 Manav Patel, 2 Yr. Classroom
AIR 468 Nikil S, 2 Yr. Classroom
AIR 499 Daksh Arora, 2 Yr. Classroom

Scan the code to check all the ranks & hear what the toppers have to say.

Though every care has been taken to publish the result correctly, yet Aakash Educational Services Ltd. shall not be responsible for inadvertent error, if any.

and many more success stories...

Admissions Open - Repeater / XII Passed Batches (JEE / NEET 2023)

Get up to 50% Scholarship*
Appear for Instant Admission & Scholarship Test
To Register for FREE
visit: iacst.aakash.ac.in or scan the code
*Terms and conditions apply.

ANTHE
AAKASH NATIONAL TALENT HUNT EXAM
Your Gateway To Success
5 to 13 Nov. 2022
*Terms & Conditions apply.
NASA
*Win an all expense paid trip to NASA
Up to 100% Scholarship
Register for Free
Visit: anthe.aakash.ac.in
Scan the QR code to Register

25 Branches in Karnataka

BENGALURU
HSR Layout: 8800013044
Hebbal: 8800013045
Whitefield: 8800013049
Banaswadi: 9311476789
Rajarajeshwari Nagar: 7836999994
Indiranagar: 8800013046
Jayanagar: 8800013047
Rajajinagar: 8800013048
Banerghatta Road: 8800013043
T. Dasarahalli: 8800878217
Seegehalli: 8800902396
KOLAR: 8800876124
MYSORE
Kuvempunagar: 8800013052
Near Suburban Bus Stand: 7428899148
MANDYA: 8800901164
BELAGAVI: 8800012965
HUBBALLI: 8800013051
DHARWAD: 8800909381
BALLARI: 8800898251
KALABURAGI: 8800901459
MANGALURU: 8800012964
UDUPI: 8800898735
DAVANAGERE: 8800898210
SHIVAMOGGA: 8800898692
HASSAN: 8800897304

Scan code to locate the nearest centre

Download Aakash App
GET IT ON Google Play
Download on App Store
CALL (TOLL-FREE) 1800-102-2727
VISIT aakash.ac.in
Aakash + BYJU'S

ಬುಧವಾರ, ಸೆಪ್ಟೆಂಬರ್ 14, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 255 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಆಕ್ಸಿಜನ್ ಅಣುಗಳ ಸಾಂದ್ರತೆಯನ್ನು ಬದಲಾಯಿಸಿದರೆ ಆಯುಸ್ಸನ್ನೂ ಬದಲಾಯಿಸಬಹುದೇ? ಆ್ಯಂಟಿಆಕ್ಸಿಡೆಂಟುಗಳೆಂಬ ಪದಾರ್ಥಗಳು ಇದಕ್ಕೆ ನೆರವಾಗಬಹುದೆನ್ನುವ ಚಿಂತನೆ ನಡೆದಿದೆ.

ಆಳ-ಅಗಲ ರಾಜಕೀಯ ನಾಯಕರ ದುಬಾರಿ ದಿರಿಸು

ಲೈಂಗಿಕ ಕಿರುಕುಳ: ಪ್ರಾಚಾರ್ಯ ಸೇರಿ ಇಬ್ಬರ ಬಂಧನ 7

'ನಿಮಗೆ ಹೆದರೋ ಮಕ್ಕಳು ನಾವಲ್ಲ' 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,571 ▲	18,070 ▲	₹52,200 (ಬೆಂಗಳೂರು) ▼	₹58,200 (ಬೆಂಗಳೂರು) ▲	79.17 ▲

ಬಿಜೆಪಿ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ: ವಿಡಿಯೊ ಬಿಡುಗಡೆ

ಲಂಚದ ಪಟ್ಟಿ ಕೊಟ್ಟ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುತ್ತಿರುವ ವಿರೋಧ ಪಕ್ಷ ಕಾಂಗ್ರೆಸ್, ತನ್ನ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಿದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಲಂಚದ ದರಪಟ್ಟಿ (ರೇಟ್ ಕಾರ್ಡ್) ಮತ್ತು ಭ್ರಷ್ಟಾಚಾರದ ವಿವಿಧ ಸ್ವರೂಪಗಳ ಚಿತ್ರಣ ನೀಡುವ ವಿಡಿಯೊ ತುಣುಕುಗಳನ್ನು ಮಂಗಳವಾರ ಬಿಡುಗಡೆ ಮಾಡಿದೆ.

ಶೇಕಡ 40ರಷ್ಟು ಕಮಿಷನ್ ಆರೋಪವನ್ನು ಮುಂದಿಟ್ಟುಕೊಂಡು ಬಿಜೆಪಿ ಸರ್ಕಾರದ ವಿರುದ್ಧ ಅಭಿಯಾನವೊಂದನ್ನು ನಡೆಸಲು ರಾಜ್ಯ ಕಾಂಗ್ರೆಸ್ ಸಜ್ಜಾಗಿದೆ. ಅದಕ್ಕೆ ಪೂರಕವಾಗಿ ದರಪಟ್ಟಿ ಬಿಡುಗಡೆ ಮಾಡಿದ್ದು, ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿವೆ ಎನ್ನಲಾದ ಹಗರಣಗಳ ಪಟ್ಟಿಯನ್ನೂ ನೀಡಿದೆ. ವಿವಿಧ ಹುದ್ದೆಗಳಿಗೆ ನೇಮಕಾತಿ ಹಾಗೂ ಅಧಿಕಾರಿಗಳ ವರ್ಗಾವಣೆಗೆ ಸಂಬಂಧಿಸಿದಂತೆಯೂ ಲಂಚದ ದರಪಟ್ಟಿ ಪ್ರಕಟಿಸಿದೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಈಶ್ವರ ಖಂಡ್ರೆ, ಸಲೀಂ ಅಹ್ಮದ್, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್, ಕೆಪಿಸಿಸಿ ಸಂವಹನ ವಿಭಾಗದ ಅಧ್ಯಕ್ಷ ಪ್ರಿಯಾಂಕ್ ಖರ್ಗೆ, ಉಪಾಧ್ಯಕ್ಷ ಮನ್ಸೂರ್ ಅಲಿಖಾನ್ ಅವರು ಬಿಜೆಪಿ ಸರ್ಕಾರದ ವಿರುದ್ಧ ಅಭಿಯಾನಕ್ಕೆ ಸಿದ್ಧಪಡಿಸಿರುವ 'ಲಂಚದ ದರ ಪಟ್ಟಿ'ಯ ಭಿತ್ತಿಪತ್ರಗಳನ್ನು ಬಿಡುಗಡೆ ಮಾಡಿದರು.

7ನೇ ಪುಟ ನೋಡಿ

ಸರ್ಕಾರದ ಡೀಲ್‌ಗಳು	ಶೇಕಡವಾರು ಲಂಚ
ಕೋವಿಡ್ ಕಿಟ್ ಪೂರೈಕೆ	75
ಲೋಕೋಪಯೋಗಿ ಒಪ್ಪಂದ	40
ಮಠಕ್ಕೆ ಅನುದಾನ	40
ಉಪಕರಣಗಳ ಪೂರೈಕೆ	40
ಮೊಟ್ಟೆ ಪೂರೈಕೆ	30
ಹುದ್ದೆಗಳು	**ನಿಗದಿಯಾದ ದರ**
ಬೆಸ್ಕಾಂ	₹1 ಕೋಟಿ
ಪ್ರಾಧ್ಯಾಪಕ	₹70 ಲಕ್ಷ
ಪಿಎಸ್‌ಐ	₹80 ಲಕ್ಷ
ಉಪನ್ಯಾಸಕ	₹50 ಲಕ್ಷ
ಎಫ್‌ಡಿಎ	₹30 ಲಕ್ಷ
ಬಮುಲ್	₹25 ಲಕ್ಷ
ಪೊಲೀಸ್ ಕಾನ್‌ಸ್ಟೆಬಲ್	₹8 ಲಕ್ಷ
ಬಿಡಿಎ ಆಯುಕ್ತ	₹15 ಕೋಟಿ
ಕೆಪಿಎಸ್‌ಸಿ ಅಧ್ಯಕ್ಷ	₹16 ಕೋಟಿ
ಕುಲಪತಿ	₹10 ಕೋಟಿ
ಡಿಸಿ, ಎಸ್‌ಪಿ	₹16 ಕೋಟಿ
ಎಸಿ, ತಹಶೀಲ್ದಾರ್	₹3 ಕೋಟಿ
ಉಪನೋಂದಣಾಧಿಕಾರಿ	₹5 ಕೋಟಿ

'ಧ್ವನಿ ಎತ್ತಿದರೆ ಐ.ಟಿ, ಇ.ಡಿ ದಾಳಿ'

'ಇದೇ ಬಿಜೆಪಿ ಸರ್ಕಾರದಲ್ಲಿ ಹಿಂದೆ 'ವಿಜಯೇಂದ್ರ ತೆರಿಗೆ' ಹೆಸರಿನಲ್ಲಿ ಹಣ ವಸೂಲಿ ಮಾಡಲಾಗುತ್ತಿತ್ತು. ಶಾಸಕನೂ ಅಲ್ಲದ, ಬಿಜೆಪಿ ಪದಾಧಿಕಾರಿಯೊಬ್ಬ ಸರ್ಕಾರದ ಮೇಲೆ ಹಿಡಿತ ಸಾಧಿಸಿದ್ದರು. ಈ ಬಗ್ಗೆ ಪ್ರಶ್ನಿಸಿದ ಕಾಂಗ್ರೆಸ್ ಮುಖಂಡರ ಮೇಲೆ ಆದಾಯ ತೆರಿಗೆ (ಐ.ಟಿ), ಜಾರಿ ನಿರ್ದೇಶನಾಲಯದ (ಇ.ಡಿ) ಮೂಲಕ ದಾಳಿ ಮಾಡಿಸಲಾಗಿತ್ತು' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆರೋಪಿಸಿದರು.

'ಬೆಂಗಳೂರಿನಲ್ಲಿ ಪ್ರವಾಹದಿಂದಾಗಿರುವ ಸಮಸ್ಯೆ ನಿವಾರಣೆಯಲ್ಲಿ ಸರ್ಕಾರದ ವೈಫಲ್ಯದ ಕುರಿತು ಉದ್ಯಮಿಯೊಬ್ಬರು ಇತ್ತೀಚೆಗೆ ಧ್ವನಿ ಎತ್ತಿದ್ದರು. ಮರುದಿನವೇ ಅವರ ಒಡೆತನದ ಸಂಸ್ಥೆಗಳ ಮೇಲೆ ಐ.ಟಿ ದಾಳಿ ನಡೆದಿದೆ' ಎಂದರು.

ಅಭಿಯಾನಕ್ಕೆ ಸಜ್ಜು

ಭ್ರಷ್ಟಾಚಾರದ ವಿಚಾರದಲ್ಲಿ ಬಿಜೆಪಿ ಸರ್ಕಾರದ ವಿರುದ್ಧ ಅಭಿಯಾನ ನಡೆಸುವುದಕ್ಕಾಗಿ ಡಿಜಿಟಲ್ ಸಂವಹನ ಮಾಧ್ಯಮಗಳನ್ನು ಬಳಸಿಕೊಳ್ಳಲು ಕೆಪಿಸಿಸಿ ಮುಂದಾಗಿದೆ. ಇದಕ್ಕಾಗಿ ಮೊಬೈಲ್ ಸಂಖ್ಯೆ 8447704040ರ ಸಹಾಯವಾಣಿ ಆರಂಭಿಸಲಾಗಿದೆ. ವಾಟ್ಸ್‌ಆ್ಯಪ್ ಮೂಲಕವೂ ಮಾಹಿತಿ ಹಂಚಿಕೊಳ್ಳಬಹುದು. www.40percentsarkaara.com ಎಂಬ ವೆಬ್‌ಸೈಟ್ ರೂಪಿಸಿದ್ದು, ಅಲ್ಲಿಯೂ ಮಾಹಿತಿ ನೀಡಬಹುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಒಳ ಪುಟ

34 ಔಷಧಗಳ ದರ ಇಳಿಕೆ ಸಾಧ್ಯತೆ 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಗರ್‌ಹುಕುಂ: ಸಕ್ರಮಕ್ಕೆ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಜಮೀನಿನ ಸಕ್ರಮಕ್ಕೆ ಮತ್ತೊಂದು ವರ್ಷ ಅವಧಿ ವಿಸ್ತರಿಸಲು ಮುಂದಾಗಿರುವ ಸರ್ಕಾರ, ಅದಕ್ಕಾಗಿ ಕಾಯ್ದೆಗೆ ತಿದ್ದುಪಡಿ ತಂದಿದೆ.

ಸರ್ಕಾರಿ ಭೂಮಿಯಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವವರು ಸಕ್ರಮಕ್ಕಾಗಿ ನಮೂನೆ–57 ರಲ್ಲಿ ಅರ್ಜಿ ಸಲ್ಲಿಸಲು ಇರುವ ಕೊನೆಯ ದಿನಾಂಕ ವಿಸ್ತರಿಸುವುದಕ್ಕಾಗಿ ತಂದಿರುವ 'ಕರ್ನಾಟಕ ಭೂಕಂದಾಯ (ತಿದ್ದುಪಡಿ) ಮಸೂದೆ–2022' ಅನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಕಂದಾಯ ಸಚಿವ ಆರ್.ಅಶೋಕ ಪರವಾಗಿ ಸಚಿವ ಗೋವಿಂದ ಕಾರಜೋಳ ಮಸೂದೆ ಮಂಡಿಸಿದರು. ಮೇ 26ರಂದು ಈ ಸಂಬಂಧ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು. ಇದೀಗ ಮಸೂದೆ ಮಂಡಿಸಲಾಗಿದೆ.

2005ರ ಜನವರಿ 1ಕ್ಕೂ ಹಿಂದಿನಿಂದ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಸಾಗುವಳಿ ಮಾಡುತ್ತಿರುವವರು ಸಕ್ರಮಕ್ಕೆ ಅರ್ಜಿ ಸಲ್ಲಿಸಲು 2018ರ ಮಾರ್ಚ್ 17ರಿಂದ 2019ರ ಮಾರ್ಚ್ 16ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಆದರೆ, ಆಗ ಲೋಕಸಭೆಯ ಚುನಾವಣೆ ಘೋಷಣೆಯಾಗಿದ್ದರಿಂದಾಗಿ 2019ರ ಮಾರ್ಚ್ 10ರಿಂದ ಅರ್ಜಿ ಸ್ವೀಕರಿಸಿರಲಿಲ್ಲ. ಅವಧಿಯನ್ನು ವಿಸ್ತರಿಸುವಂತೆ ಶಾಸಕರು ಮತ್ತು ಸಾರ್ವಜನಿಕರಿಂದ ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆಯೊಳಗೆ ಮತ್ತೆ ಅವಧಿ ವಿಸ್ತರಿಸಲು ಕಾಯ್ದೆಗೆ ತಿದ್ದುಪಡಿ ತರಲಾಗಿದೆ.

ಆದ್ದರಿಂದ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964, 94ಎ ಅನ್ನು ತಿದ್ದುಪಡಿ ಮಾಡುವುದರ ಮೂಲಕ ನಮೂನೆ 57 ಅರ್ಜಿ ಸಲ್ಲಿಕೆಗೆ ಸಮಯ ವಿಸ್ತರಿಸಲು ಮಸೂದೆಗೆ ತಿದ್ದುಪಡಿ ಅಗತ್ಯವಿದೆ ಎಂದು ಹೇಳಿದೆ.

ಆಮ್ಲಜನಕ ಕೊರತೆಯಿಂದ ಸಾವು: ಆಡಿಟ್‌ಗೆ ಶಿಫಾರಸು

ನವದೆಹಲಿ (ಪಿಟಿಐ): ಕೋವಿಡ್‌ನಿಂದಾಗಿ ಅದರಲ್ಲೂ ವಿಶೇಷವಾಗಿ ಎರಡನೇ ಅಲೆಯ ಅವಧಿಯಲ್ಲಿ ಆಮ್ಲಜನಕ ಕೊರತೆಯಿಂದ ಎಷ್ಟು ಜನರು ಮೃತರಾಗಿದ್ದಾರೆ ಎಂಬ ಬಗ್ಗೆ ಲೆಕ್ಕ ಪರಿಶೋಧನೆ ನಡೆಸಬೇಕು ಎಂದು ಸಂಸತ್ತಿನ ಆರೋಗ್ಯ ಸ್ಥಾಯಿ ಸಮಿತಿಯು ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಶಿಫಾರಸು ಮಾಡಿದೆ. ಕೋವಿಡ್ ಸಾವುಗಳ ದೃಢವಾದ ದಾಖಲೆ ಸಿದ್ಧಪಡಿಸಲು ರಾಜ್ಯಗಳ ಜತೆಗೆ ಸಮನ್ವಯದಿಂದ ಈ ಕೆಲಸ ಆಗಬೇಕು ಎಂದಿದೆ.

7ನೇ ಪುಟ ನೋಡಿ

All chicken products contain added monosodium glutamate not recommended for infants below 12 months and Pregnant women. #Limited period offer. T&Cs apply, for details refer to online.kfc.co.in/promotions. Delivery available in select restaurants. Prices exclusive of taxes. All product images are for illustration purposes only, actual product may vary. *vis-à-vis same a la carte order on delivery



ಸೇನಾ ವಾಪಸಾತಿ– ಭಾರತಕ್ಕೆ ನಷ್ಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ- ಚೀನಾ ಗಡಿಯಲ್ಲಿನ ವಾಸ್ತವ ನಿಯಂತ್ರಣ ರೇಖೆಯ (ಎಲ್ಎಸಿ) 15ನೇ ಗಸ್ತು (ಪಿಪಿ -15) ತಾಣದಿಂದ ಉಭಯ ದೇಶಗಳು ಸೇನೆಯನ್ನು ವಾಪಸ್ ಕರೆಸಿಕೊಂಡಿವೆ. ಆದರೆ ಇದರಿಂದ ಭಾರತವು ತನ್ನ ಪ್ರದೇಶದಲ್ಲಿ ನಿರ್ಮಿಸಿಕೊಳ್ಳಬಹುದಾದ 'ಬಫರ್ ವಲಯ'ವನ್ನು ಕಳೆದುಕೊಂಡಂತಾಗಿದೆ ಎಂದು 'ಲಡಾಖ್ ಆಟಾನಮಸ್ ಹಿಲ್ ಡೆವಲಪ್‌ಮೆಂಟ್ ಕೌನ್ಸಿಲ್' (ಎಲ್ಎಎಚ್‌ಡಿಸಿ) ಆರೋಪಿಸಿದೆ.

ಭಾರತವು ಪಿಪಿ-15ರ ಜತೆಗೆ ಕರಂ ಸಿಂಗ್ ಬೆಟ್ಟದ ಪಿಪಿ-16 ಗಸ್ತು ಪ್ರದೇಶದಿಂದಲೂ ಸೇನೆಯನ್ನು ಹಿಂಪಡೆಯಲು ಒಪ್ಪಿಗೆ ನೀಡಿದೆ ಎಂದು ಎಲ್‌ಎಎಚ್‌ಡಿಸಿ ಕೌನ್ಸಿಲರ್ ಕೊಂಚೋಕ್ ಸ್ಟಾಂಜಿನ್ ಪ್ರತಿಕ್ರಿಯಿಸಿದ್ದಾರೆ.

ದಶಕಗಳಿಂದ ಸೇನೆಯನ್ನು ನಿಯೋಜಿಸಿರುವ ಭಾರತ ಪಿಪಿ-16ರಲ್ಲಿ ತನ್ನ ಸೇನಾ ಪಡೆಯನ್ನು ವಾಪಸ್ ತೆಗೆದುಕೊಂಡರೆ, ಇಲ್ಲಿನ ಹುಲ್ಲುಗಾವಲು ಕಣಿವೆಯು ವಿವಾದಿತ ಪ್ರದೇಶವಾಗಿ ಪರಿವರ್ತಿತವಾಗಬಹುದು ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಸ್ಥಳೀಯ ಜನರು ದನ, ಕರುಗಳನ್ನು ಮೇಯಿಸಲು ಈ ಪ್ರದೇಶವನ್ನು ಬಳಸುತ್ತಿರುವುದರಿಂದ ಇದು ಅತ್ಯಂತ ಮಹತ್ವದ್ದಾಗಿದೆ ಎಂದು ಅವರು ಹೇಳಿದ್ದಾರೆ.

ಭಾರತವು ತನ್ನ ಈ ಭೂಪ್ರದೇಶವನ್ನು ಕಳೆದುಕೊಳ್ಳುವುದು ಈ ಕ್ಷೇತ್ರದ ಜನರಿಗೆ ಸ್ವಲ್ಪವೂ ಇಷ್ಟವಿಲ್ಲ ಎಂದು ಅವರು ತಿಳಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ, 'ಚೀನಾವು ಭಾರತದ ನೆಲದಿಂದ ಹಿಂದೆ ಸರಿದಿದೆ ಮತ್ತು ಭಾರತವು ತನ್ನದೇ ನೆಲದಿಂದ ಹಿಂದೆ ಸರಿದಿದೆ' ಎಂದು ಟೀಕಿಸಿದ್ದಾರೆ.

ಸಿಇಟಿ: ರಾಜ್ಯದಿಂದ ಮೇಲ್ಮನವಿ

ಬೆಂಗಳೂರು: 'ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ, 2020-21ನೇ ಸಾಲಿನ ದ್ವಿತೀಯ ಪಿಯು ತೇರ್ಗಡೆಯಾದ ವಿದ್ಯಾರ್ಥಿಗಳು ಗಳಿಸಿದ ಶೇ 50 ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಪಡೆದ ಶೇ 50ರಷ್ಟು ಅಂಕಗಳನ್ನು ಪರಿಗಣಿಸಿ ರೀ-ಡೂ ಮಾಡಿ ಹೊಸ ರ್‍ಯಾಂಕ್ ಪಟ್ಟಿ ಪ್ರಕಟಿಸಬೇಕು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ನಿರ್ದೇಶಿಸಿದ್ದ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಿದೆ.

'ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ 2020-21ನೇ ಸಾಲಿನ ಪಿಯು ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಪರಿಗಣಿಸಲಾಗದು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) 2022 ಜುಲೈ 30ರಂದು ಹೊರಡಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಸ್. ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ 'ಇತ್ತೀಚೆಗೆ ರದ್ದುಗೊಳಿಸಿತ್ತು.

'ಈ ತೀರ್ಪಿಗೆ ತಡೆ ನೀಡಬೇಕು' ಎಂದು ಮೇಲ್ಮನವಿಯಲ್ಲಿ ಕೋರಲಾಗಿದೆ. ಇದು ಇನ್ನಷ್ಟೇ ವಿಭಾಗೀಯ ಪೀಠದಲ್ಲಿ ವಿಚಾರಣೆಗೆ ನಿಗದಿಯಾಗಬೇಕಿದೆ.

ದಿ ಏರ್‌ಕ್ರಾಫ್ಟ್ ಎಂಪ್ಲಾಯೀಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
(ರಿ.ನಂ. ಜೆ.ಆರ್.ಬಿ /ಆರ್‌ಜಿಎನ್ /ವಿಭಜನೆ/45 /44632 /2014-15)
ಸ್ಥಾಪನೆ: 1954 ಹಳೇ ಎಸ್.ಬಿ.ಐ. ಕಟ್ಟಡ, ಸುರಂಜನ್‌ದಾಸ್ ರಸ್ತೆ, ವಿಮಾನಪುರ, ಹೆಚ್.ಎ.ಎಲ್, ಬೆಂಗಳೂರು-17
ದೂರವಾಣಿ: 080-25226974

8ನೇ ಸರ್ವಸದಸ್ಯರ ಸಭೆಯ ನೋಟೀಸ್

ಸಂಘದ 8ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು **ಬಿಮೆಲ್ ಕಲಾಮಂದಿರ**, ಡಾ. ಅಂಬೇಡ್ಕರ್ ರಸ್ತೆ, ಜಿ.ಎಮ್. ಪಾಳ್ಯ, ಸಿ.ವಿ.ರಾಮನ್ ನಗರ, ಬೆಂಗಳೂರು-560 017 ಇದರ ಆವರಣದಲ್ಲಿ ಸನ್ 2022 ಸೆಪ್ಟೆಂಬರ್ 25ನೇ ತಾರೀಖು ಭಾನುವಾರ ಬೆಳಿಗ್ಗೆ 9:00 ಘಂಟೆಗೆ ಸರಿಯಾಗಿ ಸಂಘದ ಅಧ್ಯಕ್ಷರಾದ **ಶ್ರೀ ಎಸ್. ಆರ್. ರಮೇಶ** ಇವರ ಆಧ್ಯಕ್ಷತೆಯಲ್ಲಿ ನಡೆಸಲಾಗುವುದು. ತಾವೆಲ್ಲರೂ ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿಸಲಾಗಿದೆ.

ಕಾರ್ಯಕಾರಿ ಸಮಿತಿ ಅಪ್ಪಣೆ ಮೇರೆಗೆ
ಸಹಿ/-
ಸ್ಥಳ: ಬೆಂಗಳೂರು
ದಿನಾಂಕ: 10-09-2022
(ವಿ. ಅಚ್ಚುತಕುಮಾರ್) ಮುಖ್ಯಕಾರ್ಯನಿರ್ವಾಹಕರು

ರೈಲು ಗಾಲಿ ಕಾರ್ಖಾನೆ ಯಲಹಂಕ, ಬೆಂಗಳೂರು-560064.
ವೆಬ್‌ಸೈಟ್: www.rwf.indianrailways.gov.in ಇ-ಮೇಲ್ : smm.p3.rwf@gmail.com
ಆಜಾದಿ का ಅಮೃತ महोत्सव

ಇ-ಟೆಂಡರ್ ಸಂಖ್ಯೆ : ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಂ.ಎಂ.ಎಸ್/2022-23/19 ದಿನಾಂಕ :09/09/2022

ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್ ಈ ಕೆಳಕಂಡ ಕೆಲಸಕ್ಕೆ ಎಲೆಕ್ಟ್ರಾನಿಕ್ ಟೆಂಡರ್‌ನ್ನು ಆನ್‌ಲೈನ್ ವೆಬ್‌ಸೈಟ್ http://www.ireps.gov.in ಮೂಲಕ ಆಹ್ವಾನಿಸಿದ್ದಾರೆ.

ಟೆಂಡರ್.ನಂ & ಟೆಂಡರ್‌ನ ಸಂಕ್ಷಿಪ್ತ ವಿವರ	
ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಂ.ಆರ್/2022-23/28 ದಿನಾಂಕ:09/09/2022, ಬೆಂಗಳೂರಿನ ಯಲಹಂಕದ ರೈಲು ಗಾಲಿ ಕಾರ್ಖಾನೆಯ ವ್ಹೀಲ್ ಶಾಪ್‌ನಲ್ಲಿ ಈ ಕೆಳಗಿನ ಚಟುವಟಿಕೆಗಳಿಗೆ ಅವಶ್ಯಕತೆ ಅನುಸಾರ ಹೊರಗುತ್ತಿಗೆ -ಮೋಲ್ಡ್ ಪ್ರೊಸೆಸಿಂಗ್‌ನಲ್ಲಿ ಕೆಲಸ (ಎ) ಸಿ7 ನಲ್ಲಿ ರೈಸರ್ ಪ್ಯಾಡ್‌ನ ಡ್ರೆಸ್ಸಿಂಗ್ ಮತ್ತು ಸಿ12 ನಲ್ಲಿ ಕೋಪ್‌ಗಳನ್ನು ಸ್ವಚ್ಛಗೊಳಿಸುವುದು, (ಬಿ) ಸ್ಪ್ರೇ ಮಿಕ್ಸಿಂಗ್ ಮತ್ತು ಟ್ರಾನ್ಸ್‌ಫರಿಂಗ್ (ಸಿ) ಸ್ಟಾಪರ್ & ಸ್ಟಾಪರ್ ಪೈಪ್ ಅಸೆಂಬ್ಲಿ (ಡಿ) ಸೆರಾಮಿಕ್ ಪೋರಿಂಗ್ ಟ್ಯೂಬ್ ತಯಾರಿಕೆ ಮತ್ತು ವೀಲ್ ಪ್ರೊಸೆಸಿಂಗ್‌ನಲ್ಲಿನ ಕೆಲಸಗಳು (ಇ) ರೈಸರ್ ವ್ಹೀಲ್ ನಾಕಿಂಗ್ (ಎಫ್) ಸ್ಪ್ರೂ ವಾಷ್ಡ್ ವ್ಹೀಲ್‌ಗಳ ಚಿಪ್ಪಿಂಗ್ ಮತ್ತು (ಜಿ) ಸ್ಟಾಪರ್ ರಿಮೂವಿಂಗ್ ಮತ್ತು ಪೈಲಟ್ ಹೋಲ್ ಕ್ಲಿಯರಿಂಗ್.	ಪೂರ್ಣಗೊಳ್ಳುವ ಅವಧಿ : 12 ತಿಂಗಳು
ಅಚಿದಾಜು ವೆಚ್ಚ ರೂ.ಗಳಲ್ಲಿ : 76,12,334.47/-	ಇ.ಎಂ.ಡಿ ರೂ ಗಳಲ್ಲಿ : 1,52,300.00/-
ಟೆಂಡರ್ ಕೊನೆಗೊಳ್ಳುವ ದಿನಾಂಕ & ಸಮಯ : 11/10/2022ರ 3.30 ಗಂಟೆಯವರೆಗೆ	

ಟೆಂಡರ್ ಸೂಚನೆ ಮತ್ತು ಅರ್ಹತಾ ಮಾನದಂಡಗಳನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ನೋಡಬಹುದು.
ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್/ಎಂಎಫ್‌ಜಿ

ರೈಲು ಭೂಮಿ ಅಭಿವೃದ್ಧಿ ಪ್ರಾಧಿಕಾರ
(ಭಾರತ ಸರ್ಕಾರದ ರೈಲ್ವೆ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಪ್ರಾಧಿಕಾರ)
ಯೂನಿಟ್ ನಂ. 702-ಬಿ, 7ನೇ ಮಹಡಿ, ಕನ್ನೆಕ್ಟಸ್ ಟವರ್-2, ಡಿಎಂಆರ್‌ಸಿ ಬಿಲ್ಡಿಂಗ್, ಅಜ್ಮೇರಿ ಗೇಟ್, ನವದೆಹಲಿ-110002. ಫೋನ್: +91-11-23232854, ಫ್ಯಾಕ್ಸ್: +91-11-23232835

ಇ-ಟೆಂಡರ್ ಮುಖಾಂತರ ಪ್ರಸ್ತಾವಣೆಗೆ ಮನವಿ
(ಆರ್‌ಎಫ್‌ಪಿ ನೋಟಿಸ್ ನಂ. ಆರ್‌ಎಲ್‌ಡಿಎ/ಆರ್‌ಎಫ್‌ಪಿ/ಸಿಡಿ-59/ಸಿಆರ್‌ಡಿ-20/2022 ದಿನಾಂಕ 09.09.2022)

ದಕ್ಷಿಣ ರೈಲ್ವೆಯ ಪಾಲಘಾಟ್ ಡಿವಿಜನ್‌ನ ಕನ್ನೂರ ರೈಲ್ವೆ ಕಾಲೋನಿಯಲ್ಲಿನ 4.93 ಎಕರೆ ರೈಲು ಭೂಮಿಯ ವಾಣಿಜ್ಯ ಅಭಿವೃದ್ಧಿಗಾಗಿ ಮತ್ತು ಪ್ರಸ್ತುತ ಅಸ್ತಿತ್ವದಲ್ಲಿರುವ 2.26 ಎಕರೆ ರೈಲ್ವೆ ಕಾಲೋನಿಯ ಪುನರಾಭಿವೃದ್ಧಿಗಾಗಿ 45 ವರ್ಷಗಳ ಲೀಸ್/ಲೈಸನ್ಸ್ ಮಂಜೂರಾತಿ

ನಿವೇಶನದ ವಿವರ	ನಿವೇಶನದ ಅಂದಾಜು ವಿಸ್ತೀರ್ಣ	ಆಫರ್ಡ್ ಬಿಲ್ಟಪ್ ಪ್ರದೇಶ	ಬಿಡ್ ಸೆಕ್ಯೂರಿಟಿ	ಮೀಸಲು ಬೆಲೆ
ಕನ್ನೂರ ರೈಲ್ವೆ ಕಾಲೋನಿ (ಕಮರ್ಷಿಯಲ್ ಪ್ಲಾಟ್)	4.93 Acre	6,45,350 Sq. ft.	Rs. 1.0 Crore	Rs. 22.6 Crore + ಪುನರಾಭಿವೃದ್ಧಿ ವೆಚ್ಚ

ವೆಬೆಕ್ಸ್ ಮುಖಾಂತರ ಆನ್‌ಲೈನ್ ಬಿಡ್‌ಪೂರ್ವ ಸಭೆ: 26 ಸೆಪ್ಟಂಬರ್, 2022 ರಂದು 11:00 ಗಂಟೆ.
(ಆನ್‌ಲೈನ್ ಬಿಡ್‌ಪೂರ್ವ ಸಭೆಯ ವಿವರಗಳನ್ನು ಜೆಜಿಎಂ/ಪಿ/ಎಸ್‌ಬಿಸಿ ಇವರಿಂದ ಪಡೆದುಕೊಳ್ಳುವುದು)
ಆನ್‌ಲೈನ್ ಇ-ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 07.11.2022 ರಂದು 15:00 ಗಂಟೆ.
ಯೋಜನೆಗೆ ಸಂಬಂಧಿತ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ www.rlda.indianrailways.gov.in ವೆಬ್‌ಸೈಟ್‌ಗೆ ಅಥವಾ ಇ-ಪ್ರೊಕ್ಯೂರ್‌ಮೆಂಟ್‌ನ www.tenderwizard.in/RLDA ಪೋರ್ಟಲ್‌ನಲ್ಲಿರುವ ಇ-ಟೆಂಡರ್ ಶೀರ್ಷಿಕೆಗೆ ಭೇಟಿ ಕೊಡಿ. ಯಾವುದೇ ಸ್ಪಷ್ಟೀಕರಣಗಳಿಗಾಗಿ ದಯವಿಟ್ಟು ಸಂಪರ್ಕಿಸಿ:-

ಜ. ಜನರಲ್ ಮ್ಯಾನೇಜರ್/ಪಿ/ಎಸ್‌ಬಿಸಿ	ಚೀಫ್ ಪ್ರಾಜೆಕ್ಟ್ ಮ್ಯಾನೇಜರ್/ಎಸ್‌ಬಿಸಿ	ಕನ್ಸಲ್ಟಂಟ್/ಆರ್‌ಎಲ್‌ಡಿಎ ಶ್ರೀ. ಮನೋಹರ್ ಎಲ್ ಎ	ಇ-ಬಿಡ್ ವಿಚಾರಣೆಗಾಗಿ – ಶ್ರೀ. ಸೂರಜ್ ಸಿಂಗ್
M:99591 87887 jgmpsbc@rlda.railnet.gov.in	M: 93615 91387 cpmbangalore@rlda.railnet.gov.in	M: 81056 19138 manohar.la@cbre.com	M: 95996 53865 suraj@etenderwizard.com

ಸೂಚನೆ:- ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡು ಉಂಟಾದಲ್ಲಿ, ಆರ್‌ಎಲ್‌ಡಿಎ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಎಎಂ/ಟೆಂಡರ್, (ಮೊ) 87505 54811

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ 4ನೇ ಹಂತ, ಬೆಂಗಳೂರು – 560011.

ಟೆಂಡರ್ ಪ್ರಕಟಣೆ ಸಂಖ್ಯೆ. 14/2022-23 ದಿನಾಂಕ: 13-09-2022

ಐಟಂವಾರು ಟೆಂಡರ್/ಅಲ್ಪಾವಧಿ ಟೆಂಡರ್ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೆಂಗಳೂರು ಇವರಿಂದ ಈ ಕೆಳಕಂಡ ಲೆಕ್ಕಶೀರ್ಷಿಕೆ 4702 ಆಧುನೀಕರಣ ಹಾಗೂ ಅಣೆಕಟ್ಟು ಮತ್ತು ಪಿಕಪ್ ಯೋಜನೆ ಕಾಮಗಾರಿಗಳ ಅನುಷ್ಟಾನಕ್ಕಾಗಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ – 2000ರ ಸ್ಟ್ಯಾಂಡರ್ಡ್ ಟೆಂಡರು ಡಾಕ್ಯುಮೆಂಟ್ ಕೆ ಡಬ್ಲ್ಯೂ- 3 ಸೂಚನೆ ಮತ್ತು ನಿಬಂಧನೆಗಳಿಗೆ ಒಳಪಟ್ಟು ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು ಸಾಸಲು ಹೋಬಳಿ ಹೊಸಕೋಟೆ ಗ್ರಾಮದ ಹತ್ತಿರ ಬರುವ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.

ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.50.62

ಇಎಂಡಿ (ರೂ.ಗಳಲ್ಲಿ): ರೂ.63,300.00

ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 4 ತಿಂಗಳು (ಮಳೆಗಾಲ ಸೇರಿ).

(1) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **20.09.2022 ರ 16.30 ಗಂಟೆಯವರೆಗೆ.** (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾದ ದಿನಾಂಕ ಮತ್ತು ವೇಳೆ : **21.09.2022 ರ 16.30 ಗಂಟೆಯವರೆಗೆ.** (3) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ವೇಳೆ: **23.09.2022 ರ 11.30 ಗಂಟೆಯವರೆಗೆ.** (4) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ವೇಳೆ : ಅರ್ಹ ಗುತ್ತಿಗೆದಾರರಿಗೆ ತಿಳಿಸಲಾಗುವುದು. (5) ಗುತ್ತಿಗೆ ಪಡೆಯಲು ಕನಿಷ್ಟ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರು ಡಾಕ್ಯುಮೆಂಟ್‌ನ ಐ ಟಿ ಟಿ ನಿಬಂಧನೆ – 3 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಮೂರನೇ ದರ್ಜೆ ಗುತ್ತಿಗೆದಾರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೆಂಗಳೂರು ವೃತ್ತ, ಬೆಂಗಳೂರು ಇಲ್ಲಿ ಗುತ್ತಿಗೆ ಪರವಾನಗಿ ಪಡೆದವರು ಟೆಂಡರ್ ಭಾಗವಹಿಸಲು ಅರ್ಹರಾಗಿರುತ್ತಾರೆ. (6) ಎಲ್ಲಾ ಟೆಂಡರನ್ನು ಅಥವಾ ಯಾವುದಾದರೂ ಟೆಂಡರನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. (7) ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್ಮೆಂಟ್ ಪದ್ಧತಿಯ ಮುಖಾಂತರ ವೆಬ್‌ಸೈಟ್ ವಿಳಾಸ https://www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ
DIPR/CP/2191/2022-23

ಪಿಟಿಸಿಎಲ್: ಕಾಯ್ದೆ ತಿದ್ದುಪಡಿಗೆ ಆಗ್ರಹ

ಅಹೋರಾತ್ರಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಯ (ಪಿಟಿಸಿಎಲ್) ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ಅಹೋರಾತ್ರಿ ಧರಣಿ ಆರಂಭಿಸಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡದವರ ಭೂಮಿ ಬಲಾಢ್ಯರ ಪಾಲಾಗುವುದನ್ನು ತಪ್ಪಿಸಲು ಡಿ. ದೇವರಾಜ ಅರಸು ಮತ್ತು ಬಿ. ಬಸವಲಿಂಗಪ್ಪ ಅವರ ದಲಿತ ಪರ ಕಾಳಜಿಯಿಂದಾಗಿ ಈ ಕಾಯ್ದೆ 1978ರಲ್ಲಿ ಜಾರಿಗೆ ಬಂದಿತ್ತು. ಈ ಕಾಯ್ದೆಯಡಿ ಸಲ್ಲಿಕೆಯಾಗುವ ಅರ್ಜಿಗಳನ್ನು ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ನ್ಯಾಯಾಲಯಗಳು ತಿರಸ್ಕರಿಸುತ್ತಿವೆ. ನ್ಯಾಯಾಲಯಗಳು ಅದೇ ರೀತಿ ತೀರ್ಪುಗಳನ್ನು ನೀಡುತ್ತಿವೆ. 'ಇದರಿಂದಾಗಿ ದಲಿತರ ಭೂಮಿ ವಂಚಿತರಾಗುತ್ತಿದ್ದಾರೆ' ಎಂದು ಪ್ರತಿಭಟನಾಕಾರರು ಹೇಳಿದರು.

'ವಿಧಾನ ಮಂಡಲ ಎಸ್‌ಸಿಎಸ್‌ಟಿ ಕಲ್ಯಾಣ ಸಮಿತಿ 2021ರ ಸೆಪ್ಟೆಂಬರ್‌ನಲ್ಲೇ ವರದಿ ಸಲ್ಲಿಸಿದೆ. ಪಿಟಿಸಿಎಲ್ ಕಾಯ್ದೆಯಡಿ ಭೂಮಿ ಮರು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಲು ಕಾಲಮಿತಿ ಅನ್ವಯಿಸಬಾರದು ಕಾಯ್ದೆಗೆ ತಿದ್ದುಪಡಿ ಮಾಡುವ ಅಗತ್ಯವಿದೆ ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಆದರೂ, ಕಂದಾಯ ಸಚಿವ ಆರ್. ಅಶೋಕ ಅವರು ತಿದ್ದುಪಡಿಗೆ ಅಡ್ಡಿಪಡಿಸುತ್ತಿದ್ದಾರೆ. ಕೆಲವು ಮಂತ್ರಿಗಳು, ಶಾಸಕರು ಪರಿಶಿಷ್ಟರ ಭೂಮಿಯನ್ನು ಬೇನಾಮಿ ಹೆಸರಿನಲ್ಲಿ ಖರೀದಿ ಮಾಡಿರುವುದರಿಂದ ಈ ಕಾಯ್ದೆ ಅನುಷ್ಠಾನಕ್ಕೆ ಅಡ್ಡಿಪಡಿಸುತ್ತಿದ್ದಾರೆ' ಎಂದು ದೂರಿದರು.

ಕಾಯ್ದೆ ತಿದ್ದುಪಡಿಗೆ ಆಗ್ರಹಿಸಿ ದಲಿತ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸ್ಥಳಕ್ಕೆ ಭೇಟಿ ನೀಡಿದ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, 'ಕಾಯ್ದೆ ತಿದ್ದುಪಡಿ ಸಂಬಂಧ ಸಂಪುಟದಲ್ಲಿ ಚರ್ಚಿಸಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜತೆ ಚರ್ಚಿಸಲಾಗುವುದು' ಎಂದರು. ಸುಗ್ರೀವಾಜ್ಞೆ ಮೂಲಕ ಕಾಯ್ದೆಗೆ ತಿದ್ದುಪಡಿ ತರುವ ತನಕ ಹೋರಾಟ ಮುಂದುವರಿಸಲಾಗುವುದು ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು. ಮಳೆಯ ನಡುವೆಯೂ ಅಹೋರಾತ್ರಿ ಧರಣಿ ಮುಂದುವರಿದಿದೆ.

ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಪ್ರಜಾ ಪರಿವರ್ತನಾ ವೇದಿಕೆ ಅಧ್ಯಕ್ಷ ಬಿ.ಗೋಪಾಲ್, ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಘಟಕದ ಅಧ್ಯಕ್ಷ ಎಂ.ವೆಂಕಟಸ್ವಾಮಿ, ಪಿಟಿಸಿಎಲ್ ಸಂರಕ್ಷಣಾ ಹೋರಾಟ ಸಮಿತಿಯ ಶಾಂತಕುಮಾರ್, ಮಂಜುನಾಥ್ ಪಾಲ್ಗೊಂಡಿದ್ದರು.

ಆರೋಪಕ್ಕೆ ತಕ್ಕ ಉತ್ತರ ನೀಡಿ: ಸಿಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧ ಪಕ್ಷಗಳ ಆಕ್ರಮಣಕಾರಿ ಆರೋಪಗಳಿಗೆ ಅಧಿವೇಶನದಲ್ಲಿ ತಕ್ಕ ಉತ್ತರ ನೀಡಬೇಕು, ಈ ನಿಟ್ಟಿನಲ್ಲಿ ಶಾಸಕರು ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

ಮಂಗಳವಾರ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಅವರು ಮಾತನಾಡಿದರು. ಪಕ್ಷ ಮತ್ತು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಹಲವು ವಿಚಾರಗಳನ್ನು ಪ್ರಸ್ತಾಪಿಸಬಹುದು. ಅದಕ್ಕೆ ಸೂಕ್ತ ಮಾಹಿತಿ ಮತ್ತು ಅಂಕಿಅಂಶಗಳ ಮೂಲಕ ಉತ್ತರ ನೀಡಬೇಕು ಎಂದರು.

ಪಕ್ಷ ಮತ್ತು ಸರ್ಕಾರಕ್ಕೆ ಮುಜುಗರ ಆಗದಂತೆ ವರ್ತಿಸಬೇಕು. ಇಲ್ಲದಿದ್ದರೆ ವಿರೋಧಪಕ್ಷಗಳು ಇದನ್ನೇ ಅಸ್ತ್ರವಾಗಿ ಬಳಸಿಕೊಳ್ಳುತ್ತಾರೆ ಎಂದರು.

ಸಭೆಯಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಸನ್ಮಾನಿಸಲಾಯಿತು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಇದ್ದರು.

‘ಬೇರೆಯವರಿಗೆ ವಹಿಸಲು ಕ್ರಮ’

ಗುರು ರಾಘವೇಂದ್ರ ಬ್ಯಾಂಕ್: ಮೇಲ್ಮನೆಯಲ್ಲಿ ಸಚಿವ ಸೋಮಶೇಖರ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಅನ್ನು ವಹಿಸಿಕೊಳ್ಳಲು ಮುಂಬೈಯವರೂ ಸೇರಿ 3–4 ಸಂಸ್ಥೆಯವರು ಮುಂದೆ ಬಂದಿದ್ದಾರೆ. ಈ ಬಗ್ಗೆ ಅನುಮತಿಗಾಗಿ ರಿಸರ್ವ್ ಬ್ಯಾಂಕಿಗೆ ಪತ್ರ ಬರೆಯಲಾಗಿದೆ’ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ಸಿನ ಯು.ಬಿ. ವೆಂಕಟೇಶ್ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, ‘ಈ ವಿಚಾರದಲ್ಲಿ ಕೇಂದ್ರ ಆರ್ಥಿಕ ಇಲಾಖೆಯ ಜೊತೆ ಸಂಸದ ತೇಜಸ್ವಿ ಸೂರ್ಯ ದೆಹಲಿಯಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಬ್ಯಾಂಕಿನ ಸಾಲಗಳೂ ಸೇರಿ ಎಲ್ಲ ವ್ಯವಹಾರಗಳನ್ನು ವಹಿಸಿಕೊಳ್ಳುವ ಕುರಿತಂತೆ ಸಂಸ್ಥೆಗಳ ಜೊತೆ ಚರ್ಚೆ ನಡೆದಿದೆ’ ಎಂದರು.

‘ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಮತ್ತು ಶ್ರೀ ವಸಿಷ್ಠ ಪತ್ತಿನ ಸೌಹಾರ್ದ ಸಹಕಾರ ಸಂಘದಲ್ಲಿ ನಡೆದ ಅವ್ಯವಹಾರದಲ್ಲಿ ಭಾಗಿಯಾಗಿರುವವರ ವಿರುದ್ಧ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಬ್ಯಾಂಕಿನ ಆಸ್ತಿ ಜಪ್ತಿ ಮಾಡಲಾಗಿದ್ದು, ಠೇವಣಿದಾರರಿಗೆ ಶೀಘ್ರದಲ್ಲಿ ಹಣ ಹಿಂದಿರುಗಿಸಲಾಗುವುದು ಎಂದು ಈ ಹಿಂದೆಯೇ ಭರವಸೆ ನೀಡಿದ್ದರೂ ಏನೂ ಆಗಿಲ್ಲ. 90ಕ್ಕೂ ಹೆಚ್ಚು ಮಂದಿ ಅದೇ ಕೊರಗಿನಲ್ಲಿ ಸಾವಿಗೀಡಾಗಿದ್ದಾರೆ’ ಎಂದು ಯು.ಬಿ. ವೆಂಕಟೇಶ್ ಆಕ್ಷೇಪ ವ್ಯಕ್ತಪಡಿಸಿದರು.

ಅದಕ್ಕೆ ಉತ್ತರಿಸಿದ ಸಚಿವರು, ‘ಸಿಐಡಿ ತನಿಖೆ ಪ್ರಗತಿಯಲ್ಲಿದೆ. ಈ ಬ್ಯಾಂಕಿನಿಂದ ಅತಿ ಹೆಚ್ಚು ಸಾಲ ಪಡೆದ ಜಸ್ವಂತ್ ರೆಡ್ಡಿ, ರಂಜಿತ್ ರೆಡ್ಡಿ ಇಬ್ಬರೂ ವಿದೇಶಕ್ಕೆ ಪಲಾಯನ ಮಾಡಿದ್ದಾರೆ. ಹೆಚ್ಚಿನ ಮೊತ್ತದ ಸಾಲ ಪಡೆದವರ ವಿವರಗಳನ್ನು ಜಾರಿ ನಿರ್ದೇಶನಾಲಯಕ್ಕೆ ನೀಡಲಾಗಿದೆ. ಬ್ಯಾಂಕಿನಲ್ಲಿ ಲೆಕ್ಕ ಪರಿಶೋಧನೆ ಮುಗಿದಿದೆ. ಕೆಲವರು ಸಾಲ ಮರುಪಾವತಿ ಮಾಡುತ್ತಿದ್ದು, ಅವರಿಗೆ ದಾಖಲೆಗಳನ್ನು ಹಿಂದಿರುಗಿಸಲು ಕ್ರಮ ತೆಗೆದುಕೊಂಡಿದ್ದೇವೆ. ಅಧಿವೇಶನ ಕೊನೆಯಾಗುವ ಮೊದಲೇ ಇನ್ನೊಂದು ಸಭೆ ಮಾಡುತ್ತೇವೆ’ ಎಂದರು.

‘ಶ್ರೀ ವಸಿಷ್ಠ ಪತ್ತಿನ ಸೌಹಾರ್ದ ಸಂಘ: ಶೀಘ್ರ ಕ್ರಮ’

‘ಶ್ರೀ ವಸಿಷ್ಠ ಪತ್ತಿನ ಸೌಹಾರ್ದ ಸಂಘದಲ್ಲಿ ₹ 85 ಕೋಟಿ ಅವ್ಯವಹಾರ ಆರೋಪವಿದೆ. ಇದರ ಕುರಿತು ನ್ಯಾಯಾಲಯದಲ್ಲಿದ್ದ ತಡೆಯಾಜ್ಞೆ ತೆರವು ಆಗಿದೆ. ಆದರೆ, ಈ ಸಂಘ ಸೌಹಾರ್ದ ಸಂಘಗಳ ಒಕ್ಕೂಟದಡಿ ಬರುತ್ತದೆ. ಸಹಕಾರ ಇಲಾಖೆಯ ನಿಯಂತ್ರಣದಲ್ಲಿಲ್ಲ. ಸೌಹಾರ್ದ ಸಂಘಗಳ ಒಕ್ಕೂಟದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಜೊತೆ ಚರ್ಚಿಸಿ, ಶೀಘ್ರದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಭರವಸೆ ನೀಡಿದರು.

ಹಿಂದಿ ದಿವಸ: ತೀವ್ರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ಸೆ. 14ರಂದು ಆಚರಣೆ ಮಾಡುವ ಹಿಂದಿ ದಿವಸ್‌ಗೆ ಜೆಡಿಎಸ್, ಕೆಆರ್‌ಎಸ್ ಪಕ್ಷಗಳೂ ಸೇರಿ ವಿವಿಧ ಕನ್ನಡಪರ ಸಂಘಟನೆಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

‘ಭಾಷಾವಾರು ಪ್ರಾಂತ್ಯಗಳ ಆಧಾರದ ಮೇಲೆ ದೇಶ ರಚನೆಯಾಗಿದೆ. ಆದರೆ, ಸ್ವಾತಂತ್ರ್ಯಾ ನಂತರ ಕೇಂದ್ರದಲ್ಲಿ ಆಡಳಿತ ನಡೆಸಿರುವ ಎಲ್ಲಾ ಪಕ್ಷಗಳು ಸೆಪ್ಟೆಂಬರ್ ತಿಂಗಳಲ್ಲಿ ಹಿಂದಿ ಸಪ್ತಾಹ ಮತ್ತು ಸೆ. 14ರಂದು ಹಿಂದಿ ದಿವಸ್ ಆಚರಣೆ ಮಾಡುತ್ತಿವೆ. ದೇಶದ ಎಲ್ಲಾ ಭಾಷೆಯ ಜನರ ತೆರಿಗೆ ಹಣದಲ್ಲಿ ಕೇಂದ್ರ ಸರ್ಕಾರ ಹಿಂದಿಯೇತರ ರಾಜ್ಯಗಳಲ್ಲಿ ನಡೆಸುವ ಹಿಂದಿ ದಿವಸ್ ಆಚರಣೆಯನ್ನು ವಿರೋಧಿಸಿ ಬುಧವಾರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಮಾಡಲಾಗುವುದು’ ಎಂದು ಕರವೇ (ಟಿ.ಎ. ನಾರಾಯಣಗೌಡ) ಬಣ ತಿಳಿಸಿದೆ.

ಕೇಂದ್ರ ಸರ್ಕಾರವೂ ದೇಶದ ಸಾವಿರಾರೂ ಪ್ರಾದೇಶಿಕ ಭಾಷೆಗಳಿಗೆ ಮೋಸ ಮಾಡಿ ಹಿಂದಿ ದಿವಸ್ ಆಚರಣೆ ಮಾಡುತ್ತಾ ಬಂದಿದೆ. ಹಿಂದಿ ಭಾಷೆಗೆ 400 ವರ್ಷಗಳ ಇತಿಹಾಸವಿದೆ. ಆದರೆ ಕನ್ನಡ ಭಾಷೆಗೆ 2,500 ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ ನೆನಪಿಗೆ ಬರುವುದಿಲ್ಲವೋ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಪ್ರಶ್ನಿಸಿದರು.

‘ಹಿಂದಿ ದಿವಸ್ ಹಿಂದಿ ಭಾಷಿಕ ರಾಜ್ಯಗಳಿಗೆ ಸೀಮಿತವಾಗಲಿ. ನಮಗೆ ಅದರ ಅವಶ್ಯಕತೆಯಿಲ್ಲ. ರಾಜ್ಯದಾದ್ಯಂತ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಹಿಂದಿ ರಾಷ್ಟ್ರೀಯ ಭಾಷೆ ಅಲ್ಲ ಎಂಬ ಜಾಗೃತಿ ಮೂಡಿಸಬೇಕು. ಕನ್ನಡ ಬಾವುಟ ಮತ್ತು ಶಾಲು ಹಾಕಿಕೊಳ್ಳುವ ಮೂಲಕ ಕನ್ನಡದ ಶಕ್ತಿ ಪ್ರದರ್ಶನ ಮಾಡಬೇಕು’ ಎಂದು ಸಲಹೆ ನೀಡಿದರು.

‘ಭಾರತಕ್ಕೆ ಯಾವುದೇ ರಾಷ್ಟ್ರೀಯ ಭಾಷೆಯಿಲ್ಲ ಎಂಬುದನ್ನು ಸಂವಿಧಾನ ಸ್ಪಷ್ಟವಾಗಿ ತಿಳಿಸಿದೆ’ ಎಂದು ಕನ್ನಡಪರ ಸಂಘಟನೆಗಳ ಒಕ್ಕೂಟಗಳು ಪ್ರಕಟಣೆಯಲ್ಲಿ ತಿಳಿಸಿವೆ.

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ,
ಕೋಲಾರ-563101.ದೂ: 08152-222022
ಫ್ಯಾಕ್ಸ್: 08152-227443 ಇ-ಮೇಲ್: eepwdkolar07@gmail.com
ವೆಬ್‌ಸೈಟ್: www.kpwd.gov.in, e-portal: http://eproc.karnataka.gov.in

ಇ-ಟೆಂಡರ್ ಪ್ರಕಟಣೆ– ಕೆಡಬ್ಲ್ಯು –3&4
ಟೆಂಡರ್ ಮುಂದೂಡಿಕಾ ಪ್ರಕಟಣೆ ಸಂಖ್ಯೆ: 4-2/ 2022-23 ದಿನಾಂಕ: 08.07.2022

ಉಲ್ಲೇಖ: 1) ಟೆಂಡರ್ ಪ್ರಕಟಣೆ ಸಂಖ್ಯೆ. 4/ 2022-23 ದಿನಾಂಕ: 4.5.2022. 2) ಟೆಂಡರ್ ಮುಂದೂಡಿಕಾ ಪ್ರಕಟಣೆ ಸಂಖ್ಯೆ. 4-1/ 2022-23 ದಿನಾಂಕ: 13.6.2022.

ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 5054-ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಗಳು ಅಡಿಯಲ್ಲಿ 3 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ: ಕನಿಷ್ಟ **ರೂ. 75.00 ಲಕ್ಷಗಳು**. ಗರಿಷ್ಟ: **ರೂ. 400.00 ಲಕ್ಷಗಳು**. ಇ.ಎಂ.ಡಿ ಮೊತ್ತ: ಕನಿಷ್ಟ **ರೂ. 1.50 ಲಕ್ಷಗಳು**. ಗರಿಷ್ಟ: **ರೂ. 6.00 ಲಕ್ಷಗಳು**. ಕಾಲಾವಧಿ: ಕನಿಷ್ಟ 6 ತಿಂಗಳು: ಗರಿಷ್ಟ 11 ತಿಂಗಳು ನಿರ್ವಹಿಸಲು ನೋಂದಾಯಿತ ಗುತ್ತಿಗೆದಾರರಿಂದ ಇ- ಪ್ರಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯು-3&4ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (Viz., http://eproc.karnataka.gov.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ದಿನಾಂಕ: 11.08.2022** ರಂದು ಸಂಜೆ **16.00** ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು **ದಿನಾಂಕ: 12.08.2022 ರಂದು ಸಂಜೆ 16.30 ಗಂಟೆಯ** ನಂತರ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (Viz., http://eproc. karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನಿಯರ್,
ಲೋ.ಇ. ಕೋಲಾರ ವಿಭಾಗ, ಕೋಲಾರ.
ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 183/ಎಂಸಿಎ/2022-23

ಕೋವಿಡ್-19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರದಲ್ಲಿ ಇಂದು

ರಾಷ್ಟ್ರ ಜಾಗೃತಿ ಅಭಿಯಾನ ಸಮಾರೋಪ ಸಮಾರಂಭ: ಸಾನ್ನಿಧ್ಯ: ಮುಕ್ತಿದಾನಂದ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ವೆಂಕಯ್ಯ ನಾಯ್ಡು, ಚಂದ್ರಶೇಖರ ಭಂಡಾರಿ, ಅರ್ಚನಾ ಉಡುಪ, ಆಯೋಜನೆ: ರಾಷ್ಟ್ರ ಜಾಗೃತಿ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 8.30

ರಾಜ್ಯ ಸಮ್ಮೇಳನ, ರಾಷ್ಟ್ರೀಯ ಪಕ್ಷದ ಉದ್ಘಾಟನೆ: ಉಪಸ್ಥಿತಿ: ಎನ್. ಮೂರ್ತಿ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಡಾ.ಬಿ. ಆರ್. ಅಂಬೇಡ್ಕರ್ ಭವನ, ಬೆಳಿಗ್ಗೆ 10.30

ರಾಷ್ಟ್ರೀಯ ಮಟ್ಟದ ಟಿಐಎ ಶೃಂಗ ಸಭೆ: ವಿಷಯ: ಸುಸ್ಥಿರ ಅಭಿವೃದ್ಧಿ, ಸ್ಮಾರ್ಟ್ ಸಿಟಿ, ನಗರ ತಂತ್ರಜ್ಞಾನ, ನವೋದ್ಯಮ ಬೆಳವಣಿಗೆ ಅತಿಥಿಗಳು: ನಂದನ್ ನೀಲೇಕಣಿ, ಬಿ.ವಿ. ನಾಯ್ಡು, ಆಯೋಜನೆ: ಟಿಐಎ, ಸ್ಥಳ: ತಾಜ್ ವೆಸ್ಟ್ ಎಂಡ್, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 11

ಗಣ್ಯರಿಗೆ ಸನ್ಮಾನ, ಸಾಧಕರಿಗೆ ಪ್ರಶಸ್ತಿ ಮತ್ತು ರಂಗಗೀತೆಗಳ ಕಾರ್ಯಕ್ರಮ: ಗಾಯನ: ನಾಗರಾಜ ರಾವ್, ನವೀನ್, ಅಜಿತ್ ಕುಮಾರ್, ಸಂಜೆ 4, ಉದ್ಘಾಟನೆ: ಗಂಡಸಿ ಸದಾನಂದ ಸ್ವಾಮಿ, ಅಧ್ಯಕ್ಷತೆ: ನೀಲಮ್ಮ, ಅತಿಥಿಗಳು: ಮಹೇಂದ್ರ ಮುನ್ನೋತ್, ಆಯೋಜನೆ: ಶ್ರದ್ಧಾಂಜಲಿ ಟ್ರಸ್ಟ್, ಸಂಜೆ 5

ಹಾಸ್ಯ ಸುಮಧುರ ಸಂಜೆ: ಪ್ರಸ್ತುತಿ: ಬೇಲೂರು ರಾಮಮೂರ್ತಿ, ಆಯೋಜನೆ: ಜೈಂಟ್ಸ್ ಗ್ರೂಪ್ ಆಫ್ ಗಾರ್ಡನ್ ಸಿಟಿ ಬೆಂಗಳೂರು, ಸ್ಥಳ: ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರ, ಸಂಜೆ 6

‘ಅಹರ್ನಿಶಿ’ ಶಾಸ್ತ್ರೀಯ ನೃತ್ಯೋತ್ಸವ: ಅತಿಥಿಗಳು: ಚಂದ್ರಶೇಖರ್ ನಾವಡ, ಸತ್ಯನಾರಾಯಣ ರಾಜು, ಭರತನಾಟ್ಯ ಪ್ರಸ್ತುತಿ: ಪಿ. ಪ್ರವೀಣ್ ಕುಮಾರ್, ಅನನ್ಯಾ ಕಲಾನಿಕೇತನ ಶಾಲೆಯವರಿಂದ, ಆಯೋಜನೆ: ಅನನ್ಯಾ ಕಲಾನಿಕೇತನ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6

‘ಕಂತು’ ನಾಟಕ ಪ್ರದರ್ಶನ: ನಿರ್ದೇಶನ: ಮಂಜುನಾಥ್ ಎಲ್. ಬಡಿಗೇರ, ಆಯೋಜನೆ: ಸಮಷ್ಟಿ, ಸ್ಥಳ: ರಂಗಶಂಕರ, ಸಂಜೆ 7.30

ನೀಟ್: ವಿಷನ್ ಅಕಾಡೆಮಿ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಟ್ ಫಲಿತಾಂಶದಲ್ಲಿ ನಗರದ ವಿಷನ್ ನೀಟ್ ಅಕಾಡೆಮಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

415ಕ್ಕೂ ಹೆಚ್ಚು ವಿಷನ್‌ನ ವಿದ್ಯಾರ್ಥಿಗಳು, ಈ ಬಾರಿಯೂ ಸರ್ಕಾರಿ (ಉಚಿತ) ಮೆಡಿಕಲ್ ಕಾಲೇಜಿನಲ್ಲಿ ಸೀಟ್ ಪಡೆಯಲಿದ್ದಾರೆ ಎಂದು ವಿಷನ್ ಸಮೂಹ ಸಂಸ್ಥೆಗಳ ನಿರ್ದೇಶಕಿ ಲಕ್ಷ್ಮಿರೆಡ್ಡಿ ತಿಳಿಸಿದ್ದಾರೆ.

ಸಂಸ್ಥೆಯ ತರಬೇತಿ ಅವಧಿಯಲ್ಲಿ ವಿದ್ಯಾರ್ಥಿಗಳು 100ಕ್ಕೂ ಹೆಚ್ಚು ಟೆಸ್ಟ್ ಅಥವಾ 2.50 ಲಕ್ಷಕ್ಕೂ ಅಧಿಕ ಪ್ರಶ್ನೆ ಎದುರಿಸಬೇಕಾಗುತ್ತದೆ. 15ರಿಂದ 35 ವರ್ಷ ಅನುಭವವುಳ್ಳ ಉಪನ್ಯಾಸಕರು ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಿದ್ದಾರೆ ಎಂದಿದ್ದಾರೆ.

2023ರಲ್ಲಿ ನೀಟ್ ಬರೆಯಲು ಆಸಕ್ತಿ ಇರುವ ರಿಪೀಟರ್ ವಿದ್ಯಾರ್ಥಿಗಳಿಗೆ ಕೋಚಿಂಗ್ ಪ್ರಾರಂಭವಾಗಿದ್ದು, ಪ್ರಸ್ತುತ 2022ರಲ್ಲಿ ಅವರು ಪಡೆದ ನೀಟ್ ಮಾರ್ಕ್ಸ್ ಆಧಾರದ ಮೇಲೆ ಶೇ 25ರಿಂದ 50ರಷ್ಟು ಶುಲ್ಕ ರಿಯಾಯಿತಿ ನೀಡಲಾಗುವುದು. ಸೆ.15ರಿಂದ 2ನೇ ತಂಡಕ್ಕೆ ಕೋಚಿಂಗ್ ಶುರುವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೆಇಇ ಅಡ್ವಾನ್ಸ್ಡ್: ನಾರಾಯಣ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಐಟಿ ಸಂಸ್ಥೆಗಳ ಪ್ರವೇಶಕ್ಕಾಗಿ ನಡೆಸುವ ಜಂಟಿ ಪ್ರವೇಶ ಪರೀಕ್ಷೆಯಲ್ಲಿ (ಜೆಇಇ) ಅಡ್ವಾನ್ಸ್ಡ್ ಫಲಿತಾಂಶದಲ್ಲಿ ನಗರದ ನಾರಾಯಣ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ ಎಂದು ಸಂಸ್ಥೆಯ ನಿರ್ದೇಶಕರಾದ ಡಾ.ಪಿ.ಸಿಂಧೂರ ನಾರಾಯಣ ಹಾಗೂ ಪಿ.ಶರಣಿ ನಾರಾಯಣ ತಿಳಿಸಿದ್ದಾರೆ.

ಮೊದಲ 10 ರ್‍ಯಾಂಕ್‌ಗಳಲ್ಲಿ ಸಂಸ್ಥೆಯ ಐವರು ವಿದ್ಯಾರ್ಥಿಗಳು ರ್‍ಯಾಂಕ್ ಗಳಿಸಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಆರ್.ಕೆ.ಶಿಶಿರ ಅವರು ಅಖಿಲ ಭಾರತ ಮಟ್ಟದಲ್ಲಿ ಮೊದಲ ರ್‍ಯಾಂಕ್ ಗಳಿಸಿದ್ದಾರೆ. ಉಳಿದಂತೆ ಲಕ್ಷ್ಮಿಸಾಯಿ ಲೋಹಿತ್ ರೆಡ್ಡಿ (2ನೇ ರ್‍ಯಾಂಕ್), ವಿ.ಸಾಯಿ ಸಿದ್ಧಾರ್ಥ್ (4), ಕೆ.ಧೀರಜ್ (8), ಜ್ಞಾನ ಮಹೇಶ್ (10), ದಿವ್ಯಾಂಶು ಮಲು (11ನೇ ರ್‍ಯಾಂಕ್) ಹಾಗೂ ನಂದನ್ ಮಂಜುನಾಥ್ (12ನೇ ರ್‍ಯಾಂಕ್) ಉತ್ತಮ ಸಾಧನೆ ತೋರಿದ್ದಾರೆ ಎಂದು ತಿಳಿಸಿದ್ದಾರೆ.

ಉಳಿದ ಬೇರೆ ಬೇರೆ ವಿಭಾಗದಲ್ಲೂ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ. ದೇಶದಲ್ಲಿ 1.65 ಲಕ್ಷ ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್ಡ್ ಪರೀಕ್ಷೆ ಬರೆದಿದ್ದರು. ಐಐಟಿ ಸಂಸ್ಥೆಗಳ ಪ್ರವೇಶಕ್ಕೆ ಸಂಸ್ಥೆಯಲ್ಲಿ ವಿಶೇಷ ತರಬೇತಿ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಸಾಧಕ ವಿದ್ಯಾರ್ಥಿಗಳನ್ನು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಕೋತಪ್ಪ ಹಾಗೂ ರವಿತೇಜ ಅಭಿನಂದಿಸಿದ್ದಾರೆ.

ಜ್ಞಾನ ಮಹೇಶ್

ನಂದನ್ ಮಂಜುನಾಥ್

ಧೀರಜ್

ದಿವ್ಯಾಂಶು ಮಲು

ಸಾಯಿ ಸಿದ್ಧಾರ್ಥ್

ಸುದ್ದಿ 2 ನಿಮಿಷ

ಬಿಬಿಎಂಪಿ ವಾರ್ಡ್ ಮರು ವಿಂಗಡಣೆ: 21ರಂದು ಆದೇಶ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಾರ್ಡ್ ಪುನರ್‌ರಚನೆ ಪ್ರಕ್ರಿಯೆಯಲ್ಲಿ ಗಂಭೀರ ಸಮಸ್ಯೆಗಳು ಇದ್ದರೆ ಮಾತ್ರವೇ ಮಧ್ಯ ಪ್ರವೇಶಿಸಲಾಗುವುದು' ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಇದೇ 21ರಂದು ಎಲ್ಲ ಅರ್ಜಿಗಳ ಮೇಲಿನ ತನ್ನ ಆದೇಶ ಪ್ರಕಟಿಸುವುದಾಗಿ ತಿಳಿಸಿದೆ.

ಬಿಬಿಎಂಪಿ ವ್ಯಾಪ್ತಿಯ ವಿವಿಧ ವಿಧಾನಸಭಾ ಕ್ಷೇತ್ರಗಳ ವಾರ್ಡ್ ಮರು ವಿಂಗಡಣೆ ಪ್ರಶ್ನಿಸಿ ಶಾಸಕರಾದ ಸೌಮ್ಯಾ ರೆಡ್ಡಿ, ಜಮೀರ್ ಅಹ್ಮದ್ ಖಾನ್, ಎಂ.ಸತೀಶ್ ರೆಡ್ಡಿ ಸೇರಿ 14 ಜನರು ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರು ಮತ್ತು ಸರ್ಕಾರದ ಪರ ವಕೀಲರ ಸುದೀರ್ಘ ವಾದ ಆಲಿಸಿದ ನ್ಯಾಯಪೀಠ, 'ಎಲ್ಲಾ ವಾರ್ಡ್‌ಗಳನ್ನು ಸಮಾನವಾಗಿ ವಿಂಗಡಿಸುವುದು ಕಷ್ಟಸಾಧ್ಯ. ಇಂತಹ ಪರಿಸ್ಥಿತಿಯಲ್ಲಿ ಸಣ್ಣಪುಟ್ಟ ಸಮಸ್ಯೆಗಳು ಉದ್ಭವಿಸುವುದು ಸಹಜ' ಎಂದು ಹೇಳಿತು.

'ವಾರ್ಡ್ ಪುನರ್ ವಿಂಗಡಣೆ ವೇಳೆ ಎಲ್ಲಾ ವಾರ್ಡ್‌ಗಳಿಗೆ ಸಮಾನ ಜನಸಂಖ್ಯೆ ಇರಬೇಕು ಎಂಬುದನ್ನು ಪ್ರತಿಪಾದಿಸುವ ನಿರ್ದಿಷ್ಟ ತೀರ್ಪುಗಳಿದ್ದರೆ ಸಲ್ಲಿಸಿ' ಎಂದು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿದೆ.

ನೀರಿನ ಅದಾಲತ್ ನಾಳೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ ಇದೇ 15ರಂದು ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30ರಿಂದ 11 ಗಂಟೆಯವರೆಗೆ ಅದಾಲತ್ ನಡೆಯಲಿದೆ ಎಂದು ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ನೀರಿನ ಬಿಲ್, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಸೇರಿ ವಿವಿಧ ಕುಂದುಕೊರತೆಗಳನ್ನು ಪರಿಹರಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಗೆ ಕರೆ ಮಾಡಬಹುದು ಅಥವಾ ವಾಟ್ಸ್ಆ್ಯಪ್ ಸಂಖ್ಯೆ: 8762228888ಗೆ ಸಂದೇಶ ಕಳುಹಿಸುವ ಮೂಲಕವೂ ದೂರು ದಾಖಲಿಸಬಹುದು ಎಂದು ತಿಳಿಸಿದ್ದಾರೆ.

ಟೈಟನ್‌ನಿಂದ ಗೋ ಗ್ರೀನ್ ಯೋಜನೆ

ಬೆಂಗಳೂರು: ಟೈಟನ್ ಕಂಪನಿಯು ‘ಗೋ ಗ್ರೀನ್’ ಯೋಜನೆಯನ್ನು ಪ್ರಕಟಿಸಿದ್ದು, ಇದರ ಅಡಿಯಲ್ಲಿ ಒಂದು ಲಕ್ಷ ಸಸಿಗಳನ್ನು ನೆಡಲಿದೆ.

‘ಗೋ ಗ್ರೀನ್’ ಯೋಜನೆಗೆ ಕಂಪನಿಯು ಉತ್ತರಾಖಂಡದ ಪಂತನಗರದಿಂದ ಬೆಂಗಳೂರಿನವರೆಗೆ ಮ್ಯಾರಾಥಾನ್ ರ್‍ಯಾಲಿ ಆಯೋಜಿಸುವ ಮೂಲಕ ಚಾಲನೆ ನೀಡಿದೆ ಎಂದು ಪ್ರಕಟಣೆ ತಿಳಿಸಿದೆ. ರ್‍ಯಾಲಿ ಸಾಗುವ ಮಾರ್ಗದಲ್ಲಿ ಸಸಿಗಳನ್ನು ನೆಡುವುದಾಗಿ ಕಂಪನಿ ಹೇಳಿದೆ.

ಚೊಕ್ಕನಹಳ್ಳಿ ಸಮೀಪದ ಭಾರತಿ ಸಿಟಿ ಮಾಲ್‌ನಲ್ಲಿ ಗಾಯಕ ಕೃಷ್ಣಕುಮಾರ್ ಅವರ ಸ್ಮರಣಾರ್ಥ ಆಯೋಜಿಸಿದ್ದ ‘ಸಿಂಗ್ ಫಾರ್ ಕೆಕೆ’ ಸಂಗೀತ ಕಾರ್ಯಕ್ರಮದಲ್ಲಿ ಹಿನ್ನೆಲೆ ಗಾಯಕ ಕುನಾಲ್ ಗಾಂಜಾವಾಲಾ, ಜುಬೀನ್ ಗಾರ್ಗ್, ಚಿತ್ರ ಸಾಹಿತಿ ಮೆಹಬೂಬ್ ಕೊತ್ವಾಲ್, ಕೆಕೆ ಅವರ ಮಕ್ಕಳಾದ ನಕುಲ್ ಕೃಷ್ಣ ಮತ್ತು ತಾಮರ ಕನ್ನಥ್ ಅವರು ಜನಪ್ರಿಯ ಆಲ್ಬಂ ಗೀತೆ ಹಾಡುವ ಮೂಲಕ ಗಾಯಕನನ್ನು ನೆನಪಿಸಿದರು. ಲಕ್ಕಿ ಅಲಿ ಅವರೂ ಕಾರ್ಯಕ್ರಮದಲ್ಲಿ ಹಾಡಿದರು.

ಬೆಂಗಳೂರು ಅಂತರರಾಷ್ಟ್ರೀಯ ಕಲಾ ಮಹೋತ್ಸವ ಸೆ.16ಕ್ಕೆ

ಬೆಂಗಳೂರು: ಏಮ್ ಸಂಸ್ಥೆಯ ವತಿಯಿಂದ ಸೆ. 16 ಮತ್ತು 17ರಂದು ಪಂಡಿತ್ ಭೀಮಸೇನ್ ಜೋಶಿ ಮತ್ತು ರಾಣಿ ವಿಜಯಾ ದೇವಿ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಬೆಂಗಳೂರು ಅಂತರರಾಷ್ಟ್ರೀಯ ಕಲಾ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಸಪ್ತಕ ಸಂಸ್ಥೆಯ ಸಹಯೋಗದಲ್ಲಿ ಸೆ. 16ರಂದು ಸಂಜೆ 6.30ಕ್ಕೆ ‘ನಾದಾರಾಧನೆ’ ಕಾರ್ಯಕ್ರಮ ಮಲ್ಲೇಶ್ವರದ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ನಡೆಯಲಿದೆ.

ಖ್ಯಾತ ಕೊಳಲು ವಾದಕ ರೋಣು ಮಜುಮದಾರ, ಸಿತಾರ್ ವಾದಕ ಸ್ವೀಕಾರ್ ಕಟ್ಟಿ, ಹಾಗೂ ಹೃಷಿಕೇಶ್ ಮಜುಮದಾರ ಅವರ ಕೊಳಲು ವಾದನದ ಜುಗಲ್‌ಬಂದಿ ಕಾರ್ಯಕ್ರಮ ನಡೆಯಲಿದ್ದು, ರಾಜೇಂದ್ರ ನಾಕೋಡ್ ಅವರು ತಬಲಾ ಸಾಥ್ ನೀಡಲಿದ್ದಾರೆ. ನಂತರ ಪರಮೇಶ್ವರ ಹೆಗಡೆ ಅವರ ಸಂಗೀತ ಕಛೇರಿ ನಡೆಯಲಿದ್ದು, ಗುರುಮೂರ್ತಿ ಅವರು ತಬಲಾ, ಮಧುಸೂದನ ಭಟ್ಟ ಹಾರ್ಮೋನಿಯಂ ಸಾಥ್ ನೀಡಲಿದ್ದಾರೆ.

ಸೆ. 17ರಂದು (ಶನಿವಾರ) ಸಂಜೆ 6.30ಕ್ಕೆ ಎಸ್.ಪಿ.ಸಿ.ಎ ಸಂಸ್ಥೆಯ ಯುವ ಕಲಾವಿದರಿಂದ ‘ಲಯ ವೈಭವ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂಜೆ 7 ಗಂಟೆಗೆ ಅಂತರರಾಷ್ಟ್ರೀಯ ಗಾಯಕಿ ಅಶ್ವಿನಿ ಭಿಡೆ ದೇಶಪಾಂಡೆಯವರ ಸಂಗೀತ ಕಾರ್ಯಕ್ರಮವಿದ್ದು, ರವೀಂದ್ರ ಯಾವಗಲ್ ಅವರು ತಬಲಾ, ವ್ಯಾಸಮೂರ್ತಿ ಕಟ್ಟಿ ಅವರು ಹಾರ್ಮೋನಿಯಂ ಸಾಥ್ ನೀಡಲಿದ್ದಾರೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದು ಪ್ರಕಟಣೆ ತಿಳಿಸಿದೆ.

ಎಸ್‌ಜೆ.ಆರ್ ಮಹಿಳಾ ಪದವಿ ಕಾಲೇಜಿನಲ್ಲಿ ಸೋಮವಾರ ನಡೆದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಕರ್ನಾಟಕ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಭಾ.ಮ ಹರೀಶ್, ನಟರಾದ ವಿಜಯಸೂರ್ಯ, ಜೈಜಗದೀಶ್, ಸುಂದರರಾಜ್, ಐಎಎಸ್ ಅಧಿಕಾರಿ ಸ್ನೇಹಲ್ ಸುಧಾಕರ್ ಲೋಖಂಡೆ, ಸಂಸ್ಥೆಯ ಉಪಾಧ್ಯಕ್ಷ ವಿಶ್ವನಾಥ ಹಿರೇಮಠ್ ಇದ್ದಾರೆ.

ರೈಲು ಹತ್ತಲು ಹೋಗಿ ತಂದೆ, ಮಗನ ಸಾವು

ಭದ್ರಾವತಿ: ಇಲ್ಲಿನ ರೈಲು ನಿಲ್ದಾಣದಲ್ಲಿ ರೈಲು ಹತ್ತಲು ಹೋಗಿ ಆಯತಪ್ಪಿ ಬಿದ್ದು ತಂದೆ, ಮಗ ಮೃತಪಟ್ಟಿದ್ದಾರೆ.

ಬೆಂಗಳೂರು ನಿವಾಸಿ ಮೋಹನ ಪ್ರಸಾದ್ (70), ಅಮರನಾಥ್ (38) ಮೃತರು. ಕಾಗದನಗರದ ರಾಜೇಂದ್ರಪ್ರಸಾದ್ ಅವರ ಮನೆಗೆ ಬಂದು ವಾಪಸ್ ಹೋಗುವಾಗ ಅವಘಡ ಸಂಭವಿಸಿದೆ.

ಘಟನೆ ವಿವರ: ವಿಐಎಸ್‌ಎಲ್ ನಿವೃತ್ತ ನೌಕರರಾದ ಮೋಹನಪ್ರಸಾದ್ ಬೆಂಗಳೂರಿನಲ್ಲಿ ವಾಸವಿದ್ದು, ಅವರ ಮಗ ಕಾಗದನಗರ ಈಶ್ವರ ದೇವಾಲಯದ ಅರ್ಚಕರಾಗಿದ್ದಾರೆ. ಅವರನ್ನು ನೋಡಲು ತಮ್ಮ ಇನ್ನೊಬ್ಬ ಮಗ ಅಮರನಾಥ್ ಜತೆ ಭದ್ರಾವತಿಗೆ ಬಂದಿದ್ದರು.

ಭಾನುವಾರ ರಾತ್ರಿ 11.30ರ ಸುಮಾರಿಗೆ ತಾಳಗುಪ್ಪ, ಬೆಂಗಳೂರು, ಮೈಸೂರ್ ಎಕ್ಸ್‌ಪ್ರೆಸ್ ರೈಲಿಗೆ ಹತ್ತಲು ಮುಂದಾದಾಗ ಅಮರನಾಥ್ ಆಯತಪ್ಪಿ ಕೆಳಗೆ ಬಿದ್ದಿದ್ದಾರೆ. ಅವರನ್ನು ಎಬ್ಬಿಸಲು ಹೋದ ಮೋಹನಪ್ರಸಾದ್ ತಲೆಗೆ ತೀವ್ರ ಪೆಟ್ಟಾದ ಕಾರಣ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಾಯಗೊಂಡಿದ್ದ ಅಮರನಾಥ್ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಸೋಮವಾರ ಬೆಂಗಳೂರಿಗೆ ಕರೆದೊಯ್ಯುವ ವೇಳೆ ಮೃತಪಟ್ಟಿದ್ದಾರೆ.

ದಕ್ಷಿಣ ವಿಭಾಗ ಪೊಲೀಸರ ಕಾರ್ಯಾಚರಣೆ: ಮಹಿಳೆ ಸೇರಿ 8 ಮಂದಿ ಬಂಧನ

₹ 5.20 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ದಕ್ಷಿಣ ವಿಭಾಗದ ಪೊಲೀಸರು, ಒಡಿಶಾ ಹಾಗೂ ಆಂಧ್ರಪ್ರದೇಶದಿಂದ ಡ್ರಗ್ಸ್ ತಂದು ನಗರದಲ್ಲಿ ಮಾರುತ್ತಿದ್ದ ಪ್ರತ್ಯೇಕ ಜಾಲಗಳನ್ನು ಭೇದಿಸಿದ್ದಾರೆ.

'ಕೆಂಪೇಗೌಡನಗರ ಹಾಗೂ ಜಯನಗರ ಠಾಣೆ ಪೊಲೀಸರು ಪ್ರತ್ಯೇಕ ಕಾರ್ಯಾಚರಣೆ ನಡೆಸಿ ಮಹಿಳೆ ಸೇರಿ ಎಂಟು ಆರೋಪಿಗಳನ್ನು ಬಂಧಿಸಿದ್ದಾರೆ. ಅವರಿಂದ ₹ 5 ಕೋಟಿ ಮೌಲ್ಯದ 556 ಕೆ.ಜಿ. ಗಾಂಜಾ ಹಾಗೂ 6 ಕೆ.ಜಿ. ಹಶೀಷ್ ಜಪ್ತಿ ಮಾಡಿದ್ದಾರೆ' ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಒಡಿಶಾದ ನವಾಜ್ ಪಾಷಾ, ನೂರ್ ಅಹಮ್ಮದ್, ಇಮ್ರಾನ್ ಪಾಷಾ, ಕಿರಣ್, ಆಂಧ್ರಪ್ರದೇಶದ ಸಾಗರ್ ಸಾಹೋ, ಶೇಷಗಿರಿ ಹಾಗೂ ಬೆಂಗಳೂರು ಜಯನಗರದ ನವಾಬ್ ಬಂಧಿತರು. ಇವರೆಲ್ಲರೂ ಪ್ರತ್ಯೇಕ ತಂಡಗಳನ್ನು

ಬೆಂಗಳೂರು ದಕ್ಷಿಣ ವಿಭಾಗದ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿದ ಡ್ರಗ್ಸ್

ಕಟ್ಟಿಕೊಂಡು ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದರು' ಎಂದು ಹೇಳಿದರು.

ರೈಲಿನಲ್ಲಿ ಗಾಂಜಾ ಸಾಗಣೆ: 'ನವಾಜ್ ಪಾಷಾ ಹಾಗೂ ಇತರರು, ಒಡಿಶಾದಿಂದ ರೈಲಿನಲ್ಲಿ ನಗರಕ್ಕೆ ಗಾಂಜಾ ತರುತ್ತಿದ್ದರು. ಪೊಟ್ಟಣಗಳಲ್ಲಿ ಗಾಂಜಾ ತುಂಬಿ, ಮಧ್ಯವರ್ತಿಗಳ ಮೂಲಕ ಗ್ರಾಹಕರಿಗೆ ಮಾರುತ್ತಿದ್ದರು' ಎಂದು ಪ್ರತಾಪ್ ರೆಡ್ಡಿ ತಿಳಿಸಿದರು.

'ಗಾಂಜಾವನ್ನು ಬ್ಯಾಗ್‌ಗಳಲ್ಲಿ ಮುಚ್ಚಿಟ್ಟು, ರೈಲಿನ ಸೀಟುಗಳ ಕೆಳಗೆ ಬಚ್ಚಿಡುತ್ತಿದ್ದರು. ಬೆಂಗಳೂರಿನ ಕೆ.ಆರ್. ಪುರ ನಿಲ್ದಾಣಕ್ಕೆ ಬರುತ್ತಿದ್ದಂತೆ ಕೆಲವರ ಸಹಾಯದಿಂದ ಬ್ಯಾಗ್‌ಗಳನ್ನು ಪಡೆದುಕೊಳ್ಳುತ್ತಿದ್ದಾರೆ' ಎಂದು ಹೇಳಿದರು.

'ಸೆ. 12ರಂದು ಮಹಿಳೆ ಸಮೇತ ಮೂವರು ಆರೋಪಿಗಳು ದ್ವಿಚಕ್ರ ವಾಹನ ಹಾಗೂ ಆಟೊದಲ್ಲಿ ಹೊರಟಿದ್ದರು. ಅವರ ಬಳಿ ಗಾಂಜಾ ಇರುವ ಮಾಹಿತಿ ಕೆಂಪೇಗೌಡನಗರ ಠಾಣೆ ಪೊಲೀಸರಿಗೆ ಲಭ್ಯವಾಗಿತ್ತು. ದಾಳಿ ನಡೆಸಿದ್ದ ಪೊಲೀಸರು, ಆರೋಪಿಗಳನ್ನು ಬಂಧಿಸಿ ವಿಚಾರಿಸಿದಾಗ ಜಾಲ ಪತ್ತೆಯಾಯಿತು' ಎಂದು ತಿಳಿಸಿದರು.

'ಬಂಧಿತ ಆರೋಪಿಗಳ ವಿಚಾರಣೆಯಿಂದ ಮತ್ತಷ್ಟು ಆರೋಪಿಗಳನ್ನು ಸೆರೆ ಹಿಡಿಯಲಾಯಿತು. ಇವರಿಂದ ₹ 2 ಕೋಟಿ ಡ್ರಗ್ಸ್ ಜಪ್ತಿ ಮಾಡಲಾಯಿತು' ಎಂದು ಹೇಳಿದರು.

ಆಂಧ್ರಪ್ರದೇಶದಲ್ಲಿ ಡ್ರಗ್ಸ್ ಜಪ್ತಿ: 'ಆರೋಪಿಗಳಾದ ಸಾಗರ್ ಸಾಹೊ ಹಾಗೂ ಶೇಷಗಿರಿ, ಆಂಧ್ರಪ್ರದೇಶದಿಂದ ನಗರಕ್ಕೆ ಡ್ರಗ್ಸ್ ತರುತ್ತಿದ್ದರು. ಅದನ್ನು ಆರೋಪಿ ನವಾಬ್ ಮಾರಾಟ ಮಾಡುತ್ತಿದ್ದ. ಆರೋಪಿಗಳನ್ನು ಬಂಧಿಸಿದ್ದ ಜಯನಗರ ಪೊಲೀಸರು, ಆಂಧ್ರಪ್ರದೇಶಕ್ಕೆ ಹೋಗಿ ಡ್ರಗ್ಸ್ ಜಪ್ತಿ ಮಾಡಿಕೊಂಡು ಬಂದಿದ್ದಾರೆ. ಈ ಪ್ರಕರಣದಲ್ಲಿ ಒಟ್ಟು ₹ 3.20 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಪ್ರತಾಪ್ ರೆಡ್ಡಿ ತಿಳಿಸಿದರು.

ಪೂಜೆ ನೆಪದಲ್ಲಿ ಕಳ್ಳತನ: ಬಂಧನ

ಬೆಂಗಳೂರು: 'ಮನೆಯಲ್ಲಿ ಸಾವಾಗುತ್ತದೆ' ಎಂದು ಹೇಳಿ ಭಯವನ್ನುಂಟು ಮಾಡಿ ಪೂಜೆ ನೆಪದಲ್ಲಿ ಮಹಿಳೆಯೊಬ್ಬರ ಚಿನ್ನಾಭರಣ ಕದ್ದೊಯ್ದಿದ್ದ ಆರೋಪಿ ಆನಂದ್ ಅಲಿಯಾಸ್ ಬುಡಬುಡಕೆ ಕೃಷ್ಣಪ್ಪ (36) ಅವರನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹೆಗ್ಗನಹಳ್ಳಿ ನಿವಾಸಿ ಆನಂದ್, ಕೆಪಿಎಸ್‌ಸಿ ಬಡಾವಣೆಯಲ್ಲಿ ನೆಲೆಸಿರುವ ನಿವೃತ್ತ ನೌಕರರೊಬ್ಬರ ಪತ್ನಿಯ ಚಿನ್ನದ ಉಂಗುರ ಹಾಗೂ ಸರ ಕದ್ದೊಯ್ದಿದ್ದ. ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಹಿಳೆಯ ಮನೆಯಲ್ಲಿ ವೃದ್ಧರೊಬ್ಬರು ತೀರಿಕೊಂಡಿದ್ದರು. ಅದನ್ನು ಗಮನಿಸಿ ಮನೆಗೆ ಬಂದಿದ್ದ ಆರೋಪಿ, 'ಈ ಮನೆಯಲ್ಲಿ ಮತ್ತೆ 3 ಸಾವಾಗುತ್ತದೆ. ಪೂಜೆ ಮಾಡಿದರೆ, ಸಾವು ತಡೆಯಬಹುದು' ಎಂದಿದ್ದ. ಪೂಜೆ ನೆಪದಲ್ಲಿ ಚಿನ್ನಾಭರಣ ಬಿಚ್ಚಿಸಿದ್ದ ಆರೋಪಿ, ಧ್ಯಾನ ಮಾಡುವಂತೆ ಮಹಿಳೆಗೆ ಹೇಳಿ ಪರಾರಿಯಾಗಿದ್ದ' ಎಂದೂ ತಿಳಿಸಿದರು.



200 ಕೋಟಿ ಲಸಿಕೆ ನೀಡಿದ್ದಕ್ಕಾಗಿ ನಮ್ಮ ವೈದ್ಯರು, ಶುಶ್ರೂಷಕರು, ಆರೋಗ್ಯ ಕಾರ್ಯಕರ್ತರಿಗೆ ಕೃತಜ್ಞತೆಗಳು!

ಹಾಲು ಹಂಚಿಕೆ ವೈಷಮ್ಯ: ಕೊಲೆ

ಬೆಂಗಳೂರು: ಶೇಷಾದ್ರಿಪುರ ಠಾಣೆ ವ್ಯಾಪ್ತಿಯಲ್ಲಿ ಗಣೇಶ್ (33) ಎಂಬುವವರನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಐವರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ವಿ.ವಿ. ಗಿರಿ ಕಾಲೊನಿ ನಿವಾಸಿ ಗಣೇಶ್ ಅವರನ್ನು ಮಂಗಳವಾರ ಬೆಳಿಗ್ಗೆ ಕೊಲೆ ಮಾಡಲಾಗಿದ್ದು, ಪರಿಚಯಸ್ಥರೇ ಆಗಿರುವ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಗಣೇಶ್, 2020ರಲ್ಲಿ ಕೋವಿಡ್ ವೇಳೆ ತಮ್ಮ ಮನೆ ಬಳಿ ಬಡವರಿಗೆ ಹಾಲು ಹಂಚುತ್ತಿದ್ದರು. ಕಾಂಗ್ರೆಸ್ ಕಾರ್ಯಕರ್ತರದ್ದೇ ಇನ್ನೊಂದು ಗುಂಪು ಸಹ ಅದೇ ಸ್ಥಳದಲ್ಲಿ ಹಾಲು ವಿತರಿಸುತ್ತಿತ್ತು. ಹಾಲು ಹಂಚಿಕೆ ಸಂಬಂಧ ಪರಸ್ಪರ ಗಲಾಟೆ ನಡೆದಿತ್ತು. ಈ ಗಲಾಟೆಯಿಂದ ವೈಷಮ್ಯ ಬೆಳೆದಿತ್ತು. ಹೀಗಾಗಿ, ಗಣೇಶ್ ಅವರನ್ನು ಕೊಲೆ ಮಾಡಲು ಎದುರಾಳಿ ತಂಡ ಸಂಚು ರೂಪಿಸಿತ್ತು' ಎಂದು ಮೂಲಗಳು ತಿಳಿಸಿವೆ.

ಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ ಹೆಚ್ಚು ಅಪಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕೊ ಸಂಸ್ಥೆಯು ಅಪಘಾತ ವಲಯಗಳ ಅಧ್ಯಯನ ನಡೆಸಿದ್ದು, ದೇಶದ ಮಹಾನಗರಗಳ ಪೈಕಿ ಬೆಂಗಳೂರು ಕಡಿಮೆ ಅಪಘಾತಗಳಾಗಿರುವ ನಗರ ಎನಿಸಿದೆ. ನಗರದಲ್ಲಿ ಸರಾಸರಿ ಶೇ 16 ಅಪಘಾತ ಪ್ರಮಾಣ ದಾಖಲಾಗಿದೆ.

ದೆಹಲಿ, ಮುಂಬೈ, ಚೆನ್ನೈ ಮತ್ತು ಹೈದರಾಬಾದ್ ನಗರಗಳಿಗೆ ಹೋಲಿಸಿದರೆ ಅತ್ಯಂತ ಕಡಿಮೆ ಅಪಘಾತಗಳಾಗಿರುವ ನಗರವಾಗಿ ಬೆಂಗಳೂರಿದೆ ಎಂದು ಅಕೊದ ಮೋಟರ್ ಅಂಡರ್ ರೈಟಿಂಗ್ ಹಿರಿಯ ನಿರ್ದೇಶಕ ಅನಿಮೇಶ್ ದಾಸ್ ತಿಳಿಸಿದ್ದಾರೆ.

ಬೆಂಗಳೂರಿನ ಬೊಮ್ಮನಹಳ್ಳಿಯಲ್ಲಿ ಶೇ 9ರಷ್ಟು ಅಪಘಾತಗಳು ಸಂಭವಿಸಿದ್ದರೆ, ಕಲ್ಯಾಣ ನಗರದದಲ್ಲಿ ಶೇ 8ರಷ್ಟು ಅಪಘಾತ ಪ್ರಕರಣಗಳು ದಾಖಲಾಗಿವೆ. ಬನ್ನೇರುಘಟ್ಟದಿಂದ ಹೂಡಿಯ 50 ಕಿ.ಮೀ. ವ್ಯಾಪ್ತಿಯಲ್ಲಿ ಪ್ರತಿನಿತ್ಯ ಹೆಚ್ಚು ವಾಹನ ದಟ್ಟಣೆ ಕಂಡುಬಂದಿದೆ. ಬೆಂಗಳೂರಿನ ಬೊಮ್ಮನಹಳ್ಳಿ ಹೆಚ್ಚಿನ ಅಪಘಾತ ವಲಯ ಎನಿಸಿಕೊಂಡಿದೆ ಎಂದು ಮಾಹಿತಿ ನೀಡಿದ್ದಾರೆ.

'ಅಪಘಾತಗಳಿಗೆ ಕೆಟ್ಟ ರಸ್ತೆಗಳೇ ಕಾರಣವೆಂದು ದೂಷಿಸುತ್ತೇವೆ. ಆದರೆ, ಅಪಘಾತಕ್ಕೆ ಬೇರೆ ಕಾರಣಗಳೂ ಇವೆ ಎಂದು ಅಧ್ಯಯನದಿಂದ ತಿಳಿದುಬಂದಿದೆ. ರಸ್ತೆ ಅಪಘಾತದಿಂದ ಸಾವು ನೋವು ಸಂಭವಿಸುತ್ತಿವೆ. ಅವುಗಳನ್ನು ತಪ್ಪಿಸಲು ಸಾಧ್ಯವಿದೆ. ಸರಿಯಾದ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು' ಎಂದು ಅನಿಮೇಶ್ ದಾಸ್ ತಿಳಿಸಿದ್ದಾರೆ.

'ಅಕೊ ವಿಮಾ ಕಂಪನಿ ಆಗಿದ್ದು, ಏಳು ಕೋಟಿಗೂ ಹೆಚ್ಚು ಗ್ರಾಹಕರು ಇದ್ದಾರೆ. ಮದ್ಯ ಸೇವಿಸಿ ವಾಹನ ಚಾಲನೆ, ನಿರ್ಲಕ್ಷ್ಯದಿಂದ ವಾಹನ ಚಾಲನೆ, ಬೀದಿಗಳಲ್ಲಿ ಪ್ರಾಣಿಗಳ ರಸ್ತೆ ದಾಟುವಿಕೆಯಿಂದ ಹಾಗೂ ಗುಂಡಿಬಿದ್ದ ರಸ್ತೆಗಳಿಂದ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ' ಎಂದು ಮಾಹಿತಿ ನೀಡಿದ್ದಾರೆ.

ಹೈದರಾಬಾದ್‌ನಲ್ಲಿ ಅಪಘಾತದ ಪ್ರಮಾಣ ಶೇ 18.5ರಷ್ಟಿದೆ. ಚೆನ್ನೈನಲ್ಲಿ ಶೇ 18.6ರಷ್ಟು ಅಪಘಾತಗಳು ಹಾಗೂ ದೆಹಲಿಯಲ್ಲಿ ಶೇ 20.3ರಷ್ಟು ಅಪಘಾತಗಳು ವಾರ್ಷಿಕವಾಗಿ ನಡೆಯುತ್ತಿವೆ ಎಂದು ಅಧ್ಯಯನ ವರದಿ ಹೇಳಿದೆ.

'545 ಪಿಎಸ್‌ಐ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರಾಮಾಣಿಕವಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಬೇಕು. ಮರು ಪರೀಕ್ಷೆ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಬಿಡಬೇಕು' ಎಂದು ಒತ್ತಾಯಿಸಿ ಅಭ್ಯರ್ಥಿಗಳು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು. – ಪ್ರಜಾವಾಣಿ ಚಿತ್ರ

ಪಿಎಸ್‌ಐ ಹಗರಣ: ನಾಲ್ವರ ಜಾಮೀನು ತಿರಸ್ಕೃತ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ ನಾಲ್ವರು ಆರೋಪಿಗಳ ಜಾಮೀನು ಅರ್ಜಿಯನ್ನು ಒಂದನೇ ಎಸಿಎಂಎಂ ನ್ಯಾಯಾಲಯ ತಿರಸ್ಕರಿಸಿದೆ.

ಪಿಎಸ್‌ಐ ಹುದ್ದೆಯ ಆಕಾಂಕ್ಷಿಗಳಾದ ಎಸ್.ಜಾಗೃತ್, ಆರ್. ಮಧು, ಮಧ್ಯವರ್ತಿಗಳಾದ ಸಿ.ಎನ್.ಶಶಿಧರ, ಶರತ್‌ಕುಮಾರ್ ಜಾಮೀನು ಅರ್ಜಿಗಳನ್ನು ತಿರಸ್ಕರಿಸಿ ನ್ಯಾಯಾಧೀಶ ಆನಂದ ಟಿ.ಚೌಹಾಣ್ ಆದೇಶಿಸಿದರು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದ ವಕೀಲ ಪಿ.ಪ್ರಸನ್ನಕುಮಾರ್, 'ಆರೋಪಿಗಳ ವಿರುದ್ಧ 55 ಸಾವಿರ ಅಭ್ಯರ್ಥಿಗಳಿಗೆ ಅನ್ಯಾಯ ಎಸಗಿದ ಆರೋಪ ಇದೆ. ಪೊಲೀಸ್ ಇಲಾಖೆಯಲ್ಲೇ ಈ ರೀತಿ ನಡೆದರೆ ನಾಳೆ ಇಂತಹವರು ಹುದ್ದೆಗಳನ್ನು ಅಲಂಕರಿಸಿದ ಮೇಲೆ ಭ್ರಷ್ಟಾಚಾರಕ್ಕೆ ಇಳಿಯುತ್ತಾರೆ. ಅಷ್ಟೇ ಅಲ್ಲ ತನಿಖೆಯೂ ಬಾಕಿ ಇದೆ. ಹೀಗಾಗಿ ಜಾಮೀನು ನೀಡಬಾರದು' ಎಂದಿದ್ದರು.

ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ ನಂತರ ದಾಖಲಾಗಿದ್ದ ಈ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಾಧೀಶರು, ಪ್ರಾಸಿಕ್ಯೂಷನ್ ಮನವಿಯನ್ನು ಪುರಸ್ಕರಿಸಿದ್ದಾರೆ. 'ಗಂಭೀರವಾದ ಈ ಪ್ರಕರಣದಲ್ಲಿ ನಾಲ್ವರ ಅರ್ಜಿಗಳನ್ನೂ ತಿರಸ್ಕರಿಸಲಾಗಿದೆ' ಎಂದು ಆದೇಶಿಸಿದ್ದಾರೆ.

'ಜಾಮೀನು ಕೋರಿದ ಆರೋಪಿಗಳಲ್ಲಿ ಇಬ್ಬರು ಆಕಾಂಕ್ಷಿಗಳು ಪ್ರಶ್ನೆ ಪತ್ರಿಕೆಯ 100 ಅಂಕಗಳಲ್ಲಿ 19 ಅಂಕಗಳ ಪ್ರಶ್ನೆಗಳಿಗೆ ಉತ್ತರಿಸಿದ್ದರು. ನಂತರ ಇವುಗಳನ್ನು 99 ಎಂದು ತಿದ್ದಿದ್ದರು' ಎಂದು ದೋಷಾರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ. ಜಾಮೀನು ಕೋರಿದ ಮತ್ತಿಬ್ಬರು ಆರೋಪಿಗಳಾದ ಸಿ.ಎನ್. ಶಶಿಧರ ಚನ್ನರಾಯಪಟ್ಟಣ ಪುರಸಭೆ ಸದಸ್ಯರಾಗಿದ್ದರೆ, ಆರ್.ಶರತ್ ಕುಮಾರ್ ನಾಗಮಂಗಲದಲ್ಲಿ ಚಿಟ್‌ಫಂಡ್ ಫೈನಾನ್ಸ್ ನಡೆಸುತ್ತಿದ್ದರು.

ಮೈ ತಾಗಿಸಿ ಲೈಂಗಿಕ ದೌರ್ಜನ್ಯ: 3 ವರ್ಷ ಜೈಲು

ಬೆಂಗಳೂರು: ಪಾದಚಾರಿ ಮಾರ್ಗದಲ್ಲಿ ಹೊರಟಿದ್ದ ಬಾಲಕಿಗೆ ಮೈ ತಾಗಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ ಪ್ರಕರಣದ ಅಪರಾಧಿ ಟಿ. ಕಾಂತರಾಜ್ ಎಂಬಾತನಿಗೆ 3 ವರ್ಷಗಳ ಶಿಕ್ಷೆ ವಿಧಿಸಿ ನಗರದ ತ್ವರಿತ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ.

ಚಿಕ್ಕಲಸಂದ್ರದ ನಿವಾಸಿ ಕಾಂತರಾಜ್ ವಿರುದ್ಧ ಜಯನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಕೆ.ಎನ್. ರೂಪಾ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

'2019ರ ಆಗಸ್ಟ್ 14ರಂದು ಬಾಲಕಿಯು ತನ್ನ ತಾಯಿ ಜೊತೆಯಲ್ಲಿ ಪಾದಚಾರಿ ಮಾರ್ಗದಲ್ಲಿ ನಡೆದುಕೊಂಡು ಹೊರಟಿದ್ದಳು. ಅದೇ ಜಾಗದಲ್ಲಿದ್ದ ಆರೋಪಿ, ಪಾದಚಾರಿ ಸೋಗಿನಲ್ಲಿ ಬಾಲಕಿಗೆ ಮೈ ತಾಗಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಇದನ್ನು ಪ್ರಶ್ನಿಸಿದ್ದಕ್ಕೆ ಜೀವ ಬೆದರಿಕೆಯೊಡ್ಡಿದ್ದ. ನೊಂದ ಬಾಲಕಿ ಪೋಷಕರ ಸಮೇತ ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆ ಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು' ಎಂದು ತಿಳಿಸಿವೆ.

ದೇಗುಲ ನಿರ್ಮಾಣ: ಬಿಕ್ಕಟ್ಟು ಇತ್ಯರ್ಥಕ್ಕೆ ಸಮಿತಿ

ಬೆಂಗಳೂರು: ಬೆಂಗಳೂರು ವಿವಿ ಜ್ಞಾನ ಭಾರತಿ ಆವರಣದಲ್ಲಿ ಗಣೇಶದೇವಸ್ಥಾನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಉಂಟಾಗಿರುವ ಗೊಂದಲವನ್ನು ಸೌಹಾರ್ದಯುತವಾಗಿ ಇತ್ಯರ್ಥಗೊಳಿಸಲು ಸಿಂಡಿಕೇಟ್ ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಲು ನಿರ್ಧರಿಸಲಾಗಿದೆ. ಮಂಗಳವಾರ ನಡೆದ ವಿವಿ ಸಿಂಡಿಕೇಟ್ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಸಿಂಡಿಕೇಟ್ ಸದಸ್ಯರಾದ ಡಾ. ಎಚ್. ಸುಧಾಕರ್, ಉದಯಕುಮಾರ್, ಗೋಪಿನಾಥ್ ಮತ್ತು ಎಂಜಿನಿಯರ್ ಚಂದ್ರಶೇಖರ್ ಸಮಿತಿಯಲ್ಲಿದ್ದಾರೆ.

ಸಮಿತಿಯು ಸೌಹಾರ್ದಯುತವಾಗಿ ಸಂಬಂಧಪಟ್ಟ ಎಲ್ಲರ ಜತೆ ಸಮಾಲೋಚನೆ ನಡೆಸಿ ದೇಗುಲಕ್ಕೆ ಸೂಕ್ತ ಸ್ಥಳ ನಿಗದಿಪಡಿಸುವ ಬಗ್ಗೆ ಸಮಿತಿಯು ಒಂದು ವಾರದಲ್ಲಿ ವರದಿ ನೀಡಲಿದೆ.

ಜ್ಞಾನಭಾರತಿ ಮೆಟ್ರೊ ನಿಲ್ದಾಣಕ್ಕೆ ಡಾ.ಎಚ್. ನರಸಿಂಹಯ್ಯ ಅವರ ಹೆಸರಿಡಬೇಕು ಎಂದು ಡಾ. ಎಚ್. ಸುಧಾಕರ್ ಮಂಡಿಸಿದ ಪ್ರಸ್ತಾವವನ್ನು ಸಿಂಡಿಕೇಟ್ ಸಭೆ ಅನುಮೋದಿಸಿದೆ.



ಬೊಮ್ಮನಹಳ್ಳಿ: ಸಿಲ್ಕ್ ಬೋರ್ಡ್ ಜಂಕ್ಷನ್, ಎಲೆಕ್ಟ್ರಾನಿಕ್ ಸಿಟಿ ಸುತ್ತಮುತ್ತ ಒತ್ತುವರಿ

ಕಾಲುವೆ ಅಳತೆಗೇ ಕುತ್ತು, ತಂದಿದೆ ಆಪತ್ತು

• ಆರ್. ಮಂಜುನಾಥ್

ಬೆಂಗಳೂರು: ಸಿಲ್ಕ್ ಬೋರ್ಡ್ ಜಂಕ್ಷನ್ ಎಂದರೆ ವಾಹನದಟ್ಟಣೆಯ ತಾಣ ಎಂದೇ ಜನಜನಿತ. ಈ ರಸ್ತೆ ಐಟಿ ಕಾರಿಡಾರ್ ಎಲೆಕ್ಟ್ರಾನಿಕ್ ಸಿಟಿಗೆ ಸಂಪರ್ಕಸೇತು. ಈ ಭಾಗದಲ್ಲಿ ಸಣ್ಣ ಮಳೆಯಾದರೂ ರಾಜಕಾಲುವೆಗಳು ಉಕ್ಕಿ ಹರಿದು, ರಸ್ತೆಯಲ್ಲೆಲ್ಲ ತುಂಬಿಕೊಳ್ಳುತ್ತವೆ. ಇದಕ್ಕೆಲ್ಲ ಕಾರಣ ರಾಜಕಾಲುವೆ ಒತ್ತುವರಿ ಹಾಗೂ ಗಾತ್ರ ಕಡಿಮೆ ಮಾಡಿರುವುದು. ಅಷ್ಟೇ ಅಲ್ಲ, ಮೂಲ ರಾಜಕಾಲುವೆಗೆ ಪರ್ಯಾಯವಾಗಿ ಮತ್ತೊಂದೆಡೆ ಕಾಲುವೆ ಇದೆ ಎಂದು ತೋರಿಸಿದ್ದು, ಮೂಲ ರಾಜಕಾಲುವೆಯ ಒತ್ತುವರಿಯನ್ನೇ ತೆರವು ಮಾಡಿಲ್ಲ.

ಮಡಿವಾಳ ಕೆರೆಯಿಂದ ಬಿಳೇಕಹಳ್ಳಿ ಮೂಲಕ ಅಗರ ಕೆರೆಗೆ ರಾಜಕಾಲುವೆ ಮೂಲಕ ಕೋಡಿ ಹರಿಯಬೇಕು. ಆದರೆ, ಈ ರಾಜಕಾಲುವೆ ಮುಖ್ಯರಸ್ತೆಯಲ್ಲೇ ಇಲ್ಲದಂತಾಗಿದೆ. ಮೂಲ ವಿಸ್ತೀರ್ಣ ಕಳೆದುಕೊಂಡ 'ಬಾಕ್ಸ್ ರಾಜಕಾಲುವೆಯಿಂದ' ನೀರು ಸರಾಗವಾಗಿ ಹರಿಯುತ್ತಿಲ್ಲ. ಸಿಲ್ಕ್ ಬೋರ್ಡ್ ಜಂಕ್ಷನ್ ಸೇರಿ ಎಲೆಕ್ಟ್ರಾನಿಕ್ ಸಿಟಿಗೆ ಹೋಗುವ ರಸ್ತೆಯಲ್ಲಿ ಸಣ್ಣ ಮಳೆ ಬಂದರೂ ನೀರು ತುಂಬಿಕೊಳ್ಳುತ್ತದೆ.

ಸೆಪ್ಟೆಂಬರ್ ಮೊದಲ ವಾರದಲ್ಲಿ ಸುರಿದ ಮಳೆಗೆ ಬೊಮ್ಮನಹಳ್ಳಿ ವಲಯದಲ್ಲಿ ಎಚ್.ಎಸ್.ಆರ್. ಬಡಾವಣೆ ಸೇರಿ ಪ್ರಮುಖ 9 ರಸ್ತೆಗಳು ಜಲಾವೃತವಾಗಿದ್ದವು. ಹೊಂಗಸಂದ್ರ, ಬೇಗೂರು, ಬಿಳೇಕಹಳ್ಳಿ, ಅರಕೆರೆ, ಹುಳಿಮಾವು, ಪುಟ್ಟೇನಹಳ್ಳಿ ಕೆರೆ, ರಾಜಕಾಲುವೆಗಳ ಸುತ್ತಮುತ್ತಲಿನ ಬಡಾವಣೆಗಳು ಹಾಗೂ 140ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿತ್ತು. ಇದಕ್ಕೆಲ್ಲ ಕಾರಣ ರಾಜಕಾಲುವೆ ಒತ್ತುವರಿ. ಜೊತೆಗೆ ಇರುವ ರಾಜಕಾಲುವೆಯ ವಿಸ್ತೀರ್ಣವನ್ನು ಕಡಿಮೆ ಮಾಡಿರುವುದು. ಸಾಮಾನ್ಯವಾಗಿ ರಾಜಕಾಲುವೆಗಳ ಅಗಲ ಕನಿಷ್ಠ 15 ಅಡಿಯಿಂದ 66 ಅಡಿ ಇರುತ್ತದೆ. ಇಲ್ಲಿ ಅಗಲ ವಿಪರೀತ ಎನ್ನುವಷ್ಟು ಕಡಿಮೆಯಾಗಿರುವುದಕ್ಕೆ ಉದಾಹರಣೆಗಳು ಸಿಗುತ್ತವೆ.

ಇನ್ನು ಈ ಭಾಗದ ಐಟಿ ಕಾರಿಡಾರ್ ಎಲೆಕ್ಟ್ರಾನಿಕ್ ಸಿಟಿ ಬಿಬಿಎಂಪಿ ವ್ಯಾಪ್ತಿಗೆ ಬಾರದಿದ್ದರೂ ರಾಜಕಾಲುವೆ, ಕುಂಟೆಗಳ ಒತ್ತುವರಿಯಲ್ಲಿ ಹಿಂದೆ ಬಿದ್ದಿಲ್ಲ. ಗ್ರಾಮ ಪಂಚಾಯಿತಿಯವರು ಈ ಎಲ್ಲ ದುರವಸ್ಥೆಗೆ ಅನುವು ಮಾಡಿಕೊಟ್ಟಿದ್ದಾರೆ. ಈ ಭಾಗದಲ್ಲಿ ರಾಜಕಾಲುವೆ ಒತ್ತುವರಿ ತೆರವಿಗೆ ಯಾರೂ ಮುಂದಾಗುತ್ತಿಲ್ಲ ಎಂಬುದು ಸ್ಥಳೀಯರ ಆರೋಪ.

ಕೆರೆಗಳ ಕಾಲುವೆ ಮಾಯ

ಬೊಮ್ಮನಹಳ್ಳಿ ಹಾಗೂ ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರದಲ್ಲಿ ಕೆರೆಗಳ ಅಭಿವೃದ್ಧಿಗೆ ವಹಿಸಿದ್ದ ಆಸಕ್ತಿಯನ್ನು ಕಾಲುವೆಗಳನ್ನು ಉಳಿಸಿಕೊಳ್ಳುವಲ್ಲಿ ತೋರಿಲ್ಲ ಎಂಬುದಕ್ಕೆ ಕೆರೆಗಳ ಸುತ್ತಲಿನ ರಾಜಕಾಲುವೆಗಳು ಒತ್ತುವರಿಯಾಗಿರುವುದೇ ಸಾಕ್ಷಿ. ಉತ್ತರಹಳ್ಳಿ, ಮೊಗೆಕೆರೆ, ದೊರೆ ಕೆರೆ, ಸುಬ್ರಮಣ್ಯಪುರ ಕೆರೆ, ದೊಡ್ಡಕಲ್ಲಸಂದ್ರ, ಕೊತ್ತನೂರು, ಆಲಹಳ್ಳಿ, ಗೊಲ್ಲಹಳ್ಳ, ಕೆಂಬತ್ತಳ್ಳಿ, ಗೊಟ್ಟಿಗೆರೆ, ಐತಿಹಾಸಿಕ ಬೇಗೂರು, ಪರಪ್ಪನ ಅಗ್ರಹಾರ, ಹರಳೂರು, ಸೋಮಸಂದ್ರ, ಕೊತ್ತನೂರು, ಚುಂಚಘಟ್ಟ, ಕೂಡ್ಲು ದೊಡ್ಡಕೆರೆಗಳ ಸುತ್ತಮುತ್ತಲಿನ ರಾಜಕಾಲುವೆ ಒತ್ತುವರಿಯಾಗಿದೆ. ಈ ಕೆರೆಗಳು ತುಂಬಿದಾಗ ನೀರು ಬಡಾವಣೆ, ರಸ್ತೆಗೆ ಹರಿಯುತ್ತಿದೆ.



ಬೊಮ್ಮನಹಳ್ಳಿ ವಲಯ

342 ಒತ್ತುವರಿ ಸ್ಥಳ | **250** ತೆರವು | **92** ಬಾಕಿ

ಯಾವ ಗ್ರಾಮಗಳಲ್ಲಿ?

ಕೊತ್ತನೂರು, ಪರಪ್ಪನ ಅಗ್ರಹಾರ, ಹುಳಿಮಾವು, ಕೂಡ್ಲುಚಿಕ್ಕನಹಳ್ಳಿ, ನ್ಯಾನಪ್ಪನಹಳ್ಳಿ, ದೊಡ್ಡಕಲ್ಲಸಂದ್ರ, ರಾಘವನಪಾಳ್ಯ, ಅಲಹಳ್ಳಿ, ಗುಬ್ಬಲಾಳ, ಮಾರಸಂದ್ರ, ಬೊಮ್ಮನಹಳ್ಳಿ, ಚುಂಚಘಟ್ಟ, ಗೊಟ್ಟಿಗೆರೆ, ಹೊಂಗಸಂದ್ರ, ಬೇಗೂರು, ತುರಹಳ್ಳಿ, ಸಿಂಗಸಂದ್ರ.

ಕೆರೆ ಮೇಲಿದೆ ಡಾಲರ್ಸ್ ಕಾಲೊನಿ

ರಾಜಕಾಲುವೆ ಅಗಲ ಹಾಗೂ ಆಳವನ್ನೇ ಬೊಮ್ಮನಹಳ್ಳಿ ವಲಯದಲ್ಲಿ ಕಡಿಮೆ ಮಾಡಿದ್ದಾರೆ. 60–70 ಅಡಿ ಅಗಲದ ರಾಜಕಾಲುವೆ 20–30 ಅಡಿಯಷ್ಟಾಗಿದೆ. ಮಡಿವಾಳ ಕೆರೆಯಿಂದ ಬಿಳೇಕಹಳ್ಳಿ ಭಾಗದಲ್ಲಿ ರಾಜಕಾಲುವೆಯನ್ನು ಬಾಕ್ಸ್ ಮಾಡಲಾಗಿದ್ದು, ನೀರು ಹರಿಯುವ ಪ್ರಮಾಣ ಕಡಿಮೆಯಾಗಿದೆ. ಈ ಭಾಗದಲ್ಲಿ ಲಿಂಗಣ್ಣ ಕೆರೆ ಸೇರಿ ಹಲವು ಕುಂಟೆಗಳನ್ನೂ ಮುಚ್ಚಿ ಬಿಡಿಎ ಡಾಲರ್ಸ್ ಕಾಲೊನಿಯನ್ನೂ ಮಾಡಿದೆ. ಇಲ್ಲಿ ಪ್ರತಿಷ್ಠಿತರಲ್ಲ ನೆಲೆಸಿದ್ದಾರೆ. ಅವರನ್ನೆಲ್ಲ ಯಾರು ತೆರವು ಮಾಡುತ್ತಾರೆ? ಈ ವಲಯದಲ್ಲಿ ಒತ್ತುವರಿಗೆ ಪ್ರಮುಖ ಕಾರಣ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. ರಾಜಕಾಲುವೆಯನ್ನು ಕಿರಿದು ಮಾಡಿ ಲೇಔಟ್ ಮಾಡುವವರನ್ನು ರಿಯಲ್ ಎಸ್ಟೇಟ್‌ನವರಿಗೆ ಜಾಗ ಬಿಟ್ಟುಕೊಟ್ಟಿರುವುದು ಇದೇ ಬಿಡಿಎಯವರು. ಕಳೆದ ಬಾರಿ ಮಳೆ ಬಂದಾಗ ಬಿಳೇಕಹಳ್ಳಿ ಕಡೆ ರಾಜಕಾಲುವೆ ಒತ್ತುವರಿ ತೆರವು ಮಾಡಲು ಮುಂದಾದರು. ನಂತರ ಸುಮ್ಮನಾದರು. ಇನ್ನೂ ಈ ಭಾಗದಲ್ಲಿ ಒತ್ತುವರಿ ತೆರವು ಕಾರ್ಯ ಆಗಿಲ್ಲ ಎಂದು ಜನಾಭಿಪ್ರಾಯ ಸಂಘರ್ಷ ಪರಿಷತ್‌ನ ಸಹ-ಸಂಸ್ಥಾಪಕ ಬಿ.ಕೆ. ಪ್ರಕಾಶ್ ಬಾಬು ಅಸಮಾಧಾನ ವ್ಯಕ್ತಪಡಿಸಿದರು.

ಸ್ಥಳ ಬದಲಿಸಿದ ರಾಜಕಾಲುವೆ

ಬೊಮ್ಮನಹಳ್ಳಿ ಹಾಗೂ ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರಗಳಲ್ಲಿ ರಾಜಕಾಲುವೆ ಸ್ಥಳ ಬದಲಿಸಿದೆ. ಪರ್ಯಾಯ ರಾಜಕಾಲುವೆ ಇದೆ ಎಂದು ಮೂಲ ರಾಜಕಾಲುವೆ ಒತ್ತುವರಿಯನ್ನು ಬಿಬಿಎಂಪಿ ಹಾಗೂ ಕಂದಾಯ ಇಲಾಖೆ ಹಾಗೆಯೇ ಬಿಟ್ಟಿವೆ.

ಗುಬ್ಬಲಾಳ ಸರ್ವೆ ನಂ.11, ಚುಂಚಘಟ್ಟ ಸರ್ವೆ ನಂ. 22/1, ಗೊಟ್ಟಿಗೆರೆಯ ಸರ್ವೆ ನಂ.29, 30, 32, 42, 43, 44, 45/1-9, 46, 47, 48, 130, ಪರಪ್ಪನ ಅಗ್ರಹಾರ ಸರ್ವೆ ನಂ. 61/1, 61/2, 62/3, ಹೊಂಗಸಂದ್ರ ಸರ್ವೆ ನಂ. 79, 82/1, ಅಲಹಳ್ಳಿ ಸರ್ವೆ ನಂ. 92/1ಎ-ಬಿ, 92/2 ಗಳಲ್ಲಿ ಕಾಲು ಗುಂಟೆಯಿಂದ 11 ಗುಂಟೆಯವರೆಗೆ ರಾಜಕಾಲುವೆ ಒತ್ತುವರಿಯಾಗಿದೆ. ಆದರೆ, 'ಪರ್ಯಾಯ ಕಾಲುವೆ ಇದೆ' ಎಂದು ಬಿಬಿಎಂಪಿ [illegible]

ಎಲೆಕ್ಟ್ರಾನಿಕ್ ಸಿಟಿಯಲ್ಲೂ ಒತ್ತುವರಿ

ಎಲೆಕ್ಟ್ರಾನಿಕ್ ಸಿಟಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾಕಷ್ಟು ಅಪಾರ್ಟ್‌ಮೆಂಟ್‌ಗಳಿವೆ. ಈ ಭಾಗದಲ್ಲಿ ರಾಜಕಾಲುವೆ ಬಹುತೇಕ ಮುಚ್ಚಿಹೋಗಿದೆ. ಮಳೆ ಬಂದಾಗ ಒಳಚರಂಡಿ ನೀರು ಸೇರಿಕೊಂಡು ಕಲ್ಮಶವೆಲ್ಲ ರಸ್ತೆಯಲ್ಲೇ ಹರಿಯುತ್ತದೆ. ಈ ಬಗ್ಗೆ ಗ್ರಾಮ ಪಂಚಾಯಿತಿ ಅಥವಾ ಜಿಲ್ಲಾಡಳಿತ ಕ್ರಮ ಕೈಗೊಳ್ಳುತ್ತಿಲ್ಲ. ಪ್ರತಿ ಮಳೆಯಲ್ಲೂ ಈ ಭಾಗದ ನಿವಾಸಿಗಳಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಎಲೆಕ್ಟ್ರಾನಿಕ್ ಸಿಟಿ ಪೂರ್ಣ ಜಲಾವೃತವಾದಾಗ ಮಾತ್ರ ಇಲ್ಲಿನ ಸಂಕಷ್ಟ ಎಲ್ಲರಿಗೂ ಅರ್ಥವಾಗುತ್ತದೆ ಎಂದು ಸಾಮಾಜಿಕ ಕಾರ್ಯಕರ್ತ ಮಾಣಿ ರಂಜನ್ ಎಚ್ಚರಿಕೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿನ ರಾಜಕಾಲುವೆ ಒತ್ತುವರಿ: ಹೈಕೋರ್ಟ್ ನಿರ್ದೇಶನ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿನ ರಾಜಕಾಲುವೆ ಒತ್ತುವರಿ ತೆರವುಗೊಳಿಸಲು ಸರ್ಕಾರ ಮತ್ತು ಬಿಬಿಎಂಪಿ ಸೇರಿ ಸಂಬಂಧಿಸಿದ ಎಲ್ಲಾ ಪ್ರಾಧಿಕಾರಗಳು ತಕ್ಷಣವೇ ಕ್ರಮ ಕೈಗೊಂಡು ವಸ್ತುಸ್ಥಿತಿ ವರದಿ ಸಲ್ಲಿಸಬೇಕು' ಎಂದು ಹೈಕೋರ್ಟ್ ನಿರ್ದೇಶಿಸಿದೆ.

'ಬಿಬಿಎಂಪಿ ವ್ಯಾಪ್ತಿಯ ಕೆರೆಗಳ ಸಂರಕ್ಷಣೆ ಹಾಗೂ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು' ಎಂದು ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ಪೀಠ, 'ರಾಜಕಾಲುವೆ ಮತ್ತು ಮಳೆನೀರು ಕಾಲುವೆಗಳಿಗೆ ತ್ಯಾಜ್ಯ ಸುರಿಯುವುದನ್ನು ತಡೆಗಟ್ಟಬೇಕು' ಎಂದು ತಾಕೀತು ಮಾಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್ ಮಧ್ಯಂತರ ಅರ್ಜಿ ಸಲ್ಲಿಸಿ, ಬೆಂಗಳೂರಿನಲ್ಲಿ ಇತ್ತೀಚೆಗೆ ಸುರಿದ ಮಳೆಯಿಂದ ಉಂಟಾದ ಪರಿಸ್ಥಿತಿ ಕುರಿತಂತೆ ನ್ಯಾಯಪೀಠಕ್ಕೆ ಛಾಯಾಚಿತ್ರಗಳ ಸಹಿತ ಮಾಹಿತಿ ಒದಗಿಸಿದರು. ಇದನ್ನು ಪರಿಶೀಲಿಸಿದ ನ್ಯಾಯಪೀಠ, 'ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿತು. 'ರಾಜಕಾಲುವೆ ಒತ್ತುವರಿ ತೆರವಿಗೆ ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ನಿರ್ದೇಶಿಸಿ ವಿಚಾರಣೆಯನ್ನು ಅಕ್ಟೋಬರ್ 10ಕ್ಕೆ ಮುಂದೂಡಿತು.

ನಲಪಾಡ್ ಅಕಾಡೆಮಿ ಸೇರಿ 18 ಕಡೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ಜೊತೆಗೆ ಯಲಹಂಕ ವಲಯದಲ್ಲೂ ರಾಜಕಾಲುವೆ ಒತ್ತುವರಿ ಕಾರ್ಯಾಚರಣೆಯನ್ನು ಬಿಬಿಎಂಪಿ ಮಂಗಳವಾರವೂ ಮುಂದುವರಿಸಿ, ನಲಪಾಡ್ ಅಕಾಡೆಮಿ ಸೇರಿ 18 ಒತ್ತುವರಿಗಳನ್ನು ತೆರವುಗೊಳಿಸಿದೆ.

ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಶಾಂತಿನಿಕೇತನ ಲೇಔಟ್, ಪಾಪಯ್ಯ ರೆಡ್ಡಿ ಲೇಔಟ್, ಚಲ್ಲಘಟ್ಟ ಹಾಗೂ ಯಲಹಂಕ ವಲಯ ಸ್ಯಾಟಲೈಟ್ ಟೌನ್‌ನಲ್ಲಿ ರಾಜಕಾಲುವೆ ಒತ್ತುವರಿಯನ್ನು ಬಿಬಿಎಂಪಿ ಎಂಜಿನಿಯರ್‌ಗಳು, ಕಂದಾಯ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿ ನೆರವಿನೊಂದಿಗೆ ತೆರವು ಕಾರ್ಯಾಚರಣೆ ನಡೆಸಿದರು.

ಚಲ್ಲಘಟ್ಟದ ಸರ್ವೆ ನಂ. 70/14ರಲ್ಲಿರುವ ನಲಪಾಡ್ ಅಕಾಡೆಮಿ ವತಿಯಿಂದ 2.5 ಮೀ. ಅಗಲ ಹಾಗೂ 150.5 ಮೀ. ಉದ್ದದ ರಾಜಕಾಲುವೆ ಒತ್ತುವರಿಯಾಗಿದೆ. ಕಾಂಕ್ರೀಟ್ ಅಳವಡಿಸಿ ಎತ್ತರವಾಗಿ ಗೋಡೆ ನಿರ್ಮಿಸಿ ಅದರ ಮೇಲೆ ಫೆನ್ಸಿಂಗ್ ಅಳವಡಿಸಲಾಗಿತ್ತು. ಮಂಗಳವಾರ ಸುಮಾರು 50 ಮೀಟರ್ ನಷ್ಟು ಒತ್ತುವರಿ ತೆರವು ಮಾಡಲಾಗಿದೆ. ಬುಧವಾರವೂ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಬಿಬಿಎಂಪಿ ಎಂಜಿನಿಯರ್‌ಗಳು ತಿಳಿಸಿದರು.

ಶಾಂತಿನಿಕೇತನ ಲೇಔಟ್‌ನಲ್ಲಿ 7 ಕಟ್ಟಡ ಹಾಗೂ 4 ಗೋಡೆಗಳನ್ನು ತೆರವುಗೊಳಿಸಲಾಗಿದೆ. ಪಾಪಯ್ಯ ರೆಡ್ಡಿ ಲೇಔಟ್‌ನಲ್ಲಿ ಅಪಾರ್ಟ್‌ಮೆಂಟ್ ಗೋಡೆ ಹಾಗೂ ನಾಲ್ಕು ಶೆಡ್, ಬಸವನಪುರದಲ್ಲಿ ಗೋಡೆ ಹಾಗೂ ಖಾಲಿ ಜಾಗದ ಒತ್ತುವರಿ ತೆರವುಗೊಳಿಸಿ ಪಾಲಿಕೆ ವಶಕ್ಕೆ ಪಡೆಯಲಾಗಿದೆ.

'ಯಲಹಂಕ ವಲಯದ ಸ್ಯಾಟಲೈಟ್ ಟೌನ್ ವ್ಯಾಪ್ತಿಯಲ್ಲಿ ಎನ್.ಸಿ.ಬಿ.ಎಸ್ ಇನ್‌ಸ್ಟಿಟ್ಯೂಟ್ ಒತ್ತುವರಿ ಮಾಡಿಕೊಂಡಿದ್ದ 120 ಮೀ. ಉದ್ದದ ರಾಜಕಾಲುವೆಯ ಮೇಲಿದ್ದ ಗೋಡೆ ತೆರವು ಮಾಡಲಾಗಿದೆ. ನಗರದಲ್ಲಿ ರಾಜಕಾಲುವೆಗಳನ್ನು ಭೂಮಾಪಕರ ಮೂಲಕ ಸಮೀಕ್ಷೆ ಮಾಡಿ, ಮಾರ್ಕಿಂಗ್ ಮಾಡಿಕೊಂಡು ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಒತ್ತುವರಿ ಆಗಿರುವ ಪ್ರದೇಶಗಳ ತೆರವು ಕಾರ್ಯಾಚರಣೆ ಮುಂದುವರಿಸಲಾಗುತ್ತದೆ' ಎಂದು ಬಿಬಿಎಂಪಿ ಮಹದೇವಪುರ ವಲಯದ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ತಿಳಿಸಿದರು.

ನಲಪಾಡ್ ಅಕಾಡೆಮಿ ಒತ್ತುವರಿ ಮಾಡಿರುವ ರಾಜಕಾಲುವೆ ಸ್ಥಳವನ್ನು ಬಿಬಿಎಂಪಿ ಸಿಬ್ಬಂದಿ ಮಂಗಳವಾರ ತೆರವುಗೊಳಿಸಲು ಮುಂದಾದರು–ಪ್ರಜಾವಾಣಿ ಚಿತ್ರ

ಬೊಮ್ಮನಹಳ್ಳಿಯಲ್ಲಿ ತೆರವು ಏಕಿಲ್ಲ?

'ಪ್ರತಿ ಸಣ್ಣ ಮಳೆ ಬಂದಾಗಲೂ ಸಿಲ್ಕ್‌ಬೋರ್ಡ್ ಜಂಕ್ಷನ್‌ನಿಂದ ಎಲೆಕ್ಟ್ರಾನಿಕ್ ಸಿಟಿವರೆಗೂ ರಸ್ತೆಯಲ್ಲಿ ನೀರು ನಿಂತು ಸಮಸ್ಯೆಯಾಗುತ್ತಿದೆ. ಬೊಮ್ಮನಹಳ್ಳಿ ವಲಯದಲ್ಲಿ ರಾಜಕಾಲುವೆ ಅತ್ಯಂತ ಹೆಚ್ಚು ಒತ್ತುವರಿಯಾಗಿದೆ. ಆದರೆ, ಬಿಬಿಎಂಪಿ ಅಧಿಕಾರಿಗಳು ಇಲ್ಲಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಆರಂಭಿಸಿಲ್ಲ. ಬೃಹತ್ ಡೆವಲಪರ್‌ಗಳ ಒತ್ತಾಯಕ್ಕೆ ಮಣಿದು, ಕಾಲಹರಣ ಮಾಡುತ್ತಿದ್ದಾರೆ. ಬಿಬಿಎಂಪಿ ಮುಖ್ಯ ಆಯುಕ್ತರು ಇತ್ತ ಗಮನಹರಿಸಬೇಕು' ಎಂದು ಸಾಮಾಜಿಕ ಕಾರ್ಯಕರ್ತ ಅಮರೇಶ್ ಆಗ್ರಹಿಸಿದ್ದಾರೆ.

'ರಾಜಕಾಲುವೆಗಳ ಸುಧಾರಣೆಗೆ ಕಾಲಾವಕಾಶ ಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿನ ರಾಜಕಾಲುವೆಗಳ ಒತ್ತುವರಿ ತೆರವು ಮಾಡಿ, ಅಭಿವೃದ್ಧಿಪಡಿಸಲು ಕನಿಷ್ಠ ಒಂದೂವರೆ ವರ್ಷ ಸಮಯ ಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ಅವರ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಅವರು, 'ನಗರದಲ್ಲಿನ ರಾಜಕಾಲುವೆಗಳ ಸುಧಾರಣಾ ಕಾಮಗಾರಿಗಳಿಗಾಗಿ ₹ 1,500 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ರಾಜಕಾಲುವೆಗಳನ್ನು ಅತಿಕ್ರಮಣ ಮಾಡಿ ನಿರ್ಮಿಸಿರುವ ಕಟ್ಟಡಗಳನ್ನು ತೆರವುಗೊಳಿಸಿದ ಬಳಿಕವೇ ಕಾಮಗಾರಿಗಳನ್ನು ಆರಂಭಿಸಬೇಕಿದೆ' ಎಂದರು.

ನಗರದ ವ್ಯಾಪ್ತಿಯಲ್ಲಿ 859.90 ಕಿ.ಮೀ. ಉದ್ದದ 633 ರಾಜಕಾಲುವೆಗಳಿವೆ. ಈ ಪೈಕಿ 490.10 ಕಿ.ಮೀ. ಉದ್ದದ ಕಾಲುವೆಗಳನ್ನು 20 ವರ್ಷಗಳ ಅವಧಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ. 469.80 ಕಿ.ಮೀ. ಉದ್ದದ ಕಾಲುವೆಗಳನ್ನು ಅಭಿವೃದ್ಧಿಪಡಿಸಬೇಕಿದೆ. ಹೆಚ್ಚುವರಿಯಾಗಿ ₹ 300 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ವಿವರಿಸಿದರು.

'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮಂಜೂರಾತಿ ನೀಡಿದ್ದ ಕಾಮಗಾರಿಗಳು ಇನ್ನೂ ಪೂರ್ಣಗೊಂಡಿಲ್ಲ. ನನ್ನ ಅವಧಿಯಲ್ಲಿ ಮಂಜೂರಾತಿ ನೀಡಿದ ಕಾಮಗಾರಿಗಳನ್ನು ಮುಗಿಸಲು ಒಂದೂವರೆ ವರ್ಷ ಬೇಕಾಗುತ್ತದೆ. ರಾಜಕಾಲುವೆಗಳನ್ನು ಸಮಗ್ರವಾಗಿ ಸಮೀಕ್ಷೆ ನಡೆಸಿ, ಒತ್ತುವರಿ ಪ್ರದೇಶದಲ್ಲಿರುವ ಕಟ್ಟಡಗಳನ್ನು ಗುರುತಿಸಿ ತೆರವು ಮಾಡಲು ದೀರ್ಘ ಸಮಯ ಹಿಡಿಯುತ್ತದೆ' ಎಂದರು.

ಹೆಚ್ಚು ಮಳೆಯಾಗಿರುವುದರಿಂದ ಕೆರೆಗಳು ಭರ್ತಿಯಾಗಿವೆ. ಅಲ್ಲಿನ ನೀರು ರಾಜಕಾಲುವೆಗಳಲ್ಲಿ ಹರಿದು ಮುಂದಕ್ಕೆ ಹೋಗುತ್ತಿಲ್ಲ. ಇದು ಪ್ರವಾಹ ಸ್ಥಿತಿ ನಿರ್ಮಾಣವಾಗಲು ಪ್ರಮುಖ ಕಾರಣ ಎಂದು ಮುಖ್ಯಮಂತ್ರಿ ಹೇಳಿದರು.

ಹೆಚ್ಚಿನ ಅನುದಾನಕ್ಕೆ ಆಗ್ರಹ: ಕೃಷ್ಣ ಬೈರೇಗೌಡ ಮಾತನಾಡಿ, 'ರಾಜಕಾಲುವೆಗಳ ಅಭಿವೃದ್ಧಿಗೆ ನನ್ನ ವಿಧಾನಸಭಾ ಕ್ಷೇತ್ರಕ್ಕೆ ₹ 110 ಕೋಟಿ ಅನುದಾನ ಕೋರಿ ಪ್ರಸ್ತಾವ ಸಲ್ಲಿಸಿದ್ದೆ. ಆದರೆ, ₹ 20 ಕೋಟಿ ಮಾತ್ರ ಒದಗಿಸಲಾಗಿದೆ. ಇದರಿಂದ ಕ್ಷೇತ್ರದ ವ್ಯಾಪ್ತಿಯಲ್ಲಿನ ರಾಜಕಾಲುವೆಗಳ ಅಭಿವೃದ್ಧಿ ಅಸಾಧ್ಯ. ಹೆಚ್ಚಿನ ಅನುದಾನ ನೀಡಬೇಕು' ಎಂದು ಆಗ್ರಹಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಮೂರು ವರ್ಷಗಳ ಅವಧಿಯಲ್ಲಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರಕ್ಕೆ ₹ 407 ಕೋಟಿ ಅನುದಾನ ನೀಡಲಾಗಿದೆ. ಅಮೃತ್ ಯೋಜನೆಯಡಿ ಒದಗಿಸಿರುವ ₹ 100 ಕೋಟಿಯನ್ನೂ ರಾಜಕಾಲುವೆಗಳ ಅಭಿವೃದ್ಧಿಗೂ ಬಳಸಬಹುದು' ಎಂದರು.

ಬಾಕಿ ಉಳಿದಿರುವ 469.80 ಕಿ.ಮೀ. ಉದ್ದದ ರಾಜಕಾಲುವೆಗಳ ಅಭಿವೃದ್ಧಿಗೆ ಈಗಲೇ ಅನುದಾನ ಒದಗಿಸಿ, ಕಾಮಗಾರಿ ಆರಂಭಿಸಬೇಕು. ಕೆಲಸ ಪೂರ್ಣಗೊಳಿಸಲು ಕಾಲಮಿತಿ ನಿಗದಿಪಡಿಸಬೇಕು' ಎಂದು ಕೃಷ್ಣ ಬೈರೇಗೌಡ ಒತ್ತಾಯಿಸಿದರು.

'ಒತ್ತುವರಿ ತೆರವು ನಿಲ್ಲಬಾರದು'

'ರಾಜಕಾಲುವೆಗಳ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಿಲ್ಲಿಸಬಾರದು. ಎಲ್ಲ ಒತ್ತುವರಿಗಳನ್ನೂ ತೆರವು ಮಾಡಬೇಕು. ಬೆಂಗಳೂರಿನ ಕೆರೆಗಳಿಗೆ ಸ್ಲೂಸ್ ಗೇಟ್ ಅಳವಡಿಸುವ ಮೂಲಕ ಪ್ರವಾಹ ಪರಿಸ್ಥಿತಿ ಸೃಷ್ಟಿಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು' ಎಂದು ಬಿಜೆಪಿಯ ಅರವಿಂದ ಲಿಂಬಾವಳಿ ಆಗ್ರಹಿಸಿದರು.

ಲೋಕಾಯುಕ್ತಕ್ಕೆ ದೂರು ನೀಡಲು ಆಯುಕ್ತರಿಗೆ ಮನವಿ

ಬೆಂಗಳೂರು: 'ನಗರದಲ್ಲಿ ಮಳೆ ನೀರುಗಾಲುವೆ ಮತ್ತು ರಾಜಕಾಲುವೆ ಒತ್ತುವರಿಗೆ ಬಿಬಿಎಂಪಿ ಅಧಿಕಾರಿಗಳು–ಎಂಜಿನಿಯರ್‌ಗಳೇ ನೇರ ಹೊಣೆಯಾಗಿದ್ದು, ಅವರ ಮೇಲೆ ತಾವೇ ಲೋಕಾಯುಕ್ತಕ್ಕೆ ದೂರು ನೀಡಬೇಕು' ಎಂದು ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ವ್ಯವಸ್ಥಾಪಕ ಟ್ರಸ್ಟಿ ಎಸ್.ಅಮರೇಶ್ ಬಿಬಿಎಂಪಿ ಮುಖ್ಯ ಆಯುಕ್ತರನ್ನು ಒತ್ತಾಯಿಸಿದ್ದಾರೆ.

'ರಾಜಕಾಲುವೆ ಒತ್ತುವರಿ ತೆರವುಗೊಳಿಸುವಂತೆ ಹೈಕೋರ್ಟ್ 2012ರ ಅ.11ರಂದು ಆದೇಶ ನೀಡಿತ್ತು. ಎಲ್ಲ ಒತ್ತುವರಿ ತೆರವುಗೊಳಿಸುವುದಾಗಿ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ನ್ಯಾಯಾಲಯಕ್ಕೆ ಮುಚ್ಚಳಿಕೆಯನ್ನೂ ಸಲ್ಲಿಸಿದ್ದರು. ಆದರೆ ಅದನ್ನು ಪಾಲನೆ ಮಾಡಿಲ್ಲ' ಎಂದು ಮುಖ್ಯ ಆಯುಕ್ತರಿಗೆ ನೀಡಿರುವ ಮನವಿ ಪತ್ರದಲ್ಲಿ ಅಮರೇಶ್ ತಿಳಿಸಿದ್ದಾರೆ.

ಕ್ರ. ಸಂ.	ವಲಯ	ವಾರ್ಡ್ ಸಂಖ್ಯೆ ಮತ್ತು ಹೆಸರು	ಸಹಾಯಕ ಅಭಿಯಂತರರ ಹೆಸರು ಮತ್ತು ಮೊಬೈಲ್ ಸಂಖ್ಯೆ	ಸಹಾಯಕ ಕಾರ್ಯಪಾಲಕ ಅಭಿಯಂತರರ ಹೆಸರು ಮತ್ತು ಮೊಬೈಲ್ ಸಂಖ್ಯೆ	ಕಾರ್ಯಪಾಲಕ ಅಭಿಯಂತರರ ಹೆಸರು ಮತ್ತು ಮೊಬೈಲ್ ಸಂಖ್ಯೆ
40	ದಕ್ಷಿಣ	179 ಶಾಕಂಬರಿನಗರ	ಡಿ. ಮನೋಹರ್ 9480688179	ಶ್ರೀ ವೆಂಕಟೇಶ್ (ಜೆ.ಪಿ. ನಗರ) 9480688253	ಶ್ರೀ ಎಸ್. ಮಂಜುನಾಥ್ ರೆಡ್ಡಿ ಕಾರ್ಯಪಾಲಕ ಅಭಿಯಂತರರು (ಜಯನಗರ) 9480688285 & 9480684064
41	ದಕ್ಷಿಣ	180 ಬನಶಂಕರಿ ಟೆಂಪಲ್	ಮಂಜುನಾಥ್ ವೆಂಕಣ್ಣ ನಾಯಕ್ 9480688180	ಶ್ರೀ ಯತೀಶ್ (ಬನಶಂಕರಿ) 9480688255 & 9968427514	ಶ್ರೀ ಶ್ರೀನಿವಾಸನ್. ಟಿ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) 9480688286 & 9035087060
42	ದಕ್ಷಿಣ	181 ಕುಮಾರಸ್ವಾಮಿ ಲೇಔಟ್	ಮಮತ ಐ/ಸಿ 9480688181	ಶ್ರೀ ಮುರುಳೀಧರ್ (ಪದ್ಮನಾಭನಗರ) 9480688254 & 9035689994	ಶ್ರೀ ಶ್ರೀನಿವಾಸನ್. ಟಿ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) 9480688286 & 9035087060
43	ದಕ್ಷಿಣ	182 ಪದ್ಮನಾಭನರ	ಮಮತ 9480688182	ಶ್ರೀ ಮುರುಳೀಧರ್ (ಪದ್ಮನಾಭನಗರ) 9480688254 & 9035689994	ಶ್ರೀ ಶ್ರೀನಿವಾಸನ್. ಟಿ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) 9480688286 & 9035087060
44	ದಕ್ಷಿಣ	183 ಚಿಕ್ಕಲಸಂದ್ರ	ಸಚಿನ್. ಎಸ್ 9480688183	ಶ್ರೀ ಮುರುಳೀಧರ್ (ಪದ್ಮನಾಭನಗರ) 9480688254 & 9035689994	ಶ್ರೀ ಶ್ರೀನಿವಾಸನ್. ಟಿ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) 9480688286 & 9035087060
	ಬೊಮ್ಮನಹಳ್ಳಿ ವಲಯ				
1	ಬೊಮ್ಮನಹಳ್ಳಿ	184 ಉತ್ತರಹಳ್ಳಿ	ವೆಂಕಟರಮಣ. ಕೆ.ವಿ 9480688184	ನೀಲಕಂಠಯ್ಯ. ಕೆ.ಪಿ 9480688259	ಪ್ರಮೋದ್ ಕುಮಾರ್. ಎನ್.ಜಿ 9480688288
2	ಬೊಮ್ಮನಹಳ್ಳಿ	185 ಯಲಚೇನಹಳ್ಳಿ	ವೆಂಕಟರಮಣ. ಕೆ.ವಿ 9480688185	ನೀಲಕಂಠಯ್ಯ. ಕೆ.ಪಿ 9480688259	ಪ್ರಮೋದ್ ಕುಮಾರ್. ಎನ್.ಜಿ 9480688288
3	ಬೊಮ್ಮನಹಳ್ಳಿ	197 ವಸಂತಪುರ	ತಿಮ್ಮಯ್ಯ. ವಿ 9480688197	ನೀಲಕಂಠಯ್ಯ. ಕೆ.ಪಿ 9480688259	ಪ್ರಮೋದ್ ಕುಮಾರ್. ಎನ್.ಜಿ 9480688288
4	ಬೊಮ್ಮನಹಳ್ಳಿ	194 ಗೊಟ್ಟಿಗೆರೆ	ಮಾರುತಿ 9480688194	ನರೇಂದ್ರ ಕುಮಾರ್ 9480688261	ಪ್ರಮೋದ್ ಕುಮಾರ್. ಎನ್.ಜಿ 9480688288
5	ಬೊಮ್ಮನಹಳ್ಳಿ	195 ಕೋಣನಕುಂಟೆ	ಶಿಲ್ಪಾ 9480688195	ನರೇಂದ್ರ ಕುಮಾರ್ 9480688261	ಪ್ರಮೋದ್ ಕುಮಾರ್. ಎನ್.ಜಿ 9480688288
6	ಬೊಮ್ಮನಹಳ್ಳಿ	196 ಅಂಜನಪುರ	ಕೃಷ್ಣಪ್ಪ 9480688196	ನರೇಂದ್ರ ಕುಮಾರ್ 9480688261	ಪ್ರಮೋದ್ ಕುಮಾರ್. ಎನ್.ಜಿ 9480688288
7	ಬೊಮ್ಮನಹಳ್ಳಿ	191 ಸಿಂಗಸಂದ್ರ	ಚೆಲುವರಾಜು 9480688191	ವೀರೇಶ್ ಆಲದಕಟ್ಟಿ 9480688260	ಪ್ರಮೋದ್ ಕುಮಾರ್. ಎನ್.ಜಿ 9480688288
8	ಬೊಮ್ಮನಹಳ್ಳಿ	192 ಬೆಗೂರ್	ಚೆಲುವರಾಜು 9480688192	ವೀರೇಶ್ ಆಲದಕಟ್ಟಿ 9480688260	ಪ್ರಮೋದ್ ಕುಮಾರ್. ಎನ್.ಜಿ 9480688288
9	ಬೊಮ್ಮನಹಳ್ಳಿ	174 ಹೆಚ್‌ಎಸ್‌ಆರ್ ಲೇಔಟ್	ರಾಜಗೋಪಾಲ ಬಾಬು ಐ/ಸಿ 9480688174	ರವಿ. ಡಿ 9480688256	ಶೇಷಾದ್ರಿ. ವೈ.ಎನ್ 9480688287
10	ಬೊಮ್ಮನಹಳ್ಳಿ	190 ಮಂಗಮ್ಮನಪಾಳ್ಯ	ರಾಜಗೋಪಾಲ ಬಾಬು 9480688190	ರವಿ. ಡಿ 9480688256	ಶೇಷಾದ್ರಿ. ವೈ.ಎನ್ 9480688287
11	ಬೊಮ್ಮನಹಳ್ಳಿ	175 ಬೊಮ್ಮನಹಳ್ಳಿ	ಚೈತ್ರ. ಎಸ್ ಐ/ಸಿ 9480688175	ಆಂಜನಪ್ಪ. ಸಿ.ಟಿ 9480688257	ಶೇಷಾದ್ರಿ. ವೈ.ಎನ್ 9480688287
12	ಬೊಮ್ಮನಹಳ್ಳಿ	188 ಬಿಳೆಕಹಳ್ಳಿ	ಚೈತ್ರ. ಎಸ್ 9480688188	ಆಂಜನಪ್ಪ. ಸಿ.ಟಿ 9480688257	ಶೇಷಾದ್ರಿ. ವೈ.ಎನ್ 9480688287
13	ಬೊಮ್ಮನಹಳ್ಳಿ	189 ಹೊಂಗಸಂದ್ರ	ಎಂ. ಜಯರಾಮ್ 9480688189	ಆಂಜನಪ್ಪ. ಸಿ.ಟಿ 9480688257	ಶೇಷಾದ್ರಿ. ವೈ.ಎನ್ 9480688287
14	ಬೊಮ್ಮನಹಳ್ಳಿ	186 ಜರಗನಹಳ್ಳಿ	ನರಸಿಂಹಮೂರ್ತಿ ನಾಯಕ್ 9480688186	ರಘುನಂದನ್ ಮಂತ್ರಿ 9480688258	ಶೇಷಾದ್ರಿ. ವೈ.ಎನ್ 9480688287
15	ಬೊಮ್ಮನಹಳ್ಳಿ	187 ಪುಟ್ಟೇನಹಳ್ಳಿ	ನಂದೀಶ್ (ಜೆ.ಇ) 9480688187	ರಘುನಂದನ್ ಮಂತ್ರಿ 9480688258	ಶೇಷಾದ್ರಿ. ವೈ.ಎನ್ 9480688287
16	ಬೊಮ್ಮನಹಳ್ಳಿ	193 ಅರಕೆರೆ	ಚೇತನ ಐ/ಸಿ 9480688193	ರಘುನಂದನ್ ಮಂತ್ರಿ 9480688258	ಶೇಷಾದ್ರಿ. ವೈ.ಎನ್ 9480688287
	ದಾಸರಹಳ್ಳಿ ವಲಯ				
1	ದಾಸರಹಳ್ಳಿ	12 ಶೆಟ್ಟಿಹಳ್ಳಿ	ಎಸ್.ಎನ್. ಕೃಷ್ಣಮೂರ್ತಿ 8971368695	ಎಸ್.ಎನ್. ಕೃಷ್ಣಮೂರ್ತಿ (ಪ್ರಭಾರ) 8971368695	ಎಸ್.ಎಲ್. ಪಾಪರೆಡ್ಡಿ 9480684887
2	ದಾಸರಹಳ್ಳಿ	13 ಮಲ್ಲಸಂದ್ರ	ಸಿ.ಎನ್. ಜಗದೀಶ್ 8660931367	ಎಸ್.ಎನ್. ಕೃಷ್ಣಮೂರ್ತಿ (ಪ್ರಭಾರ) 8971368695	ಎಸ್.ಎಲ್. ಪಾಪರೆಡ್ಡಿ 9480684887
3	ದಾಸರಹಳ್ಳಿ	14 ಬಾಗಲಗುಂಟೆ	ವೆಂಕಟೇಶಪ್ಪ 9480688014	ಬಿ.ಆರ್. ರಂಗನಾಥ್ 9480688205	ಎಸ್.ಎಲ್. ಪಾಪರೆಡ್ಡಿ 9480684887
4	ದಾಸರಹಳ್ಳಿ	15 ಟಿ. ದಾಸರಹಳ್ಳಿ	ವೆಂಕಟೇಶಪ್ಪ 9480688014	ಬಿ.ಆರ್. ರಂಗನಾಥ್ 9480688205	ಎಸ್.ಎಲ್. ಪಾಪರೆಡ್ಡಿ 9480684887
5	ದಾಸರಹಳ್ಳಿ	39 ಚೊಕ್ಕಸಂದ್ರ	ಸದಾಶಿವ 9480688039	ಪುಟ್ಟಹನುಮತ್‌ರಾಜು 9480688206	ಎಸ್.ಎಲ್. ಪಾಪರೆಡ್ಡಿ 9480684887
6	ದಾಸರಹಳ್ಳಿ	41 ಪಿಐಎ	ಸ್ವಾಮಿ. ಕೆ.ಎಸ್ 9480688041	ಪುಟ್ಟಹನುಮತ್‌ರಾಜು 9480688206	ಎಸ್.ಎಲ್. ಪಾಪರೆಡ್ಡಿ 9480684887
7	ದಾಸರಹಳ್ಳಿ	70 ರಾಜಗೋಪಾಲನಗರ	ಸ್ವಾಮಿ. ಕೆ.ಎಸ್ 9480688041	ಪುಟ್ಟಹನುಮತ್‌ರಾಜು 9480688206	ಎಸ್.ಎಲ್. ಪಾಪರೆಡ್ಡಿ 9480684887
8	ದಾಸರಹಳ್ಳಿ	71 ಹೆಗ್ಗನಹಳ್ಳಿ	ಅವೀಶ. ಹೆಚ್.ಎಂ 9480688070	ನಾಗೇಶ್ ಮೂರ್ತಿ 9480688207	ಎಸ್.ಎಲ್. ಪಾಪರೆಡ್ಡಿ 9480684887
	ಯಲಹಂಕ ವಲಯ				
1	ಯಲಹಂಕ	01 ಕೆಂಪೇಗೌಡ	ದೇವರಾಜ್ 9886153161	ರಾಮ ಸಂಜೀವಯ್ಯ 9480685320	ಸುಧಾಕರ್ ರೆಡ್ಡಿ 9480688262
2	ಯಲಹಂಕ	02 ಚೌಡೇಶ್ವರಿ	ನರಸಿಂಹಯ್ಯ 9480688002	ರಾಮ ಸಂಜೀವಯ್ಯ 9480685320	ಸುಧಾಕರ್ ರೆಡ್ಡಿ 9480688262
3	ಯಲಹಂಕ	03 ಅಟ್ಟೂರು	ರಾಮಕೃಷ್ಣಯ್ಯ 9972910910	ಸಚಿನ್. ಹೆಚ್.ಪಿ 9844508268	ಸುಧಾಕರ್ ರೆಡ್ಡಿ 9480688262
4	ಯಲಹಂಕ	04 ಯಲಹಂಕ ನ್ಯೂ ಟೌನ್	ಮೋಹನ್ 9900222431	ಸಚಿನ್. ಹೆಚ್.ಪಿ 9844508268	ಸುಧಾಕರ್ ರೆಡ್ಡಿ 9480688262
5	ಯಲಹಂಕ	05 ತಣಿಸಂದ್ರ	ಸುರೇಶ್ ದೇವತರಾಜ್ 9448021920	ನಾಗಪ್ಪ ಕಮತಿ 9916418194	ಪ್ರದೀಪ್. ಬಿ.ಎನ್ 9480688263
6	ಯಲಹಂಕ	06 ಜಕ್ಕೂರು	ಮಹಂತೇಶ್ ಕುಮಾರ್ 9901053319	ನಾಗಪ್ಪ ಕಮತಿ 9916418194	ಪ್ರದೀಪ್. ಬಿ.ಎನ್ 9480688263
7	ಯಲಹಂಕ	07 ಬ್ಯಾಟರಾಯನಪುರ	ಸೋಮಂತ್ ಜಾದವ್ 96978157555	ಸೋಮಶೇಖರ್ 9019211219	ಪ್ರದೀಪ್. ಬಿ.ಎನ್ 9480688263
8	ಯಲಹಂಕ	08 ಕೊಡಿಗೇಹಳ್ಳಿ	ಪ್ರವೀಣ್ 9060404354	ಸೋಮಶೇಖರ್ 9019211219	ಪ್ರದೀಪ್. ಬಿ.ಎನ್ 9480688263
9	ಯಲಹಂಕ	09 ವಿದ್ಯಾರಣ್ಯಪುರ	ಅರ್ಚನ 7349388139	ಭೀರೇಶ್ 6920992600	ಪ್ರದೀಪ್. ಬಿ.ಎನ್ 9480688263
10	ಯಲಹಂಕ	10 ದೊಡ್ಡಬೊಮ್ಮಸಂದ್ರ	ಪ್ರವೀಣ್ 9060404354	ಭೀರೇಶ್ 6920992600	ಪ್ರದೀಪ್. ಬಿ.ಎನ್ 9480688263
11	ಯಲಹಂಕ	11 ಕುವೆಂಪುನಗರ	ಜಯಂತ್‌ಕುಮಾರ್ 9844045089	ಭೀರೇಶ್ 6920992600	ಪ್ರದೀಪ್. ಬಿ.ಎನ್ 9480688263
	ಆರ್.ಆರ್. ನಗರ ವಲಯ				
1	ಆರ್.ಆರ್. ನಗರ	ಜಾಲಹಳ್ಳಿ	ಪೂಜಶ್ರೀ. ಆರ್ 9480688016	ಎಂ. ವಿಜ್ಞೇಶರ 9480688220	ಎನ್. ಬಸವರಾಜು 9480688223
2	ಆರ್.ಆರ್. ನಗರ	ಜೆ.ಪಿ. ಪಾರ್ಕ್	ಎನ್.ಜಿ. ಉಮೇಶ್ 9480688017	ಎಂ. ವಿಜ್ಞೇಶರ 9480688220	ಎನ್. ಬಸವರಾಜು 9480688223
3	ಆರ್.ಆರ್. ನಗರ	ಯಶವಂತಪುರ	ಹೇಮ. ಎಸ್.ಟಿ 9480688017	ಎಂ. ವಿಜ್ಞೇಶರ 9480688220	ಎನ್. ಬಸವರಾಜು 9480688223
4	ಆರ್.ಆರ್. ನಗರ	ಹೆಚ್.ಎಂ.ಟಿ	ರಾಜೇಶ್ 9480688038	ಕೆ.ಎಂ. ಮೃತ್ಯುಂಜಯ 9480688221	ಎನ್. ಬಸವರಾಜು 9480688223
5	ಆರ್.ಆರ್. ನಗರ	ದೊಡ್ಡಬಿದರಕಲ್ಲು	ಗುಳಿಗೌಡ 9480688040	ಬಿ. ರಮೇಶ್ 9480688224	ಲೋಕೇಶ್. ಬಿ.ಸಿ 9480688272
6	ಆರ್.ಆರ್. ನಗರ	ಲಕ್ಷ್ಮೀದೇವಿನಗರ	ಮಂಜುನಾಥ್ 9480688042	ಕೆ.ಎಂ. ಮೃತ್ಯುಂಜಯ 9480688221	ಎನ್. ಬಸವರಾಜು 9480688223
7	ಆರ್.ಆರ್. ನಗರ	ಲಗ್ಗೆರೆ	ಪ್ರಜ್ವಲ್ 7975145297	ಡಿ. ಹೇಮಂತ್ 9480688222	ಎನ್. ಬಸವರಾಜು 9480688223
8	ಆರ್.ಆರ್. ನಗರ	ಹೆರೋಹಳ್ಳಿ	ನಟರಾಜ್ ಐ/ಸಿ 9480688072	ಬಿ. ರಮೇಶ್ 9480688224	ಲೋಕೇಶ್. ಬಿ.ಸಿ 9480688272
9	ಆರ್.ಆರ್. ನಗರ	ಕೊಟ್ಟಿಗೆಪಾಳ್ಯ	ಪ್ರಜ್ವಲ್ 7975145297	ಡಿ. ಹೇಮಂತ್ 9480688222	ಎನ್. ಬಸವರಾಜು 9480688223
10	ಆರ್.ಆರ್. ನಗರ	ಜ್ಞಾನಭಾರತಿ	ವೆಂಕಟೇಶ್. ಸಿ 9480688129	ಎನ್. ಬಸವರಾಜು 9480688223	ಎನ್. ಬಸವರಾಜು 9480688223
11	ಆರ್.ಆರ್. ನಗರ	ಉಳ್ಳಾಲ	ನಾಗಭೂಷಣ್ 9480688130	ಎಂ.ವಿ. ಗುರುಪ್ರಸಾದ್ 9480688225	ಲೋಕೇಶ್. ಬಿ.ಸಿ 9480688272
12	ಆರ್.ಆರ್. ನಗರ	ಕೆಂಗೇರಿ	ನಟರಾಜ್ 9480688159	ಎಂ.ವಿ. ಗುರುಪ್ರಸಾದ್ 9480688225	ಲೋಕೇಶ್. ಬಿ.ಸಿ 9480688272
13	ಆರ್.ಆರ್. ನಗರ	ರಾಜರಾಜೇಶ್ವರಿ ನಗರ	ಎಂ. ಸಿದ್ದರಾಮಯ್ಯ 9480688160	ಎನ್. ಬಸವರಾಜು 9480688223	ಎನ್. ಬಸವರಾಜು 9480688223
14	ಆರ್.ಆರ್. ನಗರ	ಹೆಮ್ಮಿಗೆಪುರ	ದಯಾನಂದ್. ಎನ್ 9480688198	ಎಂ.ವಿ. ಗುರುಪ್ರಸಾದ್ 9480688225	ಲೋಕೇಶ್. ಬಿ.ಸಿ 9480688272
	ಮಹದೇವಪುರ ವಲಯ				
1	ಮಹದೇವಪುರ	54 ಹೂಡಿ	ಜಗದೀಶ. ಎಂ 9480688054	ಶ್ರೀನಿವಾಸ ಮೂರ್ತಿ 9480688241	ಡಿ.ಎಂ. ಮುನಿರೆಡ್ಡಿ 9480688280
2	ಮಹದೇವಪುರ	82 ಗರುಡಚಾರ್‌ಪಾಳ್ಯ	ರಘು 9480688082	ಶ್ರೀನಿವಾಸ ಮೂರ್ತಿ 9480688241	ಡಿ.ಎಂ. ಮುನಿರೆಡ್ಡಿ 9480688280
3	ಮಹದೇವಪುರ	83 ಕಾಡುಗೋಡಿ	ಎನ್. ವೆಂಕಟೇಶ್ 9480688083	ಶ್ರೀಧರ್. ಸಿ 9480688242	ಡಿ.ಎಂ. ಮುನಿರೆಡ್ಡಿ 9480688280
4	ಮಹದೇವಪುರ	84 ಹಗದೂರು	ಬಸವರಾಜ್. ಕೆ ತಕಳಕ್ಕಿ 9480688084	ಶ್ರೀಧರ್. ಸಿ 9480688242	ಡಿ.ಎಂ. ಮುನಿರೆಡ್ಡಿ 9480688280
5	ಮಹದೇವಪುರ	85 ದೊಡ್ಡನೆಕ್ಕುಂದಿ	ಶ್ರೀಕಾಂತ್ 9480688085	ಶ್ರೀನಿವಾಸ ಮೂರ್ತಿ 9480688241	ಡಿ.ಎಂ. ಮುನಿರೆಡ್ಡಿ 9480688280
6	ಮಹದೇವಪುರ	86 ಮಾರತ್ತಹಳ್ಳಿ	ಶ್ರೀ ಉಮೇಶ್ 9449548850	ಶ್ರೀ ಜಿ.ಎಲ್. ಮಾರ್ಕಂಡಯ್ಯ 8951430322	ಡಿ.ಎಂ. ಮುನಿರೆಡ್ಡಿ 9480688280
7	ಮಹದೇವಪುರ	149 ವರ್ತೂರು	ವೆಂಕಟೇಶ್. ಟಿ.ಎಂ 9480688149	ಶ್ರೀಧರ್. ಸಿ 9480688242	ಡಿ.ಎಂ. ಮುನಿರೆಡ್ಡಿ 9480688280
8	ಮಹದೇವಪುರ	150 ಬೆಲ್ಲಂದೂರು	ಜಗದೀಶ. ಎಂ 9480688054	ಶ್ರೀನಿವಾಸ ಮೂರ್ತಿ 9480688241	ಡಿ.ಎಂ. ಮುನಿರೆಡ್ಡಿ 9480688280
9	ಮಹದೇವಪುರ	25 ಹೊರಮಾವು	ಶ್ರೀ ರಮೇಶ್ 9480688025	ಚಂದ್ರಶೇಖರ್. ಎ.ಜಿ 9480688238	ಶ್ರೀ ಗುರು 9448323311
10	ಮಹದೇವಪುರ	26 ರಾಮಮೂರ್ತಿನಗರ	ಶ್ರೀ ವಿಕ್ರಮ್ ಸಜ್ಜನ್ ಶೆಟ್ಟಿ 9480688026	ಚಂದ್ರಶೇಖರ್. ಎ.ಜಿ 9480688238	ಶ್ರೀ ಗುರು 9448323311
11	ಮಹದೇವಪುರ	51 ವಿಜ್ಞಾನಪುರ	ಶ್ರೀ ರಮೇಶ್ 9480688051	ಚಂದ್ರಶೇಖರ್. ಎ.ಜಿ 9480688238	ಶ್ರೀ ಗುರು 9448323311
12	ಮಹದೇವಪುರ	52 ಕೃಷ್ಣರಾಜಪುರ	ಶ್ರೀ ಕೇಶವ್ 9480688052	ಶ್ರೀ ಪಂಪಪತಿ. ಎಂ 9480688239	ಶ್ರೀ ಗುರು 9448323311
13	ಮಹದೇವಪುರ	53 ಬಸವಪುರ	ಶ್ರೀ ಕೇಶವ್ 9480688053	ಶ್ರೀ ಪಂಪಪತಿ. ಎಂ 9480688239	ಶ್ರೀ ಗುರು 9448323311
14	ಮಹದೇವಪುರ	55 ದೇವಸಂದ್ರ	ಶ್ರೀ ಕೇಶವ್ 9480688055	ಶ್ರೀ ಪಂಪಪತಿ. ಎಂ 9480688239	ಶ್ರೀ ಗುರು 9448323311
15	ಮಹದೇವಪುರ	56ಎ ನಾರಾಯಣಪುರ	ಸೋಮಯ್ಯ. ಜಿ.ಡಿ 9480688056	ವಿಜಯ್‌ಕುಮಾರ್. ಎ 9742606161 9480688240	ಶ್ರೀ ಗುರು. ಕೆ 9448323311 & 9480688279
16	ಮಹದೇವಪುರ	81 ವಿಜ್ಞಾನನಗರ	ಎಲ್. ಸುರೇಶ್ 9480688081	ವಿಜಯ್‌ಕುಮಾರ್. ಎ 9742606161 9480688240	ಶ್ರೀ ಗುರು. ಕೆ 9448323311 & 9480688279
17	ಮಹದೇವಪುರ	87 ಹೆಚ್‌ಎಎಲ್ ಏರ್‌ಪೋರ್ಟ್	ಸೋಮಯ್ಯ. ಜಿ.ಡಿ 9480688056	ವಿಜಯ್‌ಕುಮಾರ್. ಎ 9742606161 9480688240	ಶ್ರೀ ಗುರು. ಕೆ 9448323311 & 9480688279

ಸೂಚನೆ: ಹೊಸದಾಗಿ ರೂಪಿಸಲಾದ 243 ವಾರ್ಡ್‌ಗಳ ಬಗ್ಗೆ ಇತ್ತೀಚಿನ ವಿವರವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು.

ಸಹಿ/– ಮುಖ್ಯ ಆಯುಕ್ತರು, ಬಿಬಿಎಂಪಿ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

₹ 40 ಲಕ್ಷ ಮೌಲ್ಯದ ದ್ವಿಚಕ್ರವಾಹನ ವಶ

ಆನೇಕಲ್: ತಾಲ್ಲೂಕಿನ ಸರ್ಜಾಪುರ ಠಾಣೆ ಪೊಲೀಸರು ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಐವರು ಆರೋಪಿಗಳನ್ನು ಬಂಧಿಸಿದ್ದು, ಅವರಿಂದ ₹ 40 ಲಕ್ಷ ಬೆಲೆ ಬಾಳುವ 25 ದ್ವಿಚಕ್ರ-ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ತಮಿಳುನಾಡಿನ ಮೂಕಂಡಪಲ್ಲಿಯ ಪ್ರಕಾಶ್‌ರಾಜ್ (25), ಚೊಕ್ಕರಸನಹಳ್ಳಿಯ ಗೋಪಿ (20), ಕೊತ್ತಪಲ್ಲಿಯ ನವೀನ್‌ಕುಮಾರ್ (24), ಹೊಸಕೋಟೆಯ ಮಹಮ್ಮದ್ ಶಾಹಿದ್ (24) ಮತ್ತು ಆನೇಕಲ್ ತಾಲ್ಲೂಕಿನ ತಿರುಪಾಳ್ಯದ ನಂದೀಶ್ (19) ಬಂಧಿತರು.

ಬೆಂಗಳೂರು ಗ್ರಾಮಾಂತರ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಆರೋಪಿಗಳು ಹಂದೇನಹಳ್ಳಿ ಸಮೀಪದ ಕ್ರಾಂತಿ ಲೇಔಟ್‌ನಲ್ಲಿ ದರೋಡೆಗೆ ಸಂಚು ರೂಪಿಸುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಸರ್ಜಾಪುರ ಪೊಲೀಸರು ದಾಳಿ ನಡೆಸಿದಾಗ ಸಿಕ್ಕಿ ಬಿದ್ದಿದ್ದಾರೆ. ಆರೋಪಿಗಳಿಂದ ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡು ತನಖೆ ನಡೆಸಿದಾಗ ಆರೋಪಿಗಳು ಸುತ್ತಮುತ್ತಲಿನ ಪ್ರದೇಶದಲ್ಲಿ ದ್ವಿಚಕ್ರವಾಹನ-ಗಳನ್ನು ಕಳವು ಮಾಡಿರುವುದು ಬೆಳಕಿಗೆ ಬಂದಿದೆ' ಎಂದರು.

ಹೆಸರಘಟ್ಟ: ಸಂರಕ್ಷಿತ ಪ್ರದೇಶಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಮಾರಸಂದ್ರ ಮುನಿಯಪ್ಪ

ಬೆಂಗಳೂರು: ಹೆಸರಘಟ್ಟದ ಹುಲ್ಲು ಗಾವಲು ಪ್ರದೇಶವನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸಲು ಮುಂದಾ ಗಿರುವ ರಾಜ್ಯ ವನ್ಯಜೀವಿ ಮಂಡಳಿ ನಡೆಯನ್ನು ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಖಂಡಿಸಿದ್ದು, ಈ ಪ್ರಸ್ತಾವನೆ ಕೈಬಿಡಬೇಕು ಎಂದು ಆಗ್ರಹಿಸಿದೆ.

'ಹೆಸರಘಟ್ಟ ಹೋಬಳಿಯ ಕೇಂದ್ರ ಭಾಗದಲ್ಲಿ 350 ಎಕರೆ ಹುಲ್ಲುಗಾವಲು ಪ್ರದೇಶ ಇದೆ. ಉಳಿದ ಪ್ರದೇಶ ಬಡವರಿಗೆ ಸೇರಿದ್ದಾಗಿದ್ದು, ಎಲ್ಲಾ ದಾಖಲೆಗಳು ಕುಟುಂಬಗಳ ಅವರ ಬಳಿ ಇವೆ. ಶಿವಕೋಟೆ, ಹುರುಳಿಚಿಕ್ಕನಹಳ್ಳಿ, ಅರಕೆರೆ, ಸೊಣ್ಣೇನಹಳ್ಳಿ ಗ್ರಾಮ ಪಂಚಾಯಿತಿ ಸೇರಿ 45ಕ್ಕೂ ಹೆಚ್ಚು ಗ್ರಾಮಗಳಲ್ಲಿ 1 ಲಕ್ಷಕ್ಕೂ ಅಧಿಕ ಜನ ವಾಸವಿದ್ದಾರೆ. ಈ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಕೂಡ ಇದ್ದು, ಹುಲ್ಲುಗಾವಲು ಪ್ರದೇಶವು ರೈತರ ದನಕರುಗಳಿಗೆ ಮೇವಿನ ತಾಣವಾಗಿವೆ' ಎಂದು ಬಿಎಸ್‌ಪಿ ರಾಜ್ಯ ಉಸ್ತುವಾರಿ ಮಾರಸಂದ್ರ ಮುನಿಯಪ್ಪ ತಿಳಿಸಿದ್ದಾರೆ.

'ಈ ಪ್ರದೇಶಲ್ಲಿ ವನ್ಯಜೀವಿಗಳಿರುವ ಪುರಾವೆಗಳಿಲ್ಲ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಚೇರಿಗಳು, ತರಬೇತಿ ಕೇಂದ್ರಗಳು ಇವೆ. ಇಷ್ಟೊಂದು ಅನುಕೂಲ ಇರುವ ಹುಲ್ಲುಗಾವಲು ಪ್ರದೇಶವನ್ನು ಸಂರಕ್ಷಿತ ಪ್ರದೇಶ ಎಂದು ಘೋಷಣೆ ಮಾಡಿ ರಾಜ್ಯ ವನ್ಯಜೀವಿ ಮಂಡಳಿ ವ್ಯಾಪ್ತಿಗೆ ಹಸ್ತಾಂತರಿಸುವುದು ಸರಿಯಲ್ಲ. ಮುಂದಿನ ದಿನಗಳಲ್ಲಿ ಸಾರ್ವಜನಿಕ ರಸ್ತೆಗೆ, ದನ-ಕರುಗಳನ್ನು ಮೇಯಿಸಲು ಮತ್ತು ಅಭಿವೃದ್ಧಿ ಕೆಲಸಗಳಿಗೆ ನಿರ್ಬಂಧ ಹೇರುವ ಸಾಧ್ಯತೆ ಇದ್ದು, ಇದು ಅವೈಜ್ಞಾನಿಕ ನಡೆ' ಎಂದು ಹೇಳಿದ್ದಾರೆ.

'ಸುತ್ತಮುತ್ತಲ ಗ್ರಾಮಸ್ಥರು, ಸಂಘ-ಸಂಸ್ಥೆಗಳ ಪ್ರತಿನಿಧಿಗಳು, ವಿದ್ಯಾರ್ಥಿಗಳು, ಸ್ಥಳೀಯ ಶಾಸಕರೂ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದರು ವಾಸ್ತವ ಅರಿಯದೆ ಕೆಲವರ ಟ್ವೀಟ್ ಆಧರಿಸಿ ಬೆಂಬಲ ವ್ಯಕ್ತಪಡಿಸಿರುವುದು ಮೂರ್ಖತನ' ಎಂದಿದ್ದಾರೆ.

'ಸ್ಥಳೀಯರ ಜತೆ ಸಮಾಲೋಚನೆ ನಡೆಸದೆ ಯಾವುದೇ ನಿರ್ಧಾರವನ್ನೂ ಸರ್ಕಾರ ಕೈಗೊಳ್ಳಬಾರದು. ಈ ಪ್ರಸ್ತಾವನೆಯನ್ನು ಕೂಡಲೇ ಕೈಬಿಡಬೇಕು. ಇಲ್ಲದಿದ್ದರೆ ಬಿಎಸ್‌ಪಿ ಉಗ್ರ ಹೋರಾಟ ನಡೆಸಲಿದೆ' ಎಂದು ಎಚ್ಚರಿಸಿದ್ದಾರೆ.

ಲೈನ್‌ಮನ್ ಸಾವು: ಪತ್ನಿಗೆ ಉದ್ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗುಬ್ಬಿ ತಾಲ್ಲೂಕಿನ ತಿಪ್ಪೂರು ಕೆರೆಯಲ್ಲಿ ಮುಳುಗಿ ಮೃತಪಟ್ಟಿದ್ದ ಲೈನ್‌ಮನ್ ಮಹೇಶ್ ಗೌಡರ ಅವರ ಕುಟುಂಬಕ್ಕೆ ಜೀವ ರಕ್ಷಣೆ ಯೋಜನೆ ಅಡಿಯಲ್ಲಿ ₹17 ಸಾವಿರ ಪಾವತಿಸಲಾಗಿದ್ದು, ಮರಣ ಪರಿಹಾರ ನಿಧಿಯಿಂದ ತಕ್ಷಣವೇ ₹2 ಲಕ್ಷ ನೀಡಲಾಗುವುದು' ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಇತ್ತೀಚೆಗೆ ಸುರಿದ ಭಾರಿ ಮಳೆಗೆ ವಿದ್ಯುತ್ ಸಂಪರ್ಕ ಕಡಿತಗೊಂಡ ಕಂಬದ ಸಂಪರ್ಕ ಮರುಜೋಡಣೆ ಮಾಡಲು ಹೋಗಿ ಮಹೇಶ್‌ಗೌಡರ ಅವರು ಮೃತಪಟ್ಟಿದ್ದರು. 'ಅಪಾಯದ ಅರಿವಿದ್ದರೂ ಜೀವವನ್ನು ಲೆಕ್ಕಿಸದೆ, ನಮ್ಮ ಸಿಬ್ಬಂದಿ ವಿದ್ಯುತ್ ಸಂಪರ್ಕ ಮರು ಜೋಡಿಸಲು ಹೋಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿರುವುದು ದುರ್ದೈವದ ಸಂಗತಿ. ಮಹೇಶ್ ಗೌಡರ ಅವರ ಕುಟುಂಬಕ್ಕೆ ಮರಣ ಪರಿಹಾರ ನಿಧಿ ಚೆಕ್ ಹಸ್ತಾಂತರಿಸಲಾಗುವುದು' ಎಂದು ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

'ಕಾರ್ಮಿಕ ಪರಿಹಾರ ನಿಧಿಯಿಂದ ಮೃತ ಮಹೇಶ್ ಗೌಡರ ಕುಟುಂಬಕ್ಕೆ ಅವರ ಸೇವಾವಧಿ ಆಧಾರದ ಮೇಲೆ ₹10 ಲಕ್ಷ ರೂಪಾಯಿ ಪರಿಹಾರವನ್ನು ಬೆಸ್ಕಾಂ ನೀಡಲಿದ್ದು, ಈ ಸಂಬಂಧ ಪೂರಕ ದಾಖಲೆಗಳನ್ನು ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಜತೆಗೆ, ಅನುಕಂಪದ ಆಧಾರದ ಅಡಿಯಲ್ಲಿ ಅವರ ಪತ್ನಿಗೆ ಬೆಸ್ಕಾಂನಲ್ಲಿ ಡಿ ಗ್ರೂಪ್ ನೌಕರಿ ನೀಡಲಾಗುವುದು' ಎಂದಿದ್ದಾರೆ.

'ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್‌ನಿಂದ ವೈಯಕ್ತಿಕ ಅಪಘಾತ ಗುಂಪು ವಿಮಾ ಯೋಜನೆಯಡಿಯಲ್ಲಿ ₹10 ಲಕ್ಷ ರೂಪಾಯಿ ಪರಿಹಾರ ಸಿಗಲಿದೆ' ಎಂದು ತಿಳಿಸಿದ್ದಾರೆ.

ವೈದ್ಯ ನೀರುಪಾಲು

ವೈದ್ಯ ಸಚಿನ್

ಕನಕಪುರ: ತಾಲ್ಲೂಕಿನ ಮಾವತ್ತೂರು ಕೆರೆಯಲ್ಲಿ ಸೋಮವಾರ ಈಜಲು ತೆರಳಿದ್ದ ವೈದ್ಯರೊಬ್ಬರು ನೀರು ಪಾಲಾಗಿದ್ದಾರೆ.

ಡಾ.ಸಚಿನ್‌ಕುಮಾರ್ (26) ನೀರು ಪಾಲಾದವರು. ಬಾಗಲಕೋಟೆ ಜಿಲ್ಲೆಯ ಬಾದಾಮಿಯವರಾದ ಅವರು ಜಕ್ಕಸಂದ್ರ ಬಳಿಯ ಡಾ.ಚಂದ್ರಮ್ಮ ದಯಾನಂದ ಸಾಗರ್ ವೈದ್ಯಕೀಯ ಕಾಲೇಜಿನಲ್ಲಿ ಕಳೆದ ಒಂದು ವರ್ಷದಿಂದ ಕರ್ತವ್ಯ ನಿರ್ವಹಿಸುತ್ತಿದ್ದರು. ಸಂಜೆ ವೇಳೆ ಸ್ನೇಹಿತರಾದ ಡಾ.ನಿರಂಜನ್ ಮತ್ತು ಡಾ.ಜಾವೇದ್ ಅಹಮ್ಮದ್ ಜೊತೆಗೆ ಮಾವತ್ತೂರು ಕೆರೆ ವೀಕ್ಷಣೆಗೆ ಹೋಗಿದ್ದರು. ಮೂವರು ಮದ್ಯಪಾನ ಮಾಡಿ ಕೆರೆಗೆ ಇಳಿದಿದ್ದಾರೆ. ಮದ್ಯದ ನಶೆಯಲ್ಲಿದ್ದ ಸಚಿನ್‌ಕುಮಾರ್ ಕಾಲುಜಾರಿ ಕೋಡಿ ಕೆಳಗೆ ಬಿದ್ದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಸ್ನೇಹಿತರು ಈ ಬಗ್ಗೆ ಕನಕಪುರ ಗ್ರಾಮಾಂತರ ಠಾಣೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ದೌಡಾಯಿಸಿದ ಪೊಲೀಸರು, ರಾತ್ರಿಯಿಡೀ ಕಾರ್ಯಾಚರಣೆ ನಡೆಸಿದರೂ ಮೃತದೇಹ ಪತ್ತೆಯಾಗಲಿಲ್ಲ. 'ಕೆರೆಯಲ್ಲಿ ಕೊರಕಲು ಇರುವ ಕಾರಣ ಮೃತದೇಹ ಹೊರತೆಗೆಯುವುದು ದುಸ್ತರವಾಗಿದೆ. ಶೋಧ ಕಾರ್ಯಾಚರಣೆ ಮುಂದುವರಿಯಲಿದೆ' ಎಂದು ಮುಳುಗು ತಜ್ಞರು ತಿಳಿಸಿದರು. ಗ್ರಾಮಾಂತರ ಠಾಣೆ ನಾಪತ್ತೆ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

URGENT REQUIRED
MARKETING EXECUTIVE (25 No.s)
HR RECRUITER (5 No.s)
TELECALLER (5 No.s)
GRAPHIC DESIGNER (5 No.s)
CO-ORDINATOR for Education Start up. (10 No.s)
Email: parabolahr@gmail.com

OPPORTUNITY FOR Retired Officials,Bankers,NRI,Teachers, Professionals, Homemakers, CAs. Earn salary+ Incentives. CALL: 8217052449

ST. FRANCIS COLLEGE
Affiliated to Bengaluru City University
Approved by AICTE
P.B.No.3417, 3rd Block, 8th Main, Koramangala, Bengaluru-560034.

FACULTY RECRUITMENT
Applications are invited for the post of Professors/ Associate/ Assistant Professors in the following departments.

Course	Qualification
B.Com-Data Analytics	M.Com./MBA (Analytics) M.Sc.in Statistics
BSW: Bachelor of Social Work	M.S.W (Master of Social Work)
B.V.A: Animation & Game Art	M.Sc. in Animation M.V.A. (Master of Visual Arts)

Eligibility and Experience: NET/ SLET/ Ph.D with minimum of 55% marks is required at PG level and Above 3 Years of Experience
Job Location: Koramangala, Bengaluru
Interested and Eligible Candidates may send their resume along with recent passport size photograph, copies of qualification and experience certificate to the
Email-ID: admin@stfranciscollege.edu.in director@stfranciscollege.edu.in
By mentioning the post and department applying for in the subject line on or before 20/09/2022

Teachers/ Professors

ENGLISH, SOCIAL, Hindi TEACHERS/ ACCOUNTANT high school English medium Yeshwantpur Bengaluru. WhatsApp resume: 8088201545/ 9342816044.

FRANK PUBLIC SCHOOL, JP-Nagar. HIGH SCHOOL SOCIAL STUDIES TEACHER. rumysud@gmail.com WhatsApp 9008744856.

Brindavan Group of Institutions
Dwarakanagar, Bagalur Main Road, Yelahanka, Bengaluru, Karnataka-560063
Approved by AICTE, UGC, Recognised by Govt. of KA, Affiliated to VTU & BCU, Accredited at "A" level by NAAC
www.brindavancollege.com Ph: +91 80 2847 8388 / 8423, +91 9606487201

Invites Applications from Suitable Applicants for the Proposed Vacancies

PRINCIPAL: A Person with Principled Vision and Competent with Self-Driven, Passionate, Energetic and efficient in managing (Brindavan College UG/PG) Institution operations.
Qualification: MBA/MCA/M.Com relevant subjects with First Class and Ph.D should be from UGC recognised University have good publications.
Experience: Minimum of 15 years in Teaching / Research / Industry in which 5 years shall be at the level of Professor and preferably 3 years of administrative experience as Vice Principal / Director / Dean with essential management and leadership qualities.

Professor / Associate Professor / Assistant Professor
In CSE, ME, MBA, MCA, B Com, Hindi and English Departments
Qualification: BE / B Tech / ME / M Tech / MCA / MBA / MA (60% above) and as per UGC and AICTE norms.
The Interested and eligible candidates with mentioned requirements may send the detailed resume to **hr@brindavancollege.com** and also send your detailed resume with relevant Credentials / Testimonials to The HR – Director, Brindavan College of Engineering, Dwarakanagara, Bagalur Main Road, Bangalore 560063 **on or before 20-09-2022**
- Salary for the prescribed post as per the UGC / AICTE / State Scale
- The Applicants with Ph. D the relevant subject from recognised Universities are preferable
- The Institution reserves the rights of Processing Applications by any means.
- The eligible and short-listed candidates shall be communicated for the selection process.

ADMISSIONS OPEN FOR 2022-23
CONTACT: 9606487201/203/220/080 -28478388/28478423
- B.E- CSE/ISE/ECE//ME/CV/AIML/IOT-CYBER SECURITY
- DIPLOMA-EC/CS/ME/CV, B. ARCHITECTURE
- UG – BBA,BBA (AM),B.COM,B.COM(L&SCM)BCA(CLOUD COMPUTING) B.A (JOURNALISM)
- PG – MBA, MCA, M.COM, M.TECH – CV (STRUCTURAL) ME (MACHINE LEARNING)
- RESEARCH – CIVL/ME/MBA (MANAGEMENT)
- PUC- SCIENCE- PCMB/PCMC/PCBH, COMMERCE - BACS/HEBA

Sd/-
Principal

An Initiative from Sri. M. S. Ramaiah
Navkis College of Engineering, Hassan
SHRADDHAVAN LABHATHE GNANAM

Navkis Group of Institutions, founded by Shri Anandram Ramaiah from the House of MS Ramaiah is amongst the reputed educational institution chains in Karnataka with presence in Bangalore, Mysore and Hassan.
The Navkis Group manages and operates Preschools, CBSE K12 schools, PU Colleges and Higher Educational Institutions offering professional courses in Engineering, Commerce and Management.
We seek suitably qualified and experienced candidates in our Engineering College @Hassan as under.

Professor | Associate Professor | Assistant Professor in the following departments
- Mathematics
- Civil Engineering
- Computer Science & Engineering
- Artificial Intelligence & Data Science Engineering
- Electronics & Communication Engineering

- Mininum qualification for above positions is as per AICTE norms.
- Salary will be as per VI AICTE pay scale and negotiable for deserving candidates.
- Highly qualified candidates may be considered for senior positions.
- Selection is subject to the discretion of the management.

Interested candidates may send their resume by email on or before 16th October, 2022 to the Human Resource Department, Navkis College of Engineering, Hassan.
KIADB, Thimmanahalli Industrial Area, Kandali, Hassan 573 217
Email: hroffice@navkisedu.com | Call 9036288516

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

Hospital & Medical Jobs

WANTED REGISTERED Pharmacist (KSPC) for AddressHealth Child Speciality Clinic, Hulimavu, Bannerghatta Road.Good Payment.Immediate attachment.Call 9591990945/41 or Email Certificate details to hr@addresshealth.com

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

WE ARRANGE MORTGAGE, Housing & Purchase loans on A-B & E Khata,CMC and Panchayat Khatas, from Schedule Bank. Jyothi 8971377299

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

EDUCATIONAL

Special Courses

ENHANCE LIFE Happiness and overcome problems by learning 50 hours online/ offline astrology course. Prof. Vijayakumar: 9343055008.

Tuitions

BEST HOME Tuitions Now At Your Door Step (ANY)Maths/ Physics/ Chemistry/ French/ Hindi/ English, CBSE/ ICSE/ISC From 1st to 12th Standard, Also I.I.T, JEE/ BE/BSC (Maths), All Subjects at All & Different Levels, In All Major Areas of Bangalore Including Peenya, Kengeri, & Yelahanka, & Metro Routes From Mahalaxmi Layout By T.S.Shivashankar, PHD(USA) (Maths and Physics) Living In Mahalaxmi Layout Local Boy Contact: 9743095715

PERSONAL

Change of Name

JESHIKA SINARNA HARSHANA, Daughter/o, JC675048M, NB SUB/MT, SIVA KUMAR C, Vill-Vannankuttai Puthagaram Tirupathur Vellore, Tamil Nadu, changed name JESHIKA SINARNA HARSHANA to S JESIKAA SORNA HARSHANAA, 13/09/2022, Notary K.V.Mani, Bangalore

I, LOKANATHA RAO, residing at #U3/1 8th cross 9th main, Opp. G.V.S. Srirampura Bangalore 560021, have changed my name to LOKANATHARAO SHINDE ESHWAR vide affidavit dated 13.09.2022 before Notary R. Basavaraja, Bangalore.

I, MUHAMMAD AFFAAN, S/o, M. Nasir Ahmed Delvi R/o. #9 (2149), East End 'C' Main Road, 9th Block Jayanagar East, Bangalore-69 have changed my name as MUHAMMED AFFAAN vide affidavit dated 12/09/2022 before Notary L. Puttaraju, Bangalore

CHATHYABAMA, MOTHER/O, 6497028A SEP, GANESHA N.C, Vill- Mannur Nagaripuram Palakkad Kerala, changed name CHATHYABAMA to SATHYABHAMA, 13/09/2022, Notary K.V. Mani, Bangalore

I, REKHA GANDHAWALE, R/at No. 22/1, 9th Main, Basappa Layout, Suddagunte Palya. C.V. Raman Nagar, BENGALURU 560093 have changed my name to REKHA NAIDU vide affidavit dated 12-09-2022 sworn before notary K.V. Mani Bangalore

CHANGE OF NAME
I, **ARJUN,** residing at: A2-702, Provident Welworth City, Doddaballapur Main Road, Marasandra, Bangalore - 561 203 have changed my name to **ARJUN T U.** vide affidavit dated: 13.09.2022, before Notary S.I. Balaguru, Bangalore. Henceforth I shall be called **ARJUN T U** only.

THOTA SAMPATH KUMAR, 6498635L SEP, Vill- Amberpet Hyderabad Telangana changed daughter's name NAMASVI to THOTA NAMASVI, 13/09/2022, Notary K.V.Mani, Bangalore

I, MUBARAK AHMED ABDUL SUBHAN, residing at #229, 12th cross Govindapura main road, A.C. Post, Bangalore- 560045 have changed my name to MUBARAK AHMED vide affidavit dated 13.09.2022 before Notary Leela, Bangalore. Henceforth I shall be called MUBARAK AHMED only

I, SATHYADEEP Krishnamurthy s/o Late K.R. Krishnamurthy have changed my name from Sathyadeep to Sathyadeep Krishnamurthy for all purposes.

I, MANISH B SINNUR aged about 20 years S/o. Sri Basavaraj Sinnur, R/at No. 6 'Ashirvad', 4th Cross, 3rd Stage, BEML Layout, Rajarajeshwari Nagar Bangalore-560098 have changed my name from MANISH SINNUR to MANISH B SINNUR vide affidavit dated 12-09-2022 sworn before notary Ambreshappa Bengaluru

SREEVIDAY, WIFE/O 6396690N HAV, RAJESH BABU R, Vill- Mynagapally Mynagapally (North), Kunnathur Kollam Kerala, changed name from SREEVIDAY to SREEVIDHYA, 13/09/2022, Notary K.V.Mani, Bangalore

JAYASRI S, Wife/o JC675048M, NB SUB/MT, SIVA KUMAR C, Vill-Vannankuttai Puthagaram Tirupathur Vellore, Tamil Nadu, changed name JAYASRI S to P JAYASRI, 13/09/2022, Notary K.V.Mani, Bangalore

Lost

LOST OF DOCUMENTS
I, **Varghese Mathew,** residing at: #200/5, 6th Cross, Ejipura, Vivek Nagar - 560 047, Bangalore have lost my Registered Original Sale Deed dated: 06.02.1984 bearing Document No. 3891/1983-84. Pertaining to Property bearing No. 40, Old 79/3, Bharthi Layout, Bangalore - 560 029. Registered in the Office of the Sub-Registrar, Jayanagar, Bangalore. An Affidavit dated: 09.09.2022 has been sworn before the Notary Mr. A.S. Narayana Reddy. And a Police Compiaint has been filed. Lost Report No. 0315115/2022. If the said documents found please contact **Varghese Mathew** on mobile: 89712 67221.

PROPERTY
To Place your Classified Ads Contact
9845114560

EDUCATION CORNER

NARGUND GROUP OF INSTITUTIONS
ADMISSION OPEN FOR 2022-2023
+91 8026720604 | +91 9886201746
+91 7019425622 | +91 9448270604
office@nargund.edu.in
www.nargund.edu.in
2nd main, Dattatreyanagar, BSK 3rd stage, Bangalore-85

BANGALORE CAMPUS

Nargund College of Pharmacy	B. Pharm | D. Pharm | Pharm. D M. Pharm | Ph. D
Nargund College of Physiotherapy	Bachelor of Physiotherapy
Nargund Independent PU College	PCMB | HEBA

KOPPAL CAMPUS

Dr. Gurachar Nargund College of Pharmacy	B. PHARM | D. PHARM
Bheemajja PU College	PCMB | HEBA

IAS ಪರೀಕ್ಷೆಗೆ ತರಬೇತಿ
P3 (Pupil-Preachers-Parents Trust, ಪದ್ಮನಾಭನಗರ, ಬೆಂಗಳೂರು) ವತಿಯಿಂದ IAS ಪರೀಕ್ಷೆಗೆ ತರಬೇತಿ ಪಡೆಯಲು ಇಚ್ಛಿಸಿದ 75 ಮಹಿಳಾ ಅಭ್ಯರ್ಥಿಗಳಿಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸ್ಮರಣಾರ್ಥ ಶುಲ್ಕದಲ್ಲಿ 75% ರಿಯಾಯಿತಿ ನೀಡಲಾಗುವುದು. ಶುಲ್ಕ ತೆರಲಾಗದ ಆರ್ಥಿಕವಾಗಿ ಬಡತನವಿರುವ ಪ್ರತಿಭಾವಂತರಿಗೆ ಶುಲ್ಕದಲ್ಲಿ ವಿನಾಯಿತಿ ನೀಡಲಾಗುವುದು.
ಆಸಕ್ತರು ಮಾಹಿತಿಗೆ ನಿರ್ದೇಶಕಿ : ಶೆರ್ಲಿ ಪೌಲ್‌ರನ್ನು ಸಂಪರ್ಕಿಸಿ
ದೂ: 63626 33749 / 92422 60277

MOUNT CARMEL ENGLISH SCHOOL
C.A. Site No.3, 12th Cross, 1st Stage, Ideal Homes, Rajarajeshwari Nagar, Bangalore-560 098. Ph: 080-28602294/95 Email: mountcarmel.rrnagar@gmail.com
Required Teachers immediately
1) Nursery Teacher,
2) Primary Teachers for English, Social Science & Hindi
3) Higher Primary Teachers for English, Social Science, Science and Hindi
4) High School Teacher for Mathematics
Walk-in interview with original documents on 17-09-2022, Saturday from 10am - 01.30pm at the School Premises.

WANTED ENGLISH Teacher for School SagarConvent Kanakapura Main Bangalore 82 Near APS Engineering College Good Salary: 9342552428

WANTED TRAINED Lady Teachers for Teaching English/ Science/ E.V.S. for Nursery/ Primary. Good Salary. Contact- 8884440214

CHRIST THE KING ENGLISH SCHOOL, Coxtown, Jeevanahalli, Bangalore-05 requires Fresh/ Experienced Female Kannada Ded/ TCH, Computers, BA Bed Teachers for Primary and High School. Contact immediately 9886107212, 9980773758. email: ctkscoxtown@yahoo.com

JOB
To Place your Classified Ads Contact:
9886213331

Accounts & Finance

TEKNIC
ACCOUNTS EXECUTIVE & ACCOUNTANT:B.Com with good knowledge of Tally Package and MS Office & Statutory Compliances. Salary Range ₹.15 - 20 k
TEKNIC
No. 36, SNS Chambers, 239, Sankey Road, Bangalore - 80
Email : venkatesh@teknic-electromeconics.co.in

Architects

ARCHITECTURAL DRAFTSMEN FOR ARCHITECTS OFFICE, ULSOOR. 5 YEARS EXPERIENCE KNOWLEDGE OF SOFTWARE MUST. info@ngassociates.in

Engg/ Production Technical

WANTED MECHANICAL ENGINEERS for QA & Production Dept, for Reputed Thermo Plastic Products Manufacturing Industries In K.R.Puram/ Bommasandra. Contact: 9844884449. Mail Reusme: fortuneplasticco@gmail.com

WANTED SERVICE ENGINEERS for a Reputed Engg. Plan Printer/ Xerox Machines Company in Bangalore. Candidates with Diploma/ ITI Electrical/ Electronics,with or without experience. Contact: 9901241145.

General

WANTED- EDUCATION OFFICER for Mission Rabies project, Bangalore.`To create Awareness on Rabies by Engaging communities and leading education campaign on ground level. Graduate,field experience with good communication skills in Kannada &.English preferred. Good salary based on skills and experience. Extensive driving by two wheeler required.One month training at`Goa project.`If interested, Call:9822168924

CUSTOMER RELATION and MD Assistant, any Degree Experience must, Female only package 20k to 40k- 9035440657

NEMMADI MANE Foundation girl's orphanage needsService minded paid volunters Ladies studentsResiding near NavrangTheatre Rajajinagar 9341494200

WANTED FOR MEDICINE DISTRIBUTORS Delivery Boys with 2 Wheeler & License, Salary 12000/- + ESI, PF, Petrol Allowance, Bonus etc., Contact: Zenex International, 77/K 1st floor 17th cross, 4th stage 4th block, Basaveswaranagar Bangalore. Phone:9740012208 zenexmannapur@gmail.com

WANTED IMMEDIATELY Communication Skilled CUSTOMER CARE EXECUTIVES, TELE-CALLERS. Good Salary. Walk-in Today/ Tomorrow. Call: 99000-54462.

WANTED FOR reputed company Graduates Age 30-70, Bangalore only. Earn 30,000- 50,000. Contact: 9008305194/ 6364099311

REQUIRED OFFICE BOYS/ DELIVERY BOYS/ DRIVERS. Residing in and around Hanumanthhnagar. Contact: 99807-99996

Overseas

VACANCY IN BAHRAIN AS SALES ENGINEER
Leading Air-Conditioning Company in Bahrain looking for the following:
- Bachelor's degree in Mechanical Engineer with HVAC Sales background.
- Minimum of 5 - 8 Year's experience in HVAC Sales Business.
- Strong in HVAC Sales, Marketing and Customer Service background.
- Knowledge of Heat load calculations using HAP, Carrier E20 program etc.,
- Knowledge of DX Ducted Split, Package units & VRF systems etc.
- Able to establish new and maintain existing relationship with customer.
- Indian or GCC Driving License Preferable.
- Preferably working with Carrier, Daikin, Voltas or Blue Star.

Email: info@bta1.com, Noorulla@bta1.com

Marketing & Sales

ESTABLISHED 45 year old BANGALORE ENGINEERING SALES COMPANY in Fraser Town, with multiple imported products like Fuel Transfer and DEF Pumps and Dispensers, Propellor Shafts, Railway Brake Cables, Slewing Rings and Spare Parts need SALES MANAGER age 45 to 52 years. To be technically and commercially experienced with ability to meet OEMs and Dealers, lead small Sales Team, generate new business, and handle correspondence and be computer conversant. Will report to Chief Executive. Job involves travelling across India and meeting Heads of Departments of large OEM Companies as well as Dealers.. Salary Rs.30,000 to 35,000 plus 2-wheeler allowance. Apply with details to- officestaffblr@gmail.com

YOUNG GRADUATES / Diploma holders required for marketing of Industrial Products in Bangalore. Walk in for an Interview between 10 and 5 PM. Call 9886631885

WANTED THE Following (1) Marketing Executive Male/ Female with 2Wheeler (2) Lady Telecaller. Contact: 9980883950

Wanted

THE BANGALORE PRESS
(No.88, Mysore Road, Chamarajpet, Bangalore-18)
has opening for the below roles;

ROLE	REQUIREMENT
Senior/Junior Marketing Officers	Matriculates. 1+ years experience in field sales of consumer goods. Fluency in Kannada and English
Production Supervisor	2+ years experience in a production unit, preferably a paper/book industry
DTP Operator	Experience in Coreldraw, Pagemaker and Microsoft Office applications Fluency in Kannada and English
Office Staff	Computer knowledge, including Microsoft Word, Excel

Please email details (including resume with your work experience and expected salary) to bangalorepressjobs@gmail.com

INDIA'S BEST Financial Brand offers a Revolutionary opportunity for Senior Citizens, Retd, VRS, NRI & Housewives. Limited seats only. 9591583662/ 9972169164.

RESIDENT MANAGER and F&B Manager required for a well-established, service-oriented boutique property in Chikmagalur. Candidates should have at least 7+ years of experience in a similar role in any of the 4* category hill station resorts.Will be responsible to run the property and outlet as a fully profitable entity. Interested candidates can send their applications to skrecruit2022@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

REAL ESTATE SELLING

Flat

Yeshwanthpur

NORTH FACING residence 3 floors for sale K.N.extention, yeshwantpur dimension 35x50 contact 9886179908

AUTOMOTIVE

Four Wheelers Selling

Hyundai

ACCIDENT DAMAGED KA-03-NC-7176, Hyundai Grand i10 Magna 1.2. For sale. Contact:9008818791

DH DECCAN HERALD ಪ್ರಜಾವಾಣಿ
BOOK YOUR CLASSIFIEDS ADVERTISEMENT
DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 |
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ನಿಮಗೂ ಕಲ್ಲು, ಮೊಟ್ಟೆಯಲ್ಲಿ ಹೊಡೆಸಬಹುದು, ಹಾಗೆ ಮಾಡಲ್ಲ: ಸಿದ್ದರಾಮಯ್ಯ ಗುಡುಗು

‘ನಿಮಗೆ ಹೆದರೋ ಮಕ್ಕಳು ನಾವಲ್ಲ’

ಪ್ರಜಾವಾಣಿ ವಾರ್ತೆ

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿದರು

ಬೆಂಗಳೂರು: ‘ಮೊಟ್ಟೆ ಎಸೆಯುವ ನೀವು ಶೂರರೂ ಅಲ್ಲ, ಧೀರರೂ ಅಲ್ಲ. ನಾವು ಇವಕ್ಕೆಲ್ಲ ಹೆದರೋ ಮಕ್ಕಳೂ ಅಲ್ಲ. ನಿಮ್ಮ ಮೇಲೂ ಮೊಟ್ಟೆಗಳಿಂದ ಹೊಡೆಸಬಹುದು. ಆದರೆ ನಾವು ಹಾಗೆ ಮಾಡಲ್ಲ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಬಿಜೆಪಿ ವಿರುದ್ಧ ಗುಡುಗಿದರು.

ವಿಧಾನಸಭೆಯಲ್ಲಿ ಮಂಗಳವಾರ ಮಳೆ ಮತ್ತು ಪ್ರವಾಹದ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು. ಕೊಡಗಿನಲ್ಲಿ ತಮ್ಮ ವಿರುದ್ಧ ಬಿಜೆಪಿ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶಿಸಿ ಮೊಟ್ಟೆ ಎಸೆದ ಘಟನೆಯನ್ನು ಪ್ರಸ್ತಾಪಿಸಿ ಆಕ್ರೋಶ ವ್ಯಕ್ತಪಡಿಸಿದರು.

‘ಹಿಂದೆ ಜನಾರ್ದನ ರೆಡ್ಡಿ ಬಳ್ಳಾರಿಗೆ ಬನ್ನಿ ನೋಡ್ಕೋತೇನೆ ಎಂದು ಸವಾಲು ಹಾಕಿದ್ದರು. ನಾನು ಅಲ್ಲಿಗೆ ಹೋದ ಮೇಲೆ ಏನೆಲ್ಲಾ ಆಯಿತು ಎಂಬುದು ಗೊತ್ತೇ ಇದೆ. ಕೊಡಗಿಗೆ ಬನ್ನಿ ನೋಡ್ಕೋತೇವೆ ಎಂದು ಸವಾಲು ಹಾಕಿದರೆ ಅಲ್ಲಿಗೆ ಬರಲು ಹಿಂದೇಟು ಹಾಕುವುದಿಲ್ಲ. ನೀವೇನು ಪಾಳೆಗಾರರ? ಮೈಸೂರು ಮತ್ತು ಬೇರೆ ಜಿಲ್ಲೆಗಳಿಗೆ ನೀವು ಬಂದರೆ ನಾವೂ ಹೀಗೆ ಮಾಡಿದರೆ ಏನಾಗುತ್ತೆ’ ಎಂದು ಬಿಜೆಪಿ ಶಾಸಕರಾದ ಅಪ್ಪಚ್ಚು ರಂಜನ್ ಮತ್ತು ಕೆ.ಜಿ.ಬೋಪಯ್ಯ ಅವರನ್ನು ಉದ್ದೇಶಿಸಿ ಕಿಡಿಕಾರಿದರು.

‘ಕೊಡಗಿಗೆ ಬಂದು ನಿಮ್ಮ ಮನೆಗೇ ನುಗ್ಗುತ್ತೇವೆ ಎಂದು ನಿಮ್ಮ ಪಕ್ಷದ ವಕ್ತಾರ ಲಕ್ಷ್ಮಣ್ ಎಂಬುವರು ಸವಾಲು ಹಾಕಿದರು. ಆಗ ತಾಕತ್ತಿದ್ದರೆ ಬನ್ನಿ ಎಂದಿದ್ದು ನಿಜ. ಆ ಮಾತು ನಿಮಗೆ ಹೇಳಿದ್ದಲ್ಲ. ನೀವೂ ಬೇಕಿದ್ದರೆ ನಮ್ಮ ಮನೆಗೆ ಬನ್ನಿ’ ಎಂದು ಬೋಪಯ್ಯ ಆಹ್ವಾನಿಸಿದರು.

‘ಕೊಡಗಿಗೆ ರೈತರ ಕಷ್ಟವನ್ನು ಕೇಳಲೆಂದು ನಾನು ಹೋಗಿದ್ದು. ಅಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ,ಮೊಟ್ಟೆ ಎಸೆದಿದ್ದು ಏಕೆ. ಇದಕ್ಕೆ ಕಾರಣವೇನು ಎಂಬುದು ನನಗೆ ಗೊತ್ತಿಲ್ಲ’ ಎಂದು ಸಿದ್ದರಾಮಯ್ಯ ಹೇಳಿದಾಗ, ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ‘ಇವರೇನೋ(ಬೋಪಯ್ಯ ಮತ್ತು ಅಪ್ಪಚ್ಚು ರಂಜನ್) ಕಾರಣ ಹೇಳುತ್ತಾರಲ್ಲ’ ಎಂದು ಸಿದ್ದರಾಮಯ್ಯ ಅವರ ಗಮನ ಸೆಳೆದರು. ಅದಕ್ಕೆ ಪ್ರತಿಕ್ರಿಯಿಸಿದ ಬೋಪಯ್ಯ, ‘ಇವರು ಟಿಪ್ಪು ಹೆಸರನ್ನು ಪದೇ ಪದೇ ಹೇಳುತ್ತಾರೆ. ಇದರಿಂದ ಕೊಡಗಿನ ಜನ ಕೆರಳುತ್ತಾರೆ’ ಎಂದರು.

‘ಮೊಟ್ಟೆ ಎಸೆದದ್ದು ನಿಮ್ಮ ಪಕ್ಷದವರೇ, ನಮ್ಮ ಕಾರ್ಯಕರ್ತರಲ್ಲ’ ಎಂದು ಬಿಜೆಪಿಯ ಮತ್ತೊಬ್ಬ ಶಾಸಕ ಅಪ್ಪಚ್ಚು ರಂಜನ್ ಹೇಳಿದಾಗ, ಕೆರಳಿದ ಸಿದ್ದರಾಮಯ್ಯ, ‘ನೀನೇ ಮಾಡ್ಸಿದ್ದು ಕೂತುಕೊ, ಇಂತಹ ಷಡ್ಯಂತ್ರಗಳಿಗೆ ಮಣಿಯುವುದಿಲ್ಲ. ನಾವೂ ಒಂದು ಕಾಲದಲ್ಲಿ ಕಪ್ಪು ಬಾವುಟ ತೋರಿಸಿ, ಮೊಟ್ಟೆ ಎಸೆದವರೇ. ಟಿಪ್ಪು ಬಗ್ಗೆ ಮಾತಾಡ್ತಿರಾ ಅಲ್ಲ, ಆತ ಒಬ್ಬ ಬ್ರಿಟಿಷರ ವಿರುದ್ಧ ಧರ್ಮಯುದ್ಧ (ಕ್ರುಸೇಡ್) ಸಾರಿದವ. ನಿಮ್ಮವರು ಹಿಂದೆ ಅಧಿಕಾರದಲ್ಲಿ ಇದ್ದಾಗ ಟಿಪ್ಪು ಪೇಟ ಹಾಕಿಕೊಂಡು ಖಡ್ಗ ಹಿಡಿದಿದ್ದರು. ಆಗ ನಿಮಗೆ ನಾಚಿಕೆ ಆಗಲಿಲ್ವಾ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

‘ನಿಮ್ಮಿಂದಾಗಿ ಕೊಡಗಿನ ಅಭಿವೃದ್ಧಿ ನಾಶವಾಗಿದೆ. ಕೊಡಗಿನ ಜನ ಒಳ್ಳೆಯವರು. ಆದರೆ, ಅವರನ್ನು ಎತ್ತಿಕಟ್ಟಿ ಹಾಳು ಮಾಡುತ್ತಿದ್ದೀರಿ’ ಎಂದರು. ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ಮಧ್ಯೆ ತೀವ್ರ ವಾಕ್ಸಮರ ನಡೆಯಿತು.

ಒಂದೂವರೆ ಅಡಿ ನೀರಿನಲ್ಲೇ ಸಿದ್ದರಾಮಯ್ಯ ದೋಣಿ ಬಳಸಿದರೆ?

ಬೆಂಗಳೂರು: ನಗರದ ಯಮಲೂರಿನಲ್ಲಿ ಪ್ರವಾಹ ಪರಿಸ್ಥಿತಿ ಅವಲೋಕಿಸಲು ಸಿದ್ದರಾಮಯ್ಯ ಅವರು ದೋಣಿಯಲ್ಲಿ ಪ್ರಯಾಣಿಸಿದ್ದ ಘಟನೆ ವಿಧಾನಸಭೆಯಲ್ಲಿ ಮಂಗಳವಾರ ಸ್ವಾರಸ್ಯಕರ ಚರ್ಚೆಗೆ ಕಾರಣವಾಯಿತು.

ಅತಿವೃಷ್ಟಿ ಮತ್ತು ಪ್ರವಾಹದಿಂದ ಉಂಟಾದ ಸಮಸ್ಯೆಗಳ ಕುರಿತು ನಿಯಮ 69ರ ಅಡಿಯಲ್ಲಿ ಚರ್ಚೆ ಆರಂಭಿಸಿದ ಸಿದ್ದರಾಮಯ್ಯ, ‘ನಗರದಲ್ಲಿ ಯಾವತ್ತೂ ದೋಣಿಯಲ್ಲಿ ಹೋಗಬೇಕಾದ ಸ್ಥಿತಿ ನಿರ್ಮಾಣವಾಗಿರಲಿಲ್ಲ. ಆದರೆ, ಈ ಬಾರಿ ಯಮಲೂರಿಗೆ ನಾನು ದೋಣಿಯಲ್ಲೇ ಹೋಗಬೇಕಾಯಿತು’ ಎಂದರು.

ಆಗ ಮಧ್ಯ ಪ್ರವೇಶಿಸಿದ ಬಿಜೆಪಿಯ ಅರವಿಂದ ಲಿಂಬಾವಳಿ, ‘ಅಲ್ಲಿಗೆ ಹೋಗಲು ಬೇರೆ ದಾರಿ ಇತ್ತು. ದೋಣಿ ಬಳಸಬೇಕಾಗಿರಲಿಲ್ಲ. ಕೆಲವರು ನಿಮ್ಮನ್ನು ಹಿಂಬದಿಯಿಂದ ಕರೆದುಕೊಂಡು ಹೋಗಿದ್ದಾರೆ. ನಿಮ್ಮನ್ನು ದಾರಿ ತಪ್ಪಿಸಲು ಹಲವರು ಇದ್ದಾರೆ’ ಎಂದು ಸಿದ್ದರಾಮಯ್ಯ ಅವರನ್ನುದ್ದೇಶಿಸಿ ಹೇಳಿದರು.

ಸಿದ್ದರಾಮಯ್ಯ ಅವರ ಬೆಂಬಲಕ್ಕೆ ನಿಂತ ಕಾಂಗ್ರೆಸ್‌ನ ರಾಮಲಿಂಗಾ ರೆಡ್ಡಿ, ‘ಮುಖ್ಯಮಂತ್ರಿಯವರು ಪ್ರಯಾಣಿಸಿದ್ದ ಮಾರ್ಗದಲ್ಲೇ ಸಿದ್ದರಾಮಯ್ಯ ಹೋಗಿ ಬಂದಿದ್ದಾರೆ’ ಎಂದರು. ಆಗ ಪ್ರತಿಕ್ರಿಯಿಸಿದ ಲಿಂಬಾವಳಿ, ‘ಸಿದ್ದರಾಮಯ್ಯ ಅವರು ಎಪ್ಸಿಲಾನ್ ಬಡಾವಣೆಗೆ ಭೇಟಿ ನೀಡಿದ್ದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಲ್ಲಿಗೆ ಭೇಟಿ ನೀಡಿರಲಿಲ್ಲ. ಅವರು ದಿವ್ಯಶ್ರೀ ಬಡಾವಣೆಯಲ್ಲಿ ಪರಿಸ್ಥಿತಿ ಅವಲೋಕಿಸಿದ್ದರು’ ಎಂದರು.

‘ವಿರೋಧ ಪಕ್ಷದ ನಾಯಕರು ಒಂದೂವರೆ ಅಡಿ ನೀರಿನಲ್ಲಿ ದೋಣಿಯಲ್ಲಿ ಪ್ರಯಾಣಿಸಿದ್ದು ನನಗೆ ಆಶ್ಚರ್ಯ ಉಂಟುಮಾಡಿತು’ ಎಂದು ಬೊಮ್ಮಾಯಿ ಹೇಳಿದರು. ಅದನ್ನು ಅಲ್ಲಗಳೆದ ಸಿದ್ದರಾಮಯ್ಯ, ‘4ರಿಂದ 5 ಅಡಿ ನೀರಿತ್ತು ಅಲ್ಲಿ’ ಎಂದರು. ‘ಇಲ್ಲ ನೀವು ಪ್ರಯಾಣಿಸಿದ್ದ ದೋಣಿ ಪಕ್ಕದಲ್ಲಿದ್ದವರ ಮೊಣಕಾಲಿನಷ್ಟೂ ನೀರಿರಲಿಲ್ಲ. ಮಾಧ್ಯಮಗಳಲ್ಲಿ ನಾನೂ ನೋಡಿದೆ’ ಎಂದು ಬೊಮ್ಮಾಯಿ ಹೇಳಿದರು.

‘ಪ್ರವಾಹ ಪರಿಸ್ಥಿತಿಯ ನೈಜ ಚಿತ್ರಣವನ್ನು ಸರ್ಕಾರ ಮುಚ್ಚಿಡುತ್ತಿದೆ. ರಾಜ್ಯ ವಿಪತ್ತು ನಿರ್ವಹಣಾ ಪಡೆಯ ದೋಣಿಯಲ್ಲೇ ಸಿದ್ದರಾಮಯ್ಯ ತೆರಳಿದ್ದರು’ ಎಂದು ಕಾಂಗ್ರೆಸ್ ಶಾಸಕರು ಆಕ್ಷೇಪಿಸಿದರು.

‘ಆ ಭಾಗದಲ್ಲಿ ಕಾರುಗಳು ಮುಳುಗುವಷ್ಟು ನೀರಿತ್ತು. ನಾನು ಭೇಟಿ ನೀಡಿದ ದಿನ ಕೆಲವೆಡೆ 4ರಿಂದ 5 ಅಡಿ ನೀರು ನಿಂತಿತ್ತು’ ಎಂದು ಸಿದ್ದರಾಮಯ್ಯ ದೋಣಿ ಪ್ರಯಾಣದ ಕುರಿತ ಚರ್ಚೆಗೆ ಅಂತ್ಯಹಾಡಿದರು.



‘ಎನ್‌ಡಿಆರ್‌ಎಫ್ ಮಾರ್ಗಸೂಚಿ ಪರಿಷ್ಕರಿಸಿ’

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ಬೆಂಗಳೂರು ನಗರದಲ್ಲಿ ಮಳೆ ಮತ್ತು ಪ್ರವಾಹದಿಂದ ಜನ ಸಂಕಷ್ಟಕ್ಕೆ ತುತ್ತಾಗಲು ಮುಂಜಾಗ್ರತಾ ಕ್ರಮ ಕೈಗೊಳ್ಳದ ಸರ್ಕಾರದ ಬೇಜವಾಬ್ದಾರಿತನವೇ ಕಾರಣ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದರು.

ವಿಧಾನಸಭೆಯಲ್ಲಿ ಮಳೆ ಮತ್ತು ಪ್ರವಾಹದ ಕುರಿತ ಚರ್ಚೆಯಲ್ಲಿ ಮಾತನಾಡಿ, ‘ನೈಸರ್ಗಿಕ ವಿಕೋಪಗಳಿಂದ ಸಂಭವಿಸುವ ಹಾನಿಗೆ ಪರಿಹಾರ ನೀಡಲು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮಾರ್ಗಸೂಚಿಯೇ ಮಾನದಂಡ. ಪ್ರತಿ ಐದು ವರ್ಷಗಳಿಗೊಮ್ಮೆ ಮಾರ್ಗಸೂಚಿ ಪರಿಷ್ಕರಣೆ ಮಾಡಬೇಕು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 2015 ರಿಂದ ಈಚೆಗೆ ಮಾರ್ಗಸೂಚಿ ಪರಿಷ್ಕರಣೆ ಮಾಡಿಲ್ಲ. ಮಾರ್ಗಸೂಚಿ ಪರಿಷ್ಕರಣೆಗೆ ಆಗ್ರಹಿಸಿ ವಿಧಾನಸಭೆಯಲ್ಲಿ ಒಮ್ಮತದ ನಿರ್ಣಯ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಲಕ್ಷಾಂತರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲು ರೈತರಿಗೆ ಸಾಧ್ಯವಾಗಿಲ್ಲ. ಇವರಿಗೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

‘ಈಗ ಮುಂಗಾರು ಮುಗಿದು ಹಿಂಗಾರು ಕಾಲಿಟ್ಟಿದೆ. ಆದರೆ, ಮುಂಗಾರಿನಲ್ಲಿ ಬಿತ್ತನೆಯಾಗಬೇಕಿದ್ದ, ಒಟ್ಟು ಬೆಳೆಗಳಲ್ಲಿ ಸುಮಾರು 10 ರಿಂದ 12 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲು ಸಾಧ್ಯವಾಗಿಲ್ಲ. 10.62 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯುವ ನಿರೀಕ್ಷೆ ಇತ್ತು. ಆದರೆ, ಬಿತ್ತನೆ ಆಗಿದ್ದು 8.3 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ. ರಾಗಿ 7.17 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಬೇಕಿತ್ತು. 4.7 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆ ಮಾಡಲಾಗಿದೆ’ ಎಂದರು.

‘ಬೆಳೆ ವಿಮೆ ಯೋಜನೆಯಲ್ಲೂ ರೈತರಿಗಾದ ನಷ್ಟಕ್ಕೆ ಪರಿಹಾರ ಸಿಗುವುದಿಲ್ಲ. ಆದ್ದರಿಂದ ಇವುಗಳಿಗೂ ಪರಿಹಾರ ನೀಡಬೇಕು. ರೈತರು ಬಿತ್ತನೆ ಬೀಜ, ಗೊಬ್ಬರ ಮುಂತಾದವುಗಳನ್ನು ಖರೀದಿ ಮಾಡಿ, ಬಿತ್ತನೆ ಮಾಡಲಾಗದೇ ನಷ್ಟಕ್ಕೀಡಾಗಿದ್ದಾರೆ. ಸರ್ಕಾರ ಈ ಎಲ್ಲ ರೈತರಿಗೂ ಪರಿಹಾರ ನೀಡಬೇಕು’ ಎಂದು ಹೇಳಿದರು. ‘ಬೆಂಗಳೂರಿನಲ್ಲಿ ಅನೇಕ ಕಡೆಗಳಲ್ಲಿ ಪ್ರವಾಹ ವೀಕ್ಷಣೆಗೆ ಹೋದಾಗ, ಜನ ತಮಗೆ ನ್ಯಾಯಯುತ ಪರಿಹಾರ ಕೊಡಿಸಿ ಎಂದು ನನ್ನಲ್ಲಿ ಮನವಿ ಮಾಡಿದ್ದಾರೆ. ಕೂಡಲೇ ಒತ್ತುವರಿ ತೆರವು ಮತ್ತು ಕಾಲುವೆಗಳ ಅಗಲೀಕರಣ ಮಾಡಬೇಕು’ ಎಂದು ಸಲಹೆ ನೀಡಿದರು.

‘ಮಾನ್ಯತೆ ನವೀಕರಿಸದ ಕಾರಣಕ್ಕೆ ಪರವಾನಗಿ ವಾಪಸ್ ಪಡೆದಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾನ್ಯತೆ ನವೀಕರಿಸದ ಖಾಸಗಿ ಶಾಲೆಗಳ ಪರವಾನಗಿ ವಾಪಸ್ ಪಡೆಯಬೇಕಾಗಬಹುದು ಎಂದಿದ್ದೇವೆಯೇ ಹೊರತು, ಈ ಬಗ್ಗೆ ಆದೇಶ ಹೊರಡಿಸಿಲ್ಲ’ ಎಂದು ಶಾಲಾ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಸ್ಪಷ್ಟಪಡಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಬಸವರಾಜ ಹೊರಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಕಟ್ಟಡ ಮತ್ತು ಅಗ್ನಿ ಸುರಕ್ಷತೆಗೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸಲು ಎಂಟು ಬಾರಿ ಅವಧಿ ವಿಸ್ತರಿಸಿ ಅವಕಾಶ ನೀಡಿದರೂ, ಖಾಸಗಿ ಶಾಲೆಗಳು ಸ್ಪಂದಿಸುತ್ತಿಲ್ಲ. ಇಂಥವರ ವಿರುದ್ಧ ಕ್ರಮ ಅನಿವಾರ್ಯ’ ಎಂದರು.

ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ, ‘ಅಧಿಕಾರಿಗಳ ದೌರ್ಜನ್ಯ ಹೆಚ್ಚಾಗಿದೆ. ಸರ್ಕಾರಿ ಶಾಲೆಯ ಮಕ್ಕಳಿಗೆ ಸಿಗುವ ಅನುಕೂಲ, ಸೌಲಭ್ಯಗಳು ಖಾಸಗಿ ಅನುದಾನಿತ ಶಾಲೆಗಳ ಮಕ್ಕಳಿಗೂ ಸಿಗಬೇಕು’ ಎಂದರು. ಹಂಗಾಮಿ ಸಭಾಪತಿ ರಘುನಾಥ ಮಲ್ಕಾಪುರೆ, ‘ಹೊರಟ್ಟಿ ಪ್ರಸ್ತಾಪಿಸಿದ ವಿಚಾರವನ್ನು ಆದ್ಯತೆ ಮೇರೆಗೆ ಪರಿಗಣಿಸಿ ಕ್ರಮ ತೆಗೆದುಕೊಳ್ಳಿ’ ಎಂದರು. ಸಚಿವರು ಸಹಮತ ವ್ಯಕ್ತಪಡಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಪಠ್ಯಕ್ರಮ ಅಳವಡಿಕೆಗೆ ತರಬೇತಿ: ಸಚಿವ ಹಾಲಪ್ಪ ಆಚಾರ

‘ಅಂಗನವಾಡಿ ಕಾರ್ಯಕರ್ತೆಯರ ಕೆಲಸಕ್ಕೆ ಧಕ್ಕೆ ಇಲ್ಲ’

ಪ್ರಜಾವಾಣಿ ವಾರ್ತೆ

ಹಾಲಪ್ಪ ಆಚಾರ

ಬೆಂಗಳೂರು: ‘ಹೆಚ್ಚಿನ ವಿದ್ಯಾರ್ಹತೆ ಹೊಂದಿಲ್ಲ ಎನ್ನುವ ಕಾರಣಕ್ಕೆ ಅಂಗನವಾಡಿ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆದು ಹಾಕುವ ಪ್ರಶ್ನೆಯೇ ಇಲ್ಲ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ ಸ್ಪಷ್ಟಪಡಿಸಿದರು.

ವಿಧಾನಪರಿಷತ್ತಿನಲ್ಲಿ ಮಂಗಳವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಗೋವಿಂದರಾಜು ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಅಂಗನವಾಡಿ ಕೇಂದ್ರಗಳಲ್ಲೂ ಜಾರಿಗೊಳಿಸಲಾಗುತ್ತಿದೆ. ಶಾಲಾ ಪೂರ್ವ ಶಿಕ್ಷಣಕ್ಕಾಗಿ ಈಗಾಗಲೇ ಆರು ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ನೀಡುವ ಶಿಫಾರಸ್ಸಿನಂತೆ ಪಠ್ಯಕ್ರಮ ರಚಿಸಲಾಗುವುದು. ಪಠ್ಯಕ್ರಮದ ಅನುಸಾರ ಕೈಪಿಡಿಗಳನ್ನು ರೂಪಿಸಿ ಕಾರ್ಯಕರ್ತೆಯರಿಗೆ ಒದಗಿಸಲಾಗುವುದು’ ಎಂದು ವಿವರಿಸಿದರು.

‘ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತೆಯರಲ್ಲಿ 732 ಮಂದಿ ಸ್ನಾತಕೋತ್ತರ ಪದವೀಧರರಿದ್ದಾರೆ. 6,017 ಪದವೀಧರರು, 14,303 ಪಿಯುಸಿ ಮತ್ತು 40,786 ಅಂಗನವಾಡಿ ಕಾರ್ಯಕರ್ತೆಯರು ಎಸ್ಸೆಸ್ಸೆಲ್ಸಿ ವಿದ್ಯಾರ್ಹತೆ ಹೊಂದಿದ್ದಾರೆ. ಪಿಯುಸಿಗಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿದ ಕಾರ್ಯಕರ್ತೆಯರು ಇರುವ ಸುಮಾರು 20 ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಮೊದಲ ಹಂತದಲ್ಲಿ ಎನ್‌ಇಪಿ ಜಾರಿಗೊಳಿಸಲಾಗುವುದು’ ಎಂದು ತಿಳಿಸಿದರು.

‘ಉಳಿದ ಅಂಗನವಾಡಿ ಕೇಂದ್ರಗಳಲ್ಲಿನ ಕಾರ್ಯಕರ್ತೆಯರು ಕಡಿಮೆ ವಿದ್ಯಾರ್ಹತೆ ಹೊಂದಿದ್ದು, ಅವರಿಗೆ ಹೆಚ್ಚಿನ ತರಬೇತಿ ನೀಡುವ ಮೂಲಕ ಆ ಕೇಂದ್ರಗಳಲ್ಲೂ ನೂತನ ಪಠ್ಯಕ್ರಮ ಅಳವಡಿಕೆಗೆ ಕ್ರಮ ಕೈಗೊಳ್ಳಲಾಗುವುದು. ಅಗತ್ಯವಿರುವ ಸಂದರ್ಭದಲ್ಲಿ ಆರು ತಿಂಗಳಿನಿಂದ ಒಂದು ವರ್ಷದವರೆಗಿನ ಡಿಪ್ಲೊಮಾ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಆದರೆ, ಎನ್‌ಇಪಿ ಪಠ್ಯಕ್ರಮವನ್ನು ಬೋಧಿಸಲು ಹೊಸ ಶಿಕ್ಷಕರನ್ನು ಅಂಗನವಾಡಿ ಕೇಂದ್ರಗಳಿಗೆ ನೇಮಕ ಮಾಡಿಕೊಳ್ಳುವುದಿಲ್ಲ’ ಎಂದು ವಿವರಿಸಿದರು.

‘ಹೊಸದಾಗಿ ಆರಂಭಿಸುತ್ತಿರುವ 4,244 ಅಂಗನವಾಡಿ ಕೇಂದ್ರಗಳ ನೇಮಕಾತಿಯ ಸಂಧರ್ಭದಲ್ಲಿ ಹೆಚ್ಚಿನ ವಿದ್ಯಾರ್ಹತೆ ಹೊಂದಿರುವವರಿಗೆ ಆದ್ಯತೆ ನೀಡಬೇಕು ಎನ್ನುವ ಬಗ್ಗೆ ಚಿಂತನೆ ನಡೆಸಲಾಗುವುದು’ ಎಂದು ತಿಳಿಸಿದರು.

ಮಾತೃಪೂರ್ಣ ಯೋಜನೆ: ಮನೆಗೆ ರೇಷನ್

ಬೆಂಗಳೂರು: ‘ಮಾತೃಪೂರ್ಣ ಯೋಜನೆ ಅಡಿಯಲ್ಲಿ ಗುಡ್ಡಗಾಡು ಮತ್ತು ಮಲೆನಾಡು ಪ್ರದೇಶಗಳಲ್ಲಿ ಮನೆಗೆ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಹೋಗಲು ಅವಕಾಶ ಕಲ್ಪಿಸಲಾಗಿದೆ’ ಎಂದು ಸಚಿವ ಹಾಲಪ್ಪ ಆಚಾರ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಮಂಗಳವಾರ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಈ ವರ್ಷದ ಮಳೆಗಾಲ ಮುಗಿಯುವವರೆಗೂ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿ ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಈ ಸೌಲಭ್ಯ ಕಲ್ಪಿಸಲಾಗಿದೆ’ ಎಂದು ತಿಳಿಸಿದರು.

‘ರಾಜ್ಯದಾದ್ಯಂತ ಈ ಯೋಜನೆ ಅಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಅಂಗನವಾಡಿ ಕೇಂದ್ರಗಳಲ್ಲೇ ಮಧ್ಯಾಹ್ನ ಪೌಷ್ಟಿಕ ಬಿಸಿಯೂಟ ನೀಡಲಾಗುತ್ತಿದೆ. ವೈದ್ಯಕೀಯ ಕಾರಣಕ್ಕೆ ಅಂಗನವಾಡಿ ಕೇಂದ್ರಗಳಿಗೆ ಬರುವುದು ಸಾಧ್ಯವಾಗದಿದ್ದರೆ ಬಿಸಿಯೂಟವನ್ನು ಕುಟುಂಬದ ಸದಸ್ಯರ ಮೂಲಕ ಮನೆಗೆ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ’ ಎಂದು ವಿವರಿಸಿದರು.

ಬಿಸಿಯೂಟ ಪೂರೈಸುವ ವ್ಯವಸ್ಥೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಭಾರತಿ ಶೆಟ್ಟಿ, ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್, ಜೆಡಿಎಸ್‌ನ ಟಿ.ಎ. ಶರವಣ ಅವರು, ‘ಊಟಕ್ಕಾಗಿ ಗರ್ಭಿಣಿಯರು ಅಲೆದಾಡುವುದು ಎಷ್ಟು ಸರಿ. ಪೌಷ್ಟಿಕ ಆಹಾರ ಪದಾರ್ಥವನ್ನು ಮನೆಗೆ ತಲುಪಿಸುವ ವ್ಯವಸ್ಥೆ ಮಾಡಿ. ಬಿಸಿಯೂಟದ ಬದಲು ಮನೆಗೆ ರೇಷನ್ ಕೊಡಿ’ ಎಂದು ಒತ್ತಾಯಿಸಿದರು.

ಕಾಂಗ್ರೆಸ್‌ನ ಪಿ.ಆರ್. ರಮೇಶ್ ಅವರು, ‘ಯಾವ ವ್ಯವಸ್ಥೆ ಸರಿ ಎನ್ನುವುದನ್ನು ಗರ್ಭಿಣಿಯರೇ ಆಯ್ಕೆ ಮಾಡಿಕೊಳ್ಳಲಿ’ ಎಂದು ಸಲಹೆ ನೀಡಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ‘ಮನೆಗೆ ಆಹಾರ ಪದಾರ್ಥಗಳನ್ನು ತಲುಪಿಸಿದರೆ ಗರ್ಭಿಣಿಯರಿಗೆ ದೊರೆಯುವುದಿಲ್ಲ. ಇದರಿಂದ, ಅಪೌಷ್ಟಿಕತೆಯಿಂದ ಬಳಲುತ್ತಾರೆ ಎನ್ನುವ ದೂರುಗಳಿದ್ದವು. ಹೀಗಾಗಿಯೇ ಅಂಗನವಾಡಿ ಕೇಂದ್ರಗಳಲ್ಲೇ ಬಿಸಿಯೂಟ ವ್ಯವಸ್ಥೆ ಮಾಡಲಾಗಿದೆ. ಸದಸ್ಯರ ಸಲಹೆ ಪರಿಶೀಲಿಸುತ್ತೇವೆ’ ಎಂದರು.

ಸದನದಲ್ಲಿ ಕೇಳಿಸಿದ್ದು

- ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿದ್ದ ಯಶಸ್ವಿನಿ ಯೋಜನೆಯನ್ನು ಇನ್ನೊಂದು ಕಾಂಗ್ರೆಸ್ ಸರ್ಕಾರವೇ ರದ್ದುಪಡಿಸಿದ್ದು ವಿಪರ್ಯಾಸ.
  ಎಚ್. ವಿಶ್ವನಾಥ್, ಬಿಜೆಪಿ ಸದಸ್ಯ
- ಕಲ್ಯಾಣ ಕರ್ನಾಟಕ ಜನರು ಶಾಪ ಮುಕ್ತರಾಗುವ ಲಕ್ಷಣಗಳೇ ಕಾಣುತ್ತಿಲ್ಲ. ದುಡ್ಡು ಖರ್ಚಾಗುತ್ತಿದ್ದರೂ ಸೌಲಭ್ಯಗಳನ್ನು ಮಾತ್ರ ಕಲ್ಪಿಸುತ್ತಿಲ್ಲ.
  ಯು.ಬಿ. ವೆಂಕಟೇಶ್, ಕಾಂಗ್ರೆಸ್ ಸದಸ್ಯ
- ಊಟಕ್ಕಾಗಿ ಗರ್ಭಿಣಿಯರು ಅಂಗನವಾಡಿ ಕೇಂದ್ರಕ್ಕೆ ಬರಬೇಕೇ? ಜನ ಛೀ, ಥೂ ಎನ್ನುತ್ತಿದ್ದಾರೆ. ಈಗಿರುವ ಪದ್ಧತಿಯಲ್ಲಿ ಬದಲಾವಣೆ ತನ್ನಿ.
  ಭಾರತಿ ಶೆಟ್ಟಿ, ಬಿಜೆಪಿ ಸದಸ್ಯೆ
- ಬೆಂಗಳೂರಿನಲ್ಲಿ ಪ್ರವಾಹದಿಂದ ಬೀದಿ ಬದಿ ವ್ಯಾಪಾರಿಗಳು, ಟ್ಯಾಕ್ಸಿ, ಆಟೊ ಚಾಲಕರು ಅನ್ನ, ನೀರು ಇಲ್ಲದೆಯೇ ಪರಿತಪಿಸಿದ್ದಾರೆ.
  ಬಿ.ಕೆ. ಹರಿಪ್ರಸಾದ್ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ

ನಗರ ಯೋಜನಾ ಪ್ರಾಧಿಕಾರ ವ್ಯಾಪ್ತಿ ಕಡಿತ ಮಸೂದೆ ಮಂಡನೆ

ಬೆಂಗಳೂರು: ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಇಲಾಖೆ ಇಲಾಖೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಡದ ನಕ್ಷೆಗಳಿಗೆ ಅನುಮೋದನೆ ಪಡೆಯುವುದರಿಂದ ವಿನಾಯಿತಿ ನೀಡಲು ‘ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಮಸೂದೆ 2022’ ಅನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು.

ಸ್ಥಳೀಯ ಯೋಜನಾ ಪ್ರಾಧಿಕಾರಗಳ ಅಧಿಕಾರ ವ್ಯಾಪ್ತಿಗೆ ಒಳಪಡದೇ ಇರುವ ಪ್ರದೇಶಗಳಲ್ಲಿ ಕಟ್ಟಡದ ನಕ್ಷೆ ಮಂಜೂರಾತಿ ಪಡೆಯುವಲ್ಲಿ ತಾಂತ್ರಿಕ ತೊಂದರೆಗಳನ್ನು ತೆಗೆದುಹಾಕಲು ಇ-ಸ್ವತ್ತು ಮತ್ತು ಇ–ಖಾತಾ ಕುರಿತು ಸಂಪುಟ ಉಪಸಮಿತಿಯನ್ನು ರಚಿಸಲಾಗಿತ್ತು.

ಪ್ರತ್ಯೇಕ ನಗರ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿಲ್ಲದ ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬಿಡಿ ನಿವೇಶನ ಹಾಗೂ ಒಂದು ಎಕರೆವರೆಗಿನ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಾಣಕ್ಕೆ ಪರವಾನಗಿ, ನಕ್ಷೆ ಅನುಮೋದನೆ, 11ಇ ನಕ್ಷೆ ಹಾಗೂ ಇ- ಸ್ವತ್ತುಗಳನ್ನು ಸ್ಥಳೀಯ ಸಂಸ್ಥೆಗಳ ಮೂಲಕವೇ ನೀಡುವ ವ್ಯವಸ್ಥೆ ಜಾರಿಗೊಳಿಸಲು ಸುಗ್ರೀವಾಜ್ಞೆ ಹೊರಡಿಸಲಾಗಿತ್ತು. ಅದಕ್ಕೆ ಈಗ ಮಸೂದೆ ತರಲಾಗಿದೆ.

ಅಲ್ಲದೇ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ಮಸೂದೆ–2022, ಕರ್ನಾಟಕ ರೇಷ್ಮೆ ಹುಳು ಬಿತ್ತನೆ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ವಿನಿಮಯ) ಮಸೂದೆಯನ್ನೂ ಮಂಡಿಸಲಾಯಿತು.

‘ಕೊಡಗು ಗಡಿ ಭಾಗದಲ್ಲಿ ತೀವ್ರ ನಿಗಾ’

ಬೆಂಗಳೂರು: ಕೇರಳ ರಾಜ್ಯಕ್ಕೆ ಹೊಂದಿಕೊಂಡಿರುವ ಕೊಡಗು ಜಿಲ್ಲೆಯ ಗಡಿ ಭಾಗಗಳಲ್ಲಿ ಅಪರಾಧ ಕೃತ್ಯಗಳನ್ನು ತಡೆಯುವುದಕ್ಕಾಗಿ ತೀವ್ರ ನಿಗಾ ಇಡಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಅಪ್ಪಚ್ಚು ರಂಜನ್ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಅವರು, ‘ಕೆಲವರು ಕೊಡಗು ಜಿಲ್ಲೆಯಲ್ಲಿ ಅಪರಾಧ ಕೃತ್ಯ ಎಸಗಿ ಕೇರಳಕ್ಕೆ ಪರಾರಿಯಾಗುತ್ತಾರೆ. ಅಂತಹ ಪ್ರಕರಣಗಳನ್ನು ತಡೆಯಲು ಬಿಗಿ ಕಣ್ಗಾವಲು ಇರಿಸಲಾಗುವುದು’ ಎಂದರು.

‘ಕೊಡಗು ಜಿಲ್ಲೆಯಲ್ಲಿ 2021ರಲ್ಲಿ 1,684 ಅಪರಾಧ ಪ್ರಕರಣಗಳು ದಾಖಲಾಗಿವೆ. 1,617 ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆಮಾಡಲಾಗಿದೆ’ ಎಂದು ಹೇಳಿದರು.

ಯಶಸ್ವಿನಿ: ಸದಸ್ಯತ್ವಕ್ಕೆ ಮಾನದಂಡ ನಿಗದಿ

ಅ. 2ರಿಂದ ಜಾರಿ: ಗೊಂದಲ ಸೃಷ್ಟಿಯಾಗದಂತೆ ಕ್ರಮ– ಸೋಮಶೇಖರ್

ಪ್ರಜಾವಾಣಿ ವಾರ್ತೆ



ಎಸ್‌.ಟಿ. ಸೋಮಶೇಖರ್

ಬೆಂಗಳೂರು: ‘ಯಶಸ್ವಿನಿ ಯೋಜನೆಯನ್ನು ಮತ್ತೆ ಜಾರಿಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಸದಸ್ಯತ್ವಕ್ಕೆ ಮಾನದಂಡಗಳನ್ನು ರೂಪಿಸಲಾಗುತ್ತಿದೆ’ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಪ್ರಕಾಶ್ ಕೆ. ರಾಠೋಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಅಕ್ಟೋಬರ್ 2ರಿಂದ ಈ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದ್ದು, ಈಗಾಗಲೇ ಹಣಕಾಸು ಮತ್ತು ಆರೋಗ್ಯ ಇಲಾಖೆ ಒಪ್ಪಿಗೆ ಪಡೆಯಲಾಗಿದೆ’ ಎಂದು ವಿವರಿಸಿದರು.

‘ಹೊಸದಾಗಿ ಯಶಸ್ವಿನಿ ಟ್ರಸ್ಟ್ ರಚಿಸುವ ಕಾರ್ಯವೂ ಪ್ರಗತಿಯಲ್ಲಿದೆ. ಜತೆಗೆ, ಯಾವ ಕಾಯಿಲೆಗಳನ್ನು ಮತ್ತು ಆಸ್ಪತ್ರೆಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರಬೇಕು ಎನ್ನುವ ಬಗ್ಗೆ ಚರ್ಚಿಸಲಾಗುತ್ತಿದೆ. ಸಹಕಾರಿ ಬ್ಯಾಂಕ್‌ಗಳ ಸದಸ್ಯರನ್ನು ಸಹ ಈ ಯೋಜನೆಯನ್ನು ಒಳಪಡಿಸುವ ಉದ್ದೇಶವಿದೆ. ಹೀಗಾಗಿ, ಈ ಯೋಜನೆಯ ಬಗ್ಗೆ ಮಾರ್ಗಸೂಚಿ ಹಾಗೂ ನಿಯಮಗಳನ್ನು ರೂಪಿಸುವ ಕಾರ್ಯ ಪ್ರಗತಿ ಹಂತದಲ್ಲಿದೆ’ ಎಂದು ತಿಳಿಸಿದರು.

‘ಆಯುಷ್ಮಾನ್ ಭಾರತ ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳಿಂದ ಗೊಂದಲ ಸೃಷ್ಟಿಯಾಗಬಾರದು ಎನ್ನುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೊಳಿಸುವ ಮುನ್ನವೇ ಎಲ್ಲ ರೀತಿಯ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ. ಒಂದು ಬಾರಿ ಜಾರಿಯಾದ ನಂತರ ಯಾವುದೇ ರೀತಿ ಗೊಂದಲಗಳು ಸೃಷ್ಟಿಯಾಗಬಾರದು ಎನ್ನುವುದು ಸರ್ಕಾರದ ಉದ್ದೇಶ’ ಎಂದು ಸ್ಪಷ್ಟಪಡಿಸಿದರು.

ಪ್ರಕಾಶ್ ರಾಠೋಡ ಮಾತನಾಡಿ, ‘ಈ ಯೋಜನೆಯನ್ನು ಘೋಷಿಸಿ ಆರು ತಿಂಗಳಾದರೂ ಅನುಷ್ಠಾನಗೊಳಿಸಿಲ್ಲ. ಬಜೆಟ್‌ನಲ್ಲೂ ₹300 ಕೋಟಿ ಒದಗಿಸಲಾಗಿತ್ತು. ಆದರೂ, ಇನ್ನೂ ಪ್ರಗತಿಯ ಹಂತದಲ್ಲಿದೆ’ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಬಿಜೆಪಿಯ ಎಚ್. ವಿಶ್ವನಾಥ್, ‘ಈ ಯೋಜನೆಯನ್ನು ಸಹಕಾರ ಇಲಾಖೆಯ ಮೂಲಕವೇ ನಿರ್ವಹಿಸಬೇಕು. ಯಾವುದೇ ಕಾರಣಕ್ಕೂ ಆರೋಗ್ಯ ಇಲಾಖೆಗೆ ವಹಿಸಲೇಬಾರದು’ ಎಂದರು.

‘ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಾನು ಸಹಕಾರ ಸಚಿವನಾಗಿದ್ದಾಗ ಯಶಸ್ವಿನಿ ಯೋಜನೆಯನ್ನು ಜಾರಿಗೊಳಿಸಲಾಗಿತ್ತು. ಈ ಯೋಜನೆ ಜಾರಿಗೆ ಬಹುರಾಷ್ಟ್ರೀಯ ಕಂಪನಿಗಳಿಂದ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಅಡಿಯಲ್ಲಿ ₹1 ಸಾವಿರ ಕೋಟಿ ಸಂಗ್ರಹಿಸಬೇಕು’ ಎಂದು ಸಲಹೆ ನೀಡಿದರು.

‘ಹಾಲಿನ ಬೆಲೆ ₹ 3 ಹೆಚ್ಚಳ: ಸಿಎಂ ಜೊತೆ ಚರ್ಚಿಸಿ ತೀರ್ಮಾನ’

ಬೆಂಗಳೂರು: ‘ಹಾಲಿನ ಬೆಲೆ ಲೀಟರ್‌ಗೆ ₹ 3 ಹೆಚ್ಚಿಸುವ ಕುರಿತಂತೆ ಮುಖ್ಯಮಂತ್ರಿ ಜೊತೆ ಚರ್ಚಿಸಿದ ಬಳಿಕ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಎಸ್. ರವಿ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, ‘ಎಲ್ಲ 14 ಹಾಲು ಒಕ್ಕೂಟಗಳ ಸಭೆಯಲ್ಲಿ ಹಾಲಿನ ಬೆಲೆ ಹೆಚ್ಚಿಸುವಂತೆ ಬೇಡಿಕೆ ಬಂದಿದೆ. ಒಕ್ಕೂಟಗಳ ಮನವಿಯನ್ನು ಮುಖ್ಯಮಂತ್ರಿ ಗಮನಕ್ಕೆ ತರಲಾಗಿದೆ’ ಎಂದರು.

‘ಕೋವಿಡ್‌ನಿಂದ ಎರಡು ವರ್ಷ ಒಕ್ಕೂಟಗಳು ತೀವ್ರ ಸಮಸ್ಯೆಯಲ್ಲಿ ಸಿಲುಕಿದ್ದವು. ನಂತರ ದಿನಗಳಲ್ಲಿಯೂ ಹಾಲು ಸಂಗ್ರಹ ಪ್ರಮಾಣ ಕುಸಿದಿದೆ. ರೈತರು ಜಾನುವಾರುಗಳನ್ನು ಮಾರುತ್ತಿದ್ದಾರೆ. ದರ ಹೆಚ್ಚಳ ಅನಿವಾರ್ಯವಾಗಿದೆ’ ಎಂದು ರವಿ ಪ್ರತಿಪಾದಿಸಿದರು. ಅದಕ್ಕೆ ಸಚಿವರು, ‘ರೈತರಿಗೆ ಅನುಕೂಲ ಆಗಬೇಕು. ಗ್ರಾಹಕರ ಜೇಬಿಗೂ ಹೊರೆ ಆಗಬಾರದು. ಹೀಗಾಗಿ, ಈ ವಿಷಯದಲ್ಲಿ ಆದಷ್ಟು ಶೀಘ್ರದಲ್ಲಿ ಮುಖ್ಯಮಂತ್ರಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಿದ್ದಾರೆ’ ಎಂದರು.

ಡ್ರಗ್ಸ್ ಬಳಕೆ, ಪೂರೈಕೆ: ಮುಲಾಜಿಲ್ಲದೆ ಕ್ರಮ– ಸಚಿವ ಆರಗ ಜ್ಞಾನೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾದಕ ಪದಾರ್ಥಗಳ ಬಳಕೆ ಹಾಗೂ ಪೂರೈಕೆ ಜಾಲದ ವಿರುದ್ಧ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ನಿಯಂತ್ರಣ (ಎನ್‌ಡಿಪಿಎಸ್) ಕಾಯ್ದೆಯಡಿ ಪೊಲೀಸರು ಈ ವರ್ಷ ಆಗಸ್ಟ್‌ವರೆಗೆ ದಾಖಲಿಸಿಕೊಂಡಿರುವ ಪ್ರಕರಣಗಳೇ ಇದಕ್ಕೆ ಸಾಕ್ಷಿ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಪ್ರಕಾಶ್ ರಾಥೋಡ್ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, ‘ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ–ಕಾಲೇಜುಗಳ ಆವರಣದಲ್ಲಿ ಡ್ರಗ್ಸ್ ಚಟುವಟಿಕೆ ನಡೆಯದಂತೆ ತಡೆಯಲು ಇನ್ನಷ್ಟು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರ ಬದ್ಧವಾಗಿದೆ. ಸಾಮಾಜಿಕ ಪಿಡುಗಾಗಿ ಬೆಳೆದಿರುವ ಈ ಸಮಸ್ಯೆಯನ್ನು ಬೇರುಸಮೇತ ಕಿತ್ತು ಹಾಕುವ ಕೆಲಸ ಆಗಬೇಕಿದೆ. ಇದಕ್ಕೆ ಪೊಲೀಸರ ಜತೆ ಜನ ಸಾಮಾನ್ಯರೂ ಕೈಜೋಡಿಸಬೇಕು’ ಎಂದರು.

ಮಾದಕ ವಸ್ತು ನಿಯಂತ್ರಣ ಕಾಯ್ದೆಯಡಿ ದಾಖಲಾದ ಪ್ರಕರಣ

ವರ್ಷ	ಪ್ರಕರಣಗಳ ಸಂಖ್ಯೆ
2020	4,054
2021	5,782
2022	4,206

(ಆಗಸ್ಟ್ 31ರವರೆಗೆ)

‘ಬೆಂಗಳೂರಿನಲ್ಲಿ ಡ್ರಗ್ಸ್ ಅವ್ಯಾಹತವಾಗಿದೆ. ಖಾಲಿ ಜಾಗಗಳು, ವಿವಾದಿತ ಮೈದಾನಗಳು, ಶಾಲಾ–ಕಾಲೇಜು ಆವರಣಗಳಲ್ಲಿ ಡ್ರಗ್ಸ್ ಸುಲಭವಾಗಿ ಸಿಗುತ್ತಿದೆ. ಮಿನಿ ಪಂಜಾಬ್ ಆಗುತ್ತಿದೆ. ಡ್ರಗ್ಸ್ ತಡೆಯಲು ಸರ್ಕಾರ ಎಲ್ಲ ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು’ ಎಂದು ಪ್ರಕಾಶ್ ರಾಥೋಡ್ ಆಗ್ರಹಿಸಿದರು.

‘ನಗರ ಪ್ರದೇಶವಷ್ಟೆ ಅಲ್ಲ, ಗ್ರಾಮೀಣ ಪ್ರದೇಶಗಳಲ್ಲಿ ಗೂಡಂಗಡಿಗಳಲ್ಲಿಯೂ ಡ್ರಗ್ಸ್ ಸಿಗುತ್ತಿದೆ. ಇದಕ್ಕೆ ಕಡಿವಾಣ ಹಾಕಲೇಬೇಕು’ ಎಂದು ಬಿಜೆಪಿಯ ಭಾರತಿ ಶೆಟ್ಟಿ ಆಗ್ರಹಿಸಿದರು. ಅದಕ್ಕೆ ತೇಜಸ್ವಿನಿ ಗೌಡ ಕೂಡಾ ದನಿಗೂಡಿಸಿದರು.

‘ಡ್ರಗ್ಸ್ ವ್ಯಾಪಕಗೊಳ್ಳಲು ಪೊಲೀಸರು ಕಾರಣರಾಗಿದ್ದಾರೆ. ಪೂರೈಕೆದಾರರ ಜೊತೆ ಪೊಲೀಸರು ಶಾಮೀಲಾಗಿದ್ದಾರೆ’ ಎಂದು ಕಾಂಗ್ರೆಸ್ಸಿನ ಸಲೀಂ ಅಹ್ಮದ್ ಆರೋಪಿಸಿದರೆ, ‘ಡ್ರಗ್ಸ್ ನಿಯಂತ್ರಣಕ್ಕೆ ಯಾವ ವಿಶೇಷ ಕಾರ್ಯಕ್ರಮ ರೂಪಿಸಿದ್ದೀರಿ’ ಎಂದು ಜೆಡಿಎಸ್‌ನ ಮರಿತಿಬ್ಬೇಗೌಡ ಪ್ರಶ್ನಿಸಿದರು. ಹುಕ್ಕಾ ಬಾರ್‌ಗಳು ಮಾದಕ ವಸ್ತು ಸೇವನೆಯ ಕೇಂದ್ರಗಳಾಗುತ್ತಿವೆ ಎಂದೂ ಸದಸ್ಯರು ಆತಂಕ ವ್ಯಕ್ತಪಡಿಸಿದರು. ಕಾಂಗ್ರೆಸ್ಸಿನ ಮಂಜುನಾಥ ಭಂಡಾರಿ ಮತ್ತು ಎಂ. ನಾಗರಾಜ ಕೂಡಾ ಅಭಿಪ್ರಾಯ ವ್ಯಕ್ತಪಡಿಸಿದರು.

ಸಚಿವರು ಪ್ರತಿಕ್ರಿಯಿಸಿ, ‘ಕಳೆದ ಮೂರು ವರ್ಷಗಳಲ್ಲಿ ಮಾದಕ ದ್ರವ್ಯ ಸೇವನೆ, ಮಾರಾಟ ಹಾಗೂ ಸಾಗಣೆ ದಂಧೆಯಲ್ಲಿ ತೊಡಗಿರುವವರ ವಿರುದ್ಧ 14,042 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಪ್ರಕರಣಗಳಿಗೆ ಸಂಬಂಧಿಸಿ ಹಲವರನ್ನು ಬಂಧಿಸಲಾಗಿದೆ. ಈ ಜಾಲದ ಪತ್ತೆಗೆ ಸಿಸಿಬಿಯಲ್ಲಿ ಪ್ರತ್ಯೇಕ ಘಟಕವನ್ನು ತೆರೆಯಲಾಗಿದೆ’ ಎಂದರು.

ಉದ್ಯೋಗ ವಾಣಿ

ಅರ್ಹತೆ 10ನೇ ಪಾಸ್
ವಸತಿ ತಂತ್ರಜ್ಞರು ಬೇಕಾಗಿದ್ದಾರೆ
ವಯಸ್ಸು 45 ಕ್ಕಿಂತ ಕಡಿಮೆ. ಖಾಲಿ ಹುದ್ದೆಗಳು 100
ಸಂಬಳ 15000 ರಿಂದ 25000
ನಿಮ್ಮ ಮನೆಯಿಂದ 25 ಕಿಮೀ ಒಳಗೆ ಕೆಲಸ ಮಾಡಿ
ಹೆಚ್ಚಿನ ವಿವರಗಳಿಗಾಗಿ ಕಂಪನಿಯ ವೆಬ್‌ಸೈಟ್‌ನಲ್ಲಿ
"Career" ಪುಟಕ್ಕೆ ಭೇಟಿ ನೀಡಿ
WhatsApp +91-9526911168
Email: amc@pilotsmithindia.com YouTube: Pilotsmith India
Pilotsmith (India) Pvt. Ltd.
Uniwork Spaces, 802, 4th Floor, 8th Main - East Rd HRBR Layout
1st Block, Kalyan Nagar Bengaluru, Karnataka - 560043
www.pilotsmithindia.com

|| jai sri gurudev ||
ADICHUNCHANAGIRI UNIVERSITY
(Estd. under Karnataka Act No.18 of 2013)
Adichunchanagiri University established in the year 2018 having more than 5000 students and catering multi- disciplinary courses under its six constituent colleges. Currently looking for Faculty of Medicine for its constituent college
Adichunchanagiri Institute of Medical Sciences
for augmenting the faculty requirement to cater for enhanced intake in UG & PG courses.
RECRUITMENT OF FACULTY: Professor / Associate Professor / Assistant Professor / Senior Residents / Tutors

Sl.No.	DEPARTMENT	POSTS
1.	Anatomy	Assistant Professor / Tutor
2.	Physiology	Assistant Professor / Tutor
3.	Pharmocology	Assistant Professor / Tutor
4.	Community Medicine	Assistant Professor / Tutor
5.	Forensic Medicine	Assistant Professor / Tutor
6.	General Medicine	Professor / Associate Professor / Assistant Professor / Senior Resident
7.	Emergency Medicine	Professor / Associate Professor Assistant Professor / Senior Resident
8.	Paediatrics	Professor / Associate Professor Assistant Professor
9.	Psychiatry	Assistant Professor / Senior Resident
10.	Respiratory Medicine	Professor / Associate Professor Assistant Professor / Senior Resident
11.	General Surgery	Professor / Associate Professor / Assistant Professor / Senior Resident
12.	Ophthalmology	Professor / Associate Professor Assistant Professor / Senior Resident
13.	Anaesthesiology	Associate Professor / Assistant Professor / Senior Resident
14.	Radio-diagnosis	Associate Professor / Assistant Professor / Senior Resident
15.	Obstetrics & Gynaecology	Professor / Associate Professor / Assistant Professor / Senior Resident

Super Specialists
Neuro Surgery, Plastic Surgery, Urology, Neurology, Cardiology, Surgical GastroEnterology, Medical Gastro Enterology, Endocrinology, Nephrology
Casualty Medical Officers
Additional Information:
• Qualifications are as per NMC norms & requirement.
• There are more than one position open in Clinical disciplines.
• Salary will be paid as per the AICTE/ACU pay scale
• Salary will not be constraint for super speciality professionals
• Candidates may apply on or before 26.09.2022
• TA/DA will not be paid for attending Interview
• Transportation facility available for faculty travelling from Bengaluru, Mysuru, Mandya & Hassan.
• Financial assistance will be provided for accommodation.
Application should be sent by mentioning the post applied to HR Head, Adichunchanagiri institute of Medical Sciences, B G Nagara-571448. by post by email to
aims@bgsaims.edu.in Call 89717 47774

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ದೀರ್ಘಾಯುಷಿ ಭವ!

ಆಕ್ಸಿಜನ್ ಅಣುಗಳ ಸಾಂದ್ರತೆಯನ್ನು ಬದಲಾಯಿಸಿದರೆ ಆಯುಸ್ಸನ್ನೂ ಬದಲಾಯಿಸಬಹುದೇ? ಆ್ಯಂಟಿಆಕ್ಸಿಡೆಂಟುಗಳೆಂಬ ಪದಾರ್ಥಗಳು ಇದಕ್ಕೆ ನೆರವಾಗಬಹುದೆನ್ನುವ ಆಸೆಯಿದೆ.

ಕೊಳ್ಳೇಗಾಲ ಶರ್ಮ

ಮೊನ್ನೆ ನನ್ನನ್ನು ಭೇಟಿಯಾದ ನನ್ನ ಗೆಳೆಯರೊಬ್ಬರು 'ನೂರು ವರ್ಷ ಆಯುಸ್ಸು ನಿಮಗೆ. ಈಗಷ್ಟೆ ನಿಮ್ಮ ಬಗ್ಗೆ ಮಾತನಾಡುತ್ತಿದ್ದೆವು' ಎಂದರು.

'ಒಟ್ಟೋ? ಅಥವಾ ಈಗಿನಿಂದ ನೂರು ವರ್ಷವೋ' ಎಂದು ತಮಾಷೆ ಮಾಡಿದೆ.

ಅದಕ್ಕೆ ಅವರು ಈಗಿನಿಂದ ನೂರು ವರ್ಷ ಅಂತಿಟ್ಟುಕೊಳ್ಳಿ ಎಂದರೆ. ಅಷ್ಟೊಂದು ದೀರ್ಘಾಯುಸ್ಸು ದೊರಕುವುದಾದರೆ ಯಾರಿಗೆ ಬೇಡ ಅಲ್ಲವೇ? ಮೊನ್ನೆ ಬಂದ ಸುದ್ದಿಯೊಂದು ಈ ಖುಷಿಯನ್ನು ನೀಡಿದೆ. ಒಂದಿಷ್ಟು ಔಷಧ ನಮ್ಮ ಆಯುಸ್ಸನ್ನು ಹೆಚ್ಚಿಸಬಹುದಂತೆ. ಹಾಂ! ತಾಳಿ. ಇದೋ ನಿರಾಸೆಯ ಸುದ್ದಿ. ಈ ಔಷಧವನ್ನು ಅಮ್ಮನ ಹಾಲು ಸೇವಿಸುವ ಬಾಲ್ಯದಲ್ಲಿಯೇ ಸೇವಿಸಿದರೆ ಮಾತ್ರ ದೀರ್ಘಾಯುಸ್ಸು ಎನ್ನುತ್ತದೆ, ಇಎಂಬಿಓ ರಿಪೋರ್ಟ್ಸ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ಒಂದು ಸಂಶೋಧನೆ. ಇಟಲಿಯ ಟ್ರೆಂಟೊ ವಿಶ್ವವಿದ್ಯಾನಿಲಯದ ಲ್ಯೂಕಾ ಟಿಬೇರಿ ಮತ್ತು ಸಂಗಡಿಗರು ರಪಾಮೈಸಿನ್ ಎನ್ನುವ ಔಷಧವನ್ನು ಬಾಲ್ಯದಲ್ಲಿ ನೀಡಿದರೆ ಆಯುಸ್ಸು ದೀರ್ಘವಾಗುತ್ತದೆ ಎಂದು ವರದಿ ಮಾಡಿದ್ದಾರೆ.

'ರಪಾಮೈಸಿನ್' ಅಥವಾ 'ಸೈರೊಲಿಮಸ್' ಎನ್ನುವುದು ಒಂದು ಆ್ಯಂಟಿಆಕ್ಸಿಡೆಂಟು. ಡಯಾಬಿಟೀಸು, ನರಕ್ಷಯದ ಕೆಲವು ಕಾಯಿಲೆಗಳು, ಕ್ಯಾನ್ಸರ್ ಮುಂತಾದ ಮುಪ್ಪಿನ ಕಾಯಿಲೆಗಳನ್ನು ನಿಯಂತ್ರಿಸುವ ಗುಣ ಅದಕ್ಕಿದೆಯಂತೆ. ಹೀಗಾಗಿಯೇ ಅದು ಆಯುಸ್ಸನ್ನು ಹೆಚ್ಚಿಸಬಹುದು ಎನ್ನುವ ಆಸೆಯೂ ಹುಟ್ಟಿತ್ತು. ಆಯುಸ್ಸನ್ನು ಹೆಚ್ಚಿಸಲು ಅಥವಾ ಸಾವನ್ನು ದೂರವಿಡಲು ರಪಾಮೈಸಿನ್ ನೆರವಾಗಬಹುದು ಎನ್ನುವ ಸುದ್ದಿ ಹೊಸತಲ್ಲ. ಹತ್ತು ವರ್ಷಗಳ ಹಿಂದೆಯೇ ಈ ಬಗ್ಗೆ 'ಸೀನೋರೇಬ್ಡೈಟಿಸ್' ಎನ್ನುವ ದುಂಡುಹುಳದ ಮೇಲೆ ನಡೆದ ಸಂಶೋಧನೆಗಳು ಸೂಚನೆ ನೀಡಿದ್ದುವು. ರಪಾಮೈಸಿನ್ ಉಣಿಸಿ ಬೆಳೆಸಿದ ದುಂಡುಹುಳುಗಳು ಉಳಿದವುಗಳಿಗಿಂತಲೂ ಹೆಚ್ಚು ಕಾಲ ಬದುಕಿದ್ದುವು. ಇದಕ್ಕೆ ಕಾರಣವಿಷ್ಟೆ. ದೀರ್ಘಾಯುಷಿಗಳನ್ನು ಮುಪ್ಪು ನಿಧಾನವಾಗಿ ಅಡರಿಕೊಳ್ಳುತ್ತದೆ.

ಮುಪ್ಪು ಎಂದರೆ ಇನ್ನೇನಲ್ಲ, ದೇಹದ ಕೋಟ್ಯಂತರ ಜೀವಕೋಶಗಳಲ್ಲಿ ನಿಧಾನವಾಗಿ ಸಂಗ್ರಹವಾಗುವ ದೋಷಗಳು – ಎನ್ನುವುದು ವಿಜ್ಞಾನಿಗಳ ಅಭಿಪ್ರಾಯ. ಜೀವಕೋಶಗಳಲ್ಲಿ ಜರುಗುವ ಸಾವಿರಾರು ಜೈವಿಕ ಕ್ರಿಯೆಗಳಿಂದಾಗಿ ಹುಟ್ಟುವ ಕೆಲವು ರಾಸಾಯನಿಕ ಅಣುಗಳು ಜೀವಕೋಶಗಳಿಗೆ ಮಾರಕವಾಗುತ್ತವೆ. ಇದು ವಿವಿಧ ಅಂಗಗಳಿಗೆ ಮುಪ್ಪು ತರುತ್ತವೆ ಎನ್ನುವುದು ತರ್ಕ. ಈ ತರ್ಕಕ್ಕೆ ಪುರಾವೆಗಳೂ ಇವೆ. ರಿಯಾಕ್ಟಿವ್ ಆಕ್ಸಿಜನ್ ಅಣುಗಳು ಅರ್ಥಾತ್ ಬಲು ಕ್ರಿಯಾಶೀಲವಾದ ಆಕ್ಸಿಜನ್ ಅಣುಗಳಿರುವ ರಾಸಾಯನಿಕಗಳು ಸಂಗ್ರಹವಾದರೆ ಅಂತಹ ಜೀವಕೋಶವು ತನ್ನಂತಾನೇ ಸಾಯುತ್ತದೆ.

ಹಾಗಿದ್ದರೆ, ಈ ಆಕ್ಸಿಜನ್ ಅಣುಗಳ ಸಾಂದ್ರತೆಯನ್ನು ಬದಲಾಯಿಸಿದರೆ ಆಯುಸ್ಸನ್ನೂ ಬದಲಾಯಿಸಬಹುದೇ? ಆ್ಯಂಟಿಆಕ್ಸಿಡೆಂಟುಗಳೆಂಬ ಪದಾರ್ಥಗಳು ಇದಕ್ಕೆ ನೆರವಾಗಬಹುದೆನ್ನುವ ಆಸೆಯಿದೆ. ಇದೇ ಕಾರಣದಿಂದಲೇ ಆ್ಯಂಟಿಆಕ್ಸಿಡೆಂಟುಗಳಿರುವ ಆಹಾರ ಒಳ್ಳೆಯದು ಎನ್ನುವುದು. ಬೆಳವಣಿಗೆಯ ಹಂತದಲ್ಲಿ ಹೀಗೆ ಜೀವಕೋಶಗಳ ಅಭಿವೃದ್ಧಿ ಹಾಗೂ ಸಾವು ಜೊತೆ, ಜೊತೆಯಾಗಿರುತ್ತವೆ. ಜೀವಕೋಶಗಳ ಸಾವನ್ನು ತಡೆದರೆ, ಅರ್ಥಾತ್ ಈ ಆಕ್ಸಿಜನ್ ಸಾಂದ್ರತೆಯನ್ನು ಈ ಹಂತದಲ್ಲಿ ಕುಗ್ಗಿಸಿದರೆ ಆಯುಸ್ಸು ಹೆಚ್ಚಾಗಬಹುದು ಎನ್ನುವ ಊಹೆ ಇತ್ತು. ದುಂಡುಹುಳುಗಳಲ್ಲಿ ನಡೆದ ಸಂಶೋಧನೆ ಇದನ್ನು ಸಮರ್ಥಿಸಿತ್ತು. ಆದರೆ ಅದು ನಿಜವೇ?

> ಮುಪ್ಪು ಎಂದರೆ ದೇಹದ ಜೀವಕೋಶಗಳಲ್ಲಿ ಸಂಗ್ರಹವಾಗುವ ದೋಷಗಳು

ಈ ಪ್ರಶ್ನೆಯ ಬೆನ್ನು ಹತ್ತಿದ ಟಿಬೇರಿ ತಂಡ ಇಲಿಗಳು ಹಾಗೂ ಹಣ್ಣುನೊಣಗಳ ಮೇಲೆ ಪ್ರಯೋಗಗಳನ್ನು ನಡೆಸಿದೆ. ಹುಟ್ಟಿ ನಾಲ್ಕು ದಿನಗಳಾದ ಇಲಿಮರಿಗಳ ಹೊಟ್ಟೆಗೆ ರಪಾಮೈಸಿನ್ ಔಷಧವನ್ನು ಪ್ರತಿದಿನವೂ ಒಂದಿಷ್ಟು ಎನ್ನುವಂತೆ ಒಂದು ತಿಂಗಳ ಕಾಲ ಚುಚ್ಚಿದರು. ಇನ್ನೊಂದಷ್ಟು ಇಲಿಮರಿಗಳಿಗೆ ಒಂದು ತಿಂಗಳಿನಿಂದ ಎರಡು ತಿಂಗಳವರೆಗೆ ಔಷಧ ಚುಚ್ಚಿದರು. ಇನ್ನಷ್ಟು ಇಲಿಮರಿಗಳನ್ನು ಹಾಗೆಯೇ ಇರಿಸಿದ್ದರು. ಇದೇ ರೀತಿಯಲ್ಲಿ ಮೊಟ್ಟೆ ಒಡೆದು ಹೊರಬಂದ ನೊಣಗಳ ಲಾರ್ವಾಗಳಿಗೆ ಒಂದನೇ ದಿನದಿಂದ ನಾಲ್ಕು ದಿನಗಳವರೆಗೆ ಹಾಗೂ ಅದು ನೊಣವಾದ ಮೇಲೆ ಬೇರೆ, ಬೇರೆ ಸಮಯದಲ್ಲಿ ಆಹಾರದಲ್ಲಿ ರಪಾಮೈಸಿನ್ ಬೆರೆಸಿ ಉಣಿಸಿದರು. ಇಲಿಮರಿಗಳು ಹಾಗೂ ನೊಣಗಳು ಎಷ್ಟು ದಿನಗಳವರೆಗೆ ಬದುಕುತ್ತವೆ ಎಂದು ಗಮನಿಸಿದರು. ಹಾಗೆಯೇ ಅವುಗಳ ದೇಹದಲ್ಲಿ ಆಗುವ ಜೈವಿಕ ಕ್ರಿಯೆಗಳನ್ನು ವಿವಿಧ ಸಮಯದಲ್ಲಿ ಪರಿಶೀಲಿಸಿದರು. ಅದರಲ್ಲಿಯೂ ಬೆಳವಣಿಗೆಯ ಸಮಯದಲ್ಲಿ ನೊಣ, ಇಲಿ, ಮನುಷ್ಯ ಮೊದಲಾದ ಹಲವು ಜೀವಿಗಳಲ್ಲಿ ಚುರುಕಾಗಿರುವ ಒಂದು ಸಾಮಾನ್ಯ 'ಎಂಟಿಓಆರ್' ಎನ್ನುವ ಕ್ರಿಯೆಯನ್ನೂ ಗಮನಿಸಿದರು. ದೇಹದ ಬೆಳವಣಿಗೆಯಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ.

ಪ್ರಯೋಗದ ಫಲಿತಾಂಶ ಇಲಿಗಳಲ್ಲಿಯೂ ನೊಣಗಳಲ್ಲಿಯೂ ಒಂದೇ ತೆರನ ಫಲಿತಾಂಶ ತೋರಿದ್ದು ಅಚ್ಚರಿಯನ್ನುಂಟುಮಾಡಿದೆ. ಬೆಳವಣಿಗೆಯ ಅರಂಭದ ಹಂತದಲ್ಲಿ ಅಂದರೆ ನಾಲ್ಕನೇ ದಿನದಿಂದ ಒಂದು ತಿಂಗಳವರೆಗಿನ ಇಲಿಮರಿಗಳು ಹಾಗೂ ನಾಲ್ಕು ದಿನಗಳವರೆಗೆ ರಪಾಮೈಸಿನ್ ಸೇವಿಸಿದ್ದ ನೊಣಗಳು ಉಳಿದವುಗಳಿಗಿಂತಲೂ ಹೆಚ್ಚು ದಿನಗಳು ಬದುಕಿದ್ದುವು. ನೂರು ವಯಸ್ಸು ಆಯುಸ್ಸು ನೂರಾಹತ್ತು ಆದಂತೆ, ಸುಮಾರು ಒಂಬತ್ತು ಶತಾಂಶ ಆಯುಸ್ಸು ಹೆಚ್ಚಿತ್ತು. ಸ್ವಲ್ಪ ವಯಸ್ಸಾದ ಮೇಲೆ ಕೊಟ್ಟ ಔಷಧವೂ ಆಯುಸ್ಸು ಹೆಚ್ಚಿಸಿತ್ತಾದರೂ ಅಷ್ಟೊಂದಲ್ಲ. ಕೇವಲ ನಾಲ್ಕೋ ಐದೋ ಶತಾಂಶದಷ್ಟು ಹೆಚ್ಚಿಸಿತ್ತು. ಆರಂಭದಲ್ಲಿ ಔಷಧ ಪಡೆದುಕೊಂಡ ಇಲಿಗಳ ಬೆಳವಣಿಗೆ ಸ್ವಲ್ಪ ಕುಂಠಿತವಾಗಿದೆ ಎನ್ನಿಸಿದರೂ ಅನಂತರ ಅವು ವಯಸ್ಸಾದ ಮೇಲೆ ಔಷಧ ಪಡೆದುಕೊಂಡ ಹಾಗೂ ಔಷಧವೇ ನೀಡದ ಇಲಿಗಳಷ್ಟೆ ತೂಕ ಹಾಗೂ ಗಾತ್ರ ಬೆಳೆಸಿಕೊಂಡವು. ಜೊತೆಗೆ ಎಂಟಿಓಆರ್ ಕ್ರಿಯೆ ಇವುಗಳಲ್ಲಿ ವ್ಯತ್ಯಯವಾಗಿತ್ತು ಎನ್ನುವುದನ್ನೂ ಟಿಬೇರಿ ತಂಡ ಗಮನಿಸಿದೆ.

ಅರ್ಥಾತ್, ಮುಪ್ಪಿನಲ್ಲಿ ಔಷಧ ತೆಗೆದುಕೊಳ್ಳುವುದಕ್ಕಿಂತಲೂ ಬಾಲ್ಯದಲ್ಲಿ ನೀಡಿದ ಔಷಧ ಆಯುಸ್ಸನ್ನು ಹೆಚ್ಚಿಸುತ್ತದೆ ಎನ್ನುವುದು ಇವರ ತೀರ್ಮಾನ. ಇಲಿ, ಹಣ್ಣುನೊಣಗಳೆರಡರಲ್ಲಿಯೂ ಸಮಾನ ಫಲಿತಾಂಶ ದೊರೆತಿರುವುದು ಔಷಧದ ಪರಿಣಾಮ ಸತ್ಯ ಎನ್ನುತ್ತದೆಯೇ? ಕಾದು ನೋಡೋಣ. ಅಲ್ಲಿಯವರೆವಿಗೂ ದೀರ್ಘಾಯುಸ್ಸು ಇರಲಿ ಎನ್ನುವ ಹಾರೈಕೆಯೇ ರಕ್ಷೆ. ಅಲ್ಲವೇ?



ಸ್ಯಾಮ್‌ಸಂಗ್ ಗ್ಯಾಲಕ್ಸಿ ಝಡ್ ಫ್ಲಿಪ್ 4

ಸ್ಯಾಮ್‌ಸಂಗ್ Z ಫ್ಲಿಪ್ 4

ಮಡಚುವ ಫೋನ್‌ಗಳು ಹೊಸದಲ್ಲ. ಸ್ಯಾಮ್‌ಸಂಗ್ ಗ್ಯಾಲಕ್ಸಿ ಝಡ್ ಫ್ಲಿಪ್‌ನ 4ನೇ ಆವೃತ್ತಿ ಮಾರುಕಟ್ಟೆಗೆ ಬಿಡುಗಡೆಯಾಗುವ ಮುಂಚೆ ವಿಮರ್ಶೆಗೆ ದೊರೆತಿದ್ದು, ಒಂದು ವಾರ ಬಳಸಿ ನೋಡಿದಾಗಿನ ಅನುಭವದ ಮಾಹಿತಿ ಇಲ್ಲಿದೆ.

ಅವಿನಾಶ್ ಬಿ.

ವಿನ್ಯಾಸ:

ಗ್ಯಾಲಕ್ಸಿ ಝಡ್ ಫ್ಲಿಪ್ 4 ಮೇಲಿಂದ ಕೆಳಗೆ ಮಡಚುವ ಅಥವಾ ಫ್ಲಿಪ್ ಮಾಡುವ ಫೋನ್. ಇದರಲ್ಲಿ ಎರಡು ಸ್ಕ್ರೀನ್‌ಗಳಿರುತ್ತವೆ. ಮಡಚಿದಾಗ ಕಾಣಿಸುವ 1.9 ಇಂಚಿನ ಪುಟ್ಟ ಸ್ಕ್ರೀನ್, ತೆರೆದಾಗ ಕಾಣಿಸುವ 6.7 ಇಂಚಿನ ದೊಡ್ಡ ಪರದೆ. ಎರಡು ಪ್ರಧಾನ ಕ್ಯಾಮೆರಾಗಳು, ಮುಂಭಾಗದಲ್ಲೊಂದು ಸೆಲ್ಫೀ ಕ್ಯಾಮೆರಾ, ಬೆರಳಚ್ಚು ಲಾಕ್ ಇರುವ ಪವರ್ ಬಟನ್, ಸುಲಭವಾಗಿ ತೆರೆದುಕೊಳ್ಳುವಂತಾಗಲು ಬಿಂಜ್ (ಬಿಜಾಗರಿ) ಅಂದವಾಗಿದೆ.

ಜೇಬಿನಲ್ಲಿರಿಸಿಕೊಳ್ಳಲು ಸ್ವಲ್ಪ ಮಟ್ಟಿಗೆ ಹೆಚ್ಚು ತೂಕ ಅನ್ನಿಸುತ್ತದೆ. ಅಲ್ಯೂಮಿನಿಯಂ ಫ್ರೇಮ್ ಅಂದವಾಗಿ ಕಾಣಿಸುತ್ತದೆ. ಜೇಬು ಅಥವಾ ಕೈಚೀಲದಲ್ಲಿ ಹಾಕುವಾಗ ಅದರಲ್ಲಿ ನಾಣ್ಯಗಳು, ಕೀಲಿಕೈಗಳು ಇಲ್ಲದಂತೆ ನೋಡಿಕೊಳ್ಳಬೇಕಾಗುತ್ತದೆ. ಆದರೆ ಸಾಮಾನ್ಯ ಗೀರುಗಳಿಂದ ರಕ್ಷಿಸಲು ಕಾರ್ನಿಂಗ್ ಗೊರಿಲ್ಲಾ ಗ್ಲಾಸ್ ವಿಕ್ಟಸ್ + ಗಾಜಿನ ಕವಚದ ರಕ್ಷೆಯಿದೆ.

ಡಿಸ್‌ಪ್ಲೇ

ಫುಲ್ ಎಚ್‌ಡಿ + ಪರದೆಯಲ್ಲಿ ಚಿತ್ರ, ವಿಡಿಯೊಗಳು ಅತ್ಯಂತ ನಿಖರವಾಗಿ, ಸ್ಪಷ್ಟವಾಗಿ, ವರ್ಣಮಯವಾಗಿ ಸುಂದರವಾಗಿ ಗೋಚರಿಸುತ್ತವೆ. ಮಡಚಿದಾಗಿನ ಕವರ್ ಸ್ಕ್ರೀನ್ 1.9 ಇಂಚು (ಕರ್ಣರೇಖೆಯಲ್ಲಿ) ಇದ್ದು, ನೋಟಿಫಿಕೇಶನ್, ಹವಾಮಾನ ಮಾಹಿತಿ, ಸ್ಕ್ರೀನ್ ರೆಕಾರ್ಡಿಂಗ್, ಹಾಡುಗಳನ್ನು ಪ್ಲೇ ಮಾಡುವುದು, ಗಡಿಯಾರ ಮತ್ತು ಇತರ ಕಾರ್ಯಗಳಿಗೂ ವಿಜೆಟ್‌ಗಳಿವೆ.

ಕ್ಯಾಮೆರಾ

ಇದರ ಪ್ರಧಾನ ಕ್ಯಾಮೆರಾದಲ್ಲಿ ತಲಾ 12 ಮೆಗಾಪಿಕ್ಸೆಲ್‌ಗಳ ಎರಡು ಲೆನ್ಸ್‌ಗಳಿದ್ದು, ಸೆಲ್ಫೀ ಕ್ಯಾಮೆರಾ 10MP ಸಾಮರ್ಥ್ಯ ಹೊಂದಿದೆ. ಪ್ರಧಾನ ಕ್ಯಾಮೆರಾ ಬಳಸಿಯೇ ಗುಣಮಟ್ಟದ ಸೆಲ್ಫೀ ಚಿತ್ರ ಸೆರೆಹಿಡಿಯುವುದು ಇದರ ವಿಶೇಷತೆಗಳಲ್ಲೊಂದು.

ವಿಡಿಯೊ ಹಾಗೂ ಫೋಟೋಗಳಿಗೆ ಪ್ರಧಾನ ಕ್ಯಾಮೆರಾದಲ್ಲಿಯೇ ಪೋರ್ಟ್ರೇಟ್ ಮೋಡ್ ಬಳಸುವ ಆಯ್ಕೆ ತುಂಬ ಇಷ್ಟವಾಯಿತು. ಪೋರ್ಟ್ರೇಟ್ ಮೋಡ್‌ನಲ್ಲಿ (ಹಿನ್ನೆಲೆಯನ್ನು ಮಸುಕಾಗಿಸಿ, ಮುಖವನ್ನು ಪ್ರಧಾನವಾಗಿ ಬಿಂಬಿಸುವ ವಿಧಾನ) ಭಾವಚಿತ್ರ ತೆಗೆದ ಬಳಿಕ, ಹಿನ್ನೆಲೆಯ ಬಣ್ಣ ಬದಲಾಯಿಸುವ ಎಡಿಟಿಂಗ್ ಆಯ್ಕೆ ಕೂಡ ಇದೆ.

ಮಂದ ಬೆಳಕಿನಲ್ಲೂ ಈ ಕ್ಯಾಮೆರಾಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ. ವ್ಲಾಗರ್‌ಗಳಿಗೆ (ವಿಡಿಯೊ ಬ್ಲಾಗರ್‌ಗಳು) ಇದು ಯಾಕೆ ಇಷ್ಟವಾಗಬಹುದು ಎಂದರೆ, ಇದನ್ನು ಅರ್ಧ ಮಡಚಿದಾಗ, ಅಂಗೈಯಲ್ಲಿಟ್ಟುಕೊಂಡೇ ವಿಡಿಯೊ, ಫೋಟೋ ಸೆರೆಹಿಡಿಯಬಹುದು.

3700 mAh ಸಾಮರ್ಥ್ಯದ ಬ್ಯಾಟರಿಯಿದೆ. ಬಹುಶಃ ಹೆಚ್ಚಿನ ಸಾಮರ್ಥ್ಯದ ಬ್ಯಾಟರಿಗೆ ಈ ಪುಟ್ಟ ಫೋನ್‌ನಲ್ಲಿ (ಮಡಚುವಾಗ) ಅವಕಾಶ ಸಾಲದು ಎನಿಸುತ್ತದೆಯಾದರೂ, ಸಾಮಾನ್ಯ ಕೆಲಸ ಕಾರ್ಯಗಳಿಗೆ ಒಂದು ದಿನದ ಚಾರ್ಜ್‌ಗೆ ಯಾವುದೇ ಸಮಸ್ಯೆಯಿಲ್ಲ. ಫೋನನ್ನು ಅರ್ಧ ತೆರೆದು ಟೇಬಲ್ ಮೇಲಿಟ್ಟರೆ ವಿಡಿಯೊ ಕರೆಗಳಿಗೆ ಇದು ತುಂಬ ಉಪಯುಕ್ತ.

ಕಾರ್ಯಸಾಮರ್ಥ್ಯ ಕ್ವಾಲ್ಕಮ್ ಸ್ನ್ಯಾಪ್‌ಡ್ರ್ಯಾಗನ್ 8 + ನ 1ನೇ ಪೀಳಿಗೆಯ ಪ್ರೊಸೆಸರ್, 8ಜಿಬಿ RAM ಜೊತೆಗೆ ಅತ್ಯುತ್ತಮ ಮತ್ತು ಸುಲಲಿತವಾದ ಬ್ರೌಸಿಂಗ್ ಅನುಭವವಾಗಿದೆ. ಆಸ್ಫಾಲ್ಟ್ 9ರಂತಹ ಭರ್ಜರಿ ಗ್ರಾಫಿಕ್ಸ್ ಇರುವ ಗೇಮ್‌ಗಳನ್ನು ಆಡುವ ಸಂದರ್ಭದಲ್ಲಿ ಯಾವುದೇ ರೀತಿಯ ಲೇಟೆನ್ಸಿ, ಸ್ಥಾಗಿತ್ಯ ಇತ್ಯಾದಿ ಸಮಸ್ಯೆಯಿಲ್ಲ. ಆಂಡ್ರಾಯ್ಡ್‌ನ ಅತ್ಯಾಧುನಿಕ 12ನೇ ಆವೃತ್ತಿ ಆಧಾರಿತ ಒನ್ ಯುಐ 4.1.1 ಕಾರ್ಯಾಚರಣೆ ವ್ಯವಸ್ಥೆಯಿದೆ. ಜೊತೆಗೆ, ಸ್ಕ್ರೀನ್ ಅನ್‌ಲಾಕ್ ಮಾಡುವುದಕ್ಕೆ ಫಿಂಗರ್‌ಪ್ರಿಂಟ್ ಸೆನ್ಸರ್, ಮುಖ ಗುರುತಿಸುವ ತಂತ್ರಜ್ಞಾನಗಳು ಚೆನ್ನಾಗಿ ಕೆಲಸ ಮಾಡುತ್ತವೆ.

ಪ್ರಮುಖ ವೈಶಿಷ್ಟ್ಯಗಳು

- 6.7 - ಇಂಚು FHD + ಡೈನಮಿಕ್ AMOLED ಡಿಸ್‌ಪ್ಲೇ
- 120 Hz ರಿಫ್ರೆಶ್ ರೇಟ್
- 1.9 - ಇಂಚು ಸೂಪರ್ AMOLED ಎರಡನೇ ಸ್ಕ್ರೀನ್ (260 × 512 pixels)
- ಕ್ವಾಲ್‌ಕಂ ಸ್ನ್ಯಾಪ್‌ಡ್ರ್ಯಾಗನ್ 8 + Gen 1
- 8GB RAM + 128GB, 256GB
- 12MP + 12MP ಅಲ್ಟ್ರಾವೈಡ್ ಕ್ಯಾಮೆರಾ + 10MP ಸೆಲ್ಫೀ ಕ್ಯಾಮೆರಾ
- 3,700mAh ಬ್ಯಾಟರಿ, 25W ವೇಗದ ಚಾರ್ಜಿಂಗ್ ಬೆಂಬಲ
- ಆಂಡ್ರಾಯ್ಡ್ 12 ಆಧಾರಿತ ಸ್ಯಾಮ್‌ಸಂಗ್ ಒನ್ UI 4.1.1

ಇದರಲ್ಲೊಂದು ಫ್ಲೆಕ್ಸ್ ಮೋಡ್ ಎಂಬ ವೈಶಿಷ್ಟ್ಯವಿದೆ. ಸೆಟ್ಟಿಂಗ್ಸ್‌ನ ಅಡ್ವಾನ್ಸ್‌ಡ್ ಫೀಚರ್ಸ್‌ನ ಲ್ಯಾಬ್ಸ್ ಎಂಬ ವಿಭಾಗಕ್ಕೆ ಹೋದರೆ, ಅಲ್ಲಿ ಫ್ಲೆಕ್ಸ್ ಮೋಡ್ ಪ್ಯಾನೆಲ್ ಅನ್ನು ಸಕ್ರಿಯಗೊಳಿಸುವ ಆಯ್ಕೆ ಗೋಚರಿಸುತ್ತದೆ. ಈ ಫೋನನ್ನು 90 ಡಿಗ್ರಿ ಮಡಚಿದಾಗ, ಮೇಲಿನ ಸ್ಕ್ರೀನ್‌ನಲ್ಲಿ ಆ್ಯಪ್ ಕಾಣಿಸುತ್ತದೆ ಮತ್ತು ಕೆಳಗಿನ ಸ್ಕ್ರೀನ್‌ನಲ್ಲಿ ಅದರ ನಿಯಂತ್ರಕಗಳ ಬಟನ್ ಗೋಚರಿಸುತ್ತದೆ. ಅದನ್ನು ಟಚ್ ಪ್ಯಾಡ್ ಆಗಿ ಬಳಸಬಹುದು.

ಒಟ್ಟಾರೆ ಹೇಗಿದೆ?

ಬ್ಯಾಟರಿ ಸಾಮರ್ಥ್ಯ ಕೊಂಚ ಕಡಿಮೆಯಾಯಿತು ಅನ್ನಿಸಿದರೂ, ಸ್ಟೈಲ್ ಇಷ್ಟಪಡುವವರಿಗೆ, ಹೊಸ ಸ್ಮಾರ್ಟ್ ಫೋನ್‌ನಲ್ಲಿ ಫ್ಲೆಕ್ಸ್ ಮೋಡ್‌ನಂತಹ ಅತ್ಯಾಧುನಿಕ ಸೌಕರ್ಯಗಳನ್ನು ಬಳಸುವ ತುಡಿತ ಇರುವವರಿಗೆ ಇದು ಇಷ್ಟವಾಗಬಹುದು. ಇದರ ಬೆಲೆ ₹89,000 (128GB | 8GB) ಹಾಗೂ ₹94,999 (256GB | 8GB).

ಸಾಗರದಲ್ಲಿ ಸಸ್ಯಗಳ ಸಂತಾನೋತ್ಪತ್ತಿ!



ಸಾಂದರ್ಭಿಕ ಚಿತ್ರ

ಅಮೃತೇಶ್ವರಿ ಬಿ.

ದುಂಬಿಗಳು ಹೂವಿನಿಂದ ಮಕರಂದವನ್ನು ಹೀರುವಾಗ ಅವುಗಳಿಗೆ ತಾಕಿದ ಪರಾಗಗಳು ಮತ್ತೊಂದು ಹೂವನ್ನು ಸೇರುವುದು, ಗಾಳಿ ಬೀಸುವಾಗ ಪರಾಗವನ್ನು ಹೊತ್ತೊಯ್ಯುವುದು, ಪ್ರಾಣಿ-ಪಕ್ಷಿಗಳು ಹಣ್ಣುಗಳನ್ನು ತಿಂದು ಬೀಜಗಳನ್ನು ಇನ್ನೆಲ್ಲೋ ಬಿಸಾಡುವುದು, ಇವೆಲ್ಲಾ ಭೂಮಿಯ ಮೇಲಿನ ಸಸ್ಯಗಳ ವಂಶಾಭಿವೃದ್ಧಿಗೆ ಪ್ರಕೃತಿ ನೀಡಿರುವ ಮಾರ್ಗಗಳು. ಆದರೆ ನೀರಿನಲ್ಲಿರುವ ಸಸ್ಯಗಳಲ್ಲಿ ಸಂತಾನಾಭಿವೃದ್ಧಿಯ ಬಗ್ಗೆ ಎಂದಾದರೂ ಯೋಚಿಸಿದ್ದೀರಾ? ನೀರು ಹರಿಯುವಾಗ ಪರಾಗವೂ ಅದರೊಡನೆ ಹರಿದು ಮತ್ತೊಂದು ಸಸ್ಯದ ಸಂತಾನೋತ್ಪತ್ತಿಯ ಅಂಗವನ್ನು ಸೇರುವುದು ಜಲಚರಸಸ್ಯಗಳು ಅಳವಡಿಸಿಕೊಂಡಿರುವ ಒಂದು ವಿಶಿಷ್ಟ ಹೊಂದಾಣಿಕೆ. ಆದರೆ ಇಲ್ಲಿಯೂ ಭೂಮಿಯ ಮೇಲೆ ನಡೆಯುವಂತೆ ಪ್ರಾಣಿಗಳು ಸಸ್ಯಗಳಿಗೆ ನೆರವಾಗಬಹುದು ಎಂದು ಈ ಮೊದಲು ಯಾರೂ ಊಹಿಸಿರಲಿಲ್ಲ. ಇದೋ ಸಾಗರಗಳಲಿ ಬೆಳೆಯುವ 'ತಲೇಷಿಯಾ ಟೆಸ್ಟುಡೀನಂ' ಎನ್ನುವ ಸಸ್ಯಗಳ ಪರಾಗವನ್ನು ಹೆಣ್ಣುಹೂವಿಗೆ ಸೇರಿಸಲು ಪ್ರಾಣಿಗಳು ಸಹಾಯ ಮಾಡುತ್ತಿವೆ ಎನ್ನುತ್ತಾರೆ, ಎಡಿನ್‌ಬರ್ಗ್‌ನ ಎವಲ್ಯುಷನರಿ ಬಯಾಲಜಿ ವಿಜ್ಞಾನಿಗಳಾದ ವ್ಯಾನ್ ಟಸೇನ್ ಬ್ರೂಕ್ ಮತ್ತು ತಂಡದವರು.

ಜೀವಿಗಳಲ್ಲಿ ಸಂತಾನೋತ್ಪತ್ತಿಯು ಒಂದು ಅದ್ಭುತ ಕ್ರಿಯೆ ಮತ್ತು ಅತಿಮುಖ್ಯ ಹಂತ. ಅದು ಪ್ರಾಣಿ, ಪಕ್ಷಿ, ಸಸ್ಯ, ಬ್ಯಾಕ್ಟೀರಿಯಾ – ಯಾವುದೇ ಜೀವಿಯಾಗಿರಬಹುದು. ಮತ್ತೊಂದು ಜೀವಿಯನ್ನು ಸೃಷ್ಟಿಸುವುದು ಒಂದು ಮಂತ್ರಶಕ್ತಿಯಂತೆಯೇ ಸರಿ. ಗರ್ಭದೊಳಗೆ ಭ್ರೂಣ ಹುಟ್ಟಿ ಜೀವವಾಗುವ ಆ ಕಲೆಯು ಪ್ರಕೃತಿ ಪ್ರತಿ ಹೆಣ್ಣುಜೀವಿಗೂ ನೀಡಿರುವ ವರ. ಈ ಅದ್ಭುತ ಕ್ರಿಯೆಯು ಪ್ರಾಣಿ ಹಾಗೂ ಸಸ್ಯಗಳಲ್ಲಿ ಭಿನ್ನವಾಗಿರುತ್ತದೆ. ಪ್ರಾಣಿಗಳಲ್ಲಿ ಲೈಂಗಿಕ ಸಂತಾನೋತ್ಪತ್ತಿ ಹಾಗೂ ಸಸ್ಯಗಳಲ್ಲಿ ಲೈಂಗಿಕ ಹಾಗೂ ಅಲೈಂಗಿಕ ರೀತಿಯ ಸಂತಾನೋತ್ಪತ್ತಿ ಕ್ರಿಯೆಗಳಿವೆ. ಸಸ್ಯಗಳಲ್ಲಿ ಹೂವುಗಳೇ ಸಂತಾನೋತ್ಪತ್ತಿಯ ಅಂಗ. ಒಂದು ಹೂವಿನಲ್ಲಿರುವ ಗಂಡುಪರಾಗವು ಮತ್ತೊಂದು ಹೂವಿನ ಶಲಾಕಾಗ್ರವನ್ನು ಸೇರುವುದು ಲೈಂಗಿಕ ಸಂತಾನೋತ್ಪತ್ತಿ. ಇದನ್ನೇ ಪರಾಗಸ್ಪರ್ಶ ಎನ್ನುವುದು. ಮೊಳೆಯುವುದು, ಬೀಜಕಗಳ ಉತ್ಪಾದನೆ ಮತ್ತು ಸಸ್ಯದ ಒಂದು ಭಾಗವೇ ಮತ್ತೊಂದು ಗಿಡವಾಗಿ ಬೆಳೆಯುವುದೇ ಅಲೈಂಗಿಕ ಸಂತಾನೋತ್ಪತ್ತಿ ಕ್ರಿಯೆ. ತಾವು ಮನಬಂದಂತೆ ಓಡಾಡಲು ಆಗದ ಸಸ್ಯಗಳಲ್ಲಿ ಸಂತಾನವು ಮುಂದುವರೆಯಬೇಕಾದರೆ ಗಾಳಿ, ನೀರು, ಕೀಟಗಳು ಅಥವಾ ಪ್ರಾಣಿಗಳು ಬೇಕೇ ಬೇಕು. ಇವೆಲ್ಲವೂ ತಾವು ಚಲಿಸುವಾಗ ಒಂದು ಹೂವಿನ ಪರಾಗವನ್ನು ಮತ್ತೊಂದು ಹೂವಿನ ಶಲಾಕಾಗ್ರಕ್ಕೆ ಸೇರಿಸಿ ಸಂತಾನೋತ್ಪತ್ತಿ ಕ್ರಿಯೆಗೆ ನೆರವಾಗುತ್ತವೆ.

ನೀರಿನಲ್ಲಿರುವ ತಲೇಷಿಯಾ ಟೆಸ್ಟುಡೀನಂ ಎನ್ನುವ ಕಡಲಹುಲ್ಲಿನ ಗಂಡುಹೂಗಳು ಸಂತಾನಾಭಿವೃದ್ಧಿಗಾಗಿ ರಾತ್ರಿಯ ವೇಳೆ ಗೋಂದನ್ನು ಸ್ರವಿಸಿ ಅದರಲ್ಲಿ ತಮ್ಮ ಪರಾಗವನ್ನು ಸೇರಿಸಿಬಿಡುತ್ತವಂತೆ. ನೀರಿನ ಹರಿತ ಕಡಿಮೆಯಿದ್ದಾಗ ಇಲ್ಲಿನ ಅಕಶೇರುಕ ಪ್ರಾಣಿಗಳು ಆಹಾರವನ್ನು ಅರಸುತ್ತಾ ಓಡಾಡುತ್ತಿರುವಾಗ ಈ ಹೂಗಳ ಬಳಿಗೆ ಬರುತ್ತವೆ. ಆಗ ಪರಾಗ ತುಂಬಿದ ಗೋಂದು ಪ್ರಾಣಿಗಳ ದೇಹಕ್ಕೆ ಅಂಟಿಕೊಳ್ಳುತ್ತವೆ. ಅವು ಹೀಗೆ ಮತ್ತೊಂದು ಹೆಣ್ಣುಹೂವನ್ನು ತಾಕಿದಾಗ ಗೋಂದಿನಲ್ಲಿರುವ ಪರಾಗಗಳು ಹೆಣ್ಣುಹೂವಿನ ಶಲಾಕಾಗ್ರವನ್ನು ಸೇರುತ್ತದೆ. ಆಗ ಪರಾಗ ನಳಿಕೆಗಳು ಬೆಳೆಯುತ್ತವೆ. ಪರಾಗ ನಳಿಕೆಗಳು ಬೆಳೆದಾಗ ಪರಾಗಸ್ಪರ್ಶ ಕ್ರಿಯೆ ಯಶಸ್ವಿಯಾಗಿದೆ ಎಂದರ್ಥ. ಹೀಗೆ ಟೆಸ್ಟುಡೀನಂ ಹೂಗಳಲ್ಲಿ ಜೈವಿಕ-ಅಜೈವಿಕ ಮಿಶ್ರಿತ ಪರಾಗಸ್ಪರ್ಶ ಕ್ರಿಯೆ ಜರುಗುತ್ತದೆ ಎನ್ನುತ್ತಾರೆ, ವಿಜ್ಞಾನಿಗಳು.

ಟೆಸ್ಟುಡೀನಂನ ಗಂಡುಹೂಗಳು ಸೂರ್ಯಾಸ್ತಮದ ನಂತರ ತೆರೆದುಕೊಂಡು ಒಂದೆರೆಡು ಗಂಟೆಗಳೊಳಗೆ ಪರಾಗವನ್ನು ಬಿಡುಗಡೆ ಮಾಡಿಬಿಡುತ್ತವೆ. ಹೆಣ್ಣುಹೂಗಳು ಹಗಲಿನಲ್ಲಿ ತೆರೆದುಕೊಂಡಿರುತ್ತವೆ. ರಾತ್ರಿ ವೇಳೆ ಗಂಡುಹೂಗಳ ಗೋಂದನ್ನು ಅಂಟಿಸಿಕೊಂಡಿರುವ ಕಠಿಣಚರ್ಮಿಗಳು, ಹುಳುಗಳು ಹಗಲಿನಲ್ಲಿ ಓಡಾಡುತ್ತಾ ಹೆಣ್ಣುಹೂಗಳನ್ನು ತಲುಪಿದರೆ ಅವುಗಳ ಸಂತಾನೋತ್ಪತ್ತಿ ಕ್ರಿಯೆ ಪೂರ್ಣಗೊಳ್ಳುತ್ತದೆ. ಈ ಪ್ರಾಣಿಗಳಾದರೂ ಗಂಡುಹೂಗಳು ಸ್ರವಿಸಿರುವ ಪರಾಗ ತುಂಬಿದ ಗೋಂದಿನಲ್ಲಿರುವ ಶರ್ಕರಪಿಷ್ಟಗಳು ಹಾಗೂ ಪ್ರೋಟೀನುಗಳಿಗೆ ಆಕರ್ಷಣೆಗೊಂಡು ಅದನ್ನು ತಿನ್ನಲು ಹೋಗುತ್ತವೆ. ಹೀಗೆ ತಮ್ಮ ಆಹಾರವನ್ನು ಅರಸಿಹೋದ ಪ್ರಾಣಿಗಳು ಸಸ್ಯಗಳಿಗೂ ಬೃಹತ್ತಾದ ಸಹಾಯವನ್ನೇ ಮಾಡುತ್ತಿವೆ.

ಯಾವುದೇ ಪ್ರಾಣಿಯ ಮುಖಾಂತರ ಪರಾಗಸ್ಪರ್ಶ ಕ್ರಿಯೆ ಜರುಗುತ್ತಿದೆ ಎನ್ನಬೇಕಾದರೆ ನಾಲ್ಕು ಅಂಶಗಳು ಮುಖ್ಯ. ಈ ಪ್ರಾಣಿಗಳು ಹೂವಿನ ಗಂಡು ಹಾಗೂ ಹೆಣ್ಣಿನ ಅಂಗಗಳೆರಡನ್ನೂ ಭೇಟಿಯಾಗಬೇಕು, ಗಂಡುಹೂವಿನಿಂದ ಪರಾಗವನ್ನು ಹೊತ್ತೊಯ್ಯಬೇಕು ಮತ್ತು ಹೆಣ್ಣುಹೂವಿನ ಶಲಾಕಾಗ್ರದಲ್ಲಿ ಸೇರಿಸಬೇಕು. ಹೀಗೆ ಸೇರಿದ ಪರಾಗ ಕುಡಿಯೊಡೆದು ಪರಾಗ ನಳಿಕೆ ಅಥವಾ ಬೀಜಗಳ ಸೃಷ್ಟಿಯಾಗಬೇಕು. ಆಗ ಅದರ ಸಂತಾನೋತ್ಪತ್ತಿ ಯಶಸ್ವಿಯಾಗುತ್ತದೆ. ವ್ಯಾನ್ ಟಸೇನ್ ಬ್ರೂಕ್ ಮತ್ತು ತಂಡದವರು ನೀರಿನಲ್ಲಿರುವ ಟೆಸ್ಟುಡೀನಂ ಹೂವಿನಲ್ಲಿ ಪ್ರಾಣಿಗಳ ಮೂಲಕವೇ ಪರಾಗಸ್ಪರ್ಶ ಕ್ರಿಯೆ ಆಗುತ್ತಿದೆಯೇ ಎನ್ನುವುದನ್ನು ಖಾತರಿಪಡಿಸಿಕೊಳ್ಳಲು ಈ ನಾಲ್ಕೂ ಅಂಶಗಳನ್ನು ಪರೀಕ್ಷಿಸಿದ್ದಾರೆ. ಇಲ್ಲಿ ಇವರಿಗಿದ್ದ ದೊಡ್ಡ ಸವಾಲೆಂದರೆ ನೀರಿನ ಮೂಲಕ ಪರಾಗಗಳ ವರ್ಗಾವಣೆ ಆಗದಂತೆ ನೋಡಿಕೊಳ್ಳುವುದು. ಆಗ ಮಾತ್ರವೇ ಈ ಕ್ರಿಯೆಯಲ್ಲಿ ಪ್ರಾಣಿಗಳೂ ತೊಡಗಿವೆ ಎನ್ನುವುದನ್ನು ಸಾಬೀತುಪಡಿಸಲು ಸಾಧ್ಯವಾಗುವುದು. ಇದನ್ನು ದೃಢಪಡಿಸಲು ವಿಜ್ಞಾನಿಗಳು ಟೆಸ್ಟುಡೀನಂ ಹೂಗಳು, ಕಠಿಣಚರ್ಮಿಗಳು ಮತ್ತು ಹುಳುಗಳನ್ನು ನೀರು ಹರಿಯದ ಅಕ್ವೇರಿಯಂನಲ್ಲಿ ಇರಿಸಿ ಪರೀಕ್ಷಿಸಿದ್ದಾರೆ!

ಮೊದಲ ಹಂತದಲ್ಲಿ ಕೀಟಗಳು ಹೂಗಳ ಬಳಿ ಚಲಿಸುವಾಗ ಅವುಗಳ ವರ್ತನೆ ಹಾಗೂ ಅವು ಹೇಗೆ ಪರಾಗವನ್ನು ಶಲಾಕಾಗ್ರಕ್ಕೆ ತಲುಪಿಸುತ್ತವೆ ಎನ್ನುವುದನ್ನು ಪರೀಕ್ಷಿಸಬೇಕು. ಅದಕ್ಕಾಗಿ ಈ ಕ್ರಿಯೆಯಲ್ಲಿ ತೊಡಗಿದೆ ಎಂದು ಊಹಿಸಲಾಗಿರುವ ಕೀಟಗಳನ್ನು ರಾತ್ರಿಹೊತ್ತು ಬೆಳಕಿನ ಬಲೆ ಬೀಸಿ ಸೆರೆಹಿಡಿದು ತಂದು ಅಕ್ವೇರಿಯಂನಲ್ಲಿ ಬಿಟ್ಟಿದ್ದಾರೆ. ಆಗಷ್ಟೇ ತೆರೆದುಕೊಂಡಿರುವ ಗಂಡು ಮತ್ತು ಹೆಣ್ಣುಹೂಗಳನ್ನು ತಂದು 2-3 ಸೆಂಟಿಮೀಟರು ದೂರದಲ್ಲಿ ಇರಿಸಲಾಗಿದೆ. ಒಂದು ಅಕ್ವೇರಿಯಂನಲ್ಲಿ ಲೀಟರಿಗೆ ಸುಮಾರು 500 ಕೀಟಗಳಂತೆಯೂ, ಮತ್ತೊಂದರಲ್ಲಿ ಕೇವಲ ಹೂಗಳನ್ನೂ ಇರಿಸಲಾಗಿದೆ.

ಎರಡನೇ ಹಂತದಲ್ಲಿ ಹೆಣ್ಣುಹೂಗಳು ಪರಾಗದ ಗೋಂದು ಅಂಟಿಕೊಂಡಿರುವ ಜೀವಿಗಳನ್ನು ಹೇಗೆ ಆಕರ್ಷಿಸುತ್ತವೆ ಎಂದು ನೋಡಿದ್ದಾರೆ. ಮೂರನೇ ಹಂತದಲ್ಲಿ ಪರಾಗಸ್ಪರ್ಶ ಕ್ರಿಯೆಯು ಹೇಗೆ ಯಶಸ್ವಿಯಾಗುತ್ತದೆ ಎಂದು ಪರೀಕ್ಷಿಸಿದ್ದಾರೆ. ಇದಕ್ಕೆ ಅಕ್ವೇರಿಯಂಗಿಂತ ತುಸು ಭಿನ್ನವಾದ ನೈಸರ್ಗಿಕ ವಾತಾವರಣದಂತೆಯೇ ಇರುವ ವ್ಯವಸ್ಥೆಯೊಂದರಲ್ಲಿ ಲೀಟರಿಗೆ ಸುಮಾರು 30ರಿಂದ 90 ಕೀಟಗಳನ್ನು ಇರಿಸಿದ್ದಾರೆ; ಕೀಟಗಳಿಲ್ಲದಿರುವ ವ್ಯವಸ್ಥೆಯೊಂದಿಗೂ ಹೋಲಿಸಿ ನೋಡಿದ್ದಾರೆ. ಪರಾಗಸ್ಪರ್ಶ ಕ್ರಿಯೆಯ ಸಫಲತೆಯಲ್ಲಿ ಗಂಡುಹೂವುಗಳ ಸಾಮೀಪ್ಯವೂ ಮುಖ್ಯವಾಗುತ್ತದೆಯೇ ಎಂದು ತಿಳಿಯಲು ಹೂಗಳನ್ನು 15ರಿಂದ 150 ಸೆಂಟಿಮೀಟರು ದೂರದಲ್ಲಿ ಇಡಲಾಗಿತ್ತು. ಪರಾಗಸ್ಪರ್ಶ ಆದ ನಂತರ ಹೆಣ್ಣುಹೂಗಳನ್ನು ಪ್ರತ್ಯೇಕವಾಗಿರಿಸಿ ಪರಾಗ ನಳಿಕೆಗಳ ಬೆಳವಣಿಗೆಯನ್ನು ಗಮನಿಸಿದ್ದಾರೆ. ಮುಂದೆ ಟೆಸ್ಟುಡೀನಂ ಸಸ್ಯಗಳು ಯಶಸ್ವಿಯಾಗಿ ಬೆಳೆದುವಂತೆ.

ಹೀಗೆ ವ್ಯಾನ್ ಟಸೇನ್ ಬ್ರೂಕ್ ಮತ್ತು ತಂಡದವರು ತಲೇಷಿಯಾ ಟೆಸ್ಟುಡೀನಂ ಸಸ್ಯದ ಮೂಲಕ ನೀರಿನಲ್ಲಿರುವ ಜಲಚರ ಪ್ರಾಣಿಗಳು ಮತ್ತು ಕೀಟಗಳು ಅಲ್ಲಿನ ಕಡಲಹುಲ್ಲಿನ ಸಂತತಿಯನ್ನು ಮುಂದುವರೆಸಲು ಸಹಾಯ ಮಾಡುತ್ತವೆ ಎನ್ನುವುದನ್ನು ಖಚಿತಪಡಿಸಿದ್ದಾರೆ. ಅಂತೂ ಸಾಗರಗಳಲ್ಲಿರುವ ಸಸ್ಯಗಳ ಸಂತಾನೋತ್ಪತ್ತಿ ಕೇವಲ ನೀರಿನ ಹರಿತದಿಂದಷ್ಟೇ ಆಗುತ್ತದೆ ಎಂದುಕೊಂಡಿದ್ದ ನಮ್ಮ ನಂಬಿಕೆ ಸುಳ್ಳಾಯಿತು!

ಪ್ರಮುಖ 34 ಔಷಧಗಳ ದರ ಇಳಿಕೆ ಸಾಧ್ಯತೆ

ನವದೆಹಲಿ (ಪಿಟಿಐ): ಕ್ಯಾನ್ಸರ್ ಚಿಕಿತ್ಸೆಗೆ ಬಳಸುವ ಔಷಧ, ಸೋಂಕು ನಿರೋಧಕ ಔಷಧ ಒಳಗೊಂಡು 34 ಔಷಧಗಳನ್ನು ರಾಷ್ಟ್ರೀಯ ಅಗತ್ಯ ಔಷಧಗಳ ಪಟ್ಟಿಗೆ ಸೇರಿಸಿ ಗೊಳಿಸಿದ್ದು, ಇದರಿಂದಾಗಿ ಈ ಔಷಧಗಳ ದರ ಇಳಿಕೆಯಾಗುವ ಸಂಭವವಿದೆ.

ಈ ಪರಿಷ್ಕರಣೆಯೊಂದಿಗೆ ಅಗತ್ಯ ಔಷಧಗಳ ರಾಷ್ಟ್ರೀಯ ಪಟ್ಟಿಯಲ್ಲಿರುವ ಔಷಧಗಳ ಸಂಖ್ಯೆ 384ಕ್ಕೆ ಏರಿದೆ. ಇನ್ಸುಲಿನ್ ಗ್ಲಾರ್ಜಿನ್, ರ್ಯಾನಿಟಿಡೈನ್, ಸುಕ್ರಲ್‌ಫೇಟ್, ವೈಟ್ ಪೆಟ್ರೋಲಾಟಂ, ಅಟೆನೋಲೋಲ್ ಸೇರಿದಂತೆ 26 ಔಷಧಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ.

ಔಷಧಗಳ ದರ ಮತ್ತು ಪರ್ಯಾಯವಾಗಿ ಇನ್ನೂ ಉತ್ತಮ ಔಷಧಗಳ ಲಭ್ಯವಿದೆ ಎಂಬ ಮಾನದಂಡ ಆಧಾರದಲ್ಲಿ ಇವುಗಳನ್ನು ಕೈಬಿಡಲಾಗಿದೆ ಎಂದು ಕೇಂದ್ರ ಸರ್ಕಾರವು ತಿಳಿಸಿದೆ.

ಪರಿಷ್ಕೃತ ಪಟ್ಟಿ ಬಿಡುಗಡೆ ಕುರಿತು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ಮಂಗಳವಾರ ಟ್ವೀಟ್ ಮಾಡಿದ್ದಾರೆ. ಸದ್ಯ 27 ವರ್ಗದಲ್ಲಿ ಒಟ್ಟು 384 ಔಷಧಗಳು ಈ ಪಟ್ಟಿಯಲ್ಲಿವೆ ಎಂದಿದ್ದಾರೆ.

'ಹಲವು ರೋಗ ನಿರೋಧಕ ಔಷಧಗಳು, ಲಸಿಕೆಗಳು, ಕ್ಯಾನ್ಸರ್ ಚಿಕಿತ್ಸೆಗೆ ಬಳಸುವ ಔಷಧಗಳು ಇವೆ. ಇವು, ಇನ್ನಷ್ಟು ಕೈಗೆಟುಕುವ ದರಕ್ಕೆ ಲಭ್ಯವಾಗಲಿದ್ದು, ರೋಗಿಗಳ ಮೇಲಿನ ಆರ್ಥಿಕ ಹೊರೆ ಇಳಿಯಲಿದೆ' ಎಂದು ತಿಳಿಸಿದ್ದಾರೆ.

'ಎಲ್ಲರಿಗೂ ಔಷಧ, ಸರಿಯಾದ ದರದ ಔಷಧ' ಚಿಂತನೆಯಡಿ ರೋಗಿಗಳಿಗೆ ಕೈಗೆಟುಕುವ ದರದಲ್ಲಿ ಔಷಧಗಳನ್ನು ಒದಗಿಸಲು ನಮ್ಮ ಸಚಿವಾಲಯವು ವಿವಿಧ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಸಚಿವರು ತಿಳಿಸಿದ್ದಾರೆ.

ಮುರುಘಾಶ್ರೀ ಜಾಮೀನು ಅರ್ಜಿ ವಿಚಾರಣೆ ಇಂದು

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ಜಾಮೀನು ಅರ್ಜಿ ಹಾಗೂ ಇತರ ಮೂವರು ಆರೋಪಿಗಳ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆಯನ್ನು ಜಿಲ್ಲಾ ನ್ಯಾಯಾಲಯ ಸೆ.14ಕ್ಕೆ ಮುಂದೂಡಿದೆ. ಪ್ರಕರಣದ ಮೂರನೇ ಆರೋಪಿಯಾದ 17 ವರ್ಷದ ಬಾಲಕನ ನಿರೀಕ್ಷಣಾ ಜಾಮೀನು ಅರ್ಜಿಗೆ ಸಂಬಂಧಿಸಿದ ಆದೇಶವನ್ನು ಸೆ.15ಕ್ಕೆ ಕಾಯ್ದಿರಿಸಲಾಗಿದೆ.

ಬೆಳಗಾವಿಯಲ್ಲಿ ಮುಂದುವರಿದ ಪ್ರವಾಹ • 32 ಕಿರುಸೇತುವೆಗಳು ಮುಳುಗಡೆ

ಮಳೆ ಅವಘಡ: ನಾಲ್ವರು ಯುವಕರ ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ/ಬಾಗಲಕೋಟೆ: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆ ಅಬ್ಬರ ತಗ್ಗಿದೆ. ಆದರೆ, ಮಳೆ ಸಂಬಂಧಿತ ಅವಘಡಗಳಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಚಳ್ಳಕೆರೆ ತಾಲ್ಲೂಕಿನಲ್ಲಿ ಇಬ್ಬರು, ಮುಧೋಳ ತಾಲ್ಲೂಕಿನಲ್ಲಿ ಒಬ್ಬರು ನೀರಿನ ಸೆಳೆತಕ್ಕೆ ಸಿಕ್ಕಿ ಮೃತಪಟ್ಟರು. ಬೆಳಗಾವಿಯಲ್ಲಿ ಮರ ಉರುಳಿ ಯುವಕನೊಬ್ಬ ಮೃತಪಟ್ಟಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ ಮಳೆ ತಗ್ಗಿದೆ. ಸೋಮವಾರ ಸುರಿದ ಮಳೆ ಕಾರಣದಿಂದ ಕೃಷ್ಣಾ, ದೂಧಗಂಗಾ, ವೇದಗಂಗಾ, ಪಂಚಗಂಗಾ, ಹಿರಣ್ಯಕೇಶಿ, ಮಲಪ್ರಭಾ, ಘಟಪ್ರಭಾ, ಮಾರ್ಕಂಡೇಯ ನದಿಗಳ ನೀರಿನ ಮಟ್ಟ ಯಥಾಸ್ಥಿತಿಯಲ್ಲಿದೆ.

ಜಿಲ್ಲೆಯಲ್ಲಿ 32 ಕಿರು ಸೇತುವೆಗಳು ಮುಳುಗಡೆ ಸ್ಥಿತಿಯಲ್ಲೇ ಇವೆ. ಗೋಕಾಕ ನಗರದಲ್ಲಿ ನೀರಿನಮಟ್ಟ ಕುಗ್ಗಿದ್ದು, ಸಂಚಾರ ಸಹಜ ಸ್ಥಿತಿಗೆ ಮರಳಿದೆ. ಬೆಳಗಾವಿ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಬೃಹತ್ ಮರ ಉರುಳಿ, ಗೋಕಾಕ ತಾಲ್ಲೂಕು ಸಿದ್ದನಹಳ್ಳಿಯ ರಾಜೇಶ ಸಲಗಾರ (25) ಮೃತಪಟ್ಟರು.

ಬಾಗಲಕೋಟೆ ವರದಿ: ಪಂಪ್‌ಸೆಟ್ ಬಿಚ್ಚಿಕೊಂಡು ಬರಲು ಹೋಗಿದ್ದ ಮುಧೋಳ ತಾಲ್ಲೂಕಿನ ಒಂಟಗೋಡಿ ಗ್ರಾಮದ ಯುವಕ ವಿಜಯ ಬಿರಾದಾರ ಪಾಟೀಲ (19) ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಮುಧೋಳ, ಮಿರ್ಜಿ, ಚನ್ನಾಳ, ಜಿರಗಾಳ, ಜಾಲಿಬೇರಿ, ಅಲಗುಂಡಿ ಬಿಕೆ, ತಿಮ್ಮಾಪುರ, ಕಸಬಾ ಜಂಬಗಿ ಬ್ಯಾರೇಜ್‌ಗಳು, ಢವಳೇಶ್ವರ ಸೇತುವೆ, ಬಾದಾಮಿ ತಾಲ್ಲೂಕಿನ ಗೋವನಕೊಪ್ಪ ಗ್ರಾಮ ಸಂಪರ್ಕಿಸುವ ಹಳೆ ಸೇತುವೆ ಮುಳುಗಡೆಯಾಗಿದೆ.

ಕೊರ್ಲಕುಂಟೆ: ಇಬ್ಬರು ಸಾವು

ಕೊರ್ಲಕುಂಟೆ ವರದಿ (ಚಿತ್ರದುರ್ಗ): ಚಳ್ಳಕೆರೆ ತಾಲ್ಲೂಕಿನ ಕೊರ್ಲಕುಂಟೆ ಸಮೀಪ ತುಂಬಿ ಹರಿಯುತ್ತಿದ್ದ ಖಾನಿ ಹಳ್ಳ ದಾಟುವಾಗ ಇಬ್ಬರು ಬೈಕ್ ಸವಾರರು ಸೆಳವಿಗೆ ಸಿಲುಕಿ ಸೋಮವಾರ ರಾತ್ರಿ ಮೃತಪಟ್ಟರು. ಗ್ರಾಮದ ಎಚ್.ಕುಮಾರ (32), ಪಿ.ಓಬಳೇಶ್ (32) ಮೃತರು. ಇನ್ನೊಬ್ಬ ಯುವಕ ಮಂಜುನಾಥ್ ಈಜಿ ದಡ ಸೇರಿದ್ದು, ಗ್ರಾಮಕ್ಕೆ ತೆರಳಿ ಮಾಹಿತಿ ನೀಡಿದ್ದಾರೆ. ಮೂವರೂ ಕೂಲಿ ಕೆಲಸ ಮುಗಿಸಿ ರಾತ್ರಿ ಮನೆಗೆ ಮರಳುವಾಗ ಅವಘಡ ಸಂಭವಿಸಿದೆ.

ಅಗ್ನಿಶಾಮಕ ದಳದ ಸಿಬ್ಬಂದಿ, ಚಿತ್ರದುರ್ಗದ ಜ್ಯೋತಿರಾಜ್ ನೇತೃತ್ವದ ಯುವಕರ ತಂಡ ಶೋಧ ಕಾರ್ಯ ನಡೆಸಿದ್ದು, ಶವಗಳು ಪತ್ತೆಯಾಗಿವೆ. ಹಳ್ಳ ತುಂಬಿ ಹರಿಯುತ್ತಿರುವ ಪರಿಣಾಮ ಕೆಲವು ದಿನಗಳಿಂದ ರಸ್ತೆ ಸಂಪರ್ಕ ಕಡಿತಗೊಂಡಿದ್ದರೂ ಯುವಕರು ದಾಟಲು ಹೋಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಮಸಗುಪ್ಪಿ ಗ್ರಾಮದ ಮಹಾಲಕ್ಷ್ಮಿ ದೇವಸ್ಥಾನ ಘಟಪ್ರಭಾ ನದಿ ಪ್ರವಾಹದಿಂದ ಮಂಗಳವಾರ ಜಲಾವೃತವಾಗಿರುವುದು

ಮೂರು ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಸೆ.14ರಂದು ಭಾರಿ ಮಳೆ ಸುರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ. ಸೆ.15ರ ಬಳಿಕ ಮಳೆಯ ಅಬ್ಬರ ತಗ್ಗಲಿದೆ ಎಂದಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆಆರ್‌ಎಸ್*	124.80	124.64	30,108	30,491
ಹಾರಂಗಿ	2,859	2,857.92	2,405	1,500
ಕಬಿನಿ	2,284	2,282.91	14,229	15,550
ಹೇಮಾವತಿ	2,922	2,921.80	14,400	15,460
ಲಿಂಗನಮಕ್ಕಿ	1,819	1,815	23,625	3,475
ಸೂಪಾ (ಮೀ)	564	552.25	24,391	-
ವಾಣಿ	594	589	2,629	-
ತುಂಗಭದ್ರಾ	1,633	1,632.57	41,419	48,024
ಮಲಪ್ರಭಾ	2,079.50	2,079.50	13,294	13,294
ಘಟಪ್ರಭಾ	2,175	2,174.633	26,433	29,982
ಭದ್ರಾ	186	185.4	12,284	12,284
ಆಲಮಟ್ಟಿ (ಮೀ)	519.6	519.54	1,05,694	1,25,000
ನಾರಾಯಣಪುರ (ಮೀ)	492.25	491.49	1,35,000	1,48,000

* ನೆಲಮಟ್ಟದಿಂದ

'ಸರ್ವಾಧಿಕಾರಕ್ಕಿಂತ ವಂಶಾಡಳಿತ ಮೇಲು'

ಭಾರತವನ್ನು ಒಗ್ಗೂಡಿಸಿ ಯಾತ್ರೆಗೆ ಶಿವಸೇನಾ ಶ್ಲಾಘನೆ • 100 ಕಿ.ಮೀ ಕ್ರಮಿಸಿದ ಯಾತ್ರೆ

ಮುಂಬೈ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಮ್ಮಿಕೊಂಡಿರುವ 'ಭಾರತವನ್ನು ಒಗ್ಗೂಡಿಸಿ' ಪಾದಯಾತ್ರೆಯನ್ನು ಶ್ಲಾಘಿಸಿರುವ ಶಿವಸೇನಾ, ದೇಶದಲ್ಲಿರುವ ನಿರಂಕುಶ ಆಡಳಿತಕ್ಕಿಂತ ವಂಶಾಡಳಿತವೇ ಮೇಲು ಎಂದು ಮಂಗಳವಾರ ಅಭಿಪ್ರಾಯಪಟ್ಟಿದೆ.

ಧರಿಸುವ ಬಟ್ಟೆ ವಿಚಾರದಲ್ಲಿ ರಾಹುಲ್ ಅವರನ್ನು ಗುರಿಯಾಗಿಸಿ ದಾಳಿ ನಡೆಸುವ ಬದಲು, ಅವರು ಎತ್ತಿರುವ ಪ್ರಶ್ನೆಗಳಿಗೆ ಬಿಜೆಪಿ ಉತ್ತರಿಸಬೇಕು ಎಂದು ಶಿವಸೇನಾ ಮುಖವಾಣಿ 'ಸಾಮ್ನಾ' ಪತ್ರಿಕೆ ಸಲಹೆ ನೀಡಿದೆ. ರಾಹುಲ್ ಮುಂದಿಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸುವ ಬದಲು, ಅವರು ಯಾವ ಬಟ್ಟೆ ಧರಿಸುತ್ತಾರೆ, ಏನು ತಿನ್ನುತ್ತಾರೆ ಎಂಬ ವಿಚಾರಗಳನ್ನು ಸೃಷ್ಟಿಸಿ ಅನಗತ್ಯವಾಗಿ ದಾಳಿ ಮಾಡುತ್ತಿದೆ' ಎಂದು ಪತ್ರಿಕೆ ಆರೋಪಿಸಿದೆ. ರಾಹುಲ್ ಅವರು ದುಬಾರಿ ಟೀ–ಶರ್ಟ್ ಧರಿಸಿದ್ದಾರೆ ಎಂದು ಬಿಜೆಪಿ ಇತ್ತೀಚೆಗೆ ಆರೋಪಿಸಿತ್ತು.

'ರಾಹುಲ್ ಎತ್ತಿರುವ ಎಲ್ಲ ಪ್ರಶ್ನೆಗಳೂ ಮೌಲ್ಯಯುತವಾಗಿದ್ದು, ಬಿಜೆಪಿಯ ಬಾಯಿ ಮುಚ್ಚಿಸಿವೆ. ನಿರುದ್ಯೋಗ, ರೈತರು, ಕಾರ್ಮಿಕರು ಹಾಗೂ ಸಣ್ಣ, ಮಧ್ಯಮ ಉದ್ಯಮಗಳ ಸಮಸ್ಯೆಗಳನ್ನು ಯಾತ್ರೆ ಪ್ರಸ್ತಾಪಿಸಿದೆ' ಎಂದು ಸಾಮ್ನಾ ಉಲ್ಲೇಖಿಸಿದೆ.

'ಪಾದಯಾತ್ರೆಯು ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದು, ಬಿಜೆಪಿಗೆ ಹೊಟ್ಟೆಯುರಿ ಬರುವಂತೆ ಮಾಡಿದೆ. ನಿರಂಕುಶಾಧಿಕಾರವು ದೇಶದಲ್ಲಿ ವಿನಾಶವನ್ನು ತರಲಿದ್ದು, ವಂಶಾಡಳಿತವೇ ಸದ್ಯಕ್ಕೆ ಸೂಕ್ತ. ರಾಹುಲ್ ನೇತೃತ್ವದ ಯಾತ್ರೆಯು ದೇಶದಲ್ಲಿ ಹರಡಿರುವ ದ್ವೇಷದ ವಾತಾವರಣವನ್ನು ಸರಿಪಡಿಸಲಿದೆ' ಎಂದು ಪತ್ರಿಕೆ ಅಭಿಪ್ರಾಯಪಟ್ಟಿದೆ.

ಪಾದಯಾತ್ರೆಯಲ್ಲಿ ಮಹಿಳೆಯೊಬ್ಬರು ರಾಹುಲ್ ಗಾಂಧಿ ಅವರೊಂದಿಗೆ ಮಂಗಳವಾರ ಹೆಜ್ಜೆ ಹಾಕಿದರು–ಪಿಟಿಐ ಚಿತ್ರ

ಮೋದಿ ಅವರು ದಿನಕ್ಕೆ 3 ಬಾರಿ ಬಟ್ಟೆ ಬದಲಾಯಿಸುತ್ತಾರೆ. ಅವರು ₹10 ಲಕ್ಷ ಮೌಲ್ಯದ ಸೂಟ್ ಧರಿಸುತ್ತಾರೆ. ಆದರೆ ರಾಹುಲ್ ಟೀ–ಶರ್ಟ್ ಬಗ್ಗೆ ಏಕೆ ಇಷ್ಟು ಚರ್ಚೆ?
ಕಮಲನಾಥ್, ಕಾಂಗ್ರೆಸ್ ನಾಯಕ

ಕೇರಳ ಸಿ.ಎಂ ವಿರುದ್ಧ ಕಾಂಗ್ರೆಸ್ ನಾಯಕರು ಏಕೆ ನಿಂದನೆ ಮಾಡುತ್ತಿದ್ದಾರೆ. ಇಲ್ಲಿ 18 ದಿನಗಳ ಯಾತ್ರೆ ಮಾಡಿ ಯಾರನ್ನು ಒಗ್ಗೂಡಿಸಲು ಹೊರಟಿದ್ದೀರಿ
ಥಾಮಸ್ ಐಸಾಕ್, ಸಿಪಿಎಂ ನಾಯಕ

ಯಾತ್ರೆ 100 ಕಿಲೋಮೀಟರ್ ಮೈಲಿಗಲ್ಲು ಕ್ರಮಿಸಿದೆ. ಇದು ಬಿಜೆಪಿಯಲ್ಲಿ ಗಲಿಬಿಲಿ ಮೂಡಿಸಿದೆ. ಪ್ರತಿಯೊಂದು ಹೆಜ್ಜೆಯೂ ನಮ್ಮ ಸಂಕಲ್ಪವನ್ನು ನವೀಕರಿಸುತ್ತದೆ
ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಯಾತ್ರೆಯಲ್ಲಿ ಮಕ್ಕಳ ಬಳಕೆ: ತನಿಖೆಗೆ ಸೂಚನೆ (ನವದೆಹಲಿ ವರದಿ): ಭಾರತವನ್ನು ಒಗ್ಗೂಡಿಸಿ ಯಾತ್ರೆಯಲ್ಲಿ ಮಕ್ಕಳನ್ನು ರಾಜಕೀಯ ದಾಳವಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬುದಾಗಿ ಕಾಂಗ್ರೆಸ್ ಪಕ್ಷ ಹಾಗೂ ರಾಹುಲ್ ಗಾಂಧಿ ಅವರ ವಿರುದ್ಧ ಸಲ್ಲಿಕೆಯಾಗಿರುವ ದೂರಿನ ಬಗ್ಗೆ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸುವಂತೆ ಚುನಾವಣಾ ಆಯೋಗಕ್ಕೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಸೂಚಿಸಿದೆ.

ಶಾಸಕರಿಗೆ ₹25 ಕೋಟಿ ಆಮಿಷ: ಎಎಪಿ

ಚಂಡೀಗಡ (ಪಿಟಿಐ): 'ಬಿಜೆಪಿಯು ಪಂಜಾಬ್ ಸರ್ಕಾರ ಉರುಳಿಸಲು ನಮ್ಮ ಪಕ್ಷದ ಹತ್ತು ಮಂದಿ ಶಾಸಕರಿಗೆ ತಲಾ ₹20 ಕೋಟಿಯಿಂದ ₹25 ಕೋಟಿ ಹಣದ ಆಮಿಷ ಒಡ್ಡಿದೆ' ಎಂದು ಆಡಳಿತಾರೂಢ ಆಮ್ ಆದ್ಮಿ ಪಕ್ಷ (ಎಎಪಿ) ಆರೋಪಿಸಿದೆ.

'ಬಿಜೆಪಿಯು ರಾಜ್ಯದಲ್ಲಿ 'ಆಪರೇಷನ್ ಕಮಲ' ನಡೆಸಲು ಮುಂದಾಗಿದೆ. ಆ ಪಕ್ಷದ ನಾಯಕರು ನಮ್ಮ ಶಾಸಕರನ್ನು ಸಂಪರ್ಕಿಸಿ ಹಣದ ಆಮಿಷ ಒಡ್ಡಿದ್ದಾರೆ. ಸಚಿವ ಸ್ಥಾನದ ಬೇಡಿಕೆಯನ್ನೂ ಮುಂದಿಟ್ಟಿದ್ದಾರೆ' ಎಂದು ಹಣಕಾಸು ಸಚಿವ ಹರ್ಪಾಲ್ ಸಿಂಗ್ ಚೀಮಾ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ದೂರಿದ್ದಾರೆ.

'ಬಿಜೆಪಿಯ ಕೇಂದ್ರ ನಾಯಕರ ಸೂಚನೆ ಮೇರೆಗೆ ಆ ಪಕ್ಷದ ಕೆಲ ಮುಖಂಡರು ದೂರವಾಣಿ ಮೂಲಕ ಶಾಸಕರನ್ನು ಸಂಪರ್ಕಿಸಿದ್ದಾರೆ. ಪಕ್ಷದ ಹಿರಿಯ ನಾಯಕರೊಂದಿಗಿನ ಮಾತುಕತೆಗಾಗಿ ನವದೆಹಲಿಯಲ್ಲಿ ಸಭೆ ನಿಗದಿಪಡಿಸುವುದಾಗಿಯೂ ಹೇಳಿದ್ದಾರೆ. ತಮ್ಮ ಜೊತೆ ಇನ್ನಷ್ಟು ಶಾಸಕರನ್ನು ಕರೆದುಕೊಂಡು ಹೋದರೆ ಇನ್ನೂ ಹೆಚ್ಚಿನ ಹಣ ಒದಗಿಸುವ ಭರವಸೆಯನ್ನೂ ಶಾಸಕರಿಗೆ ನೀಡಿದ್ದಾರೆ' ಎಂದು ಆರೋಪಿಸಿದ್ದಾರೆ.

'ದೆಹಲಿಯಲ್ಲಿ ನಮ್ಮ ಪಕ್ಷದ ಶಾಸಕರನ್ನು ಸೆಳೆದುಕೊಂಡು ಅಲ್ಲಿನ ಸರ್ಕಾರವನ್ನು ಬೀಳಿಸಲು ಬಿಜೆಪಿ ಮುಂದಾಗಿತ್ತು. ಆ ಪ್ರಯತ್ನದಲ್ಲಿ ಪಕ್ಷಕ್ಕೆ ಸಫಲತೆ ಸಿಗಲಿಲ್ಲ. ಹೀಗಾಗಿ ಈಗ ಪಂಜಾಬ್‌ನಲ್ಲಿ ಶಾಸಕರ ಖರೀದಿಗೆ ಮುಂದಾಗಿದೆ. ಒಂದು ವಾರದಿಂದ ನಿರಂತರವಾಗಿ ಈ ನಿಟ್ಟಿನಲ್ಲಿ ಪ್ರಯತ್ನ ಮುಂದುವರಿಸಿದೆ' ಎಂದಿದ್ದಾರೆ.

'ಬಿಜೆಪಿಯ ಪಂಜಾಬ್ ಮತ್ತು ದೆಹಲಿ ನಾಯಕರು ನಮ್ಮ ಪಕ್ಷದ ಶಾಸಕರನ್ನು ಸಂಪರ್ಕಿಸಿದ್ದಾರೆ. ಸೂಕ್ತ ಸಮಯದಲ್ಲಿ ಈ ಕುರಿತ ದಾಖಲೆಗಳನ್ನು ಬಹಿರಂಗಪಡಿಸುತ್ತೇವೆ' ಎಂದಿದ್ದಾರೆ.

ಕಾನ್‌ಸ್ಟೆಬಲ್: ತೃತೀಯ ಲಿಂಗಿಗಳಿಗೆ 79 ಹುದ್ದೆ ಮೀಸಲು

ಬೆಂಗಳೂರು: ರಾಜ್ಯದ ಸಶಸ್ತ್ರ ಮೀಸಲು ಪಡೆಗಳಲ್ಲಿ (ಸಿಎಆರ್/ ಡಿಎಆರ್) ಖಾಲಿ ಇರುವ 3,484 ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಕ್ಕೆ ಅಧಿಸೂಚನೆ ಹೊರಡಿಸಿದ್ದು, ಇದೇ ಮೊದಲ ಬಾರಿಗೆ 79 ಹುದ್ದೆಗಳನ್ನು ತೃತೀಯ ಲಿಂಗಿ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ.

ಈ ಸಂಬಂಧ ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಈಗಾಗಲೇ ಅಧಿಸೂಚನೆ ಹೊರಡಿಸಿದೆ. ತೃತೀಯ ಲಿಂಗಿ ವ್ಯಕ್ತಿಗಳ (ರಕ್ಷಣಾ ಹಕ್ಕು) ನಿಯಮ–2020ರ ಅನ್ವಯ ಇದೀಗ ರಾಜ್ಯ ಪೊಲೀಸ್ ನೇಮಕಾತಿಯಲ್ಲೂ ಮೀಸಲಾತಿ ನೀಡಲಾಗಿದೆ.

'ಕಾನ್‌ಸ್ಟೆಬಲ್ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರಾದ ತೃತೀಯ ಲಿಂಗಿ ಅಭ್ಯರ್ಥಿಗಳು, ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಂದ ಪ್ರಮಾಣಪತ್ರ ಪಡೆಯುವುದು ಕಡ್ಡಾಯ. ಪ್ರಮಾಣಪತ್ರ ಇಲ್ಲದಿದ್ದರೆ, ಮೀಸಲಾತಿ ಅನ್ವಯ ಆಗುವುದಿಲ್ಲ' ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಅ. 30 ಕೊನೆ ದಿನ: ರಾಜ್ಯ ಹಾಗೂ ಕಲ್ಯಾಣ ಕರ್ನಾಟಕದ ಕಾನ್‌ಸ್ಟೆಬಲ್ ಹುದ್ದೆಗಳಿಗಾಗಿ ಸೆಪ್ಟೆಂಬರ್ 19ರಿಂದ ಅರ್ಜಿ ಸಲ್ಲಿಕೆ ಆರಂಭವಾಗಲಿದ್ದು, ಅಕ್ಟೋಬರ್ 30 ಅರ್ಜಿ ಸಲ್ಲಿಸಲು ಕೊನೆ ದಿನವಾಗಿದೆ. ಮಾಹಿತಿಗೆ https://ksp-recruitment.in ಸಂಪರ್ಕಿಸಿ.

ಲಂಚದ ಪಟ್ಟಿ ಕೊಟ್ಟ ಕಾಂಗ್ರೆಸ್

ಒಂದನೇ ಪುಟದಿಂದ...

ಈ ವೇಳೆ ಮಾತನಾಡಿದ ಶಿವಕುಮಾರ್, 'ಈ ಸರ್ಕಾರದ ಭ್ರಷ್ಟಾಚಾರದಿಂದ ರಾಜ್ಯದ ಮಾನ ಹರಾಜಾಗುತ್ತಿದೆ. ಗುತ್ತಿಗೆದಾರರಿಂದ ಶೇಕಡ 40ರಷ್ಟು ಕಮಿಷನ್ ಪಡೆದರೆ, ಮಠಗಳಿಗೆ ಅನುದಾನ ನೀಡುವುದಕ್ಕೂ ಶೇ 30ರಷ್ಟು ಕಮಿಷನ್ ಪಡೆಯುತ್ತಿರುವ ಆರೋಪವಿದೆ. ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಒಕ್ಕೂಟವೂ ಭ್ರಷ್ಟಾಚಾರದ ಆರೋಪ ಮಾಡಿದೆ. ಆದರೆ, ಎಲ್ಲವನ್ನೂ ಮುಚ್ಚಿಹಾಕಲಾಗುತ್ತಿದೆ' ಎಂದರು.

'ಕಾಂಗ್ರೆಸ್ ಸರ್ಕಾರದ ಅವಧಿಯ ಅಕ್ರಮಗಳ ತನಿಖೆ ನಡೆಸುತ್ತೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಬಿಜೆಪಿ ಮುಖಂಡರು ಧಮಕಿ ಹಾಕುತ್ತಾರೆ. ಅಧಿಕಾರ ಅವರ ಬಳಿಯೇ ಇದೆ. ಯಾವ ತನಿಖೆ ಬೇಕಿದ್ದರೂ ನಡೆಸಲಿ. ಬಿಜೆಪಿ ಸರ್ಕಾರದ ಲಂಚದ ಪಟ್ಟಿಯನ್ನೂ ನೀಡುತ್ತೇವೆ. ಆ ಬಗ್ಗೆಯೂ ತನಿಖೆ ನಡೆಯಲಿ' ಎಂದು ಆಗ್ರಹಿಸಿದರು.

'40 ಪರ್ಸೆಂಟ್ ಸರ್ಕಾರ': 'ಈಗ ರಾಜ್ಯದಲ್ಲಿರುವುದು 40 ಪರ್ಸೆಂಟ್ ಸರ್ಕಾರ. ನಾನು ತಿನ್ನುವುದಿಲ್ಲ, ತಿನ್ನಲೂ ಬಿಡುವುದಿಲ್ಲ ಎಂಬ ಘೋಷಣೆ ಮಾಡಿದ ಪ್ರಧಾನಿ ನರೇಂದ್ರ ಮೋದಿ ಮೌನವಾಗಿದ್ದಾರೆ. ಈ ಸರ್ಕಾರದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಅದೇ ವಿಚಾರ ಮುಂದಿಟ್ಟುಕೊಂಡು ಜನರ ಬಳಿ ತೆರಳುತ್ತೇವೆ' ಎಂದು ಸಿದ್ದರಾಮಯ್ಯ ಹೇಳಿದರು.

ಜಂಟಿ ಆಯುಕ್ತ ನ್ಯಾಯಾಂಗ ವಶಕ್ಕೆ

ಬೆಂಗಳೂರು: ಲಂಚ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಸೋಮವಾರ ಬಂಧಿಸಿದ್ದ ಬಿಬಿಎಂಪಿ ಪಶ್ಚಿಮ ವಲಯದ ಜಂಟಿ ಆಯುಕ್ತ ಎಸ್.ಎಂ. ಶ್ರೀನಿವಾಸ್ ಮತ್ತು ಅವರ ಆಪ್ತ ಸಹಾಯಕ ಉಮೇಶ್ ಅವರನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

ಸ್ಥಿರಾಸ್ತಿಗಳ ಖಾತೆ ವಿಲೀನ ಪ್ರಕ್ರಿಯೆ ಪೂರೈಸಲು ₹ 4 ಲಕ್ಷ ಲಂಚ ಪಡೆಯುತ್ತಿದ್ದ ಇಬ್ಬರನ್ನೂ ಸೋಮವಾರ ಸಂಜೆ ಬಂಧಿಸಲಾಗಿತ್ತು. ಸ್ಥಳ ಮಹಜರು ಹಾಗೂ ಹಣ ವಶಕ್ಕೆ ಪಡೆಯುವ ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಶ್ರೀನಿವಾಸ್ ಮತ್ತು ಉಮೇಶ್ ಅವರನ್ನು ಲೋಕಾಯುಕ್ತ ಕಚೇರಿಗೆ ಕರೆತರಲಾಗಿತ್ತು.

ದೂರುದಾರ ಮಂಜುನಾಥ್ ಅವರ ಅರ್ಜಿ ಬಾಕಿ ಇರುವುದು, ಅವರನ್ನು ಭೇಟಿ ಮಾಡಿರುವುದು, ಲಂಚಕ್ಕೆ ಬೇಡಿಕೆ ಇಟ್ಟಿರುವುದು ಹಾಗೂ ಹಣ ಪಡೆದುಕೊಂಡಿರುವ ಕುರಿತು ಆರೋಪಿಗಳನ್ನು ವಿಚಾರಣೆ ನಡೆಸಲಾಯಿತು ಎಂದು ಮೂಲಗಳು ತಿಳಿಸಿವೆ.

ಆಮ್ಲಜನಕ ಕೊರತೆಯಿಂದ ಸಾವು: ಆಡಿಟ್‌ಗೆ ಶಿಫಾರಸು

ಒಂದನೇ ಪುಟದಿಂದ...

ಆಮ್ಲಜನಕದ ಕೊರತೆಯಿಂದ ಯಾರೂ ಸತ್ತಿಲ್ಲ ಎಂದು ಸಚಿವಾಲಯ ಹೇಳಿರುವುದು ದುರದೃಷ್ಟಕರ ಮತ್ತು ಕಳವಳಕಾರಿ ಎಂದೂ ಸಮಿತಿಯು ಅಭಿಪ್ರಾಯಪಟ್ಟಿದೆ.

ಆಮ್ಲಜನಕ ಕೊರತೆಯಿಂದ ಯಾರೆಲ್ಲ ಮೃತಪಟ್ಟಿದ್ದಾರೆ ಎಂಬುದನ್ನು ನಿಖರವಾಗಿ ಪರಿಶೀಲಿಸಬೇಕು. ಸಂತ್ರಸ್ತರ ಕುಟುಂಬಗಳಿಗೆ ಅಗತ್ಯ ಪರಿಹಾರ ನೀಡಬೇಕು. ಸರ್ಕಾರದ ಸಂಸ್ಥೆಗಳು ಈ ವಿಚಾರದಲ್ಲಿ ಹೆಚ್ಚು ಪಾರದರ್ಶಕವಾಗಿ ಮತ್ತು ಹೊಣೆಗಾರಿಕೆಯಿಂದ ಕೆಲಸ ಮಾಡುವುದನ್ನು ನಿರೀಕ್ಷಿಸುವುದಾಗಿಯೂ ವರದಿಯಲ್ಲಿ ಹೇಳಲಾಗಿದೆ.

ರೋಗಿಗಳ ಕುಟುಂಬದ ಸದಸ್ಯರು ಆಮ್ಲಜನಕ ಸಿಲಿಂಡರ್‌ಗಾಗಿ ಗೋಗರೆದ ಮತ್ತು ಸರತಿ ಸಾಲಿನಲ್ಲಿ ನಿಂತ ಹಲವು ಉದಾಹರಣೆಗಳು ಇವೆ. ಹಾಗೆಯೇ ಆಸ್ಪತ್ರೆಗಳಲ್ಲಿ ಆಮ್ಲಜನಕ ಖಾಲಿಯಾದ ಕುರಿತು ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗಿವೆ. ಜೀವರಕ್ಷಕ ಆಮ್ಲಜನಕ ದೊರೆಯದೆ ಜನರು ಹತಾಶರಾಗಿದ್ದರು ಎಂದು ವರದಿಯಲ್ಲಿ ವಿವರಿಸಲಾಗಿದೆ. ರಾಜ್ಯಸಭೆಗೆ ವರದಿಯನ್ನು ಸೋಮವಾರ ಸಲ್ಲಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಚುನಾವಣೆಗೆ ಸ್ಪರ್ಧೆ: ಮೂಲಭೂತ ಹಕ್ಕಲ್ಲ: 'ಸುಪ್ರೀಂ'

ನವದೆಹಲಿ (ಪಿಟಿಐ): ಚುನಾವಣೆಗೆ ಸ್ಪರ್ಧಿಸುವುದು ವ್ಯಕ್ತಿಯ ಮೂಲಭೂತ ಹಕ್ಕೂ ಅಲ್ಲ, ಕಾನೂನಿನ ಅನ್ವಯ ಸಾಮಾನ್ಯ ಹಕ್ಕೂ ಅಲ್ಲ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಅಭಿಪ್ರಾಯಪಟ್ಟಿದೆ.

'ನನ್ನ ಹೆಸರನ್ನು ಸೂಚಿಸಲು ಮತ್ತು ಅನುಮೋದಿಸಲು ಯಾರೂ ಇಲ್ಲದ ಕಾರಣದಿಂದಾಗಿ ರಾಜ್ಯಸಭೆಗೆ ನಾಮಪತ್ರ ಸಲ್ಲಿಸಲು ಸಾಧ್ಯವಾಗಲಿಲ್ಲ. ಇದರಿಂದ ನನ್ನ ಮೂಲಭೂತ ಹಕ್ಕುಗಳಾದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಂಡಂತಾಗಿದೆ' ಎಂದು ವ್ಯಕ್ತಿಯೊಬ್ಬರು ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಅಲ್ಲಿ ಅರ್ಜಿ ತಿರಸ್ಕೃತವಾದ್ದರಿಂದ, ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಇದರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಹಾಗೂ ಸುಧಾಂಶು ಧುಲಿಯಾ ಅವರು, ರಾಜ್ಯಸಭೆಗೆ ಸ್ಪರ್ಧಿಸಬೇಕಾದಲ್ಲಿ ಸ್ಪರ್ಧಿಯ ಹೆಸರನ್ನು ಸೂಚಿಸಬೇಕು ಮತ್ತು ಅನುಮೋದಿಸಬೇಕು ಎಂದು ಜನಪ್ರಾತಿನಿಧ್ಯ ಕಾಯ್ದೆ, 1950 ಹಾಗೂ ಚುನಾವಣಾ ನಿಯಮಗಳು, 1961ರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ ಎಂದರು.

ನಾಲ್ಕು ವಾರಗಳ ಒಳಗಾಗಿ ಸುಪ್ರೀಂ ಕೋರ್ಟ್‌ನ ಕಾನೂನು ನೆರವು ಸಮಿತಿಗೆ ಒಂದು ಲಕ್ಷ ದಂಡ ಕಟ್ಟಬೇಕು ಎಂದೂ ಆದೇಶಿಸಿದ ಸುಪ್ರೀಂ ಕೋರ್ಟ್ ಅರ್ಜಿಯನ್ನು ತಿರಸ್ಕರಿಸಿತು.

ವರ್ಮಾ ವಜಾ ಆದೇಶಕ್ಕೆ ತಡೆ

ನವದೆಹಲಿ (ಪಿಟಿಐ): ಇಶ್ರತ್ ಜಹಾನ್ ಎನ್‌ಕೌಂಟರ್ ಪ್ರಕರಣದ ಸಿಬಿಐ ತನಿಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಸತೀಶ್ ಚಂದ್ರ ವರ್ಮಾ ಅವರನ್ನು ಕರ್ತವ್ಯದಿಂದ ವಜಾ ಮಾಡಿ ಕೇಂದ್ರ ಗೃಹ ಸಚಿವಾಲಯ ಹೊರಡಿಸಿರುವ ಆದೇಶಕ್ಕೆ ದೆಹಲಿ ಹೈಕೋರ್ಟ್ ತಡೆ ನೀಡಿದೆ.

ವಜಾ ಆದೇಶವನ್ನು ಪ್ರಶ್ನಿಸಿ ವರ್ಮಾ ಅವರು ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಇದರ ವಿಚಾರಣೆ ನಡೆಸಿದ ನ್ಯಾಯಾಲಯವು, 'ಕೇಂದ್ರ ಸರ್ಕಾರವು ವಜಾ ಆದೇಶವನ್ನು ಜಾರಿ ಮಾಡಬಾರದು' ಎಂದು ಆದೇಶ ನೀಡಿದೆ.

ಶ್ರೀಕೃಷ್ಣ ಜನ್ಮಭೂಮಿ ವಿವಾದ: ಅ.3ಕ್ಕೆ ವಿಚಾರಣೆ

ಮಥುರಾ (ಉತ್ತರ ಪ್ರದೇಶ) (ಪಿಟಿಐ): ಶ್ರೀಕೃಷ್ಣ ಜನ್ಮಭೂಮಿ–ಶಾಹಿ ಮಸೀದಿ ಪ್ರಕರಣದ ಮುಂದಿನ ವಿಚಾರಣೆಯನ್ನು ಅಕ್ಟೋಬರ್ 3ಕ್ಕೆ ನಡೆಸುವುದಾಗಿ ಜಿಲ್ಲಾ ನ್ಯಾಯಾಲಯ ಹೇಳಿದೆ.

ಮಂಗಳವಾರ ನಡೆದ ವಿಚಾರಣೆ ಲಖನೌನ ಸುನ್ನಿ ಕೇಂದ್ರ ವಕ್ಫ್ ಮಂಡಳಿಯು ಹಾಜರಾಗಿರಲಿಲ್ಲ. ಆದ್ದರಿಂದ ಮುಂದಿನ ವಿಚಾರಣೆಗೆ ಬರುವಂತೆ ಮಂಡಳಿಗೆ ಸಮನ್ಸ್ ನೀಡುವಂತೆ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ಸಂಜಯ್ ಚೌದರಿ ಆದೇಶಿಸಿದರು.

ಮಸೀದಿ ಜಾಗವನ್ನು ಹಿಂದೂಗಳಿಗೆ ಹಸ್ತಾಂತರಿಸಬೇಕು ಎಂದು ಕೋರಿ ಮಥುರಾ ನ್ಯಾಯಾಲಯದಲ್ಲಿ ಹಲವಾರು ಅರ್ಜಿಗಳು ಸಲ್ಲಿಕೆಯಾಗಿವೆ.

'ಬಾಲಾಪರಾಧಿಯನ್ನು ವಯಸ್ಕರ ಜೈಲಿಗೆ ಕಳುಹಿಸುವುದು ವೈಯಕ್ತಿಕ ಸ್ವಾತಂತ್ರ್ಯದ ಹರಣ'

ನವದೆಹಲಿ: 'ಬಾಲಾಪರಾಧಿಗಳನ್ನು ವಯಸ್ಕರಿರುವ ಜೈಲಿಗೆ ದಾಖಲು ಮಾಡುವುದು ಅವರ ವೈಯಕ್ತಿಕ ಸ್ವಾತಂತ್ರ್ಯವನ್ನು ಹರಣ ಮಾಡಿದಂತೆ' ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

'ಮಗುವು ಒಮ್ಮೆ ವಯಸ್ಕ ಅಪರಾಧ ನ್ಯಾಯ ವ್ಯವಸ್ಥೆಯಡಿ ಸಿಲುಕಿಕೊಂಡರೆ ಅದರಿಂದ ಪಾರಾಗುವುದು ಕಷ್ಟ' ಎಂದು ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಮತ್ತು ಜೆ.ಬಿ.ಪರ್ದಿವಾಲಾ ಅವರಿದ್ದ ದ್ವಿಸದಸ್ಯ ಪೀಠ ಮಂಗಳವಾರ ಹೇಳಿದೆ.

'ಮಕ್ಕಳಿಗೆ ತಮ್ಮ ಹಕ್ಕು ಮತ್ತು ಕರ್ತವ್ಯಗಳ ಕುರಿತ ಅರಿವಿನ ಕೊರತೆ ಇದೆ. ಕಾನೂನು ನೆರವು ಕಾರ್ಯಕ್ರಮಗಳು ಮೂಲೆಗೆ ಸರಿದಿವೆ. ಇದು ಕಹಿ ಸತ್ಯ' ಎಂದಿದೆ.

ಕೊಲೆ ಆರೋಪದಡಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ವಿನೋದ್ ಕತಾರಾ ಎಂಬಾತ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠವು ಅಪರಾಧ ನಡೆದಾಗ ಆತನ ವಯಸ್ಸು ಎಷ್ಟಿತ್ತು ಎಂಬುದನ್ನು ಪತ್ತೆಹಚ್ಚಲು ಸಿವಿಲ್ ಆಸ್ಪತ್ರೆಯಲ್ಲಿ ಆತನನ್ನು ಮೂಳೆಯ ಪರೀಕ್ಷೆಗೆ ಒಳಪಡಿಸುವಂತೆ ಸೂಚಿಸಿತು. ವಿಕಿರಣಶಾಸ್ತ್ರಜ್ಞ ಸೇರಿ ಒಟ್ಟು ಮೂವರು ವೈದ್ಯರ ತಂಡವನ್ನು ನಿಯೋಜಿಸುವಂತೆಯೂ ನಿರ್ದೇಶಿಸಿತು.

ಮದರಸಾದ 12 ವಿದ್ಯಾರ್ಥಿಗಳ 'ನೀಟ್' ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದರ್‌ನ ಶಾಹೀನ್ ಕಾಲೇಜಿನಲ್ಲಿ ವಿಶೇಷ ಶಿಕ್ಷಣ ಪಡೆದ ರಾಜ್ಯದ ವಿವಿಧ ಮದರಸಾಗಳ 12 ವಿದ್ಯಾರ್ಥಿಗಳು ನೀಟ್ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದು, ವೈದ್ಯಕೀಯ ಶಿಕ್ಷಣ ಪ್ರವೇಶದ ನಿರೀಕ್ಷೆಯಲ್ಲಿದ್ದಾರೆ.

9ನೇ ತರಗತಿಯವರೆಗೂ ಮದರಸಾಗಳಲ್ಲಿ ಧಾರ್ಮಿಕ ಶಿಕ್ಷಣ ಪಡೆದಿದ್ದ ನೂರಾರು ವಿದ್ಯಾರ್ಥಿಗಳನ್ನು ಶಾಹೀನ್ ಕರೆತಂದಿದ್ದ ಶಿಕ್ಷಣ ಸಂಸ್ಥೆ ಒಂದು ವರ್ಷ ವಿಶೇಷ ತರಬೇತಿ ನೀಡಿದ ಬಳಿಕ ಎಸ್ಸೆಸ್ಸೆಲ್ಸಿ ಪರೀಕ್ಷೆ ಕಟ್ಟಿಸಿ, ತೇರ್ಗಡೆಯಾದ ನಂತರ ಅಲ್ಲೇ ಪಿಯು ಶಿಕ್ಷಣ ನೀಡಿತ್ತು. ಪಿಯುನಲ್ಲೂ ಉತ್ತಮ ಸಾಧನೆ ಮಾಡಿದ್ದ ಅವರಲ್ಲಿ 12 ವಿದ್ಯಾರ್ಥಿಗಳು ನೀಟ್‌ನಲ್ಲೂ ಉನ್ನತ ರ್ಯಾಂಕ್‌ಗಳನ್ನು ಪಡೆದಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಅಬ್ದುಲ್ ಖಾದೀರ್ ಖಾನ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಸಂತಸ ಹಂಚಿಕೊಂಡರು.

ಸಂಸ್ಥೆ 12 ವರ್ಷಗಳಿಂದ ನಿರಂತರವಾಗಿ ಇಂತಹ ಪ್ರಯತ್ನ ಮಾಡಿದೆ. ಮದರಸಾಗಳಲ್ಲಿ ಧಾರ್ಮಿಕ ವಿದ್ಯಾಭ್ಯಾಸಕ್ಕೆ ಸೇರಿ ಅರ್ಧಕ್ಕೆ ಶಿಕ್ಷಣ ತೊರೆದ ವಿದ್ಯಾರ್ಥಿಗಳನ್ನು ಕರೆತಂದು ಇತರರಂತೆ ಶಾಲಾ ಶಿಕ್ಷಣ ನೀಡಲಾಗಿದೆ. ಅಂತಹ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಎಂಬಿಬಿಎಸ್ ಮಾಡಿ ವೈದ್ಯರಾಗಿದ್ದಾರೆ. ಮದರಸಾ ವಿದ್ಯಾರ್ಥಿಗಳೂ ಸೇರಿದಂತೆ ಈ ಬಾರಿ ಶಾಹೀನ್‌ನಲ್ಲಿ ಶಿಕ್ಷಣ ಪಡೆದ ಸುಮಾರು 450 ವಿದ್ಯಾರ್ಥಿಗಳು ಸರ್ಕಾರಿ ಕೋಟಾದಲ್ಲಿ ಎಂಬಿಬಿಎಸ್‌ಗೆ ಪ್ರವೇಶ ಪಡೆಯುವ ನಿರೀಕ್ಷೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮದರಸಾಗಳ ಮಕ್ಕಳೂ ಇತರರಂತೆ ಸಾಮಾನ್ಯ ಶಿಕ್ಷಣ ಪಡೆಯಬೇಕು ಎಂದು ಹಲವು ರಾಜ್ಯಗಳ ಮದರಸಾಗಳಿಗೆ ತೆರಳಿ ಸಂಸ್ಥೆಯ ಶಿಕ್ಷಕರು ಸಾಮಾನ್ಯ ಶಿಕ್ಷಣ ನೀಡುತ್ತಿದ್ದಾರೆ ಎಂದರು.

ಇಕ್ಬಾಲ್‌ಗೆ 834ನೇ ರ್ಯಾಂಕ್

'ಸಾಮಾನ್ಯ ಶಿಕ್ಷಣ ಪಡೆದು 5ನೇ ತರಗತಿಗೆ ಶಾಲೆ ಬಿಟ್ಟಿದ್ದೆ. ನಂತರ ಶಿವಾಜಿನಗರದ ಮದರಸಾದಲ್ಲಿ ಧಾರ್ಮಿಕ ಶಿಕ್ಷಣ ಪಡೆದೆ. ಶಾಹೀನ್ ಸಂಸ್ಥೆ ನನ್ನನ್ನು ಗುರುತಿಸಿ, ನೇರವಾಗಿ 10ನೇ ತರಗತಿ ಪರೀಕ್ಷೆ ಬರೆಯಲು ವಿಶೇಷ ಶಿಕ್ಷಣ ನೀಡಿತು. ನಂತರ ಬೀದರನಲ್ಲೇ ಪಿಯು ಮುಗಿಸಿದೆ. ನೀಟ್‌ನಲ್ಲಿ ರಾಷ್ಟ್ರಕ್ಕೆ 834ನೇ ರ್ಯಾಂಕ್ ಪಡೆದಿರುವೆ. ಈಗ ವೈದ್ಯನಾಗುವ ಅವಕಾಶ ಸಿಕ್ಕಿದೆ ಎನ್ನುವುದೇ ಅಚ್ಚರಿ. ಇಂತಹ ಅವಕಾಶ ಮದರಸಾಗಳಲ್ಲಿನ ಎಲ್ಲ ವಿದ್ಯಾರ್ಥಿಗಳಿಗೂ ದೊರಕಬೇಕು' ಎಂದು ಬೆಂಗಳೂರಿನ ಶಿವಾಜಿನಗರದ ಮಹಮದ್ ಅಲಿ ಇಕ್ಬಾಲ್ ಮನದ ಮಾತು ಬಿಚ್ಚಿಟ್ಟರು.

ಕೋಲ್ಕತ್ತದಲ್ಲಿ ಹಿಂಸೆ: ಜನಜೀವನಕ್ಕೆ ಅಡ್ಡಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಬಿಜೆಪಿ ಕೈಗೊಂಡಿದ್ದ 'ನಬಾನ್ನ ಚಲೊ ಅಭಿಯಾನ' (ರಾಜ್ಯ ಸಚಿವಾಲಯಕ್ಕೆ ಕಾಲ್ನಡಿಗೆ ಜಾಥಾ) ಮಂಗಳವಾರ ಹಿಂಸಾಚಾರಕ್ಕೆ ತಿರುಗಿತು. ಪೊಲೀಸರು ಮತ್ತು ಪ್ರತಿಭಟನಕಾರರ ನಡುವೆ ನಡೆದ ಘರ್ಷಣೆ ತಾರಕಕ್ಕೇರಿ, ಕೋಲ್ಕತ್ತದ ಜನಜೀವನ ಅಸ್ತವ್ಯಸ್ತಗೊಂಡಿತು.

ಪ್ರತಿಭಟನಕಾರರು ನಗರದ ಕೇಂದ್ರ ಭಾಗದಲ್ಲಿ ಪೊಲೀಸ್ ವಾಹನಕ್ಕೆ ಬೆಂಕಿ ಹಚ್ಚಿ, ಪೊಲೀಸರತ್ತ ಕಲ್ಲುಗಳನ್ನು ಎಸೆದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪೊಲೀಸರು ಜಲಫಿರಂಗಿ ಮತ್ತು ಅಶ್ರುವಾಯು ಸಿಡಿಸಿ ಪ್ರತಿಭಟನಕಾರರನ್ನು ಚದುರಿಸಿದರು.

ಸುವೆಂದುವನ್ನು ವಶಕ್ಕೆ ಪಡೆದ ಪೊಲೀಸರು: ಈ ಅಭಿಯಾನದಲ್ಲಿ ಪಾಲ್ಗೊಳ್ಳಲು ಸತ್ರಗಚಿಗೆ ಹೊರಟಿದ್ದ ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುವೆಂದು ಅಧಿಕಾರಿ ಅವರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು. ಅವರ ಜೊತೆಗೆ ಬಿಜೆಪಿ ಸಂಸದ ಲಾಕೆಟ್ ಚಟರ್ಜಿ ಮತ್ತು ಪಕ್ಷದ ಮುಖಂಡ ರಾಹುಲ್ ಸಿನ್ಹಾ ಅವರನ್ನೂ ಪೊಲೀಸರು ವಶಕ್ಕೆ ಪಡೆದರು.

ಪಶ್ಚಿಮ ಬಂಗಾಳ ಸರ್ಕಾರದ ವಿರುದ್ಧ ಮಂಗಳವಾರ ಹೌರಾದಲ್ಲಿ 'ನಬಾನ್ನ ಚಲೊ ಅಭಿಯಾನ'ದಲ್ಲಿ ಪಾಲ್ಗೊಂಡಿದ್ದ ಬಿಜೆಪಿ ಬೆಂಗಲಿಗರನ್ನು ಚದುರಿಸಲು ಪೊಲೀಸರು ಜಲಫಿರಂಗಿ ಪ್ರಯೋಗಿಸಿದರು –ಪಿಟಿಐ ಚಿತ್ರ

ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಬಿಜೆಪಿಯ ಸಹಸ್ರಾರು ಬೆಂಬಲಿಗರು ಕೋಲ್ಕತ್ತ ಮತ್ತು ಹೌರಾದಲ್ಲಿ ಮಂಗಳವಾರ ಬೆಳಿಗ್ಗೆಯಿಂದಲೇ ಜಮಾಯಿಸಿದ್ದರು.

ಪ್ರತಿಭಟನಕಾರರನ್ನು ತಡೆಯಲು ಹೌರಾದ ಹಲವು ಕಡೆಗಳಲ್ಲಿ ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿದ್ದರು. ಪ್ರತಿಭಟನಕಾರರು ಬ್ಯಾರಿಕೇಡ್‌ಗಳನ್ನು ದಾಟಲು ಮುಂದಾದಾಗ ಪೊಲೀಸರು ಅಶ್ರುವಾಯ ಪ್ರಯೋಗಿಸಿದರು. ಈ ವೇಳೆ ಸಿಟ್ಟಿಗೆದ್ದ ಪ್ರತಿಭಟನಕಾರರು ಕೋಲ್ಕತ್ತದ ಲಾಲ್‌ಬಜಾರ್‌ನಲ್ಲಿ ಪೊಲೀಸ್ ವಾಹನವೊಂದಕ್ಕೆ ಬೆಂಕಿ ಹಚ್ಚಿದರು.

ಈ ಘರ್ಷಣೆಯಲ್ಲಿ ಬಿಜೆಪಿಯ ಮುಖಂಡರಾದ ಮೀನಾ ದೇವಿ ಪುರೋಹಿತ್, ಸ್ವಪನ್ ದಾಸ್‌ಗುಪ್ತಾ ಸೇರಿದಂತೆ 363 ಕಾರ್ಯಕರ್ತರು ಗಾಯಗೊಂಡಿದ್ದಾರೆ. ಅವರಲ್ಲಿ 35 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಬಿಜೆಪಿಯ ರಾಜ್ಯ ಘಟಕದ ವಕ್ತಾರರಾದ ಸಮಿಕ್ ಭಟ್ಟಾಚಾರ್ಯ ತಿಳಿಸಿದ್ದಾರೆ.

'ನೀವೊಬ್ಬ ಮಹಿಳೆ, ನನ್ನನ್ನು ಮುಟ್ಟಬೇಡಿ'

'ನನ್ನನ್ನು ಮುಟ್ಟಬೇಡಿ. ನೀವೊಬ್ಬ ಮಹಿಳೆ' ಎಂದು ಸುವೆಂದು ಅಧಿಕಾರಿ ಅವರು ತಮ್ಮನ್ನು ವಶಕ್ಕೆ ಪಡೆಯಲು ಬಂದಿದ್ದ ಮಹಿಳಾ ಪೊಲೀಸ್ ಸಿಬ್ಬಂದಿಗೆ ಹೇಳಿದರು. 'ನಾನು ಕಾನೂನಿಗೆ ತಲೆಬಾಗುವ ವ್ಯಕ್ತಿ. ಪುರುಷ ಸಿಬ್ಬಂದಿಯನ್ನು ನನ್ನ ಬಳಿ ಕಳುಹಿಸಿ' ಎಂದು ತಿಳಿಸಿದರು. ಬಳಿಕ ಡಿಸಿಪಿ (ದಕ್ಷಿಣ) ಅಕಾಶ್ ಮಘಾರಿಯ ಅವರು ಬಂದು ಸುವೆಂದು ಅವರನ್ನು ಪೊಲೀಸ್ ವಾಹನದ ಬಳಿ ಕರೆದುಕೊಂಡು ಹೋದರು.

ಲೈಂಗಿಕ ಕಿರುಕುಳ: ಪ್ರಾಚಾರ್ಯ ಸೇರಿ ಇಬ್ಬರ ಬಂಧನ

ಚೇತನ್ ರೆಡ್ಡಿ

ಚಿಂಚೋಳಿ (ಕಲಬುರಗಿ ಜಿಲ್ಲೆ): ವಸತಿ ಶಾಲೆಯ ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಪ್ರಾಚಾರ್ಯ ಚೇತನ್ ರೆಡ್ಡಿ, ಕಂಪ್ಯೂಟರ್ ಆಪರೇಟರ್ ಸಂಗಮೇಶ ಅವರನ್ನು ಕುಂಚಾವರಂ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಅವರ ವಿರುದ್ಧ ಪೋಕ್ಸೊ ಅನ್ವಯ ಪ್ರಕರಣ ದಾಖಲಿಸಲಾಗಿದೆ.

ವಸತಿ ಶಾಲೆಗೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಯಶವಂತ ವಿ.ಗುರುಕರ್, 'ಇಬ್ಬರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಶಾಲೆಗೆ ಮಹಿಳಾ ವಾರ್ಡನ್, ಮಹಿಳಾ ಕಂಪ್ಯೂಟರ್ ಆಪರೇಟರ್, ಮಹಿಳಾ ಪ್ರಾಂಶುಪಾಲರ ನಿಯೋಜಿಸಲು ಕ್ರಮವಹಿಸಲಾಗುವುದು' ಎಂದರು.

'ಮಹಿಳಾ ಅಧಿಕಾರಿ ಲಭ್ಯವಾಗದಿದ್ದರೆ ಪ್ರೌಢಶಾಲೆ ಮುಖ್ಯಶಿಕ್ಷಕಿ ನಿಯೋಜನೆಗೆ ಕ್ರಮವಹಿಸಿ' ಎಂದು ತಹಶೀಲ್ದಾರ್‌ಗೆ ಸೂಚಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಒಳ್ಳೆಯ ದಿನ ಅಥವಾ ಕೆಟ್ಟ ದಿನ ಎಂಬುದಕ್ಕೆ ಯಾವುದೇ ವ್ಯಾಖ್ಯಾನವಿಲ್ಲ. ಅದೇನಿದ್ದರೂ ನಿಮ್ಮನ್ನು ಹಾಗೂ ನಿಮ್ಮ ಚಿಂತನೆಗಳನ್ನು ಅವಲಂಬಿಸಿರುತ್ತದೆ.

-ಎ.ಪಿ.ಜೆ. ಅಬ್ದುಲ್ ಕಲಾಂ

ಚಿಲ್ಲರೆ ಹಣದುಬ್ಬರ ನಿಯಂತ್ರಣ ವೈಫಲ್ಯದ ಹಾದಿಯಲ್ಲಿ ಆರ್‌ಬಿಐ

ದೇಶದಲ್ಲಿ ಹಬ್ಬಗಳ ಋತು ಶುರುವಾಗುತ್ತಿದೆ. ಈ ಸಂದರ್ಭದಲ್ಲಿ ಆಗಸ್ಟ್ ತಿಂಗಳ ಚಿಲ್ಲರೆ ಹಣದುಬ್ಬರ ದರಕ್ಕೆ ಸಂಬಂಧಿಸಿದ ಅಂಕಿ-ಅಂಶಗಳು ಬಿಡುಗಡೆ ಆಗಿವೆ. ಆಗಸ್ಟ್‌ನಲ್ಲಿ ದೇಶದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಮತ್ತೆ ಏರಿಕೆಯ ಹಾದಿಗೆ ತಿರುಗಿದೆ. ಹಿಂದಿನ ಮೂರು ತಿಂಗಳುಗಳಿಂದ ಚಿಲ್ಲರೆ ಹಣದುಬ್ಬರ ದರವು ಇಳಿಕೆಯ ಹಾದಿಯನ್ನು ಹಿಡಿದಿತ್ತು. ಆದರೆ, ಆಗಸ್ಟ್‌ನಲ್ಲಿ ಅದು ಶೇಕಡ 7ಕ್ಕೆ ಏರಿದೆ. ಆಹಾರ ವಸ್ತುಗಳ ಬೆಲೆ ಹೆಚ್ಚಳವು ಹಣದುಬ್ಬರ ಏರಿಕೆಗೆ ಪ್ರಮುಖ ಕಾರಣ. ಈ ನಡುವೆ, ದೇಶದ ಕೈಗಾರಿಕಾ ಉತ್ಪನ್ನಗಳ ಬೆಳವಣಿಗೆ ದರವು ನಾಲ್ಕು ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಹಣದುಬ್ಬರದ ಏರಿಕೆ ಹಾಗೂ ಕೈಗಾರಿಕಾ ಉತ್ಪನ್ನಗಳ ಬೆಳವಣಿಗೆ ದರದಲ್ಲಿ ಕುಸಿತವು ಒಳ್ಳೆಯ ಸುದ್ದಿ ಖಂಡಿತ ಅಲ್ಲ. ಹಣದುಬ್ಬರದ ಸಮಸ್ಯೆಯು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿದೆ. ಗ್ರಾಮೀಣ ಮಾರುಕಟ್ಟೆಗಳಲ್ಲಿ ಚಿಲ್ಲರೆ ಹಣದುಬ್ಬರ ಶೇ 7.15ರಷ್ಟು, ನಗರ ಪ್ರದೇಶಗಳಲ್ಲಿ ಶೇ 6.72ರಷ್ಟು ಇದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ಹೇಳಿವೆ. ಗ್ರಾಮೀಣ ಪ್ರದೇಶಗಳ ಜನರಲ್ಲಿನ ಕೊಳ್ಳುವ ಶಕ್ತಿಯು ನಗರ ಪ್ರದೇಶಗಳ ಜನರಲ್ಲಿನ ಕೊಳ್ಳುವ ಶಕ್ತಿಗಿಂತ ತುಸು ಕಡಿಮೆ ಎಂಬುದು ಸಾಮಾನ್ಯ ನಂಬಿಕೆ. ಅಂದರೆ, ಬೆಲೆ ಏರಿಕೆಯ ಬಿಸಿಯನ್ನು ಈಗ ಹಳ್ಳಿಗರೇ ಹೆಚ್ಚು ಅನುಭವಿಸುತ್ತಿದ್ದಾರೆ. ಅವರ ಕೊಳ್ಳುವ ಶಕ್ತಿಯು ಮತ್ತಷ್ಟು ಕಡಿಮೆ ಆಗಿದೆ.

ಎರಡು ಅಲಗಿನ ಕತ್ತಿಯ ನಡುವೆ ಇರುವಂತಿದೆ ಆರ್‌ಬಿಐನ ಈಗಿನ ಸ್ಥಿತಿ

ಚಿಲ್ಲರೆ ಹಣದುಬ್ಬರದ ಪ್ರಮಾಣವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶೇ 6ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಇರಿಸಬೇಕಿತ್ತು. ಇದು ಆರ್‌ಬಿಐ ಮೇಲಿರುವ ಬಹುದೊಡ್ಡ ಹೊಣೆಗಳಲ್ಲಿ ಒಂದು. ಆದರೆ ಸತತ ಎಂಟು ತಿಂಗಳುಗಳಿಂದ ಅದು ಈ ಮಟ್ಟವನ್ನು ಮೀರಿದೆ. ಇನ್ನೂ ಒಂದು ತಿಂಗಳು (ಸೆಪ್ಟೆಂಬರ್) ಚಿಲ್ಲರೆ ಹಣದುಬ್ಬರವು ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಉಳಿದರೆ ಆರ್‌ಬಿಐ ತನ್ನ ಹೊಣೆ ನಿಭಾಯಿಸುವಲ್ಲಿ ಸೋತಿದೆ ಎಂದು ಅರ್ಥ. ಆಗ ಆರ್‌ಬಿಐ ತಾನು ಜವಾಬ್ದಾರಿ ನಿಭಾಯಿಸುವಲ್ಲಿ ವಿಫಲವಾಗಿದ್ದು ಏಕೆ ಎಂಬ ಬಗ್ಗೆ ಕೇಂದ್ರ ಸರ್ಕಾರಕ್ಕೆ ವಿವರಣೆ ಸಲ್ಲಿಸಬೇಕಾಗುತ್ತದೆ. ಈಗಿನ ಪರಿಸ್ಥಿತಿ ಗಮನಿಸಿದರೆ, ಅರ್ಥಶಾಸ್ತ್ರಜ್ಞರು ಹಾಗೂ ಮಾರುಕಟ್ಟೆ ಪರಿಣತರು ಹೇಳುವ ಮಾತುಗಳನ್ನು ಗಮನಿಸಿದರೆ ಆರ್‌ಬಿಐ ತನ್ನ ಹೊಣೆ ನಿಭಾಯಿಸುವಲ್ಲಿ ವಿಫಲ ಆಗಲಿರುವುದು ಬಹುತೇಕ ಖಚಿತ. ಹಣದುಬ್ಬರ ನಿಯಂತ್ರಿಸುವಲ್ಲಿನ ಈ ವೈಫಲ್ಯವು ನೇರವಾಗಿ ಜನರ ಬದುಕಿನ ಮೇಲೆ ಪರಿಣಾಮ ಬೀರುತ್ತದೆ, ಜನರ ಕೊಳ್ಳುವ ಶಕ್ತಿಯನ್ನು ಕುಗ್ಗಿಸುತ್ತದೆ. ಹಣದುಬ್ಬರ ನಿಯಂತ್ರಿಸಲು ರೆಪೊ ದರ ಹೆಚ್ಚಿಸುವುದು ಹಾಗೂ ವ್ಯವಸ್ಥೆಯಲ್ಲಿನ ನಗದು ಹರಿವನ್ನು ಕಡಿಮೆ ಮಾಡುವುದನ್ನು ಹೊರತುಪಡಿಸಿದರೆ ಆರ್‌ಬಿಐ ಬಳಿ ಹೆಚ್ಚಿನ ಅಸ್ತ್ರಗಳು ಇಲ್ಲ. ರೆಪೊ ದರ ಹೆಚ್ಚಿಸುವ ಕೆಲಸವನ್ನು ಆರ್‌ಬಿಐ ಮೇ ತಿಂಗಳಿನಿಂದ ಮಾಡುತ್ತ ಬಂದಿದೆ. ಬ್ಯಾಂಕ್‌ಗಳು ಆರ್‌ಬಿಐನಲ್ಲಿ ಮೀಸಲು ಇರಿಸಬೇಕಾದ ಹಣದ ಪ್ರಮಾಣ ಹೆಚ್ಚಿಸುವ ಮೂಲಕ, ನಗದು ಚಲಾವಣೆ ತಗ್ಗಿಸಲು ಯತ್ನಿಸಿದೆ. ಆದರೂ, ಹಣದುಬ್ಬರ ನಿಯಂತ್ರಣಕ್ಕೆ ಬಂದಿಲ್ಲ.

ಅಂದರೆ, ಹಣದುಬ್ಬರದ ಸಮಸ್ಯೆಗೆ ಕಾರಣ ಕಡಿಮೆ ಬಡ್ಡಿ ದರ ಹಾಗೂ ಹೆಚ್ಚಿನ ನಗದು ಚಲಾವಣೆ ಮಾತ್ರವೇ ಅಲ್ಲ. ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು, ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಹೆಚ್ಚಿನ ಮಟ್ಟದಲ್ಲಿ ಇರುವುದು ಕೂಡ ಹಣದುಬ್ಬರ ಏರಿಕೆಗೆ ಕಾರಣ. ಈ ಸಮಸ್ಯೆಗಳನ್ನು ನಿಭಾಯಿಸಲು ಆರ್‌ಬಿಐನಿಂದ ಸಾಧ್ಯವಿಲ್ಲ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆ ಆಗಿರುವುದರಿಂದ ಹಾಗೂ ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಸಿಗುತ್ತಿರುವ ಕಾರಣ, ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ತಗ್ಗಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮುಂದಾಗಬೇಕು. ಆಗ, ಹಣದುಬ್ಬರ ಪ್ರಮಾಣವು ಕಡಿಮೆ ಆಗಬಹುದು. ಈ ತಿಂಗಳಲ್ಲಿ ರೆಪೊ ದರ ಹೆಚ್ಚಿಸುವುದು ಆರ್‌ಬಿಐ ಪಾಲಿಗೆ ಈಗ ಅನಿವಾರ್ಯ ಆಗಿದ್ದರೂ, ಅದರಿಂದಾಗಿ ಹಬ್ಬಗಳ ಸಂದರ್ಭದಲ್ಲಿ ಕೈಗಾರಿಕೆಗಳಿಗೆ ಬಂಡವಾಳ ಸಂಗ್ರಹ (ಸಾಲ ಪಡೆಯುವುದು) ಹೆಚ್ಚು ವೆಚ್ಚದಾಯಕ ಆಗಬಹುದು. ಸಾಲದ ಬಡ್ಡಿ ಹೆಚ್ಚಾದರೆ ಜನಸಾಮಾನ್ಯರು ಮನೆ, ವಾಹನ, ಎಲೆಕ್ಟ್ರಾನಿಕ್ಸ್ ಉಪಕರಣಗಳ ಖರೀದಿಗೆ ಹಿಂದೇಟು ಹಾಕಬಹುದು. ರೆಪೊ ದರ ಹೆಚ್ಚಿಸದೇ ಇದ್ದರೆ, ಠೇವಣಿದಾರರಿಗೆ ಲಾಭದಾಯಕ ಮೊತ್ತ ಸಿಗುವುದಿಲ್ಲ. ಎರಡು ಅಲಗಿನ ಕತ್ತಿಯ ನಡುವೆ ಇರುವಂತಿದೆ ಆರ್‌ಬಿಐನ ಈಗಿನ ಸ್ಥಿತಿ.

ದಿನದ ಟ್ವೀಟ್

ದಯಮಾಡಿ ಚರ್ಚಿಸಿ

ವಿಧಾನಸಭೆ ಅಧಿವೇಶನದ ಎರಡನೇ ದಿನ ಮುಗಿದಿದೆ. ಬೆಂಗಳೂರಿನ ಎಲ್ಲಾ 28 ಶಾಸಕರು ಮಾತನಾಡುತ್ತಾರೆ ಮತ್ತು ಸಾರ್ವಜನಿಕ ಸಮಸ್ಯೆಗಳನ್ನು ಮುನ್ನೆಲೆಗೆ ತರುತ್ತಾರೆ ಎಂದು ನಾನು ಆಶಿಸುತ್ತೇನೆ- ಕರ್ನಾಟಕ ವಿಧಾನಸಭೆಯ ಸದಸ್ಯರಾಗಿ ಅದು ನಿಮ್ಮ ಮೇಲಿರುವ ದೊಡ್ಡ ಜವಾಬ್ದಾರಿ. ಪ್ರವಾಹ ಕುರಿತ ಚರ್ಚೆಗೆ ನಿಗದಿಯಾಗಿರುವ ಎರಡು ದಿನಗಳನ್ನು ದಯಮಾಡಿ ಬಳಸಿಕೊಳ್ಳಿ. ಅದು ಬೆಂಗಳೂರಿನ ಜನರಿಗಾಗಿಯೇ ವಿನಾ ನಿಮ್ಮ ಪಕ್ಷಕ್ಕಾಗಿ ಅಲ್ಲ.

ಶ್ರೀನಿವಾಸ್ ಅಲವಿಲ್ಲಿ, ಸದಸ್ಯ, ಜನಾಗ್ರಹ ಸಂಸ್ಥೆ

ಕಿಡಿನುಡಿ

ವೇತನದ ಉದ್ಯೋಗಗಳು 47 ಲಕ್ಷದಷ್ಟು ನಷ್ಟವಾಗಿವೆ, ನಿರುದ್ಯೋಗಿಗಳ ಸಂಖ್ಯೆಯು ಆಗಸ್ಟ್‌ನಲ್ಲಿ 66 ಲಕ್ಷದಷ್ಟು ಹೆಚ್ಚಾಗಿದೆ ಎಂದು ಸಿಎಂಐಇ (ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ) ವರದಿ ಮಾಡಿದೆ. ಉದ್ಯೋಗ ನಷ್ಟ ಹಾಗೂ ಏರುತ್ತಿರುವ ಬೆಲೆಗಳು: ನಮ್ಮ ದೇಶ ಮತ್ತು ಬಹುತೇಕ ಆರ್ಥಿಕತೆಗಳು ಈ ಅವಳಿ ಸವಾಲುಗಳನ್ನು ಎದುರಿಸುತ್ತಿವೆ. ಆದರೆ ಅದಕ್ಕಾಗಿ ನಾವು ಚಿಂತಿಸಬೇಕಿಲ್ಲ, ನಮ್ಮ ಚರ್ಚೆಗೆ ಬರ್ಬೆರಿ ಶರ್ಟ್‌ಗಳು ಮತ್ತು ಖಾಕಿ ಚಡ್ಡಿಯಂತಹ ವಿಷಯಗಳಿವೆ! ಯೋಚಿಸಿ!

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಭಾನುವಾರ, 14-9-1997

- **ಮದರ್ ತೆರೇಸಾಗೆ ವಿಶ್ವಗಣ್ಯರ ಅಂತಿಮ ನಮನ**

ಕೋಲ್ಕತ್ತ, ಸೆ. 13 (ಪಿಟಿಐ, ಯುಎನ್‌ಐ)– ಅನಾಥ ಮಕ್ಕಳ ಆಶಾಕಿರಣ, ದೀನರ ಬಂಧು, ಅಶಕ್ತರ ಊರುಗೋಲು, ಜಗದ ಮಹಾಮಾತೆ ಹಾಗೂ ಪರರ ಸೇವೆಗೆ ತನ್ನನ್ನು ಸಮರ್ಪಿಸಿಕೊಂಡು ‘ಕರುಣಾಮಯಿ’ಯಾಗಿ ಬದುಕಿದ ಮದರ್ ತೆರೇಸಾ ಅವರ ಅಂತ್ಯಕ್ರಿಯೆ ಇಲ್ಲಿನ ‘ಮದರ್ ಹೌಸ್’ನಲ್ಲಿ ಕ್ರಿಶ್ಚಿಯನ್ ಆರಾಧನಾ ವಿಧಿ ಹಾಗೂ ಪ್ರಾರ್ಥನೆಯೊಂದಿಗೆ ಇಂದು ಮಧ್ಯಾಹ್ನ 3 ಗಂಟೆಗೆ ಸರ್ಕಾರಿ ಗೌರವದಲ್ಲಿ ನಡೆಯಿತು.

‘ಮದರ್ ಹೌಸ್’ನಲ್ಲಿ ಖಾಸಗಿಯಾಗಿ ನಡೆದ ಸಮಾಧಿ ಪ್ರಕ್ರಿಯೆ ಮುಗಿದ ನಂತರ, ಮನೆ ಮುಂದೆ ಸಾಲುಗಟ್ಟಿ ನಿಂತಿದ್ದ ಸೈನಿಕರು 14 ಬಂದೂಕುಗಳಿಂದ ತಲಾ ಮೂರು ಸುತ್ತು ಕುಶಾಲುತೋಪುಗಳನ್ನು ಆಕಾಶಕ್ಕೆ ಹಾರಿಸುವ ಮೂಲಕ ಸರ್ಕಾರಿ ಗೌರವದ ಅಂತ್ಯಸಂಸ್ಕಾರಕ್ಕೆ ಮಂಗಳ ಹಾಡಿದರು.

- **ಮಧ್ಯಂತರ ಚುನಾವಣೆ: ಕಾಂಗ್ರೆಸ್ ಲೆಕ್ಕಾಚಾರ**

ನವದೆಹಲಿ, ಸೆ. 13 – ಪ್ರಧಾನಿ ಐ.ಕೆ.ಗುಜ್ರಾಲ್ ನೇತೃತ್ವದ ಸರ್ಕಾರಕ್ಕೆ ಇನ್ನೊಂದು ವರ್ಷ ಮಾತ್ರ ಜೀವ ನೀಡುವುದಾಗಿ ಕೆಲ ದಿನಗಳ ಹಿಂದೆ ಹೇಳಿದ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರು, ಬರುವ ಫೆಬ್ರುವರಿ – ಮಾರ್ಚ್ ಹೊತ್ತಿಗೆ ಮಧ್ಯಂತರ ಚುನಾವಣೆ ನಡೆಯುವ ಸಾಧ್ಯತೆಯ ಬಗೆಗೆ ಲೆಕ್ಕಾಚಾರ ಹಾಕುತ್ತಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಅವರೀಗ ಪಕ್ಷದ ಕೆಲವು ಹಿರಿಯ ನಾಯಕರೊಡನೆ ಅನೌಪಚಾರಿಕವಾಗಿ ಮಾತುಕತೆ ನಡೆಸುತ್ತಿದ್ದಾರೆಂದು ವಿಶ್ವಾಸನೀಯ ಮೂಲಗಳು ಹೇಳುತ್ತಿವೆ.

50 ವರ್ಷಗಳ ಹಿಂದೆ

ಗುರುವಾರ, 14-9-1972

- **ನೇಪಾಳ ಮಿಲಿಟರಿ ವಿಮಾನ ಅಪಘಾತ: 31 ಜನರ ಸಾವು**

ಕಠಮಂಡು, ಸೆ. 13– ಕಠಮಂಡುವಿನಿಂದ 30 ಕಿ.ಮೀ ಪೂರ್ವಕ್ಕೆ ಧುಲಿಖೇಲ್ ಎಂಬಲ್ಲಿ ಇಂದು ಮಧ್ಯಾಹ್ನ ರಾಯಲ್ ನೇಪಾಳೀಸ್ ಸೇನಾ ವಿಮಾನವು ಅಪಘಾತಕ್ಕೀಡಾಗಿ ಸೇನೆಯ ಎಲ್ಲಾ 31 ಮಂದಿ ಪ್ಯಾರಾಚೂಟ್ ಶಿಕ್ಷಣಾರ್ಥಿಗಳು ಮರಣ ಹೊಂದಿದರು.

ಈ ಪೈಕಿ ನಾಲ್ವರು ಚಾಲಕ ವರ್ಗಕ್ಕೆ ಸೇರಿದವರು. ನೇಪಾಳದ ಚರಿತ್ರೆಯಲ್ಲೇ ಇದು ಅತ್ಯಂತ ದಾರುಣ ವಿಮಾನದುರಂತ ಎಂದು ಬಣ್ಣಿಸಲಾಗಿದೆ.

ನೇಪಾಳದ ಪೌರತ್ವ ಪಡೆದ ಆಂಗ್ಲೋ-ಇಂಡಿಯನ್ ಮ್ಯಾಕ್‌ಕಿಂಗ್ ಅವರೂ ಸೇರಿ 29 ಜನರು ಸ್ಥಳದಲ್ಲೇ ಸತ್ತರು. ಇನ್ನಿಬ್ಬರು ಮಿಲಿಟರಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ಪಂಡಖಾಲ್ ಪ್ರದೇಶದಲ್ಲಿ ಪ್ರಯೋಗಾರ್ಥ ಹಾರಾಟ ನಡೆಸಿದ ನಂತರ ನೆಲೆಗೆ ವಾಪಸಾಗುತ್ತಿದ್ದಾಗ ಧುಲಿಖೇಲ್ ಬಳಿ ವಿಮಾನ ಗುಡ್ಡಕ್ಕೆ ಬಡಿಯಿತೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ.

- **ಪ್ರಸ್ತುತ ನೀರಾವರಿ-ವಿದ್ಯುತ್ ಯೋಜನೆಗಳ ತ್ವರಿತ ಅಂತ್ಯಕ್ಕೆ ರಾಜ್ಯಗಳಿಗೆ ಸಚಿವ ಧರ್ ಸಲಹೆ**

ನವದೆಹಲಿ, ಸೆ. 13– ಈಗಾಗಲೇ ಆರಂಭಿಸಿರುವ ನೀರಾವರಿ ಮತ್ತು ವಿದ್ಯುಚ್ಛಕ್ತಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳುವಂತೆ ಯೋಜನೆ ಸಚಿವ ಡಿ.ಪಿ.ಧರ್ ಅವರು ಇಂದು ಇಲ್ಲಿ ರಾಜ್ಯಗಳಿಗೆ ಸಲಹೆ ಮಾಡಿದರು.

ಇತ್ತೀಚೆಗೆ ಆರಂಭಿಸಿದ ಅಭಾವ ಪರಿಹಾರ ಕಾಮಗಾರಿ ಮತ್ತು ತುರ್ತು ಉತ್ಪಾದನೆಯನ್ನು ದೀರ್ಘಾವಧಿ ಅಭಿವೃದ್ಧಿ ಕಾರ್ಯಕ್ರಮಗಳನ್ನಾಗಿ ಪರಿವರ್ತಿಸಬೇಕೆಂದು ಅವರು ಇತ್ತೀಚೆಗೆ ತಮ್ಮನ್ನು ಭೇಟಿ ಮಾಡಿದ ಮುಖ್ಯಮಂತ್ರಿಗಳಿಗೆ ತಿಳಿಸಿದರೆಂದು ವರದಿಯಾಗಿದೆ.

ದಲಿತ ಪ್ರಗತಿ ಚಕ್ರದ ಹಿನ್ನಡೆಯ ಈ ಕಾಲದಲ್ಲಿ ಕಾಳಜಿ ರಾಜಕಾರಣದ ಹುಡುಕಾಟ

ಮರೆಯಬಾರದ ವಿಭಿನ್ನ ರಾಜಕೀಯ ಮಾದರಿಗಳು

ವಿಶ್ಲೇಷಣೆ

ನಟರಾಜ್ ಹುಳಿಯಾರ್

ಕರ್ನಾಟಕದ ವೈಚಾರಿಕ ಲೋಕದ ದಿಕ್ಕನ್ನೂ ದಲಿತ ಚಳವಳಿ, ದಲಿತ ರಾಜಕಾರಣಗಳನ್ನೂ ತಮ್ಮ ಪ್ರಖರ ಮಾತು- ಚಿಂತನೆಗಳ ಮೂಲಕ ಬದಲಿಸಿದ ಬಿ.ಬಸವಲಿಂಗಪ್ಪನವರ (ಜನನ: 21.4.1921) ಜನ್ಮಶತಮಾನೋತ್ಸವ ವರ್ಷ ಸದ್ದಿಲ್ಲದೆ ಸರಿದುಹೋಯಿತು. ಕರ್ನಾಟಕದ ಮತ್ತೊಬ್ಬ ಹಿರಿಯ ರಾಜಕಾರಣಿ ಬಿ. ರಾಚಯ್ಯನವರ (ಜನನ: 10.8.1922) ಜನ್ಮಶತಮಾನೋತ್ಸವ ವರ್ಷ ಈಗ ಆರಂಭವಾಗಿದೆ.

ಫೈರ್ ಬ್ರ್ಯಾಂಡ್ ರಾಜಕಾರಣಿ ಬಸವಲಿಂಗಪ್ಪನವರನ್ನೇ ಮರೆತು ಜಡವಾಗಿರುವ ಕನ್ನಡನಾಡು, ರಾಚಯ್ಯನವರಂಥ ಸೌಮ್ಯ ರಾಜಕಾರಣಿಯನ್ನು ನೆನೆಯುತ್ತದೆಂದು ನಿರೀಕ್ಷಿಸುವುದು ಕಷ್ಟ. ಆದರೆ ದಲಿತ ಚಳವಳಿಗಿಂತ ಮೊದಲಿನ ದಲಿತಕೇಂದ್ರಿತ ರಾಜಕೀಯವು ಒಟ್ಟು ಬಡವರ ಸಾಮಾಜಿಕ ಚಲನೆಗಳಿಗೆ ನಾಂದಿ ಹಾಡಿದ ಘಟ್ಟವನ್ನೂ ಅದಕ್ಕೆ ಕಾರಣರಾದ ನಾಯಕರನ್ನೂ ಮರೆತರೆ ದಮನಿತರ ಚಲನೆಯ ಆರಂಭದ ಚರಿತ್ರೆಯನ್ನೇ ಕಡೆಗಣಿಸಿದಂತಾಗುತ್ತದೆ.

ಭಾರತದ ಸ್ವಾತಂತ್ರ್ಯೋತ್ತರ ದಲಿತ ರಾಜಕಾರಣದಲ್ಲಿ ಮೊದಲಿಗೆ ಗಾಂಧಿ- ನೆಹರೂ ಮಾದರಿಯ ನಂತರ ಅಂಬೇಡ್ಕರ್ ಮಾದರಿ, ಜಗಜೀವನರಾಂ ಮಾದರಿಗಳು ಬಹುಕಾಲ ಮುಂದುವರಿದವು. ಕಾನೂನು ಪದವಿ ಪಡೆದು ಕಾಂಗ್ರೆಸ್ ಸೇರಿದ ಬಸವಲಿಂಗಪ್ಪ, ಅಂಬೇಡ್ಕರ್ ಮಾದರಿಯನ್ನು ಕಾಂಗ್ರೆಸ್ಸಿನೊಳಕ್ಕೆ ತರಲೆತ್ನಿಸಿದರು. ಪ್ರಜಾ ಸೋಷಲಿಸ್ಟ್ ಪಾರ್ಟಿಯ ಮೂಲಕ ಶಾಸಕರಾಗಿ ಗೆದ್ದು, ನಂತರ ಕಾಂಗ್ರೆಸ್ ಸೇರಿದ ರಾಚಯ್ಯ, ಜಗಜೀವನರಾಂ ಮಾದರಿಯ ಮೆದು ಮಧ್ಯಮ ರಾಜಕಾರಣವನ್ನು ಮುಂದುವರಿಸಿದರು. ಕರ್ನಾಟಕದಲ್ಲಿ ಅಂಬೇಡ್ಕರ್ ಚಿಂತನೆ ಗಾಢವಾಗಿ ಹಬ್ಬುವ ಮೊದಲೇ ಅಂಬೇಡ್ಕರ್ ಬರಹಗಳನ್ನು ಬಸವಲಿಂಗಪ್ಪ ಓದಿದ್ದರು. ಬಸವಣ್ಣ, ಕುವೆಂಪು, ಬೇಂದ್ರೆ ಸಾಹಿತ್ಯ, ಅಮೆರಿಕದ ಕಪ್ಪು ಸಾಹಿತ್ಯವನ್ನೂ ಓದುತ್ತಿದ್ದ ಅವರು ತೀಕ್ಷ್ಣ ಮಾತಿನ ದಿಟ್ಟ ನಾಯಕರಾಗಿದ್ದರು. ಅವರ ಕೊಡುಗೆ ದಲಿತ ಚಳವಳಿಗಷ್ಟೇ ಅಲ್ಲ, ನಂತರದ ಶೂದ್ರ ಬರಹಗಾರರ ಒಕ್ಕೂಟ, ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯಗಳಂಥ ಸಾಂಸ್ಕೃತಿಕ ಬೆಳವಣಿಗೆಗಳ ಹಿನ್ನೆಲೆಯಲ್ಲೂ ಇದೆ.

ತರುಣ ಬಸವಲಿಂಗಪ್ಪ ಸೈಕಲ್ಲೇರಿ ಹರಿಹರದ ಅಕ್ಕಪಕ್ಕದ ಹಳ್ಳಿಗಳ ದಲಿತ ಮಕ್ಕಳನ್ನು ಶಾಲೆಗೆ ಸೇರಿಸುವಂತೆ ತಿಳಿಹೇಳುತ್ತಿದ್ದರು. ಈ ದಲಿತ ಕಾಳಜಿ ಅವರು ಮುಂದೆ ಹಲ ಬಗೆಯ ಅಧಿಕಾರಗಳನ್ನು ಹಿಡಿದಾಗ ಖಚಿತ ದಿಕ್ಕುಗಳನ್ನು ಪಡೆಯಿತು. ತಲೆ ಮೇಲೆ ಮಲ ಹೊರುವುದನ್ನು ನಿಷೇಧಿಸಿ ಕಾನೂನು ಜಾರಿಗೆ ತಂದ ಅವರು, ದಲಿತರಿಗೆ ಮಂಜೂರಾದ ಜಮೀನಿನ ಪರಭಾರೆಯಾಗದಂತೆ ಮಾಡಿದ ಕಾನೂನನ್ನೂ ರೂಪಿಸಿದರು. ಎಲ್ಲ ಜಾತಿಗಳ ಬಡವರಿಗೂ ನೆರವಾದ ‘ಉಳುವವನಿಗೇ ಭೂಮಿ’ ಆಶಯ ಕಾನೂನಾದಾಗ ಅವರು ಕಂದಾಯ ಮಂತ್ರಿಯಾಗಿದ್ದರು. ಭಾರತಕ್ಕೇ ಮಾದರಿಯಾದ ಈ ಮೂರೂ ಕ್ರಾಂತಿಕಾರಿ ಶಾಸನಗಳ ಹಿಂದೆ ಬಸವಲಿಂಗಪ್ಪನವರ ಕಾಳಜಿ, ಅಧ್ಯಯನ, ಶ್ರಮ, ಬದ್ಧತೆಗಳಿವೆ. ಬಸವಲಿಂಗಪ್ಪ 37ನೇ ವಯಸ್ಸಿನಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಗೃಹಖಾತೆಯ ಉಪಮಂತ್ರಿಯಾದಾಗ ದಲಿತರ ಹಿತ ಕಾಯ್ದ ರೀತಿ ಯಾವುದೇ ಗೃಹಮಂತ್ರಿಯ ಆದ್ಯ ಕರ್ತವ್ಯಗಳ ಖಚಿತ ಮಾದರಿಯನ್ನು ರೂಪಿಸಿತು. ಮುಂದೆ ರಾಚಯ್ಯನವರು ಕೂಡ ರಾಜ್ಯದ ಗೃಹಮಂತ್ರಿಯಾಗಿ ದಲಿತರಲ್ಲಿ ಆತ್ಮವಿಶ್ವಾಸ ತುಂಬಿದ ಕಾಲವೂ ಬಂತು. ಪ್ರಬಲ ಜಾತಿಗಳ ಪ್ರತಿನಿಧಿಗಳಿಗಿಂತ, ದಲಿತ ರಾಜಕಾರಣಿಗಳು ಗೃಹಮಂತ್ರಿಗಳಾಗುವುದು ಅತ್ಯಂತ ಮುಖ್ಯ ಎಂಬುದನ್ನು ಈ ಇಬ್ಬರು ನಾಯಕರೂ ತೋರಿಸಿಕೊಟ್ಟರು.

ತರುಣ ಬಸವಲಿಂಗಪ್ಪನವರಿಗಿಂತ ಭಿನ್ನ ವಾಗಿದ್ದ ತರುಣ ರಾಚಯ್ಯ ಕೂಡ ಸೈಕಲ್ಲೇರಿ ಊರೂರು ಸುತ್ತಿ ಜನಜಾಗೃತಿ ಮೂಡಿಸಿದ್ದರು. ದಲಿತ ಜಾಗೃತಿ- ವಿಮೋಚನೆಯು ಬಸವಲಿಂಗಪ್ಪನವರಂಥ ಖಡಕ್ ನಾಯಕರಂತೆ, ರಾಚಯ್ಯನವರಂಥ ಸೌಮ್ಯ ನಾಯಕರಿಂದಲೂ ರೂಪುಗೊಂಡಿದ್ದನ್ನು ಈ ಆರಂಭದ ಹೆಜ್ಜೆಗಳು ಹೇಳುತ್ತವೆ. 1950ರ ದಶಕದಲ್ಲಿ ರಾಚಯ್ಯನವರು ದಲಿತ ಹುಡುಗರನ್ನು ಜೀತದಿಂದ ಬಿಡಿಸಲೆತ್ನಿಸಿದ್ದರು. ಸರ್ಕಾರಿ ಅಧಿಕಾರಿಗಳನ್ನು ಕಾಡಿ ಬೇಡಿ, ಆ ಹುಡುಗರನ್ನು ಸಣ್ಣಪುಟ್ಟ ಕೆಲಸಗಳಿಗೆ ಸೇರಿಸಿದ್ದರು. ಹೀಗೆ ಜೀತಮುಕ್ತರಾಗಿ ಸರ್ಕಾರಿ ಕೆಲಸಗಳಿಗೆ ಸೇರಿದ ಹುಡುಗರು ಮುಂದೆ ದಲಿತ ಚಳವಳಿಯ ಬೆಂಬಲಿಗರಾಗಿಯೋ ಸ್ಥಳೀಯ ನಾಯಕರುಗಳಾಗಿಯೋ ಬೆಳೆದಿರಬಹುದಾದ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಸ್ವಾತಂತ್ರ್ಯಾನಂತರದ ದಶಕಗಳಲ್ಲಿ ರಾಜಕಾರಣಕ್ಕಿಳಿದ ಎಲ್ಲ ಜಾತಿಗಳ ನಾಯಕರಲ್ಲೂ ತಂತಮ್ಮ ಸಮುದಾಯಗಳಿಗೆ ನೆರವಾಗುವ ಮೂಲಕ ಜನನಾಯಕರಾಗುವ ಮಾದರಿಯಿತ್ತು; ಅಥವಾ ರಾಜಕೀಯಕ್ಕಿಳಿದು ಜನರಿಗೆ ನೆರವಾಗುತ್ತಾ ಜನನಾಯಕರಾಗುವ ಮಾದರಿಯಿತ್ತು. ರಾಜಕಾರಣದ ಈ ಮೂಲ ಮಾದರಿಗಳೇ ಮಾಯವಾಗುತ್ತಿರುವ ಕಾಲದಲ್ಲಿ ಬಸವಲಿಂಗಪ್ಪ, ರಾಚಯ್ಯನವರ ಮಾದರಿ ಆದರ್ಶವಾಗಿ ಕಾಣತೊಡಗುತ್ತದೆ.

ರಾಚಯ್ಯನವರು ಹೈಸ್ಕೂಲ್ ದಿನಗಳಿಂದಲೇ ವಿದ್ಯಾರ್ಥಿ ನಾಯಕರಾಗಿದ್ದವರು. 1953ರಲ್ಲಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಮೈಸೂರಿಗೆ ಬಂದಿದ್ದರು. ಆಗ ಶಾಸಕರಾಗಿದ್ದ ರಾಚಯ್ಯನವರು ಮುಖ್ಯಮಂತ್ರಿಯವರಿಗೆ ಮೈಸೂರಿನ ಲಲಿತ್‌ಮಹಲ್ ಕಟ್ಟಡ ತೋರಿಸುತ್ತಾ ಮಾಡಿಕೊಂಡ ಕೋರಿಕೆ: ‘ಇಂಥ ಒಂದು ಸುಂದರ ವಿದ್ಯಾರ್ಥಿ ನಿಲಯದ ಕಟ್ಟಡವೊಂದು ಅಶೋಕಪುರಂನಲ್ಲಿ ನಿರ್ಮಾಣವಾದರೆ, ನೂರಾರು ದಲಿತ ವಿದ್ಯಾರ್ಥಿಗಳಿಗೆ ವಿದ್ವತ್ತಿನ ಕೇಂದ್ರವಾಗುತ್ತದೆ’. ಮುಂದಿನ ವರ್ಷವೇ ಅಲ್ಲಿ ವಿದ್ಯಾರ್ಥಿ ನಿಲಯ ನಿರ್ಮಾಣವಾಯಿತು. ರಾಚಯ್ಯನವರ ಬೇಡಿಕೆಯ ಫಲ ಹಲವು ತಲೆಮಾರುಗಳ ದಲಿತ ವಿದ್ಯಾರ್ಥಿಗಳ ಬದುಕಿನ ದಿಕ್ಕನ್ನೂ ಬದಲಿಸಿದೆ, ಅಶೋಕಪುರಂನ ದಿಟ್ಟ ವಿದ್ಯಾರ್ಥಿಗಳು ಕರ್ನಾಟಕದ ದಲಿತ ಚಳವಳಿಯ ದಿಕ್ಕನ್ನೂ ಬದಲಿಸಿದ್ದಾರೆ. ಬಸವಲಿಂಗಪ್ಪನವರು ಕಾಂಗ್ರೆಸ್ಸಿನೊಳಗಿದ್ದೇ ಎಲ್ಲೆಡೆಯಿರುವ ಜಾತಿವಿಕಾರವನ್ನು ಪ್ರಶ್ನಿಸುತ್ತಿದ್ದರು. ಬಾಬಾಸಾಹೇಬರ ನೈತಿಕ ಸಿಟ್ಟಿನ ಮಾದರಿಯನ್ನು, ವೈಚಾರಿಕ ನೋಟಗಳನ್ನು, ಬೌದ್ಧ ಚಿಂತನೆಯ ಪ್ರಸಾರದ ಮಾದರಿಯನ್ನು ಮುಂದುವರಿಸುತ್ತಿದ್ದರು. ರಾಚಯ್ಯನವರಂಥ ರಾಜಕಾರಣಿಗಳು ಸವರ್ಣೀಯರನ್ನು ನೇರವಾಗಿ ಎದುರು ಹಾಕಿಕೊಳ್ಳದೆ ಚುನಾವಣಾ ರಾಜಕಾರಣ ಮಾಡುತ್ತಾ ದಲಿತರ ಹಿತಾಸಕ್ತಿ ಕಾಯ್ದುಕೊಳ್ಳಲೆತ್ನಿಸಿದರು.

ರಾಚಯ್ಯನವರ ಮಾತಿನಲ್ಲಿ ಅಂಬೇಡ್ಕರ್ ಚಿಂತನೆಗಳು ಎದ್ದು ಕಾಣುವಂತೆ ಇರಲಿಲ್ಲ. ಆದರೆ ಅಂಬೇಡ್ಕರ್ ಅವರ ಸಾಮಾಜಿಕ ಕಾರ್ಯಕ್ರಮಗಳನ್ನು ಎಷ್ಟರಮಟ್ಟಿಗೆ ಅಧಿಕಾರ ರಾಜಕಾರಣದ ಮಿತಿಯಲ್ಲಿ ಅಳವಡಿಸಿಕೊಂಡು ಸಾಧಿಸಬಹುದೋ ಅಷ್ಟು ದೂರವಂತೂ ಅವರು ಸಾಗಿದರು. ರಾಚಯ್ಯನವರಂಥ ಕಾಳಜಿಯ ರಾಜಕಾರಣಿಗಳು ದಲಿತ ಚಳವಳಿ ಶುರುವಾಗುವ ಮೊದಲು ಹಾಗೂ ಅನಂತರ ಕೂಡ ಒಂದಲ್ಲ ಒಂದು ಬಗೆಯಲ್ಲಿ ದಲಿತ ಚಳವಳಿಗೆ ಪೂರಕವಾದ ಕೆಲಸಗಳನ್ನು ಸರ್ಕಾರದೊಳಗಿದ್ದೇ ಮಾಡುತ್ತಾ ಬಂದರು.

ಈ ನಾಯಕರ ಬದುಕು, ರಾಜಕಾರಣಗಳನ್ನು ಒಟ್ಟಿಗೇ ನೋಡತೊಡಗಿದರೆ, ಕರ್ನಾಟಕದ ದಲಿತ ಸಮುದಾಯದ ಬದಲಾವಣೆಯ ಮೊದಲ ಘಟ್ಟದ ಸವಾಲುಗಳ ಪರಿಚಯವಾಗುತ್ತದೆ. ದಲಿತ ಚಳವಳಿಯಿನ್ನೂ ದೊಡ್ಡ ಮಟ್ಟದಲ್ಲಿ ಆರಂಭವಾಗದ ಕಾಲದಲ್ಲಿ ದಲಿತರ ಕಷ್ಟಗಳಿಗೆ ಪರಿಹಾರ ಹುಡುಕುತ್ತಿದ್ದ ಮೊದಲ ತಲೆಮಾರಿನ ನಾಯಕ- ರಾಜಕಾರಣಿಗಳ ಕಾಳಜಿಗಳ ದಾಖಲಾಗದ ಚರಿತ್ರೆಯ ವಿವರಗಳು ಗೋಚರವಾಗತೊಡಗುತ್ತವೆ. ಡಾ. ನಂಜಯ್ಯ ಹೊಂಗನೂರು ಅವರ ‘ಬಿ. ರಾಚಯ್ಯ ಅವರ ಜೀವನ ಮತ್ತು ರಾಜನೀತಿ’, ಲಕ್ಷ್ಮೀನಾರಾಯಣ ನಾಗವಾರ ಅವರ ‘ಬಿ. ಬಸವಲಿಂಗಪ್ಪ ಮತ್ತು ಬೂಸಾ ಚಳುವಳಿಯ ಕಾಲು ಶತಮಾನ’, ಎನ್.ಕೆ.ಹನುಮಂತಯ್ಯನವರ ‘ಕ್ರಾಂತಿಯ ವಸಂತ’ ಪುಸ್ತಕಗಳು ಕಡೆಗಣಿಸಲಾದ ಚರಿತ್ರೆಯ ಈ ಘಟ್ಟಗಳನ್ನು ದಾಖಲಿಸಲೆತ್ನಿಸಿವೆ.

ಸಾವಿರಾರು ವರ್ಷಗಳಿಂದ ಅಸ್ಪೃಶ್ಯತೆಯ ನೋವು, ಸಂಕಷ್ಟಗಳನ್ನು ತೀವ್ರವಾಗಿ ಅನುಭವಿಸಿ ನೊಂದ ಪದದಲಿತ ಸಮುದಾಯಗಳು ಅಂಬೇಡ್ಕರೋತ್ತರ ಯುಗದಲ್ಲಿ ನಡೆಸಿದ ಎಡೆಬಿಡದ ಹೋರಾಟಗಳಿಂದಾಗಿ ಪಡೆದಂಥ ಅಷ್ಟಿಷ್ಟು ರಾಜಕೀಯ ಅಧಿಕಾರವನ್ನೂ ಕಳೆದುಕೊಳ್ಳುತ್ತಿರುವ ಕಾಲ ಇದು. ದಲಿತ ಪ್ರಗತಿ ಚಕ್ರದ ಹಿನ್ನಡೆಯ ಈ ಕಾಲದಲ್ಲಿ ರಾಚಯ್ಯನವರ ತಾಳ್ಮೆಯ ರಾಜಕಾರಣದ ಸಾಧ್ಯತೆಗಳನ್ನು, ಬಸವಲಿಂಗಪ್ಪನವರ ದಿಟ್ಟ ರಾಜಕಾರಣದ ಮಹತ್ವವನ್ನು ಅರಿತು, ಇವೆರಡನ್ನೂ ಬೆಸೆದು ದಲಿತ ರಾಜಕಾರಣವನ್ನು ಮುಂದಿನ ದಿಕ್ಕಿನೆಡೆಗೆ ಒಯ್ಯಬೇಕಾದ ಸವಾಲು ಎದುರಾಗಿದೆ. ಬಸವಲಿಂಗಪ್ಪ ಹಾಗೂ ರಾಚಯ್ಯನವರ ರಾಜಕಾರಣದ ಮಾದರಿಗಳ ವಸ್ತುನಿಷ್ಠ ಅಧ್ಯಯನ ಈ ದಿಸೆಯಲ್ಲಿನ ಚರ್ಚೆ, ಕ್ರಿಯೆಗಳಿಗೆ ಹಾದಿ ಮಾಡಿಕೊಡಬಲ್ಲದು.



ಚುರುಮುರಿ



ಒಳ್ಳೆಯ ಗಂಡ!

• ಗುರು ಪಿ.ಎಸ್.

ಅಡುಗೆ ಮನೆಯಲ್ಲಿ ಪಾತ್ರೆಗಳ ಶಬ್ದ ಎಂದಿಗಿಂತ ಜೋರಾಗಿತ್ತು. ಒಂದು ವಾರದಿಂದ ಗುಡುಗು-ಸಿಡಿಲುಗಳ ಶಬ್ದ ಕೇಳಿ ಕೇಳಿ ಅಭ್ಯಾಸವಾಗಿದ್ದ ನಾನು ತಲೆಕೆಡಿಸಿಕೊಳ್ಳದೆ, ಸೋಫಾದಿಂದ ಟೀಪಾಯಿಯವರೆಗೆ ಕಾಲು ಚಾಚಿ ಕುಳಿತು ಟಿ.ವಿ. ನೋಡುತ್ತಿದ್ದೆ.

‘ನಿಮ್ಮಂಥ ಬೇಜವಾಬ್ದಾರಿ ಮನುಷ್ಯನನ್ನ ನಾನು ನೋಡೇ ಇಲ್ಲ ಬಿಡಿ...’ ಸಿಟ್ಟು ಹೊರಹಾಕಿದಳು ಹೆಂಡತಿ.

‘ಇದೊಳ್ಳೆ ಆಯ್ತಲ್ಲ, ನಾನೇನ್ ಮಾಡಿದೆ...’

‘ಏನೂ ಮಾಡ್ತಿಲ್ಲ ಅಂತಾನೇ ನಾನೂ ಹೇಳ್ತಿರೋದು. ಅಕ್ಕ-ಪಕ್ಕದವರನ್ನ ನೋಡಿ ಕಲೀರಿ. ಎಲ್ಲರೂ ಕಾರ್‌ನಲ್ಲಿ ಓಡಾಡ್ತಿದ್ದಾರೆ, ಹೊಸ ಮನೆ ತಗೊಂಡಿದ್ದಾರೆ. ವರ್ಷದಿಂದ ವರ್ಷಕ್ಕೆ ಬೆಳೀತಾನೇ ಇದ್ದಾರೆ...’

‘ಒಂದು ವಯಸ್ಸು ಆದ್ಮೇಲೆ ಮುಗೀತು ಕಣೆ. ಆಮೇಲೆ ಯಾರೂ ಎತ್ತರ ಆಗಲ್ಲ...’ ನಗುತ್ತಾ ಹೇಳ್ದೆ, ಹೆಂಡತಿ ಮುಖ ಮತ್ತಷ್ಟು ಬಿರುಸಾಯಿತು.

‘ಮಗನಿಗೊಂದು ಒಳ್ಳೆಯ ಕೆಲಸ ಕೊಡಿಸೋಕಾಗ್ತಿಲ್ಲ ನಿಮಗೆ. ಮಗಳಿಗೆ ಒಂದೊಳ್ಳೆ ಎಜುಕೇಷನ್ ಕೂಡ ಕೊಡಿಸಲಿಲ್ಲ...’ ಮಂಗಳಾರತಿ ಮುಂದುವರಿಯಿತು.

‘ಹಿತ್ತಲ ಗಿಡ ಮದ್ದಲ್ಲ ಅನ್ನೋ ಹಾಗೆ ಆಗಿದೆ ನಿನಗೆ. ಮೊನ್ನೆ ಬಡಾವಣೆ ಫಂಕ್ಷನ್‌ನಲ್ಲಿ ನಾನೆಷ್ಟು ಚೆಂದ ಮಾತಾಡಿದೆ ಅನ್ನೋದು ನೋಡಲಿಲ್ವ ನೀನು. ಎಂತಹ ಧಮ್ ಇತ್ತು, ಎಷ್ಟು ತಾಕತ್ತಿತ್ತು. ಅಕ್ಕ-ಪಕ್ಕದ ಮನೆಯ ಹೆಣ್ಮಕ್ಕಳೆಲ್ಲ ಹೊಗಳ್ತಿದ್ರು, ನೀನು ಮಾತ್ರ ಬೈತೀಯ...’

‘ಬರೀ ಭಾಷಣ ತಗೊಂಡು ಏನ್ರೀ ಮಾಡ್ತೀರಾ? ಮಳೆ ಬಂದು ಮನೆ ಸೋರ್ತಿದೆ, ಮನೆ ಮುಂದಿನ ಗಿಡಗಳೆಲ್ಲ ಕೊಚ್ಕೊಂಡು ಹೋಗಿವೆ, ನೀವು ನೋಡಿದ್ರೆ ಫಂಕ್ಷನ್‌ನಲ್ಲಿ ಎಕ್ರಪೆಕ್ರನಂಗೆ ಡ್ಯಾನ್ಸ್ ಮಾಡ್ತಾ ಕೂತಿದ್ದಿರಿ, ನಾಚಿಕೆ ಆಗಲ್ವ ನಿಮಗೆ’.

‘ನಿನ್ನ ಹತ್ತಿರ ಬೈಸ್ಕೊಂಡು ಸಾಕಾಯ್ತು ನನಗೆ. ನನ್ನ ಹೆಸರನ್ನೇ ಚೇಂಜ್ ಮಾಡ್ಕೊಂಡು ಬಿಡ್ತೀನಿ ನಾನು’.

‘ಏನಂತ?’

‘ಒಳ್ಳೆಯ ಗಂಡ ಅಂತ!’

ಸಂಗತ

ಭಾಷಾ ವೈವಿಧ್ಯ: ನೀತಿ ರಚನೆಯಾಗಲಿ

ಹಿಂದಿ ಭಾಷಿಕರ ಸಂಖ್ಯೆ ಅಧಿಕವಾಗಿದೆ ಎಂಬ ಕಾರಣಕ್ಕೆ ಹಿಂದಿಯನ್ನು ಅಧಿಕೃತ ಭಾಷೆ ಎಂದು ಕರೆಯುವುದು ಬಹುಭಾಷಿಕ ಭಾರತಕ್ಕೆ ಎಂದಿಗೂ ಒಪ್ಪಿಗೆಯಾಗದ ವಾದ

• ರಾ.ನಂ.ಚಂದ್ರಶೇಖರ

ಸೆಪ್ಟೆಂಬರ್ ಬಂತೆಂದರೆ ಹಿಂದಿಯೇತರ ಸ್ವಾಭಿಮಾನಿಗಳಲ್ಲಿ ಆಕ್ರೋಶ ಮೂಡುತ್ತದೆ. ಅದಕ್ಕೆ ಕಾರಣ, ಕೇಂದ್ರ ಸರ್ಕಾರ ಹಿಂದಿ ಹೇರಿಕೆಯನ್ನು ಅಧಿಕೃತವಾಗಿ ಹೇರಲು ಆಚರಿಸುವ ‘ಹಿಂದಿ ದಿವಸ್’. ಎಲ್ಲಾ ಭಾಷೆಯ ಜನರು ನೀಡುವ ತೆರಿಗೆ ಹಣದಲ್ಲಿ ನಡೆಯುವ ಸರ್ಕಾರವು ಹಿಂದಿ ಭಾಷೆಯನ್ನು ಹಿಂದಿಯೇತರ ರಾಜ್ಯಗಳಲ್ಲಿ ಬಲವಂತವಾಗಿ ಬಳಸುವಂತೆ ಮಾಡಲು, ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ‘ಹಿಂದಿ ದಿವಸ್’, ‘ಹಿಂದಿ ಸಪ್ತಾಹ’, ‘ಹಿಂದಿ ಪಾಕ್ಷಿಕ’, ‘ಹಿಂದಿ ಮಾಸ’ದಂತಹ ಕಾರ್ಯಕ್ರಮಗಳನ್ನು ಆಚರಿಸುತ್ತಿದೆ.

ಕನ್ನಡದ ವಿನಾ ಬೇರೆ ಭಾಷೆಯ ಗಂಧವೇ ಇಲ್ಲದ ಹಳ್ಳಿಗಳಲ್ಲಿರುವ ಬ್ಯಾಂಕ್ ಶಾಖೆಗಳಲ್ಲೂ ಇದೀಗ ಹಿಂದಿ ಭಾಷಿಕ ನೌಕರರನ್ನು ಹೇರಲಾಗಿದೆ. ಗ್ಯಾಸ್ ಸಿಲಿಂಡರ್, ರೈಲು, ವಿಮಾನ ಮುಂತಾದಲ್ಲಿನ ಸುರಕ್ಷಾ ನಿರ್ದೇಶನಗಳು ಸ್ಥಳೀಯ ಭಾಷೆಯಲ್ಲಿ ಇಲ್ಲದೆ, ಕನ್ನಡ ಮಾತ್ರ ಬಲ್ಲವರ ಸುರಕ್ಷತೆಯನ್ನು ಕಡೆಗಣಿಸಲಾಗುತ್ತಿದೆ. ಇನ್ನು ಕೇಂದ್ರ ಸರ್ಕಾರದ ಕಚೇರಿ, ಸಂಸ್ಥೆ, ಉದ್ಯಮಗಳಲ್ಲಿ ಹಿಂದಿ ಹೇರಿಕೆಯು ಅತಿರೇಕಕ್ಕೆ ಮುಟ್ಟಿದೆ.

ಭಾರತದ ಸಂವಿಧಾನ ಸಭೆಯು 1949ರ ಸೆ. 14ರಂದು, ದೇವನಾಗರಿ ಲಿಪಿಯಲ್ಲಿ ಬರೆದ ಹಿಂದಿಯನ್ನು ರಾಷ್ಟ್ರದ ಅಧಿಕೃತ ಭಾಷೆಯಾಗಿ ಅಂಗೀಕರಿಸಿತು. ಇದನ್ನು ಸ್ಮರಣೀಯವಾಗಿಸಲು ಪ್ರಧಾನಿ ಜವಾಹರಲಾಲ್ ನೆಹರೂ ಸೆ. 14ರಂದು ಪ್ರತಿವರ್ಷ ‘ಹಿಂದಿ ದಿವಸ್’ ಆಚರಿಸಲು ನಿರ್ಧರಿಸಿದರು. ಇದು ಸಪ್ತಾಹ, ಪಾಕ್ಷಿಕ, ಮಾಸವಾಗಿ ಈಗ ಪ್ರತಿದಿನ ಹಿಂದಿ ಹೇರಿಕೆಯ ದಿನವಾಗಿದೆ.

1975ರ ಜ. 10ರಂದು ನಾಗಪುರದಲ್ಲಿ ನಡೆದ ಮೊದಲ ವಿಶ್ವ ಹಿಂದಿ ಸಮ್ಮೇಳನದ ನೆನಪಿಗಾಗಿ ಜ.10ರಂದು ‘ವಿಶ್ವ ಹಿಂದಿ ದಿನ’ವನ್ನು ಆಚರಿಸಲಾಗುತ್ತದೆ. ಪ್ರಪಂಚದಾದ್ಯಂತ ಹಿಂದಿ ಭಾಷೆಯನ್ನು ಪ್ರಚಾರ ಮಾಡುವ ಉದ್ದೇಶದಿಂದ ಇದನ್ನು ಮೊದಲ ಬಾರಿಗೆ 2006ರಲ್ಲಿ ಆಚರಿಸಲಾಯಿತು. ದೊಡ್ಡ ಸಂಖ್ಯೆಯ ಅನಕ್ಷರಸ್ಥರು, ಬಡತನದ ರೇಖೆಗಿಂತ ಕೆಳಗಿರುವ ಜನಸಂಖ್ಯೆ ಶೇ 16ರಷ್ಟಿರುವ ದೇಶದಲ್ಲಿ ಒಂದು ಭಾಷೆಯನ್ನು ಬಲ್ಲ ಜನರ ಮೇಲೆ ಇನ್ನೊಂದು ಭಾಷೆಯನ್ನು ಹೇರುವುದು ಎಷ್ಟು ಸರಿ ಎಂಬ ಬಗ್ಗೆ ಆಳುವವರು ಚಿಂತಿಸಬೇಕಿದೆ.

ದೇಸಿ ಭಾಷೆಗಳನ್ನು ಬೆಳೆಸಲು ತ್ರಿಭಾಷಾ ಸೂತ್ರ ಜಾರಿಗೊಳಿಸುತ್ತಿರುವುದಾಗಿ ಕೇಂದ್ರ ಸರ್ಕಾರ ಹೇಳಿತ್ತು. ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡ ಕಾರಣಕ್ಕೆ ನಮ್ಮ ವಿದ್ಯಾರ್ಥಿಗಳು ಅನಿವಾರ್ಯವಾಗಿ ಹಿಂದಿ ಭಾಷೆಯನ್ನು ಕಲಿಯಬೇಕಾಗಿದೆ. ಹಿಂದಿಯೇತರ ರಾಜ್ಯಗಳಲ್ಲಿ ಹಿಂದಿಯನ್ನು ಶಿಕ್ಷಣದಲ್ಲಿ ಅಳವಡಿಸಿದಂತೆ, ಹಿಂದಿ ರಾಜ್ಯಗಳಲ್ಲಿ ಹಿಂದಿಯೇತರ ಭಾರತದ ಒಂದು ಭಾಷೆಯನ್ನು ಕಲಿಸಬೇಕು ಎಂದು ಹೇಳಲಾಗಿತ್ತು. ಯಾವುದಾದರೂ ಹಿಂದಿ ಭಾಷಿಕ ರಾಜ್ಯದಲ್ಲಿ ಹಿಂದಿಯೇತರ ಭಾರತದ ಭಾಷೆಗಳನ್ನು ಕಲಿಸುವ ವ್ಯವಸ್ಥೆಯಿದೆಯೇ ಎಂದರೆ, ಇಲ್ಲ ಅನ್ನಲು ಹೆಚ್ಚಿನ ಪುರಾವೆಯೇನೂ ಬೇಕಿಲ್ಲ.

ದೇಶವನ್ನಾಳಿದ ಎಲ್ಲಾ ಸರ್ಕಾರಗಳು ಹಿಂದಿಯನ್ನು ಹಿಂದಿಯೇತರ ರಾಜ್ಯಗಳ ಮೇಲೆ ಹೇರುವ ಕಾರ್ಯವನ್ನು ಅವ್ಯಾಹತವಾಗಿ ಮಾಡುತ್ತ ಬಂದಿವೆ. ಹಿಂದಿ ಹೇರಿಕೆಗೆ ಸ್ವಾತಂತ್ರ್ಯಪೂರ್ವದಲ್ಲೇ ವಿರೋಧ ವ್ಯಕ್ತವಾಗಿತ್ತು. 1965ರಲ್ಲಿ ಹಿಂದಿ ಹೇರಿಕೆ ವಿರುದ್ಧದ ಹೋರಾಟದ ಪರಿಣಾಮವಾಗಿ ತಮಿಳುನಾಡಿನಲ್ಲಿ ಡಿಎಂಕೆ ಅಧಿಕಾರ ಹಿಡಿಯಿತು. ತನ್ನ ರಾಜಕೀಯ ಭದ್ರಕೋಟೆಯಾಗಿದ್ದ ತಮಿಳುನಾಡನ್ನು ಕಾಂಗ್ರೆಸ್ ಶಾಶ್ವತವಾಗಿ ಕಳೆದುಕೊಂಡಿತು. ಈ ಐತಿಹಾಸಿಕ ಸಂಗತಿಯಿಂದ ಬಿಜೆಪಿ, ಕಾಂಗ್ರೆಸ್‌ನಂಥ ರಾಷ್ಟ್ರೀಯ ಪಕ್ಷಗಳು ಪಾಠ ಕಲಿಯಬೇಕಿತ್ತು. ಭಾರತದಲ್ಲಿ ಹಿಂದಿ ಮಾತನಾಡುವ ಜನರ ಸಂಖ್ಯೆ ಬೇರೆ ಭಾಷೆಗಳಿಗಿಂತ ಅಧಿಕ, ಹಾಗಾಗಿ ಹಿಂದಿ ಹೇರಿಕೆಯನ್ನು ಒಪ್ಪಿಕೊಳ್ಳಬೇಕು ಎಂಬುದು ಪ್ರಜಾಪ್ರಭುತ್ವ ತತ್ವಕ್ಕೆ ವಿರುದ್ಧವಾದದ್ದು. ಸಂಖ್ಯಾಬಲವೇ ನಿರ್ಣಾಯಕವಾದರೆ ರಾಷ್ಟ್ರಪಕ್ಷಿ ನವಿಲಿನ ಬದಲು ಕಾಗೆಯಾಗಬೇಕಿತ್ತು. ಹಾಗೇ ನಾಯಿ ರಾಷ್ಟ್ರಪ್ರಾಣಿ ಆಗಬೇಕಿತ್ತು, ಹುಲಿಯಲ್ಲ.

‘ಹಿಂದಿ ದಿವಸ್’ ಅನ್ನು ವಿರೋಧಿಸುವುದರಿಂದ ಹಿಂದಿ ಹೇರಿಕೆ ನಿಲ್ಲುವುದಿಲ್ಲ. ಹಾಗಾಗಬೇಕೆಂದರೆ ಹಿಂದಿಗೆ ಏಕೈಕ ಅಧಿಕೃತ ಭಾಷಾ ಸ್ಥಾನ ನೀಡಿರುವ ಸಂವಿಧಾನದ 351ನೇ ವಿಧಿ, ಹಿಂದಿಯನ್ನು ಒಕ್ಕೂಟ ಸರ್ಕಾರದ ಆಡಳಿತ ಭಾಷೆಯನ್ನಾಗಿಸುವ 343ನೇ ವಿಧಿಯನ್ನು ರದ್ದು ಮಾಡಲು ಒತ್ತಡ ತರಬೇಕಿದೆ.

ಹಿಂದಿ ಭಾಷಿಕರ ಪ್ರಮಾಣ ಹೆಚ್ಚಿಗೆ ಇದೆ ಎಂಬ ಕಾರಣಕ್ಕೆ ಹಿಂದಿಯನ್ನು ಅಧಿಕೃತ ಭಾಷೆ ಎಂದು ಕರೆಯುವುದು ಬಹುಭಾಷಿಕ ಭಾರತಕ್ಕೆ ಎಂದಿಗೂ ಒಪ್ಪಿಗೆಯಾಗದ ವಾದ. ಭಾರತದ ಎಲ್ಲ ಭಾಷೆಗಳು ಉಳಿದು ಬೆಳೆಯುವ ರೀತಿಯಲ್ಲಿ ಡಿಜಿಟಲ್ ತಂತ್ರಜ್ಞಾನ ಮುಂದುವರಿದಿರುವ ಈ ದಿನಗಳಲ್ಲಿ ಒಂದು ಭಾಷಾ ನೀತಿ ರೂಪಿಸುವುದು ಕಷ್ಟವಲ್ಲ.

ಕನ್ನಡಿಗರು ಕನ್ನಡಿಗರಾಗಿಯೇ, ಕನ್ನಡ ಸಂಸ್ಕೃತಿಯನ್ನು ಮುಂದುವರಿಸಿಕೊಂಡೇ ದೇಶದ ಭಾಗವಾಗಿರುವ ಅವಕಾಶ ಇರಬೇಕು. ಜನರ ಭಾವನೆಯನ್ನು ಗೌರವಿಸಿ ಭಾರತ ಸರ್ಕಾರವು ಸಂವಿಧಾನಕ್ಕೆ ತಿದ್ದುಪಡಿ ತಂದು, ಸಂವಿಧಾನದ 8ನೇ ಪರಿಚ್ಛೇದದಲ್ಲಿರುವ ಎಲ್ಲ 22 ಭಾಷೆಗಳನ್ನೂ ಅಧಿಕೃತ, ಆಡಳಿತ ಭಾಷೆಗಳನ್ನಾಗಿ ಘೋಷಿಸಬೇಕು. ಹಿಂದಿಗೆ ಅನಗತ್ಯವಾಗಿ ವಿಶೇಷ ಮನ್ನಣೆ ನೀಡುವ ಸಂವಿಧಾನದ ವಿಧಿಗಳನ್ನು ರದ್ದುಪಡಿಸುವ ಮೂಲಕ ಎಲ್ಲ ದೇಸಿ ಭಾಷೆಗಳೂ ಸಮಾನ ಎಂದು ಸಾರಬೇಕು. ಹಾಗಾದಾಗ ಮಾತ್ರ ದೇಶದ ಎಲ್ಲ ಭಾಷಿಕರೂ ಸ್ವಾಭಿಮಾನದಿಂದ ಸಮಾನರಾಗಿ ಬದುಕಲು ಸಾಧ್ಯ.

ವಾಚಕರ ವಾಣಿ

ಪರಿಗಣನೆಗೆ ಅರ್ಹವಾದ ಸಲಹೆ

‘ಸ್ವಾಮೀಜಿಗಳು ಮದುವೆ ಆಗಿಯೇ ಮಠ ನಡೆಸಲಿ’ ಎಂದು ಅಭಿಪ್ರಾಯಪಟ್ಟಿದ್ದಾರೆ ಚಿತ್ತಾಪುರ ತಾಲ್ಲೂಕಿನ ಕರದಾಳ್ ಬ್ರಹ್ಮಶ್ರೀ ನಾರಾಯಣ ಗುರುಗಳ ಶಕ್ತಿಪೀಠದ ಪ್ರಣವಾನಂದ ಸ್ವಾಮೀಜಿ (ಪ್ರ.ವಾ., ಸೆ. 12). ನಿಜ, ಸ್ವಾಮೀಜಿಯ ಅಭಿಪ್ರಾಯವು ಉಳಿದ ಮಠದ ಸ್ವಾಮಿಗಳು ಹಾಗೂ ಅವರ ಭಕ್ತಜನ ಗಂಭೀರವಾಗಿ ಪರಿಗಣಿಸಲು ಅರ್ಹವಾಗಿದೆ. ರಾಮಕೃಷ್ಣ ಪರಮಹಂಸ ಮತ್ತು ಶಾರದಾಮಣಿ ದೇವಿಯವರ ‘ಆತ್ಮಸಂಗಾತ’ದಂತಹ ದಾಂಪತ್ಯ ಇರಲಿಲ್ಲವೆ? ಸಂಸಾರ ಜೀವನದ ಬಗ್ಗೆ ಕವಿ ಕುವೆಂಪು ವಾಣಿ ಅಭಯಪ್ರದಾನವಾಗಿದೆ: ‘ಜೀವ ರಥೋತ್ಸವವಿದನಣಕಿಸದಿರು, ಎಲೆ ಸಂನ್ಯಾಸಿ! ಸಾರಥಿಯನು ನೋಡಾದರು ಬಾ, ತೇರನು ಎಳೆಯುವ ಸಂನ್ಯಾಸಿ!’

ಇಲ್ಲಿ ಹೆದರುವ ಅಗತ್ಯವಿಲ್ಲ, ಸಾರಥಿ ಬಲ್ಲನು ಸತ್ಪಥವ. ಆದ್ದರಿಂದ ಯಾವ ಮುಜುಗರವೂ ಇಲ್ಲದೆ ಮಠದ ಸ್ವಾಮಿಗಳು ಮದುವೆ ಆಗಲೂಬಹುದು. ತಪ್ಪೇನಿಲ್ಲ. ಇದು ಕಲಿಯುಗವೆಂದು ಭಕ್ತಾದಿಗಳು ನಡೆದುಕೊಳ್ಳಲೂಬಹುದು. ಅರ್ಜುನಸನ್ಯಾಸಿಯಂತೆ ಇರುವುದಕ್ಕಿಂತ ಸಾರ್ವಜನಿಕವಾಗಿ ಮಾನ ಮರ್ಯಾದೆಯಿಂದ ‘ಜೀವ ರಥೋತ್ಸವ’ ಎಂದು ನಾವು ಬದುಕು ನಡೆಸುವುದು ಮುಖ್ಯ.

ಪ್ರೊ. ಶಿವರಾಮಯ್ಯ, ಬೆಂಗಳೂರು

ಸಾಂಘಿಕ ಹೋರಾಟದ ಗೆಲುವು

ಶ್ರೀಲಂಕಾ ಕ್ರಿಕೆಟ್ ತಂಡವು ಪಾಕಿಸ್ತಾನವನ್ನು ಮಣಿಸಿ ಏಷ್ಯಾ ಕಪ್- 2022 ಮುಡಿಗೇರಿಸಿಕೊಂಡಿದೆ. ಆ ದೇಶವು ಅರಾಜಕತೆಯಿಂದ ನರಳುತ್ತಿರುವ ಸಂದರ್ಭದಲ್ಲಿ ಇಂಥದ್ದೊಂದು ಗೆಲುವು ಅಲ್ಲಿನ ನಾಗರಿಕರಿಗೆ ಅನಿವಾರ್ಯವಾಗಿತ್ತು, ಖುಷಿಪಡಲು. ಮುಂದಿನ ದಿನಗಳಲ್ಲಿ ಅರಾಜಕತೆ ಹೋಗಿ ಅಲ್ಲಿನ ಜನಸಾಮಾನ್ಯರು ಸಹಜಜೀವನ ನಡೆಸುವಂತಾಗಲಿ. ಇಲ್ಲಿ ಗಮನಿಸಬೇಕಾದದ್ದು, ಅಲ್ಪ ಮೊತ್ತದ ಗುರಿ ಇದ್ದೂ ಎದುರಾಳಿಗಳು ತಲೆ ಎತ್ತದಂತೆ ಮಾಡಿದ ನಾಯಕನ ಜಾಣ್ಮೆಯ ನಡೆ. ಎಲ್ಲಾ ಆಟಗಾರರ ಸಾಂಘಿಕ ಹೋರಾಟದ ಫಲ ಪ್ರಶಸ್ತಿ ಮುಡಿಗೇರುವಂತೆ ಮಾಡಿದೆ. ಮುಂಬರುವ ವಿಶ್ವಕಪ್ ಟಿ-20 ಟೂರ್ನಿಯಲ್ಲಿ ನಮ್ಮ ತಂಡವೂ ಲಂಕನ್ನರ ಸಾಂಘಿಕ ಹೋರಾಟವನ್ನು ಗಮನಿಸಿ, ಸಕಾರಾತ್ಮಕತೆ ಅಳವಡಿಸಿಕೊಂಡು ಟೂರ್ನಿ ಗೆಲ್ಲಲು ಪ್ರಯತ್ನಿಸಲಿ.

ನಿಖಿತಾ ಶಶಾಂಕ್ ಭಟ್, ಹೊಸನಗರ

ಸಲಹೆ ಕೊಟ್ಟ ಮಹಾಶಯ ಯಾರು?

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಪಂಪ ಮಹಾಕವಿ ರಸ್ತೆಯ ಹೆಸರು ಬದಲಿಸುವುದಿಲ್ಲ ಎಂದಿರುವ ಸುದ್ದಿ (ಪ್ರ.ವಾ., ಸೆ. 13) ಓದಿದೆ. ಜಾಣತನದ ಹಾಗೂ ಜಟ್ಟಿ ಬಿದ್ದರೂ ಮೀಸೆ ಮಣ್ಣಾಗದ ಅಧ್ಯಕ್ಷರ ಉತ್ತರ ಗಮನಿಸಿ: ‘ಪಂಪ ಮಹಾಕವಿ ರಸ್ತೆ’ ಬದಲು ಅವರು ಮರು ನಾಮಕರಣಕ್ಕೆ ಸಲಹೆ ನೀಡಿದ್ದು ‘ನಾಡೋಜ ಪಂಪ ಮಹಾಕವಿ- ಕನ್ನಡ ಸಾಹಿತ್ಯ ಪರಿಷತ್ತು ರಸ್ತೆ’!

ಇದು ಎಷ್ಟು ಸರಿ? ಅಧ್ಯಕ್ಷರು ಮೇಲಿನ ಮರುನಾಮಕರಣಕ್ಕೆ ಮುಖ್ಯಮಂತ್ರಿ ಅವರಿಗೆ ಸಲಹೆ ಮಾಡಿದ್ದು ಸುಳ್ಳೇ? ಜೊತೆಗೆ 21 ಅಕ್ಷರಗಳನ್ನುಳ್ಳ ಮೈಲುದ್ದದ ಹೆಸರನ್ನು ಯಾರಾದರೂ ಬರೆಯುವುದುಂಟೇ? ಈಗಲೇ ಪಂಪ ಮಹಾಕವಿ ರಸ್ತೆಯ ಹೆಸರು ಪಿ.ಎಂ. ರಸ್ತೆ ಆಗಿದೆ! ರಾಜಾಜಿನಗರದ ಮಹಾಕವಿ ಕುವೆಂಪು ರಸ್ತೆಯು ಎಂ.ಕೆ. ರಸ್ತೆ ಆಗಿದೆ. ಇನ್ನು ನಾಡೋಜ ಪಂಪ ಮಹಾಕವಿ- ಕನ್ನಡ ಸಾಹಿತ್ಯ ಪರಿಷತ್ತು ರಸ್ತೆಯು ಮುಂದೆ ಎನ್.ಪಿ.ಎಂ.ಕೆ.ಎಸ್.ಪಿ ರಸ್ತೆ ಆಗುವುದಿಲ್ಲ ಅನ್ನುವುದಕ್ಕೆ ಯಾವ ಗ್ಯಾರಂಟಿ? ನಿರ್ಣಯದ ಬಗ್ಗೆ ಕಾರ್ಯಕಾರಿ ಸಮಿತಿಯ ಮಾತು ಅಂತಿಮ ಅನ್ನುವುದು ಹಾಸ್ಯಾಸ್ಪದ ಅಲ್ಲವೆ? ಅಲ್ಲಿ ಆಂತರಿಕ ಪ್ರಜಾಪ್ರಭುತ್ವ, ಅಭಿವ್ಯಕ್ತಿ ಸ್ವಾತಂತ್ರ್ಯ ಇದೆಯೇ? ಹೆಸರು ಬದಲಾಯಿಸಲು ಸಲಹೆ ಕೊಟ್ಟ ಮಹಾಶಯರ ಹೆಸರನ್ನು ಮಾಧ್ಯಮಕ್ಕೆ ತಿಳಿಸಿ.

ಆರ್.ಜಿ.ಹಳ್ಳಿ ನಾಗರಾಜ, ಬೆಂಗಳೂರು

ವಿಷಯಾಧಾರಿತ ಚರ್ಚೆ ನಡೆಯಲಿ

ವಿಧಾನಮಂಡಲದ ಈ ಬಾರಿಯ ಅಧಿವೇಶನದಲ್ಲಿ, ರಾಜ್ಯದಲ್ಲಿ ಪ್ರವಾಹ ಮತ್ತು ಅದರಿಂದಾದ ನಷ್ಟ, ಭ್ರಷ್ಟಾಚಾರದ ಆರೋಪಗಳು, ನಿರುದ್ಯೋಗ ಸಮಸ್ಯೆ, ನೇಮಕಾತಿಯಲ್ಲಿ ಭ್ರಷ್ಟಾಚಾರ, ದಿನನಿತ್ಯದ ಆಹಾರ ಪದಾರ್ಥ, ಗ್ಯಾಸ್, ಪೆಟ್ರೋಲ್ ಬೆಲೆ ಏರಿಕೆ, ರೈತರ ಸಮಸ್ಯೆಗಳು, ರಾಜ್ಯದ ಸಾಲದ ಹೊರೆ, ಜಿಎಸ್‌ಟಿ ಪರಿಹಾರಧನ, ಕನ್ನಡ ಭಾಷೆ ಬಳಕೆ, ಕೋಮುವಾದ, ಬ್ರ್ಯಾಂಡ್ ಬೆಂಗಳೂರು ವರ್ಚಸ್ಸು, ರಸ್ತೆಗುಂಡಿಗಳಂತಹ ಪ್ರಮುಖ ಬಹುಚರ್ಚಿತ ವಿಷಯಗಳ ಬಗ್ಗೆ ಆರೋಗ್ಯಕರ ಚರ್ಚೆ ಆಗಲಿ.

ಅಧಿವೇಶನದ ಸ್ವಲ್ಪ ಸಮಯವೂ ಹಾಳಾಗದಂತೆ ನಮ್ಮ ಎಲ್ಲ ರಾಜಕಾರಣಿಗಳು ಚರ್ಚಿಸಿ ಸಕಾರಾತ್ಮಕ ಪರಿಹಾರ ನೀಡುವ ಕೆಲಸಗಳು ತುರ್ತಾಗಿ ಆಗಬೇಕಾಗಿದೆ. ವಿಷಯಾಧಾರಿತ ಚರ್ಚೆಗೆ ಅಧಿವೇಶನದಲ್ಲಿ ಈ ಬಾರಿಯಾದರೂ ಅವಕಾಶ ಸಿಗಲಿ.

ವಿನಯಕುಮಾರ್ ಚಿಂಚೋಳಿ, ಬಲಶೆಟ್ಟಿಹಾಳ

ಪೋಕ್ಸೊ ಕಾಯ್ದೆ: ಜಾಗೃತಿಗೆ ಸಿಗಲಿ ಆದ್ಯತೆ

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಆರೋಪ ಪ್ರಕರಣದಿಂದ ಪೋಕ್ಸೊ ಕಾಯ್ದೆ ಬಗ್ಗೆ, ಅದರ ಮಹತ್ವದ ಬಗ್ಗೆ ಚರ್ಚೆಗಳು ಮತ್ತೆ ಶುರುವಾಗಿವೆ. ಈ ಕಾಯ್ದೆ ಜಾರಿಗೆ ಬಂದು ಈಗಾಗಲೇ ಹತ್ತು ವರ್ಷಗಳಾದರೂ ಅದರ ಬಗ್ಗೆ ಬಹುತೇಕ ಪೋಷಕರಿಗೆ, ಮಕ್ಕಳಿಗೆ ಮಾಹಿತಿಯ ಕೊರತೆ ಇರುವುದು ಶೋಚನೀಯ ಸಂಗತಿ. ಯಾವುದೇ ಕಾಯ್ದೆಯನ್ನು ಜಾರಿಗೆ ತಂದಾಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆ ಕಾಯ್ದೆಗಳ ಬಗ್ಗೆ ಜನಸಾಮಾನ್ಯರಲ್ಲಿ ಕಡ್ಡಾಯವಾಗಿ ಜಾಗೃತಿ ಮೂಡಿಸಬೇಕು. ಈ ದಿಸೆಯಲ್ಲಿ ಸರ್ಕಾರಗಳು ಗಮನಹರಿಸದೇ ಇರುವುದು ಸಂತ್ರಸ್ತರಿಗೆ ಮಾಡುವ ಅನ್ಯಾಯವಾಗಿದೆ. ಅದರಲ್ಲೂ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳನ್ನು ತಡೆಯುವ, ದೌರ್ಜನ್ಯ ಎಸಗಿದ ಅಪರಾಧಿಗಳಿಗೆ ಶಿಕ್ಷೆ ವಿಧಿಸುವ ಪೋಕ್ಸೊ ಕಾಯ್ದೆಯ ಬಗ್ಗೆ ಜಾಗೃತಿಯನ್ನು ಕಡ್ಡಾಯವಾಗಿ ಜನಸಾಮಾನ್ಯರು ಮತ್ತು ಮಕ್ಕಳಲ್ಲಿ ಮೂಡಿಸಲೇಬೇಕಿದೆ. ಸರ್ಕಾರಗಳು ಈಗಲಾದರೂ ಈ ದಿಸೆಯಲ್ಲಿ ಶೀಘ್ರವಾಗಿ ಕಾರ್ಯಪ್ರವೃತ್ತವಾಗಲಿ.

ಲಕ್ಷ್ಮಿಕಾಂತ ಮಿರಜಕರ, ಶಿಗ್ಗಾವಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೋದಿ ಅವರ ಮೆಬ್ಯಾಕ್ ತಂಪು ಕನ್ನಡಕ

ರಾಜಕೀಯ ನಾಯಕರ ದುಬಾರಿ ದಿರಿಸು

ರಾಜಕೀಯ ಪಕ್ಷಗಳ ಹಲವು ನಾಯಕರು ಸಾಮಾನ್ಯವಾಗಿ ಖಾದಿ ಬಟ್ಟೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಆದರೆ, ಹಲವು ನಾಯಕರಿಗೆ ದುಬಾರಿ ವಸ್ತುಗಳನ್ನು ಬಳಸುವ ಅಭ್ಯಾಸ ಇದೆ. ದುಬಾರಿ ವಸ್ತುಗಳ ಬಳಕೆಯು ಹಲವು ಬಾರಿ ವಿವಾದದ ಸ್ವರೂಪವನ್ನೂ ಪಡೆದುಕೊಂಡದ್ದಿದೆ. ಪ್ರತಿಸ್ಪರ್ಧಿ ಪಕ್ಷಗಳ ಮುಖಂಡರೇ ಈ ಕುರಿತು ಟೀಕೆ ಮಾಡುವ ಮೂಲಕ ಜನರಿಗೆ ಮಾಹಿತಿ ನೀಡಿದ ನಿದರ್ಶನಗಳು ಇವೆ. ಪ್ರಧಾನಿ ನರೇಂದ್ರ ಮೋದಿ ಅವರ ಸೂಟು, ರಾಹುಲ್ ಅವರ ಜಾಕೆಟ್ ಮತ್ತು ಟಿ-ಶರ್ಟ್, ಅಮಿತ್ ಶಾ ಅವರ ಮಫ್ಲರ್ ಇಂತಹುದಕ್ಕೆ ಕೆಲವು ಉದಾಹರಣೆಗಳು

‘ಮೋದಿಯ ₹10 ಲಕ್ಷದ ಸೂಟು, ಒಂದೂವರೆ ಲಕ್ಷದ ಕನ್ನಡಕ’

ಪ್ರಧಾನಿ ನರೇಂದ್ರ ಮೋದಿ ಅವರ ಉಡುಪುಗಳು ಹಲವು ಬಾರಿ ಸುದ್ದಿ ಮಾಡಿವೆ. 2015ರಲ್ಲಿ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮ ಅವರು ಭಾರತಕ್ಕೆ ಭೇಟಿ ನೀಡಿದ್ದಾಗ, ಮೋದಿ ಅವರು ಧರಿಸಿದ್ದ ಸೂಟು ಬಾರಿ ವಿವಾದಕ್ಕೆ ಕಾರಣವಾಗಿತ್ತು.

‘ಸೂಟಿಗೆ ಬಳಸಿದ್ದ ಬಟ್ಟೆಯಲ್ಲಿ ‘ನರೇಂದ್ರ ದಾಮೋದರದಾಸ್ ಮೋದಿ’ ಎಂದು ಚಿನ್ನದ ಎಳೆಯಲ್ಲಿ ನೇಯಲಾಗಿತ್ತು. ಸೂಟಿನುದ್ದಕ್ಕೂ ಈ ನೇಯ್ಗೆ ಇತ್ತು. ಇದು ಹತ್ತು ಲಕ್ಷದ ಸೂಟು. ತನ್ನನ್ನು ತಾನು ಫಕೀರ ಎಂದು ಕರೆದುಕೊಳ್ಳುವ ಮೋದಿ ಅವರು ₹10 ಲಕ್ಷದ ಸೂಟು ಧರಿಸಿದ್ದಾರೆ’ ಎಂದು ಕಾಂಗ್ರೆಸ್, ಎಎಪಿ ಲೇವಡಿ ಮಾಡಿದವು. ಮೋದಿ ನೇತೃತ್ವದ ಸರ್ಕಾರವನ್ನು ಸೂಟು-ಬೂಟಿನ ಸರ್ಕಾರ ಎಂದೇ ಕಾಂಗ್ರೆಸ್ ಕರೆಯಿತು. ಮೋದಿ ಅವರನ್ನು ದುಬಾರಿ ಫಕೀರ ಎಂದೂ ಕರೆಯಲಾಯಿತು. ವಿವಾದಕ್ಕೆ ಕಾರಣವಾಗಿದ್ದ ಈ ಸೂಟನ್ನು ಉದ್ಯಮಿಯೊಬ್ಬರು ಮೋದಿ ಅವರಿಗೆ ಉಡುಗೊರೆ ನೀಡಿದ್ದರು ಎಂದು ಪ್ರಧಾನಿ ಕಚೇರಿ ಮಾಹಿತಿ ನೀಡಿತ್ತು. 2016ರಲ್ಲಿ ಈ ಸೂಟನ್ನು ಪ್ರಧಾನಿ ಕಚೇರಿ ಹರಾಜಿಗೆ ಹಾಕಿತ್ತು. ಗುಜರಾತಿನ ಉದ್ಯಮಿಯೊಬ್ಬರು ಅದನ್ನು ₹4.30 ಕೋಟಿಗೆ ಖರೀದಿಸಿದ್ದರು. ಈ ಹಣವನ್ನು ಪ್ರಧಾನಿ ಕಚೇರಿಯು ಸ್ವಚ್ಛಭಾರತ ನಿಧಿಗೆ ಜಮೆ ಮಾಡಿರುವುದಾಗಿ ಹೇಳಿತ್ತು.

2019ರಲ್ಲಿ ಸೂರ್ಯಗ್ರಹಣವನ್ನು ವೀಕ್ಷಿಸುತ್ತಿರುವ ಚಿತ್ರಗಳನ್ನು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದರು. ಆದರೆ ಆ ಚಿತ್ರಗಳು ಹೆಚ್ಚು ಸದ್ದು ಮಾಡಿದ್ದು ಬೇರೆಯದ್ದೇ ಕಾರಣಕ್ಕೆ. ಮೋದಿ ಅವರು ಸೂರ್ಯಗ್ರಹಣದ ವೇಳೆ ‘ಮೆಬ್ಯಾಕ್’ ಬ್ರ್ಯಾಂಡ್‌ನ ತಂಪು ಕನ್ನಡಕವನ್ನು ಧರಿಸಿದ್ದರು. ಮರ್ಸಿಡಿಸ್ ಕಂಪನಿಯ ಐಷಾರಾಮಿ ಕಾರು ಮೆಬ್ಯಾಕ್ ಅನ್ನು ರೂಪಿಸಿದ್ದ ವೆಲ್‌ಹೆಲ್ಮ್ ಮೆಬ್ಯಾಕ್ ಮತ್ತವರ ಮಗ ಕಾರ್ಲ್ ಮೆಬ್ಯಾಕ್ ಒಡೆತನದ, ಮೆಬ್ಯಾಕ್ ಕಂಪನಿ ಈ ಕನ್ನಡಕವನ್ನು ತಯಾರಿಸುತ್ತದೆ. ಈ ಕಂಪನಿ ತಯಾರಿಸುವ ಪ್ರತಿ ಕನ್ನಡಕವನ್ನು ಕೈಯಿಂದ ತಯಾರಿಸಲಾಗಿರುತ್ತದೆ ಮತ್ತು ಅತ್ಯಮೂಲ್ಯವಾದ ವಸ್ತುಗಳನ್ನು ಮಾತ್ರ ಅದರಲ್ಲಿ ಬಳಸಲಾಗುತ್ತದೆ. ಮೋದಿ ಅವರು ಧರಿಸಿದ್ದ ಮಾದರಿಯ ಕನ್ನಡಕದ ಬೆಲೆ 2019ರಲ್ಲೇ ₹1.60 ಲಕ್ಷದಷ್ಟಿತ್ತು.

ಮೋದಿ ಅವರು ಬಳಸುವ ಮೋಂಟ್‌ಬ್ಲಾಂಕ್ ಪೆನ್ ಸಹ ದುಬಾರಿ ಬೆಲೆಯದ್ದೇ. ವಿರೋಧ ಪಕ್ಷಗಳ ಟೀಕೆಗೆ ಈ ಪೆನ್ ಸಹ ಹಲವು ಬಾರಿ ಗುರಿಯಾಗಿದ್ದಿದೆ. ಹಲವು ವಿದೇಶ ಪ್ರವಾಸಗಳಲ್ಲಿ ಮೋದಿ ಅವರು ಈ ಪೆನ್ ಬಳಸಿದ್ದಾರೆ. ಇದು ಮೋದಿ ಅವರಿಗೆ ಉಡುಗೊರೆಯಾಗಿ ಬಂದದ್ದು ಎಂದು ಪ್ರಧಾನಿ ಕಚೇರಿ ಮಾಹಿತಿ ನೀಡಿದೆ. ಮೋಂಟ್‌ಬ್ಲಾಂಕ್ ಕಂಪನಿಯ ಫೌಂಟನ್ ಮಾದರಿಯ ಈ ಪೆನ್‌ನ ಬೆಲೆ ₹1.30 ಲಕ್ಷದಷ್ಟಿದೆ. ಮೋದಿ ಅವರು ಬಳಸುವ ದುಬಾರಿ ಕೈಗಡಿಯಾರಗಳ ಬಗ್ಗೆಯೂ ವಿಪಕ್ಷಗಳು ಹಲವು ಬಾರಿ ಟೀಕೆ ಮಾಡಿವೆ.

ಪ್ರಧಾನಿ ಮೋದಿ ಅವರ ಸೂಟ್‌ನಲ್ಲಿ ‘ನರೇಂದ್ರ ದಾಮೋದರದಾಸ್ ಮೋದಿ’ ಎಂದು ನೇಯಲಾಗಿತ್ತು

ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಬರ್‌ಬೆರಿ ಕಂಪನಿಯ ಮಫ್ಲರ್ ಧರಿಸಿದ್ದನ್ನು ತೋರಿಸುವ ಟ್ವೀಟ್‌ನ ಸ್ಕ್ರೀನ್‌ಶಾಟ್ ಚಿತ್ರ

‘ಶಾ ಮಫ್ಲರ್ ಬೆಲೆ ₹80,000’

ಬಿಜೆಪಿ ನಾಯಕ ಅಮಿತ್ ಶಾ ಸಹ ದುಬಾರಿ ಬೆಲೆಯ ವಸ್ತುಗಳನ್ನು ಬಳಸುತ್ತಾರೆ ಎಂಬ ವಿಚಾರವನ್ನು ಕಾಂಗ್ರೆಸ್ ಬಿಚ್ಚಿಟ್ಟಿದೆ.‘ಕೇಂದ್ರ ಗೃಹಸಚಿವ ₹80,000 ಬೆಲೆಯ ಮಫ್ಲರ್ ಬಳಸುತ್ತಾರೆ. ಅವರು ಧರಿಸುವ ಕನ್ನಡಕದ ಬೆಲೆ ₹2.5 ಲಕ್ಷ’ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಆರೋಪಿಸಿದ್ದಾರೆ. ರಾಹುಲ್ ಗಾಂಧಿ ಅವರು ಬಳಸುತ್ತಿರುವ ಟಿ-ಶರ್ಟ್ ₹41 ಸಾವಿರ ಮೌಲ್ಯದ್ದು ಎಂಬ ಬಿಜೆಪಿ ಆರೋಪಕ್ಕೆ ಪ್ರತಿಯಾಗಿ ಗೆಹಲೋತ್ ಈ ಪ್ರತ್ಯಾರೋಪ ಮಾಡಿದ್ದಾರೆ.

ಭಾರತ ಒಗ್ಗೂಡಿಸಿ ಯಾತ್ರೆಯ ಯಶಸ್ಸನ್ನು ಅರಗಿಸಿಕೊಳ್ಳಲು ಆಗದ ಬಿಜೆಪಿ, ಟಿ-ಶರ್ಟ್ ವಿಚಾರವಾಗಿ ಗೊಂದಲ ಎಬ್ಬಿಸಲು ಮುಂದಾಗಿರುವುದು ಸರಿಯಲ್ಲ ಎಂದು ಗೆಹಲೋತ್ ಹೇಳಿದ್ದಾರೆ. ‘ರಾಹುಲ್ ಟಿ ಶರ್ಟ್ ಬಗ್ಗೆ ಮಾತನಾಡುವ ಮುನ್ನ, ನಿಮ್ಮ ನಾಯಕ ಅಮಿತ್ ಶಾ ಅವರು ಬಳಸುವ ದುಬಾರಿ ಕನ್ನಡಕ ಹಾಗೂ ಮಫ್ಲರ್ ಬಗ್ಗೆಯೂ ತಿಳಿದುಕೊಳ್ಳಿ’ ಎಂದು ಅವರು ಬಿಜೆಪಿಗೆ ತಿರುಗೇಟು ನೀಡಿದ್ದಾರೆ.

ಶಾ ಅವರು ಬರ್‌ಬೆರಿ ಕಂಪನಿಯ ಮಫ್ಲರ್ ಧರಿಸಿದ್ದ ಚಿತ್ರವನ್ನು 2014ರಲ್ಲಿ ಟ್ವಿಟರ್ ಬಳಕೆದಾರರೊಬ್ಬರು ಹಂಚಿಕೊಂಡಿದ್ದರು. ಆಗ ಅದರ ಬೆಲೆ 520 ಡಾಲರ್ (ಈಗಿನ ಮೌಲ್ಯದಲ್ಲಿ ₹41,600) ಇತ್ತು ಎಂದು ಅವರು ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದರು.

ರಾಹುಲ್ ಜಾಕೆಟ್, ಟಿ-ಶರ್ಟ್

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಧರಿಸುವ ಬಟ್ಟೆಗಳ ಮೇಲೆ ಬಿಜೆಪಿ ನಾಯಕರು ಸದಾ ಕಣ್ಣಿಟ್ಟಿರುತ್ತಾರೆ. ರಾಹುಲ್ ಅವರ ದುಬಾರಿ ಜಾಕೆಟ್, ಟಿ-ಶರ್ಟ್‌ಗಳ ಬಗ್ಗೆ ಬಿಜೆಪಿ ನಾಯಕರು ಸದಾ ಆಕ್ಷೇಪ ವ್ಯಕ್ತಪಡಿಸುತ್ತಿರುತ್ತಾರೆ. ಈಗ ರಾಹುಲ್ ಅವರ ಟಿ-ಶರ್ಟ್ ಸುದ್ದಿಯಾಗುತ್ತಿದೆ.

‘ಕಾಂಗ್ರೆಸ್‌ನ ಭಾರತವನ್ನು ಒಗ್ಗೂಡಿಸಿ ಯಾತ್ರೆಯ ವೇಳೆ ರಾಹುಲ್ ಧರಿಸಿದ್ದ ಟಿ-ಶರ್ಟ್ ಬರ್‌ಬೆರಿ ಕಂಪನಿಯದ್ದು. ಆ ಟಿ-ಶರ್ಟ್‌ನ ಬೆಲೆ ₹41,000’ ಎಂದು ಬಿಜೆಪಿಯ ಹಲವು ನಾಯಕರು ಹೇಳಿದ್ದಾರೆ. ರಾಹುಲ್ ಅವರ ಟಿ-ಶರ್ಟ್ ಮತ್ತು ಬರ್‌ಬೆರಿ ಜಾಲತಾಣದಲ್ಲಿರುವ ಟಿ-ಶರ್ಟ್‌ನಲ್ಲಿ ನಮೂದಿಸಿರುವ ಬೆಲೆಯ ಚಿತ್ರವನ್ನು ಬಿಜೆಪಿಯ ಹಲವು ನಾಯಕರು ಟ್ವೀಟ್ ಮಾಡಿದ್ದರು. ಈ ಚಿತ್ರಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

₹41,000 ಬೆಲೆಯ ಟಿ-ಶರ್ಟ್ ಬಗ್ಗೆ ಬಿಜೆಪಿ ಆಕ್ಷೇಪ ವ್ಯಕ್ತಪಡಿಸುತ್ತಿದ್ದಂತೆಯೇ, ಕಾಂಗ್ರೆಸ್ ನಾಯಕರು ಮೋದಿ ಅವರ ₹10 ಲಕ್ಷದ ಸೂಟಿನ ವಿಷಯವನ್ನು ಪ್ರಸ್ತಾಪಿಸಿದ್ದರು. ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಸಹ ಬಿಜೆಪಿ ಟ್ವೀಟ್‌ಗೆ ಆಕ್ಷೇಪ ವ್ಯಕ್ತಪಡಿಸಿದ್ದು ಗಮನಾರ್ಹ.

ರಾಹುಲ್ ಅವರ ಬಟ್ಟೆ ಸುದ್ದಿಯಾಗಿದ್ದು ಇದೇ ಮೊದಲಲ್ಲ. 2018ರಲ್ಲಿ ಈಶಾನ್ಯ ಭಾರತದಲ್ಲಿ ಚುನಾವಣಾ ಪ್ರಚಾರದಲ್ಲಿ ಇದ್ದಾಗ, ರಾಹುಲ್ ಅವರು ಪಾಪ್ ಸಂಗೀತ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದರು. ಆಗ ಅವರು ಧರಿಸಿದ್ದ ಜಾಕೆಟ್ ಬಗ್ಗೆ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿತ್ತು. ‘₹70,000 ಬೆಲೆಯ ಬರ್‌ಬೆರಿ ಜಾಕೆಟ್ ಧರಿಸಿರುವ ರಾಹುಲ್ ಗಾಂಧಿ, ಮೋದಿ ಅವರ ದಿರಿಸಿನ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಾರೆ’ ಎಂದು ಬಿಜೆಪಿ ಟ್ವೀಟ್ ಮಾಡಿತ್ತು.



ರಾಹುಲ್ ಗಾಂಧಿ ಅವರ ಬರ್‌ಬೆರಿ ಟಿ-ಶರ್ಟ್

ಸಿದ್ದರಾಮಯ್ಯ ಹ್ಯೂಬ್ಲೊ ವಾಚು

ಸಿದ್ದರಾಮಯ್ಯ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕಟ್ಟಿಕೊಳ್ಳುತ್ತಿದ್ದ ವಾಚು ವಿವಾದಕ್ಕೆ ಕಾರಣವಾಗಿತ್ತು. ಜೆಡಿಎಸ್ ನಾಯಕ ಕುಮಾರಸ್ವಾಮಿ ಅವರು 2016ರಲ್ಲಿ ಮಾಧ್ಯಮಗೋಷ್ಠಿ ನಡೆಸಿ ಈ ಬಗ್ಗೆ ಗಮನ ಸೆಳೆದಿದ್ದರು. ಇದು ಹ್ಯೂಬ್ಲೊ ವಾಚು, ಇದನ್ನು ಗಣಿ ಉದ್ಯಮಿಯೊಬ್ಬರು ಸಿದ್ದರಾಮಯ್ಯ ಅವರಿಗೆ ಉಡುಗೊರೆ ನೀಡಿದ್ದಾರೆ ಎಂದು ಅವರು ಆರೋಪಿಸಿದ್ದರು. ಈ ಬಗ್ಗೆ ದಾಖಲೆಗಳನ್ನು ಬಿಡುಗಡೆ ಮಾಡುವುದಾಗಿಯೂ ಅವರು ಹೇಳಿದ್ದರು.

ಬಳಿಕ, ಬಿಜೆಪಿ ಕೂಡ ಈ ಬಗ್ಗೆ ಭಾರಿ ಗದ್ದಲ ಎಬ್ಬಿಸಿತ್ತು. ವಿಧಾನಸಭೆಯ ಅಧಿವೇಶನದಲ್ಲಿ ಈ ವಿಚಾರದಲ್ಲಿ ವಾಗ್ವಾದ ನಡೆದಿತ್ತು. ಕೆಲ ದಿನಗಳ ಕೋಲಾಹಲದ ಬಳಿಕ, ಇದು ಮಧ್ಯಪ್ರಾಚ್ಯ ದೇಶದಲ್ಲಿರುವ ತಮ್ಮ ವೈದ್ಯ ಮಿತ್ರರೊಬ್ಬರು ಕೊಟ್ಟ ವಾಚು ಎಂದು ಸಿದ್ದರಾಮಯ್ಯ ಹೇಳಿದ್ದರು. ಆ ವ್ಯಕ್ತಿಯು ಸರ್ಕಾರ ಮತ್ತು ಸರ್ಕಾರದ ಸಂಸ್ಥೆಗಳ ಜೊತೆಗೆ ಯಾವುದೇ ವ್ಯವಹಾರ ಹೊಂದಿಲ್ಲ ಎಂಬ ಸ್ಪಷ್ಟನೆಯನ್ನೂ ಕೊಟ್ಟಿದ್ದರು. ತಮ್ಮನ್ನು ಆ ವ್ಯಕ್ತಿಯು ಭೇಟಿ ಮಾಡಲು ಬಂದಾಗ ಅವರ ಕೈಯಲ್ಲಿದ್ದ ವಾಚು ಕಂಡು ಖುಷಿಪಟ್ಟಿದ್ದೆ. ಅದಕ್ಕಾಗಿ ಅವರು ಅದನ್ನು ತಮಗೇ ಕೊಟ್ಟರು ಎಂದು ಸಿದ್ದರಾಮಯ್ಯ ಹೇಳಿದ್ದರು.

ವಿವಾದವು ತೀವ್ರಗೊಂಡ ಬಳಿಕ, ವಿಧಾನಸಭೆಯ ಸ್ಪೀಕರ್‌ಗೆ ವಾಚನ್ನು ಒಪ್ಪಿಸುವ ನಿರ್ಧಾರಕ್ಕೆ ಸಿದ್ದರಾಮಯ್ಯ ಬಂದರು. ಮುಖ್ಯಮಂತ್ರಿಗಳಿಗೆ ಸಿಕ್ಕ ಉಡುಗೊರೆಯ ಪ್ರದರ್ಶನದಲ್ಲಿ ಈ ವಾಚನ್ನೂ ಈಗ ಇರಿಸಲಾಗಿದೆ. ಈ ವಾಚಿನ ಬೆಲೆ ₹70 ಲಕ್ಷ ಎಂದು ಕುಮಾರಸ್ವಾಮಿ ಹೇಳಿದ್ದರು. ಹುಬ್ಲೊ ಅತ್ಯಂತ ದುಬಾರಿ ಬ್ರ್ಯಾಂಡ್ ಆಗಿದ್ದು, ಸುಮಾರು ₹2 ಕೋಟಿ ಬೆಲೆಯ ವಾಚು ಕೂಡ ಇದೆ.

ಆಧಾರ: ಪಿಟಿಐ, ರಾಯಿಟರ್ಸ್, ಎಎಫ್‌ಪಿ, ಮೆಬ್ಯಾಕ್, ಹುಬ್ಲೊ, ಮೋಂಟ್‌ಬ್ಲಾಂಕ್, ಬರ್‌ಬೆರಿ ಕಂಪನಿಗಳ ಅಧಿಕೃತ ಜಾಲತಾಣಗಳು

‘₹2.5 ಲಕ್ಷ ಬೆಲೆಯ ಕೈಚೀಲ’!

ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರಾ ಅವರು ₹2.5 ಲಕ್ಷ ಬೆಲೆಯ ಕೈಚೀಲ ಬಳಸುತ್ತಾರೆ ಎಂಬ ಆರೋಪ ಕೇಳಿಬಂದಿತ್ತು. ಇದೇ ಆಗಸ್ಟ್‌ನಲ್ಲಿ ಲೋಕಸಭೆಯಲ್ಲಿ ಬೆಲೆ ಏರಿಕೆ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಮೊಯಿತ್ರಾ ಬಳಸುತ್ತಿದ್ದ ಕೈಚೀಲದ ವಿಚಾರ ಚರ್ಚೆಗೆ ಬಂದಿತ್ತು.

ಪಕ್ಷದ ಮತ್ತೊಬ್ಬ ಸಂಸದೆ ಕಾಕೋಲಿ ಘೋಷ್ ಅವರು ಬೆಲೆ ಏರಿಕೆ ಬಗ್ಗೆ ಸದನದಲ್ಲಿ ಸರ್ಕಾರವನ್ನು ಟೀಕಿಸಲು ಮುಂದಾದರು. ಘೋಷ್ ಪಕ್ಕದಲ್ಲೇ ಕುಳಿತಿದ್ದ ಮೊಯಿತ್ರಾ ಅವರು ತಮ್ಮ ಕೈಚೀಲವನ್ನು ಮೇಜಿನ ಕೆಳಗೆ ಅಡಗಿಸಿ ಇಟ್ಟರು ಎಂದು ಆರೋಪಿಸಲಾಗಿತ್ತು. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗಿತ್ತು. ‘ಮೊಯಿತ್ರಾ ಅವರು ‘ಲೂಯಿಸ್ ವಿಟ್ಟನ್’ ಕಂಪನಿಯ ದುಬಾರಿ ಬೆಲೆಯ ಕೈಚೀಲವನ್ನು ಕೇವಲ ಐದು ಸೆಕೆಂಡ್‌ನಲ್ಲಿ ಅಡಗಿಸಿಟ್ಟರು. ಇವರು ಬಂಗಾಳದ ಜಾದೂಗಾರ್ತಿಯೇ ಸರಿ’ ಎಂದು ಟ್ವಿಟರ್ ಬಳಕೆದಾರರೊಬ್ಬರು ಲೇವಡಿ ಮಾಡಿದ್ದರು.

ದುಬಾರಿ ಕೈಚೀಲ ಬಳಸುವ ಮೊಯಿತ್ರಾ ಅವರಿಗೆ ಬೆಲೆ ಏರಿಕೆ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಬಿಜೆಪಿ ಕಿಡಿಕಾರಿತ್ತು. ಆದರೆ, ಇದಕ್ಕೆ ಸ್ಪಷ್ಟನೆ ನೀಡಿದ್ದ ಮೊಯಿತ್ರಾ, 2019ರಿಂದಲೂ ಸದನಕ್ಕೆ ಇದೇ ಕೈಚೀಲವನ್ನು ತರುತ್ತಿದ್ದೇನೆ. ಇದರಲ್ಲಿ ಮುಚ್ಚಿಡುವಂತಹದ್ದು ಏನೂ ಇಲ್ಲ’ ಎಂದು ಹೇಳಿದ್ದರು.

ದುಬಾರಿ ಕೈಚೀಲ ಕೊಳ್ಳಲು ಹಾಗೂ ಸುಪ್ರೀಂ ಕೋರ್ಟ್ ವಕೀಲರ ಶುಲ್ಕ ಭರಿಸಲು ಮೊಯಿತ್ರಾ ಅವರಿಗೆ ಹಣ ಎಲ್ಲಿಂದ ಬರುತ್ತದೆ ಎಂದು ಸಾಮಾಜಿಕ ಜಾಲತಾಣ ಬಳಕೆದಾರರು ಪ್ರಶ್ನಿಸಿದ್ದರು. ‘ಪ್ರಧಾನಿ ಮೋದಿ ಅವರು ತಮ್ಮ ₹10 ಲಕ್ಷ ಬೆಲೆಯ ಸೂಟ್ ಸೇರಿದಂತೆ ಇತರ ವಸ್ತುಗಳನ್ನು ಹರಾಜು ಹಾಕಿದ ಬಳಿಕ ಒಂದಿಷ್ಟು ಹಣವನ್ನು ಕಳುಹಿಸಿದ್ದರು. ಈ ಹಣದಿಂದ ಬ್ಯಾಗ್ ಖರೀದಿಸಿದೆ. ಉಳಿದ ಹಣವನ್ನು ವಕೀಲರಿಗೆ ನೀಡಿದೆ’ ಎಂದು ವ್ಯಂಗ್ಯದ ಧಾಟಿಯಲ್ಲಿ ಮೊಯಿತ್ರಾ ಉತ್ತರಿಸಿದ್ದರು. ಜಾರಿ ನಿರ್ದೇಶನಾಲಯದ ನಿರ್ದೇಶಕರ ಸೇವಾವಧಿಯನ್ನು ಅಕ್ರಮವಾಗಿ ವಿಸ್ತರಿಸಲಾಗಿದೆ ಎಂದು ಆರೋಪಿಸಿ ಮೊಯಿತ್ರಾ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಾದ ಮಂಡಿಸುವ ವಕೀಲರಿಗೆ ನೀಡಲಾಗುವ ಹಣದ ಮೂಲದ ಬಗ್ಗೆ ಮೊಯಿತ್ರಾ ಅವರನ್ನು ಸಾಮಾಜಿಕ ಜಾಲತಾಣ ಬಳಕೆದಾರರು ಪ್ರಶ್ನಿಸಿದ್ದರು.

ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಬಳಸುತ್ತಿರುವ ‘ಲೂಯಿಸ್ ವಿಟ್ಟನ್’ ಕಂಪನಿಯ ಕೈಚೀಲ

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಟಿ 20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಆಯ್ಕೆ ಮಾಡಿರುವ ಭಾರತದ ತಂಡ ಚಾಂಪಿಯನ್ ಆಗುವ ವಿಶ್ವಾಸ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 224

ತಪಸ್ಸಿಗೆ ಹೊರಟ ಪಾರ್ವತಿ

ನಾರದನ ಮಾರ್ಗದರ್ಶನದಂತೆ ಪರಮೇಶ್ವರನನ್ನು ತಪಸ್ಸಿನಿಂದಲೇ ಒಲಿಸಿಕೊಳ್ಳಲು ಪಾರ್ವತಿ ಸಂಕಲ್ಪಮಾಡಿದಳು. ಸಖಿಯರಾದ ಜಯೆ-ವಿಜಯೆಯರನ್ನು ತಂದೆಯ ಬಳಿಗೆ ಕರೆದೊಯ್ದು, ಅವರ ಮೂಲಕ ‘ಓ ಪರ್ವತರಾಜನೆ, ಶಂಕರನನ್ನು ತಪಸ್ಸಿನಿಂದಲ್ಲದೆ ಇನ್ನಾವ ವಿಧದಿಂದಲೂ ಪಡೆಯಲು ಸಾಧ್ಯವಿಲ್ಲ. ಆದುದರಿಂದ ಗಿರಿಜೆಯು ತಪಸ್ಸನ್ನಾಚರಿಸಲು ನಿರ್ಧರಿಸಿದ್ದಾಳೆ. ಇದಕ್ಕೆ ನೀನು ಅನುಮತಿ ಕೊಡಬೇಕು’ ಎಂದು ಕೋರಿಕೆ ಸಲ್ಲಿಸಿದಳು.

ಆಗ ಹಿಮವಂತ ‘ಎಲೈ ಸಖಿಯರೇ, ಪಾರ್ವತಿಯ ನಿರ್ಧಾರ ನನಗೆ ಇಷ್ಟವಾಗಿದೆ. ಆದರೆ ಅವಳ ತಾಯಿಯಾದ ಮೇನಾದೇವಿ ಅನುಮತಿಯನ್ನು ಕೇಳಿರಿ. ಅವಳ ತಾಯಿ ಒಪ್ಪಿದರೆ, ನನ್ನ ಅಭ್ಯಂತರವೇನೂ ಇಲ್ಲ’ ಎಂದ. ಸಖಿಯರು ಮೇನಾದೇವಿಯ ಬಳಿಗೆ ಹೋಗಿ, ‘ಓ ಮಾತೆ, ನಿನ್ನ ಪುತ್ರಿಯು ಶಿವನನ್ನ ಉದ್ದೇಶಿಸಿ ಮಹಾತಪವನ್ನ ಆಚರಿಸಬೇಕೆಂದಿರುವಳು. ಇದಕ್ಕೆ ತಂದೆ ಅನುಮತಿ ನೀಡಿದ್ದಾರೆ. ಈಗ ನಿನ್ನ ಅನುಮತಿಯನ್ನು ಕೇಳುತ್ತಲಿರುವಳು. ಈಗ ನಿನ್ನ ಅಪ್ಪಣೆ ಲಭಿಸಿದರೆ ಅವಳು ತಪವನ್ನಾಚರಿಸುವಳು’ ಎಂದರು.

ಸಖಿಯರ ಮಾತನ್ನು ಮೇನಾದೇವಿ ಅಂಗೀಕರಿಸಲಿಲ್ಲ. ಆಗ ಪಾರ್ವತಿ ತಾಯಿಗೆ ಕೈ ಮುಗಿದು, ‘ಓ ಮಾತೆ! ಈಶ್ವರನನ್ನು ಪಡೆಯುವುದಕ್ಕಾಗಿ ತಪವನ್ನ ಆಚರಿಸಲು ನಾಳೆ ಬೆಳಗ್ಗೆ ಹೊರಡಬೇಕೆಂದಿರುವೆ. ತಪೋವನಕ್ಕೆ ಹೋಗಲು ನನಗೆ ಅನುಮತಿಯನ್ನು ದಯಪಾಲಿಸು’ ಎಂದು ಪ್ರಾರ್ಥಿಸಿದಳು.

ಪಾರ್ವತಿಯ ಮಾತನ್ನು ಕೇಳಿ ಮೇನಾದೇವಿಯು ತುಂಬಾ ದುಃಖಗೊಂಡಳು. ಅವಳು ‘ಪಾರ್ವತಿ, ನೀನು ತಪಸ್ಸು ಮಾಡಲೇಬೇಕೆಂದಿದ್ದರೆ ಮನೆಯಲ್ಲಿಯೇ ಮಾಡು. ನಮ್ಮ ಮನೆಯಲ್ಲಿಯೇ ಎಲ್ಲಾ ದೇವತೆಗಳೂ ಇರುವರು. ಎಲ್ಲಾ ತೀರ್ಥಗಳು ಮತ್ತು ಕ್ಷೇತ್ರಗಳೂ ಇರುವುವು. ನೀನು ಈ ಹಿಂದೆ ಹೊರಗೆ ಹೋಗಿ ಏನು ಸಾಧಿಸಿದೆ? ನಿನ್ನ ಶರೀರವು ತುಂಬಾ ಕೋಮಲವಾದುದು. ತಪಸ್ಸಾದರೋ ಮಹಾ ಕಠಿಣವಾದುದು. ಅದು ಕಾಡಿನಲ್ಲಿ ಮತ್ತಷ್ಟು ಕಠೋರವಾಗಿರುತ್ತದೆ. ಆದುದರಿಂದ ತಪಸ್ಸಿಗಾಗಿ ಬೇರೆ ಕಡೆಗೆ ನೀನು ಹೋಗಬೇಡ. ಇಷ್ಟಾರ್ಥವನ್ನು ಪಡೆಯಲು ಸ್ತ್ರೀಯರು ತಪೋವನಕ್ಕೆ ಹೋದುದನ್ನು ನಾನು ಎಲ್ಲಿಯೂ ಕೇಳಿಲ್ಲ. ಹೀಗಾಗಿ ನೀನು ತಪಸ್ಸಿಗಾಗಿ ಕಾಡಿಗೆ ತೆರಳಲು ನಾನು ಅನುಮತಿ ನೀಡುವುದಿಲ್ಲ’ ಎಂದು ಮಗಳನ್ನು ತಡೆದಳು.

ಹೀಗೆ ತಪಸ್ಸಿಗಾಗಿ ತಪೋವನಕ್ಕೆ ತೆರಳಲು ಮೇನಾದೇವಿಯು ತಡೆದುದರಿಂದ ಪಾರ್ವತಿಗೆ ಉಮಾ (ಉ = ಪಾರ್ವತಿ, ಮಾ = ತಪವು ಬೇಡ) ಎಂಬ ಹೆಸರು ಬಂತು.

ತಾಯಿಯ ನಿಲುವಿನಿಂದ ಪಾರ್ವತಿಗೆ ದುಃಖವಾಯಿತು. ‘ಶಿವನಿಲ್ಲದೆ ನನಗೆ ಬದುಕಿಲ್ಲ, ಶಿವನನ್ನು ಒಲಿಸಿಕೊಳ್ಳಲು ಹಿಂದೆ ಮಾಡಿದ ಪ್ರಯತ್ನಕ್ಕೆ ನನ್ನ ಸೌಂದರ್ಯದ ಗರ್ವ ಅಡ್ಡಿಯಾಯಿತು. ಈಗ ನಾನು ತನು-ಮನ ದಂಡಿಸಿ ಕಠೋರ ತಪವನ್ನ ಆಚರಿಸಬೇಕೆಂದಿರುವೆ. ಇದಕ್ಕೆ ಮನೆ ಸೂಕ್ತವಾದ ಸ್ಥಳವಲ್ಲ, ತಪೋವನವೇ ಆಗಬೇಕು. ಶಿವನನ್ನ ಸುಲಭವಾಗಿ ಅವನನ್ನು ಪಡೆಯಲು ಸಾಧ್ಯವೇ ಇಲ್ಲ. ಇದಕ್ಕಾಗಿ ಕಾಡಿಗೆ ಹೋಗಿ ತಪವನ್ನಾಚರಿಸಲು ನಿರ್ಧರಿಸಿದ್ದೇನೆ. ದಯವಿಟ್ಟು ನನಗೆ ಹೋಗಲು ಅನುಮತಿ ಕೊಡು’ ಎಂದು ಬೇಡಿಕೊಂಡಳು.

ಪಾರ್ವತಿ ದಯನೀಯವಾಗಿ ಕಣ್ಣೀರು ಸುರಿಸುತ್ತಾ ಬೇಡಿಕೊಂಡಿದ್ದನ್ನು ನೋಡಿದ ತಾಯಿಯ ಮನಸ್ಸು ಕರಗಿ, ಅವಳಿಗೆ ಅನುಮತಿಯನ್ನು ಕೊಟ್ಟಳು. ತಾಯಿಯ ಅನುಮತಿ ಲಭಿಸಿದಾಗ ತುಂಬಾ ಸಂತುಷ್ಟಳಾದ ಪಾರ್ವತಿ ತಂದೆ-ತಾಯಿಯರಿಗೆ ನಮಸ್ಕರಿಸಿ, ಸಂತೋಷದಿಂದ ಸಖಿಯರೊಡನೆ ತಪಸ್ಸಿಗಾಗಿ ಕಾಡಿಗೆ ಹೊರಟಳು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಗುಜರಾತಿನ ಜನರೇ ಕೇಳಿಸಿಕೊಳ್ಳಿ. ನನ್ನ ವಿರುದ್ಧ ಪ್ರತಿಭಟನೆ ನಡೆಸಿದರೆ, ನಿಮ್ಮನ್ನು ಮುಗಿಸಿಬಿಡುತ್ತೇನೆ. ನೀವು ಏನು ಮಾಡುತ್ತೀರೋ ಮಾಡಿ, ನೋಡೇಬಿಡೋಣ’ ಎಂದು ಅರವಿಂದ ಕೇಜ್ರಿವಾಲ್ ಅವರು ಹೇಳುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಕೇಜ್ರಿವಾಲ್ ಅವರು ಗುಜರಾತಿನ ಜನರಿಗೆ ಬೆದರಿಕೆ ಹಾಕುತ್ತಿದ್ದಾರೆ. ಎಎಪಿ ಗುಜರಾತ್ ಚುನಾವಣೆಯಲ್ಲಿ ಗೆಲ್ಲುವ ಮೊದಲೇ ಈ ರೀತಿ ಬೆದರಿಕೆ ಹಾಕುತ್ತಿದೆ. ಇನ್ನು ಗೆದ್ದಮೇಲೆ ಹೇಗೆ ವರ್ತಿಸಬಹುದೋ? ಇಂತಹವರನ್ನು ಗುಜರಾತಿನ ಜನರು ಸ್ವೀಕರಿಸುತ್ತಾರೋ ಇಲ್ಲವೋ ನೋಡೋಣ ಎಂದು ಹಲವರು ಟ್ವೀಟ್ ಮಾಡಿದ್ದಾರೆ. ಗುಜರಾತ್ ಬಿಜೆಪಿಯ ಹಲವು ನಾಯಕರೂ ಈ ವಿಡಿಯೊವನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದಾರೆ.

‘ಇದು ಸುಳ್ಳು ಸುದ್ದಿ’ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘ಇದು ಹಳೆಯ ವಿಡಿಯೊ. 2016ರಲ್ಲಿ ಸೂರತ್‌ನಲ್ಲಿ ನಡೆದಿದ್ದ ಎಎಪಿ ಕಾರ್ಯಕ್ರಮ ಒಂದರಲ್ಲಿ ಕೇಜ್ರಿವಾಲ್ ಮಾತನಾಡಿದ್ದರು. ಆಗ ಅವರು, ‘ಅಮಿತ್ ಶಾ ಅವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಅವರ ವಿರುದ್ಧ ಪ್ರತಿಭಟನೆ ನಡೆಸುವವರಿಗೆ ಬೆದರಿಕೆ ಹಾಕುತ್ತಾರೆ. ಗುಜರಾತಿನ ಜನರೇ ಕೇಳಿಸಿಕೊಳ್ಳಿ. ನನ್ನ ವಿರುದ್ಧ ಪ್ರತಿಭಟನೆ ನಡಸಿದರೆ, ನಿಮ್ಮನ್ನು ಮುಗಿಸಿಬಿಡುತ್ತೇನೆ. ನೀವು ಏನು ಮಾಡುತ್ತೀರೋ ಮಾಡಿ, ನೋಡೇಬಿಡೋಣ ಎನ್ನುತ್ತಾರೆ’ ಎಂದು ಕೇಜ್ರಿವಾಲ್ ಹೇಳಿದ್ದರು. ಈ ವಿಡಿಯೊವನ್ನು ತುಂಡರಿಸಿ, ‘ಗುಜರಾತಿನ ಜನರೇ ಕೇಳಿಸಿಕೊಳ್ಳಿ. ನನ್ನ ವಿರುದ್ಧ ಪ್ರತಿಭಟನೆ ನಡಸಿದರೆ, ನಿಮ್ಮನ್ನು ಮುಗಿಸಿಬಿಡುತ್ತೇನೆ. ನೀವು ಏನು ಮಾಡುತ್ತೀರೋ ಮಾಡಿ, ನೋಡೇಬಿಡೋಣ’ ಎಂಬ ಮಾತುಗಳಷ್ಟೇ ಇರುವ ವಿಡಿಯೊವನ್ನು ಸೃಷ್ಟಿಸಲಾಗಿದೆ. ಇದನ್ನು ಹಂಚಿಕೊಳ್ಳುವ ಮೂಲಕ ತಪ್ಪು ಮಾಹಿತಿ ಹರಡಲಾಗುತ್ತಿದೆ’ ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ನಾಲ್ಕು ವರಗಳು

ಪರಿಮಿತಿಯನರಿತಾಶೆ, ಪರವಶತೆಯಳಿದ ಸುಖ |
ವಿರತಿಯೊಡವೆರೆದ ಲೋಕೋದ್ಯೋಗ ಯುಕ್ತಿ ||
ಪರಿಕಿಸುತ ಜೀವಿತವ ಸತ್ಯವನೆ ಪಿಡಿವ ಮತಿ |
ವರಗಳೀ ನಾಲ್ಕೆ ವರ – ಮಂಕುತಿಮ್ಮ || 714 ||

ಪದ-ಅರ್ಥ: ಪರಿಮಿತಿಯನರಿತಾಶೆ = ಪರಿಮಿತಿಯನು(ಮಿತಿಯನು) + ಅರಿತ + ಆಶೆ(ಆಸೆ), ವರವಶತೆಯಳಿದ = ಪರವಶತೆ(ಮೈಮರೆಸುವ ಉತ್ಸಾಹ) + ಅಳಿದ + ಸುಖ, ವಿರತಿಯೊಡವೆರೆದ = ವಿರತಿ(ವಿರಕ್ತಿ) + ಒಡಂ + ಎರೆದ, ಪರಿಕಿಸುತ = ಪರೀಕ್ಷಿಸುತ, ಮತಿ = ಬುದ್ಧಿ.

ವಾಚ್ಯಾರ್ಥ: ಮಿತಿಯಾದ ಆಸೆ, ಮೈಮರವೆಯನ್ನು ತರದ ಸುಖ, ವಿರಕ್ತಿಯೊಂದಿಗೆ ಬೆರೆತ ಲೋಕೋದ್ಯೋಗ ಕಾರ್ಯ, ಜೀವನವನ್ನು ಗಮನಿಸುತ ಸತ್ಯವನ್ನೇ ಹಿಡಿಯುವ ಬುದ್ಧಿ. ಇವೇ ನಾಲ್ಕು ವರಗಳು.

ವಿವರಣೆ: ವರ ಎಂದರೆ ಶ್ರೇಷ್ಠವೆಂಬ ಅರ್ಥವೂ ಇದೆ. ನಾವು ಬದುಕಿನಲ್ಲಿ ಶ್ರೇಷ್ಠತೆಯನ್ನು ಅಪೇಕ್ಷಿಸಿದರೆ ಕೆಲವು ಗುರಿಗಳು ಬೇಕು. ಆ ನಾಲ್ಕು ಗುರಿಗಳನ್ನು ಕಗ್ಗ ನೀಡುತ್ತದೆ. ಆಸೆಗಳು ತಪ್ಪಲ್ಲ. ಆದರೆ ಮಿತಿಯನರಿಯದ ಆಸೆ ಅಪಾಯಕ್ಕೆ ಆಹ್ವಾನ. ಅದಕ್ಕೇ ಬುದ್ಧ, ಆಸೆಯೇ ದುಃಖಕ್ಕೆ ಮೂಲ ಕಾರಣ ಎಂದ. ಮಿತಿಯಾದ ಆಸೆ ಸ್ಫೂರ್ತಿಯನ್ನುಕೊಡುತ್ತದೆ. ನಮಗೆ ಸುಖ ಬೇಕು. ಆದರೆ ಮೈಮರೆಸುವಂಥ ಉನ್ಮಾದದ ಸುಖ ಹಾನಿಕರ. ಅದೊಂದು ಅಮಲು. ಅಹಂಕಾರವನ್ನು ತರುತ್ತದೆ. ತಮಗೆ ದಕ್ಕಿದ ಸುಖ ಶಾಶ್ವತವೆಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಈ ಮೋಹ ಕಣ್ಣು ಕಟ್ಟಿಸುತ್ತದೆ, ಜೀವನದ ಉನ್ನತಿಗೆ ಅಡ್ಡವಾಗುತ್ತದೆ. ಲೋಕ ಕಾರ್ಯದಲ್ಲಿ ನಾವು-ಭಾಗಿಯಾಗಲೇಬೇಕು.ಪ್ರಪಂಚದ ಹಿತಕ್ಕಾಗಿ ಮನಮುಟ್ಟಿ ದುಡಿಯಬೇಕು. ಅದರೊಂದಿಗೆ ವಿರಕ್ತಿಯೂ ಸೇರಿರಬೇಕು. ಅಂದರೆ ನಾನು, ನನ್ನದು ಎನ್ನುವ ಅತಿಯಾದ ಆಸಕ್ತಿ ನಮ್ಮನ್ನು ಸ್ವಾರ್ಥಿಗಳನ್ನಾಗಿ ಮಾಡುತ್ತದೆ. ಮಾಡುವ ಪ್ರತಿಯೊಂದು ಕಾರ್ಯದಲ್ಲೂ ಪ್ರತಿಫಲವನ್ನು ಅಪೇಕ್ಷಿಸುತ್ತದೆ. ಆ ಪ್ರತಿಫಲ ಹಣ, ವಸ್ತುಗಳು, ಮರ್ಯಾದೆ, ಪದವಿ ಯಾವುದಾದರೂ ಆಗಬಹುದು. ವಿರಕ್ತಿಯೆಂದರೆ ನನ್ನ ಕೆಲಸ ಒಂದು ಪೂಜೆ ಇದ್ದಂತೆ, ಅಲ್ಲಿ ನನಗೆ ನ್ಯಾಯವಾಗಿ ದೊರಕುವುದು ಸಿಕ್ಕರೆ ಸಾಕು. ಮತ್ತೆ ವಿಶೇಷವಾದ ಯಾವುದೇ ಅಪೇಕ್ಷೆ ಇರದಿರುವುದು ಒಂದು ಮಟ್ಟದ ವಿರಕ್ತಿ. ವಿರಕ್ತಿ ಇರದೇ ಹೋದಾಗ ಸಮಾಜದ ಸಕಲ ಕಾರ್ಯವೂ ತಮ್ಮ ವೈಯಕ್ತಿಕ ಲಾಭವೆಂದೇ ಬಗೆಯುವ ಕೆಲವು ಕೆಲಸ ರಾಜಕಾರಣಿಗಳಂತಾಗುತ್ತಾರೆ. ಅವರು ಗಾಂಧೀಜಿ, ವಿನೋಬಾ, ಬಸವಣ್ಣನವರಂಥ ನಾಯಕರುಗಳಾಗುವುದಿಲ್ಲ. ಜೀವನದಲ್ಲಿ ಬದುಕಿ ಅಲ್ಲಿ ಬಂದು ಹೋಗುವ ಪ್ರತಿಯೊಂದು ಹಂತವನ್ನು ಗಮನಿಸಿ, ಯಾವುದು ಸತ್ಯವೋ ಅದನ್ನು ಮಾತ್ರ ಗುರುತಿಸಿ, ಒಪ್ಪುವ ಮನಸ್ಥಿತಿ. ಯಾವುದು ಸತ್ಯವೋ ಅದೇ ಶಾಶ್ವತವೆಂಬ ನಂಬಿಕೆ ಮುಖ್ಯ. ಕಗ್ಗದ ಈ ನಾಲ್ಕು ವರಗಳು ಮುಖ್ಯವಾದವು. ಆಸೆಯಮೇಲೆ ಹಿಡಿತ, ಕೈ ಮೀರಿ ಹೋಗದ ಸುಖಪ್ರಜ್ಞೆ, ಕರ್ತವ್ಯದಲ್ಲಿ ಸ್ವಾರ್ಥತೆಯನ್ನು ಕಾಣದ ಮನೋಧರ್ಮ ಮತ್ತು ಸದಾ, ಸರ್ವದಾ ಸತ್ಯವನ್ನೇ ಎತ್ತಿ ಹಿಡಿಯುವ ನಿರ್ಧಾರ ಇವುಗಳು ನಿಜವಾಗಿಯೂ ನಾವು ಬೇಡಬೇಕಾದ ವರಗಳು. ಈ ವರಗಳೇ ನಮ್ಮನ್ನು ಶ್ರೇಷ್ಠತೆಯೆಡೆಗೆ ಕರೆದೊಯ್ಯುತ್ತವೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಸೆಪ್ಟೆಂಬರ್ 14, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಚತುರ್ಥಿ ಗಂ. 10-26 ನಕ್ಷತ್ರ: ಅಶ್ವಿನಿ ಗಂ. 06-57 ಯೋಗ: ಧ್ರುವ ಗಂ. 06-17, ವ್ಯಾಘಾತ ಗಂ. 29-35 ಕರಣ: ಬಾಲವ ಗಂ. 10-26, ಸಿಂಹ ಮಾಸದ 28 ನೇ ದಿನ. ರಾಹುಕಾಲ : ಮಧ್ಯಾಹ್ನ 12:00–01:30 ಸೂರ್ಯೋದಯ : 06-23 ಸೂರ್ಯಾಸ್ತ : 06-29

ದಿನ ವಿಶೇಷ : ಶ್ರೀ ಮಾಧವ ದೇವರ ತಿಥಿ (ಅಸ್ರಾಂ)

ಮುಸ್ಲಿಂ ದಿನಾಂಕ : 17 ಸಫರ್

ಅದೃಷ್ಟ ಸಂಖ್ಯೆ : 7, 10

ಮೇಷ: ರಾಜಕೀಯ ವ್ಯಕ್ತಿಗಳು ವಿವಾದಾತ್ಮಕ ಹೇಳಿಕೆಯಿಂದಾಗಿ ಸಂಕಷ್ಟಕ್ಕೆ ಸಿಲುಕುವ ಸನ್ನಿವೇಶಕ್ಕೆ ಸಿಲುಕಿಕೊಳ್ಳುವಂತಾಗಬಹುದು. ಕೃಷಿಕರಿಗೆ ಅಡೆತಡೆಯು, ಮಂದಗತಿಯು ಯೋಚನೆಗೆ ಕಾರಣವಾಗುವುದು.

ವೃಷಭ: ಕಥೆಗಾರರಿಗೆ, ಕಾದಂಬರಿಗಾರರಿಗೆ ಈ ದಿನದಲ್ಲಿ ಅನುಭವಕ್ಕೆಬರುವ ಘಟನೆಗಳನ್ನ ಬರವಣಿಗೆಯಲ್ಲಿ ತರುವ ಪ್ರಯತ್ನವನ್ನು ನಡೆಸಬಹುದು. ಮಗನ ಆರೋಗ್ಯದಲ್ಲಿ ಉಂಟಾದ ವ್ಯತ್ಯಾಸದಿಂದ ಜವಾಬ್ದಾರಿಯು ಹೆಚ್ಚಾಗುವುದು.

ಮಿಥುನ: ನಿಮ್ಮ ರೀತಿ ನೀತಿಗಳು ನಿಮ್ಮ ಕುಟುಂಬದ ಗೌರವಕ್ಕೆ ಧಕ್ಕೆ ತರುವಂತಾಗುವುದು. ಹಿರಿಯ ಅಧಿಕಾರಿಗಳ ಆಕಸ್ಮಿಕ ಭೇಟಿಯ ಫಲವಾಗಿ ಉದ್ಯೋಗದಲ್ಲಿ ಹುದ್ದೆ, ಅಧಿಕಾರ ಪ್ರಾಪ್ತಿಯಾಗುತ್ತದೆ.

ಕರ್ಕಾಟಕ: ಇಂದಿನ ನಿಮ್ಮ ಸಂತೋಷದ ಬಗ್ಗೆ ಗಮನ ಕೊಡುವುದಕ್ಕಿಂತ ನಾಳೆಯ ಭವಿಷ್ಯದ ಬಗ್ಗೆ ಗಮನಹರಿಸಿ. ಆರ್ಥಿಕ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಸಂಪೂರ್ಣವಾಗಿ ಸಾಲ ತೀರಿಸುವ ಬಗ್ಗೆ ಪ್ರಯತ್ನಿಸಿ.

ಸಿಂಹ: ವ್ಯವಹಾರಕ್ಕೆ ಅನುಕೂಲವಾಗುವಂತೆ ಆತ್ಮೀಯರಿಂದ ಆರ್ಥಿಕ ಸಹಾಯ ದೊರಕುತ್ತದೆ. ಮನೋಭಿಲಾಷೆಗೆ ಪೆಟ್ಟು ಬೀಳುವ ಕಾರಣದಿಂದಾಗಿ ಪ್ರೀತಿ ಪಾತ್ರರು ದೂರವಾಗುವ ಸಂಭವವಿದೆ. ಒಬ್ಬೊಂಟಿಯಾಗಿ ಪ್ರವಾಸ ಸರಿಯಲ್ಲ.

ಕನ್ಯಾ: ಕ್ರಯ ವಿಕ್ರಯದ ಮಾತುಕತೆ ನಡೆಸಬಹುದು. ಮಡದಿಯೊಂದಿಗೆ ಸಂಸಾರಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ಪಠ್ಯೇತರ ಚಟುವಟಿಕೆಗಳಲ್ಲಿ ಉತ್ಸಾಹವಿರುತ್ತದೆ.

ತುಲಾ: ಕಾನೂನಿಗೆ ಸಂಬಂಧ ಪಟ್ಟ ಕೆಲಸಗಳಲ್ಲಿ ಜಯ ಸಿಗುತ್ತದೆ. ಉನ್ನತ ಸರ್ಕಾರಿ ನೌಕರರಿಗೆ ಬಡ್ತಿಯ ಯೋಗವಿದೆ. ವಾಹನ ಬಿಡಿ ಭಾಗಗಳ ವ್ಯಾಪಾರಿಗಳಿಗೆ ಶುಭದಿನ. ದೀರ್ಘ ಕಾಲದ ನಿರ್ಧಾರಗಳು ಬದಲಾಗುವುದು.

ವೃಶ್ಚಿಕ: ಸ್ನೇಹಿತರ ಸಲಹೆ ಅಥವಾ ನಿಮ್ಮ ಸ್ವಾರ್ಥದ ಮನೋಭಾವದಿಂದ ಬರುವ ದುರಾಲೋಚನೆಯು ನಿಮ್ಮ ದಾರಿತಪ್ಪಿಸುವುದು. ಮೋಸ ಮತ್ತು ನಷ್ಟವನ್ನು ಈ ದಿನ ನೀವು ಅನುಭವಿಸುವಿರಿ.

ಧನು: ಉತ್ತಮ ಅವಕಾಶದಿಂದ ಆತ್ಮಗೌರವ ಹೆಚ್ಚಲಿದೆ. ಈ ದಿನ ನೀವು ಇಚ್ಛಿಸಿದ ಕಾರ್ಯಗಳೆಲ್ಲಾ ನೆರವೇರುತ್ತವೆ. ಮಿತ್ರರ ಸಹಾಯ ಮತ್ತು ಸಹಕಾರದಿಂದ ಕಾರ್ಯದಲ್ಲಿ ಜಯ ಸಾಧಿಸುವಿರಿ

ಮಕರ: ಕಟ್ಟಡ ನಿರ್ಮಾಣಗಾರರಿಗೆ ಹೆಚ್ಚಿನ ಕೆಲಸ ಇರುವುದು. ಉನ್ನತ ಪದವೀಧರರಿಗೆ ವಿದ್ಯಾರ್ಹತೆಗೆ ತಕ್ಕಂತಹ ಒಳ್ಳೆಯ ಕೆಲಸ ದೊರೆಯುತ್ತದೆ. ಕಲಾವಿದರಿಗೆ ಒಳ್ಳೆಯ ಅವಕಾಶಗಳು ದೊರೆಯುತ್ತವೆ.

ಕುಂಭ: ಉದ್ಯೋಗ ಸ್ಥಳದಲ್ಲಿನ ಸಣ್ಣ-ಪುಟ್ಟ ಸಮಸ್ಯೆಯಿಂದಾಗಿ ಹಿತ ಶತ್ರುಗಳ ಪತ್ತೆಯಾಗಲಿದೆ, ಮಿತ್ರರೂ ಶತ್ರುಗಳಾಗಿ ಪರಿವರ್ತನೆಯಾದಾರು. ನೂತನವಾಗಿ ಪ್ರಾರಂಭಿಸುವ ಕೆಲಸಕ್ಕೆ ಅನೇಕ ಅಡೆತಡೆಗಳು ಎದುರಾಗಬಹುದು.

ಮೀನ: ಕೆಲಸದಲ್ಲಿ ಹೊಸ ಪರಿವರ್ತನೆಯನ್ನು ಕಾಣುವಿರಿ. ಗುಡಿ ಕೈಗಾರಿಕೆ ವಸ್ತುಗಳಿಗೆ ಬೇಡಿಕೆ ಹೆಚ್ಚುತ್ತದೆ. ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಜವಾಬ್ದಾರಿ ಕಡಿಮೆಯಾಗುವುದು. ಗಣೇಶನ ದರ್ಶನದಿಂದ ಮನಸ್ಸಿಗೆ ನೆಮ್ಮದಿ

ಪದಬಂಧ 5079 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೇರೊಂದು ಸ್ಥಳಕ್ಕೆ ಹೋಗುವಿಕೆ (5)
4.ಗಟ್ಟಿಯಾದ ಕೂಗು (3)
5.ಈಕೆ ದುಷ್ಟಸ್ವಭಾವದ ಹೆಂಗಸು (3)
6.ಕಾರು ಇಟ್ಟುಕೊಂಡವ ಹಬ್ಬಿಸಿರುವ ಗಾಳಿಸುದ್ದಿ (3)
7.ನೀರಾಗಿ ಕಲಸಿದ ಮಣ್ಣು (3)
9.ಮಂಕರಿ ಹೊತ್ತಿರುವವನಿಗೆ ಒಂಚೂರೂ ಬುದ್ಧಿಯಿಲ್ಲ! (2)
10.ನಾಯಕನಲ್ಲೇ ಸ್ವರ್ಗವನ್ನು ಹುಡುಕಿ! (2)
12.ಸೀರೆಯ ಹೊದೆಯುವ ಭಾಗವಿದು (3)
14.ಕದಕ್ಕೆ ಸಿಕ್ಕಿಕೊಂಡಿರುವ ಬಿಲ್ಲೆ! (3)
15.ಹೊಟ್ಟೆ ಇಲ್ಲಿ ಕಾಣುತ್ತಿದೆ (3)
16.ಕೋಟೆಯ ಸುತ್ತಣ ಮೇಲು ಗೋಡೆ (3)
17.ಸಾಯುವ ಸಮಯವಿದು (5)

ಮೇಲಿಂದ ಕೆಳಕ್ಕೆ

1.ಈತ ಸ್ಥಾನವನ್ನು ಕಳೆದುಕೊಂಡವನು (4)
2.ವಿದ್ಯಾರ್ಥಿಗಳಿಗೆ ಓದಲು ಗೊತ್ತುಪಡಿಸಿದ ಪುಸ್ತಕ (5)
3.ಗುರುಗುಟ್ಟುತ್ತಿರುವ ಗಂಡುಕುರಿ (3)
4.ಆಕಳಿಕೆ ಇದ್ದರೂ ಇಷ್ಟೊಂದು ಸಂಪಾದನೆ! (3)
8.ಸಭೆಯಲ್ಲಿ ಕುಳಿತಿರುವವನು (3)
9.ಜನ ಹೊಕ್ಕಿರುವ ಗುಡಿ (3)
10.ಹೆಸರಿಡುವ ಶಾಸ್ತ್ರವಿದು (5)
11.ಅವನತಿಯ ಸಮಯ (4)
13.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
14.ಶ್ರೇಷ್ಠ ಎಂದು ಹೀಗೆನ್ನಿ (3)

1		2		3	■	4		
	■		■	5			■	■
	■	6			■	7	8	
	■		■	■	■	■		■
■	9		■	■	■	10		■
■		■	■	■	■		■	11
12		13	■	14			■	
■	■	15			■		■	
16			■	17				

5078ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಹವಾಸ 3.ಚಿರಸ್ಥಾಯಿ 4.ಮೀಸಲು 5.ಅಪರೂಪ 7.ಕಣ್ಣೀರು 9.ಕವಲು 10.ಅನಾಥ 11.ಬಿಕ್ಕಲಂ 13.ಮರಕತ 14.ಗಗನ 15.ತಾರುಮಾರು 16.ವಿಧ್ವಂಸಕ

ಮೇಲಿಂದ ಕೆಳಕ್ಕೆ: 2.ಸಮೀಪ 3.ಚಿಲುಕ 6.ಪರಾವಲಂಬಿ 8.ರುದ್ರನಾಟಕ 12.ಲಂಗರು 13.ಮನವಿ

ಸುಡೊಕು 5465

		5	8				1	
2								
		4			2	8		6
3		6				5		9
	7			2			8	
8		1				3		7
4			6		1		9	
	3			9	5	7		8
6		8	2				5	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5464ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಸುಕೋ ಬ್ಯಾಂಕ್ ಕಾರ್ಯಕ್ಷೇತ್ರ ವಿಸ್ತರಣೆಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಉತ್ತರ ಮತ್ತು ಮಧ್ಯ ಕರ್ನಾಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಕೋ ಬ್ಯಾಂಕ್ ಚಟುವಟಿಕೆಗಳನ್ನು ರಾಜ್ಯದಾದ್ಯಂತ ವಿಸ್ತರಿಸಲು ಆರ್‌ಬಿಐ ಅನುಮತಿ ನೀಡಿದೆ.

'ರಾಜ್ಯದ ಹದಿನೆಂಟು ಜಿಲ್ಲೆಗಳಲ್ಲಿ ಒಟ್ಟು ಇಪ್ಪತ್ತೊಂಬತ್ತು ಶಾಖೆಗಳನ್ನು ಹೊಂದಿರುವ ಸುಕೋ ಬ್ಯಾಂಕ್, ಎಲ್ಲ ರೀತಿಯ ಡಿಜಿಟಲ್ ಹಾಗೂ ಬ್ಯಾಂಕಿಂಗ್ ಸೇವೆಗಳನ್ನು ನೀಡುತ್ತಿದೆ. ರಿಸರ್ವ್ ಬ್ಯಾಂಕ್ ಅನುಮತಿ ನೀಡಿರುವುದರಿಂದ ರಾಜ್ಯವ್ಯಾಪಿ ಶಾಖೆಗಳ ಜಾಲ ವಿಸ್ತರಿಸಲಾಗುವುದು' ಎಂದು ಬ್ಯಾಂಕ್ ಅಧ್ಯಕ್ಷ ಮೋಹಿತ ಮಸ್ಕಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಬಳ್ಳಾರಿಯಲ್ಲಿ ಕೇಂದ್ರ ಕಚೇರಿ ಹೊಂದಿರುವ ಸುಕೋ ಬ್ಯಾಂಕ್ ಬೆಳಗಾವಿಯಿಂದ ಚಿತ್ರದುರ್ಗದವರೆಗೆ, ಕಲ್ಬುರ್ಗಿಯಿಂದ ಚನ್ನಗಿರಿಯವರೆಗೆ ಶಾಖೆಗಳನ್ನು ಹೊಂದಿದೆ. ಕಳೆದ ಆರ್ಥಿಕ ವರ್ಷದಲ್ಲಿ ₹ 1,264 ಕೋಟಿಗೂ ಹೆಚ್ಚು ವ್ಯವಹಾರ ಮಾಡಿದೆ. ಎನ್‌ಪಿಎ ಶೂನ್ಯವಾಗಿರುವುದು ಸುಕೋ ಬ್ಯಾಂಕಿನ ಪರಿಣಾಮಕಾರಿ ಆಡಳಿತದ ಸಾಧನೆಯಾಗಿದೆ' ಎಂದು ಮಸ್ಕಿ ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಎರಡನೇ ವರ್ಷದ ಪುಣ್ಯಸ್ಮರಣೆ

ಶ್ರೀ ಅಶ್ವಥ್‌ನಾರಾಯಣರೆಡ್ಡಿ
ಜನನ: 15-04-1951 ಮರಣ: 14-09-2020
ಪ್ರೀತಿ-ವಾತ್ಸಲ್ಯದ ಪ್ರತಿರೂಪವಾಗಿ ಆದರ್ಶ ಬದುಕನ್ನು ಬಾಳಿ ಪರಿಪೂರ್ಣ ಜೀವನ ನಡೆಸಿ ನಮ್ಮನ್ನಗಲಿದ ನಿಮ್ಮ ದಿವ್ಯಾತ್ಮಕ್ಕೆ ದೇವರು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ
ಇಂತಿ ದುಃಖತಪ್ತರು
ಧರ್ಮಪತ್ನಿ ಕಾಂತಮ್ಮ ಮತ್ತು ಮಕ್ಕಳು,
ಕುಟುಂಬವರ್ಗದವರು ಹಾಗೂ ಬಂಧು ಮಿತ್ರರು.
ಕುಂದಲಹಳ್ಳಿ (ಅದ್ದೇ ವಿಶ್ವನಾಥಪುರ).

ಚಿರಸ್ಮರಣೆ

ಸಿ.ವಿ ರಾಮಣ್ಣ
ಪ್ರೊಪ್ರೈಟರ್
ಟಿ.ಟಿ. ಶ್ರೀನಿವಾಸ ಎಲೆಕ್ಟ್ರಿಕಲ್
ಗುಪ್ತಾ ಲೇಔಟ್, ಲಕ್ಕಸಂದ್ರ.
ಮರಣ: 04-09-2022
ದುಃಖತಪ್ತರು: ಹೆಂಡತಿ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮತ್ತು ಮೊಮ್ಮಕ್ಕಳು

2ನೇ ವರ್ಷದ ಪುಣ್ಯ ಸ್ಮರಣೆ

ಶ್ರೀ. ಸಿ ಹೆಚ್ ಜಾಕೋಬ್ ಲೋಬೊ
ಜನನ: 19.06.1930 - ಮರಣ: 14.09.2020
ಸ್ವಾತಂತ್ರ್ಯ ಹೋರಾಟಗಾರರು,
ತಾಮ್ರಪತ್ರ, ಪ್ರಶಸ್ತಿ ಪುರಸ್ಕೃತರು ಹಾಗೂ ಸಾಹಿತಿ.
ನಿವೃತ್ತ ವ್ಯವಸ್ಥಾಪಕ ನಿರ್ದೇಶಕರು
KBC&M Devt. ನಿಗಮ, ಬೆಂಗಳೂರು.
ಪ್ರತಿ ದಿನ ನಮ್ಮ ಆಲೋಚನೆಗಳಲ್ಲಿ,
ನಿಮ್ಮ ಆತ್ಮಕ್ಕೆ ಶಾಂತಿಸಿಗಲಿ ಎಂದು ಪ್ರಾರ್ಥಿಸುವ
ಜಾಕ್ವೆಲಿನ್, ಫ್ರಾನ್ಸಿಸ್, ಹೆಲೆನ್ ಮತ್ತು ಕುಟುಂಬದವರು

ಹದಿಮೂರನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಹೆಚ್. ನಾರಾಯಣರೆಡ್ಡಿರವರು
(ಲೇ|| ಎಂ. ಹನುಮಂತ ರೆಡ್ಡಿಯವರ ಮಗ) ನಿಧನ 14-09-2009
ನಮ್ಮೆಲ್ಲರ ಬದುಕಿಗೆ ಭದ್ರವಾದ ಅಡಿಪಾಯ ಹಾಕಿ, ಮಾರ್ಗದರ್ಶನ ನೀಡಿ ಬೆಳೆಸಿದ ನಿಮ್ಮ ಪರಿಶ್ರಮದ ಜೀವನವೇ ನಮಗೆ ಸದಾ ಆದರ್ಶ
ಇಂತಿ ನಿಮ್ಮನ್ನು ಸದಾ ಸ್ಮರಿಸುವ
ಶ್ರೀಮತಿ. ಎಮ್. ಶಾರದಮ್ಮ ಮಕ್ಕಳು ಮತ್ತು ಮೊಮ್ಮಕ್ಕಳು
ಕೈಕೊಂಡ್ರಹಳ್ಳಿ, ವರ್ತೂರು ಹೋಬಳಿ, ಸರ್ಜಾಪುರ ರಸ್ತೆ, ಬೆಂಗಳೂರು – 560035

For Online Classified Booking
Name Change / Education / Property / Job / Services & many more
Log on to :
dhclassifieds.com

18 ಸಾವಿರಕ್ಕಿಂತ ಹೆಚ್ಚಿನ ಮಟ್ಟಕ್ಕೆ ನಿಫ್ಟಿ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸಂವೇದಿ ಸೂಚ್ಯಂಕಗಳು ಸತತ ನಾಲ್ಕನೆಯ ದಿನವೂ ಏರುಗತಿಯಲ್ಲಿ ಸಾಗಿವೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 455 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 133 ಅಂಶ ಏರಿಕೆ ಕಂಡಿವೆ. ನಿಫ್ಟಿ ಏಪ್ರಿಲ್ ನಂತರ ಇದೇ ಮೊದಲಿಗೆ 18 ಸಾವಿರಕ್ಕಿಂತ ಹೆಚ್ಚಿನ ಮಟ್ಟದಲ್ಲಿ ವಹಿವಾಟು ಕೊನೆಗೊಳಿಸಿದೆ.

ನಾಲ್ಕು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ 1,540 ಅಂಶ ಹಾಗೂ ನಿಫ್ಟಿ 445 ಅಂಶ ಏರಿಕೆ ಕಂಡಿವೆ. ಮಾರುಕಟ್ಟೆಯಲ್ಲಿನ ಈಗಿನ ಏರಿಕೆಗೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳನ್ನು ಹೆಚ್ಚು ಖರೀದಿಸುತ್ತಿರುವುದು ಕಾರಣ ಎಂದು ತಜ್ಞರು ಹೇಳಿದ್ದಾರೆ. ದೇಶದ ಸಣ್ಣ ಹೂಡಿಕೆದಾರರು ಹಣ ತೊಡಗಿಸುತ್ತಿರುವುದು ಕೂಡ ಏರಿಕೆಗೆ ಇಂಬು ಕೊಟ್ಟಿದೆ.

ವಿದೇಶಿ ಹೂಡಿಕೆದಾರರು ಹಣಕಾಸು ಮತ್ತು ಎಫ್‌ಎಂಸಿಜಿ ವಲಯದ ಷೇರುಗಳಲ್ಲಿ ಹೆಚ್ಚು ಹಣ ತೊಡಗಿಸುತ್ತಿದ್ದಾರೆ. 'ಅರ್ಥ ವ್ಯವಸ್ಥೆ ಬಲಿಷ್ಠವಾಗಿರುವುದು ಕೂಡ ಮಾರುಕಟ್ಟೆಯ ಓಟಕ್ಕೆ ನೆರವಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅವರು ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 95.11 ಡಾಲರ್‌ಗೆ ಏರಿಕೆ ಆಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಮೂನ್‌ಲೈಟಿಂಗ್‌ಗೆ ಅವಕಾಶ ಇಲ್ಲ, ನಿಯಮ ಉಲ್ಲಂಘಿಸಿದರೆ ಶಿಸ್ತು ಕ್ರಮ

ನೌಕರರಿಗೆ ಇನ್ಫೊಸಿಸ್ ಎಚ್ಚರಿಕೆ



ನವದೆಹಲಿ (ಪಿಟಿಐ): ತನ್ನ ನೌಕರರಿಗೆ ಪತ್ರವೊಂದನ್ನು ರವಾನಿಸಿರುವ ಐ.ಟಿ. ಸೇವಾ ಕಂಪನಿ ಇನ್ಫೊಸಿಸ್, ಎರಡು ಕಡೆ ಕೆಲಸ ಮಾಡುವುದಕ್ಕೆ (ಮೂನ್‌ಲೈಟಿಂಗ್) ಕಂಪನಿಯ ನಿಯಮಗಳಲ್ಲಿ ಅವಕಾಶ ಇಲ್ಲ ಎಂದು ಸ್ಪಷ್ಟಪಡಿಸಿದೆ.

ಗುತ್ತಿಗೆ ಒಪ್ಪಂದವನ್ನು ಉಲ್ಲಂಘಿಸಿದರೆ, ಶಿಸ್ತು ಕ್ರಮ ಎದುರಿಸಬೇಕಾಗುತ್ತದೆ. ಶಿಸ್ತು ಕ್ರಮ ಅಂದರೆ ನೌಕರಿಯಿಂದ ವಜಾಗೊಳಿಸುವುದೂ ಸೇರಿದೆ ಎಂದು ಎಚ್ಚರಿಕೆ ನೀಡಿದೆ.

ನೌಕರರು ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ಕಡೆ ಕೆಲಸ ಮಾಡುವುದನ್ನು ಮೂನ್‌ಲೈಟಿಂಗ್ ಎಂದು ಗುರುತಿಸಲಾಗಿದೆ. 'ನೌಕರರ ನೀತಿ ಸಂಹಿತೆ ಪ್ರಕಾರ ಎರಡು ಕಡೆ ನೌಕರಿ ಮಾಡಲು ಅವಕಾಶ ಇಲ್ಲ' ಎಂದು ಇನ್ಫೊಸಿಸ್‌ನ ಆಂತರಿಕ ಪತ್ರವು ಹೇಳಿದೆ. ಈ ಕುರಿತು ಪ್ರತಿಕ್ರಿಯೆ ಕೋರಿ ಇನ್ಫೊಸಿಸ್‌ಗೆ ಕಳುಹಿಸಿದ ಇ-ಮೇಲ್‌ಗೆ ಉತ್ತರ ಬಂದಿಲ್ಲ.

'ಮೂನ್‌ಲೈಟಿಂಗ್ ಅಂದರೆ ಕೆಲಸದ ಅವಧಿಯಲ್ಲಿ ಅಥವಾ ಕೆಲಸದ ಅವಧಿಯ ನಂತರದಲ್ಲಿ ಇನ್ನೊಂದು ಕಡೆ ಕೆಲಸ ಮಾಡುವುದು. ಇಂತಹ ಪ್ರವೃತ್ತಿಯನ್ನು ಇನ್ಫೊಸಿಸ್ ಪ್ರೋತ್ಸಾಹಿಸುವುದಿಲ್ಲ' ಎಂದು ನೌಕರರಿಗೆ ಕಂಪನಿಯು ಹೇಳಿದೆ.

ಮೂನ್‌ಲೈಟಿಂಗ್ ವಿಚಾರವಾಗಿ ಸಾರ್ವಜನಿಕ ವಲಯದಲ್ಲಿ ಚರ್ಚೆಗಳು ನಡೆದಿವೆ, ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ, ಕಾನೂನು ಪ್ರಶ್ನೆಗಳು ಕೂಡ ಉದ್ಭವಿಸಿವೆ. ವಿಪ್ರೊ ಕಂಪನಿಯ ಅಧ್ಯಕ್ಷ ರಿಷದ್ ಪ್ರೇಮ್‌ಜಿ ಅವರು ಮೂನ್‌ಲೈಟಿಂಗ್‌ಅನ್ನು 'ಮೋಸ ಮಾಡುವುದು' ಎಂದು ಕರೆದ ನಂತರದಲ್ಲಿ, ಇದು ಚರ್ಚೆಯ ವಸ್ತುವಾಗಿದೆ.

ಇನ್ಫೊಸಿಸ್ ರವಾನಿಸಿರುವ ಪತ್ರಕ್ಕೆ ಪುಣೆ ಮೂಲದ, ಐ.ಟಿ. ಉದ್ಯೋಗಿಗಳ ಸಂಘ ಎನ್‌ಐಟಿಇಎಸ್ ವಿರೋಧ ವ್ಯಕ್ತಪಡಿಸಿದೆ. 'ಇದು ಬೆದರಿಸುವ ಇ-ಮೇಲ್' ಎಂದು ಹೇಳಿದೆ. ವಾಸ್ತವದಲ್ಲಿ ಮೂನ್‌ಲೈಟಿಂಗ್‌ನಲ್ಲಿ ತೊಡಗಲು ಆಗುವುದಿಲ್ಲ ಎಂದು ಅದು ಹೇಳಿದೆ. 'ಯಾವುದೇ ಕಂಪನಿ ಸೇರಲು ಆಧಾರ್ ಹಾಗೂ ಪ್ಯಾನ್ ಸಂಖ್ಯೆ ಕಡ್ಡಾಯ. ಆಧಾರ್ ಸಂಖ್ಯೆಯು ಪಿಎಫ್ ಖಾತೆಗೆ ಜೋಡಣೆ ಆಗಿರುತ್ತದೆ. ಎರಡು ಕಂಪನಿಗಳು ಒಂದೇ ವ್ಯಕ್ತಿಗೆ ಒಂದೇ ತಿಂಗಳಿನಲ್ಲಿ ಪಿಎಫ್ ವಂತಿಗೆ ನೀಡಲು ಸಾಧ್ಯವಿಲ್ಲ' ಎಂದು ಸಂಘದ ಅಧ್ಯಕ್ಷ ಹರ್‌ಪ್ರೀತ್ ಸಿಂಗ್ ಸಲುಜಾ ಹೇಳಿದ್ದಾರೆ.

'ಕೆಲಸದ ಅವಧಿಯ ನಂತರದಲ್ಲಿ ನೌಕರರು ಏನು ಮಾಡುತ್ತಾರೆ ಎಂಬುದು ಅವರ ಪರಮಾಧಿಕಾರ' ಎಂದು ಕೂಡ ಸಂಘ ಹೇಳಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಊರು ಬೇಡ

- **ಪ್ರಶ್ನೆ: ನಾನು ವ್ಯವಸಾಯಗಾರ ಮತ್ತು ಸಣ್ಣ ವ್ಯಾಪಾರಿ. ನನ್ನ ಪತ್ನಿ ಗೃಹಿಣಿ. ನಮ್ಮ ಮಗಳು ಮತ್ತು ಅಳಿಯ ವಿದೇಶದಲ್ಲಿ ಇದ್ದಾರೆ. ನಮ್ಮ ಭವಿಷ್ಯಕ್ಕೆ ಅನುಕೂಲವಾಗಲೆಂದು ಶಿವಮೊಗ್ಗದಲ್ಲಿ ₹ 58 ಲಕ್ಷದ ಒಂದು ಮನೆಯನ್ನು ನನ್ನ ಪತ್ನಿಯ ಹೆಸರಲ್ಲಿ ಖರೀದಿಸಿದ್ದಾರೆ. ಇದಕ್ಕೆ ಬೇಕಾದ ಹಣ ಸುಮಾರು ₹ 65 ಲಕ್ಷವನ್ನು ನಮ್ಮ ಅಳಿಯನ ಎನ್‌ಆರ್‌ಐ ಖಾತೆಯಿಂದ ನನ್ನ ಪತ್ನಿಯ ಖಾತೆಗೆ ವರ್ಗಾವಣೆ ಮಾಡಿದ್ದಾರೆ. ಈ ಹಣದಿಂದ ಮನೆ ಖರೀದಿಸಿದ್ದೇವೆ. ಕಾನೂನು ರೀತಿಯಲ್ಲಿ ನೋಂದಣಿ ಆಗಿದೆ. ಟಿಡಿಎಸ್ ಕಟ್ಟಲಾಗಿದೆ. ಈ ರೀತಿ ಖರೀದಿಸಲಾದ ಮನೆ ಮತ್ತು ಪಡೆದ ಹಣಕ್ಕೆ ತೆರಿಗೆ ಇದೆಯೇ?**

ಉತ್ತರ: ಆದಾಯ ತೆರಿಗೆಯ ಸಾಮಾನ್ಯ ನಿಯಮದಂತೆ ಯಾವುದೇ ವ್ಯಕ್ತಿ ಒಂದು ವರ್ಷದಲ್ಲಿ ಒಟ್ಟಾರೆ ₹ 50,000ಕ್ಕಿಂತ ಅಧಿಕ ಮೊತ್ತವನ್ನು ಯಾರಿಂದ ಉಡುಗೊರೆಯಾಗಿ ಪಡೆದರೂ ತೆರಿಗೆ ಇರುತ್ತದೆ. ಹೀಗಾಗಿ ಆ ಮೊತ್ತ ಸ್ವೀಕರಿಸಿದ ವ್ಯಕ್ತಿ ತೆರಿಗೆ ಕಟ್ಟಬೇಕಾಗುತ್ತದೆ. ಆದರೆ, ಆದಾಯ ತೆರಿಗೆಯ ಸೆಕ್ಷನ್ 56(2)ರ ಪ್ರಕಾರ ಯಾವುದೇ ಸಂಬಂಧಿಕರು ನೀಡುವ ಉಡುಗೊರೆಗೆ ತೆರಿಗೆ ವಿನಾಯಿತಿ ಇದೆ.

ನಿಮ್ಮ ಮಗಳ ಗಂಡ ನಿಮ್ಮ ಪತ್ನಿಯ ಖಾತೆಗೆ ಹಣ ವರ್ಗಾವಣೆ ಮಾಡಿದ್ದಾರೆ. ಆ ಮೊತ್ತದಿಂದ ನೀವು ಮನೆ ಖರೀದಿಸಿದ್ದೀರಿ. ಅಳಿಯನಿಂದ ಸ್ವೀಕರಿಸಿದ ಉಡುಗೊರೆ ಸಂಬಂಧಿಕರ ವರ್ಗದಲ್ಲಿ ಬರುತ್ತದೆ. ಹೀಗಾಗಿ ನಿಯಮ ಪ್ರಕಾರ ಯಾವುದೇ ತೆರಿಗೆ ಇಲ್ಲ. ಆದರೂ ಪೂರಕ ದಾಖಲೆಯಾಗಿ 'ಗಿಫ್ಟ್ ಡೀಡ್' ದಾಖಲಿಸಿಡುವುದು ಉತ್ತಮ. ಇದು ಆದಾಯ ತೆರಿಗೆಯ ಮುಂದಿನ ಯಾವುದೇ ಅಹವಾಲುಗಳನ್ನು ಉತ್ತರಿಸುವಲ್ಲಿ ನೆರವಾಗುತ್ತದೆ.

ನೀವು ಖರೀದಿಸಿರುವ ಮನೆ ನಿಮ್ಮ ಪತ್ನಿಯ ಹೆಸರಲ್ಲಿದೆಯೇ ಅಥವಾ ನಿಮ್ಮ ಹೆಸರಲ್ಲಿದೆಯೇ ಎಂಬುದನ್ನು ತಿಳಿಸಿಲ್ಲ. ಒಂದು ವೇಳೆ ನಿಮ್ಮ ಹೆಸರಲ್ಲಿದ್ದರೆ ಅದಕ್ಕೂ ನಿಮ್ಮ ಪತ್ನಿಯಿಂದ ನಿಮಗೆ ಉಡುಗೊರೆಯಾಗಿ ನಿಮ್ಮ ಹೆಸರಲ್ಲಿ ಮನೆ ದಾಖಲಿಸಲು ಹಣ ಬಂದಿರುತ್ತದೆ. ಹೀಗಾಗಿ ಎರಡನೆಯ ಹಂತದಲ್ಲಿ ಅಗತ್ಯವಿರುವ ಪೂರಕ ದಾಖಲೆಯಾಗಿ ನಿಮ್ಮಿಬ್ಬರ ಮಧ್ಯೆ 'ಗಿಫ್ಟ್ ಡೀಡ್' ದಾಖಲಿಸಿಡುವುದು ಸೂಕ್ತ. ಮುಂದಿನ ದಿನಗಳಲ್ಲಿ ಯಾವುದೇ ಸಂದರ್ಭದಲ್ಲಿ ಮನೆಯನ್ನು ಬಾಡಿಗೆಗೆ ನೀಡಿದರೆ, ಮನೆ ಮಾರಾಟ ಮಾಡಿದರೆ ಯಾರು ಮಾಲೀಕತ್ವ ಹೊಂದಿರುತ್ತಾರೋ ಅವರು ತೆರಿಗೆ ಕೊಡಬೇಕಾಗುತ್ತದೆ ಎನ್ನುವುದು ತಿಳಿದಿರಲಿ.

ಸಹನಾ ಮತ್ತು ಶ್ರದ್ಧಾ, ಅರಕೆರೆ, ಬೆಂಗಳೂರು

- **ಪ್ರಶ್ನೆ: ನಾವು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದೇವೆ. ಇತ್ತೀಚೆಗೆ ನಮ್ಮ ಬ್ರೋಕರ್ ಹೊಸ 'ಎನ್‌ಎಫ್‌ಒ'ದಲ್ಲಿ ಹೂಡಿಕೆ ಮಾಡುವಂತೆ ಸಲಹೆ ಕೊಟ್ಟಿದ್ದರು. ನಾವು ಸುಮಾರು ₹ 50,000 ಹೂಡಿಕೆ ಮಾಡಿದೆವು. ಆದರೆ ಅದು ಈಗ ಶೇಕಡ 5.5ರಷ್ಟು ಕಡಿಮೆಯಾಗಿದೆ. ಏನು ಮಾಡಲಿ? ಎನ್‌ಎಫ್‌ಒ ಹೂಡಿಕೆ ಅಪಾಯಕಾರಿಯೇ?**

ಉತ್ತರ: ಎಲ್ಲ ಎನ್‌ಎಫ್‌ಒಗಳು ನಿರ್ದಿಷ್ಟ ಹೂಡಿಕೆ ಉದ್ದೇಶದೊಂದಿಗೆ ಬರುತ್ತವೆ. ಅವನ್ನು ಬೆಳವಣಿಗೆ, ಮೌಲ್ಯ ಹೂಡಿಕೆ ಅಥವಾ ಬಂಡವಾಳ ರಕ್ಷಣೆ, ಬ್ಯಾಂಕಿಂಗ್ ಅಥವಾ ಇನ್ಯಾವುದೇ ಉದ್ದೇಶದಿಂದ ಹೊರತಂದಿರಬಹುದು. ಹೀಗಾಗಿ ನಿಮ್ಮ ಹಣಕಾಸಿನ ಗುರಿ ಮತ್ತು ಅಪಾಯ ತಾಳಿಕೊಳ್ಳುವ ಮಟ್ಟಕ್ಕೆ ಅನುಗುಣವಾಗಿ ನಿಮಗೆ ಸರಿಹೊಂದುವ ಹೂಡಿಕೆ ಉದ್ದೇಶವನ್ನು ಎನ್‌ಎಫ್‌ಒ ಪೂರೈಸುತ್ತದೆಯೇ ಎಂದು ಪರಿಶೀಲಿಸಿ. ಹೊಸದಾಗಿ ಬರುವ ಎನ್‌ಎಫ್‌ಒ ಪರಿಶೀಲಿಸುವುದು ಹೇಗೆ ಎನ್ನುವುದನ್ನು ತಿಳಿಯಲು ಒಂದಿಷ್ಟು ಅಧ್ಯಯನ ಬೇಕಾಗುತ್ತದೆ. ಈ ಕೆಳಗಿನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಿ.

1. ಎನ್‌ಎಫ್‌ಒ ಮುಖಬೆಲೆ ಸಾಮಾನ್ಯವಾಗಿ ₹ 10 ಆಗಿರುತ್ತದೆ. ಹೊರನೋಟಕ್ಕೆ ಇದು ತುಂಬಾ ಕಡಿಮೆ ಎಂದು ಕಂಡರೂ ಇದು ಆರಂಭದ ಬೆಲೆಯಷ್ಟೇ. ಫಂಡ್ ಹೌಸ್‌ಗಳು ನಿಮ್ಮ ಹಣ ಎಲ್ಲಿ ತೊಡಗಿಸುತ್ತವೆ ಎಂಬುದನ್ನು ಅರಿತುಕೊಳ್ಳಿ. ಆ ಹೂಡಿಕೆ ಕ್ಷೇತ್ರ ಸರಿಯಾದದ್ದೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ.
2. ಯಾವುದೇ ಹೊಸ ಫಂಡ್ ಹೌಸ್ ಮೊದಲ ಬಾರಿಗೆ ಮ್ಯೂಚುವಲ್ ಫಂಡ್ ಬಿಡುಗಡೆ ಮಾಡುತ್ತಿದ್ದರೆ ಮುಗಿಬಿದ್ದು ಹೂಡಿಕೆ ಮಾಡುವುದು ಬೇಡ. ಈಗಾಗಲೇ ಮ್ಯೂಚುವಲ್ ಫಂಡ್ ಮಾರುಕಟ್ಟೆಯಲ್ಲಿ ಸಾಕಷ್ಟು ಹೆಸರುವಾಸಿಯಾದ ಹಾಗೂ ಕೆಲವು ವರ್ಷಗಳಿಂದ ಉತ್ತಮ ಆದಾಯ ನೀಡುತ್ತಿರುವ ಥೀಮ್‌ಗಳಲ್ಲಷ್ಟೇ ಹೂಡಿಕೆ ಮಾಡಿ. ಅದನ್ನು ಅನ್ವೇಷಿಸಿ.
3. ಸಣ್ಣ ಮೊತ್ತದ ಹೊಸ ಫಂಡ್‌ಗಳ ನಿರ್ವಹಣಾ ಶುಲ್ಕ ಗರಿಷ್ಠ ಮಿತಿಯಾದ ಶೇ 2.50ರಷ್ಟನ್ನು ಹೂಡಿಕೆದಾರರಿಂದ ಪಡೆಯುತ್ತವೆ. ಫಂಡ್ ಮೊತ್ತ ಒಟ್ಟು ಬೆಳೆಯುತ್ತ ಹೋದಂತೆ ಶುಲ್ಕದ ಪ್ರಮಾಣ ನಿಧಾನವಾಗಿ ಇಳಿಕೆಯಾಗುತ್ತಾ ಹೋಗುತ್ತದೆ.
4. ಎನ್‌ಎಫ್‌ಒ, ಓಪನ್ ಎಂಡೆಡ್ ಅಥವಾ ಕ್ಲೋಸ್ಡ್ ಎಂಡೆಡ್ ಆಗಿರಬಹುದು. ಓಪನ್ ಎಂಡೆಡ್ ಫಂಡ್ ಹೂಡಿಕೆದಾರರಿಗೆ ಚಂದಾ ಅವಧಿ ಮುಗಿದೊಡನೆ ಮುಕ್ತ ಮಾರಾಟ ಅಥವಾ ಖರೀದಿಗೆ ಅವಕಾಶ ನೀಡುತ್ತದೆ. ಹೀಗಾಗಿ ಮಾರುಕಟ್ಟೆ ಸನ್ನಿವೇಶ ನೋಡಿಕೊಂಡು ಯಾವುದೇ ಹೂಡಿಕೆದಾರ ತನ್ನಲ್ಲಿನ ಯೂನಿಟ್‌ಗಳನ್ನು ಮಾರಾಟ ಮಾಡುವ ಅಥವಾ ಇರಿಸಿಕೊಳ್ಳುವ ನಿರ್ಧಾರ ಕೈಗೊಳ್ಳಬಹುದು. ಕ್ಲೋಸ್ಡ್ ಎಂಡೆಡ್ ಫಂಡ್ ಮೂರು ವರ್ಷದೊಳಗಿನ ಅವಧಿಯಲ್ಲಿ ಮಾರಾಟಕ್ಕೆ ಲಭ್ಯವಿರುವುದಿಲ್ಲ. ಆದರೆ, ಈ ಅವಧಿಯಲ್ಲಿ ಮಾರಾಟ ಮಾಡುವ ಉದ್ದೇಶವಿದ್ದರೆ ಷೇರು ಮಾರುಕಟ್ಟೆಯಂತಹ ಎರಡನೆಯ ಹಂತದ ಮಾರುಕಟ್ಟೆಯಲ್ಲಿ ಮ್ಯೂಚುವಲ್ ಫಂಡ್ ಯೂನಿಟ್‌ಗಳ ಮಾರಾಟಕ್ಕೆ ಅವಕಾಶವಿದೆ.

ನಿಮ್ಮ ಹೂಡಿಕೆ ಈಕ್ವಿಟಿ ವಿಭಾಗದಲ್ಲಿ ಇರಬಹುದು. ಹೀಗಾಗಿ ಏರಿಳಿತ ಇರುತ್ತದೆ. ನೀವು ಹೂಡಿಕೆ ಮಾಡಿದ ಫಂಡ್ ಯಾವ ಕ್ಷೇತ್ರದಲ್ಲಿದೆ ಹಾಗೂ ಫಂಡ್ ಹೌಸ್‌ನ ಆರ್ಥಿಕ ರ್‍ಯಾಂಕಿಂಗ್ ಏನಿದೆ ಎನ್ನುವುದನ್ನು ಅರಿಯಿರಿ. ನೀವು ಆರ್ಥಿಕವಾಗಿ ತೊಂದರೆಯಲ್ಲಿದ್ದರೆ, ಫಂಡ್ ಹೌಸ್ ಹೂಡಿಕೆಯ ಆಧಾರದ ಮೇಲೆ ಮುಂದೆ ಉತ್ತಮ ಲಾಭ ಕಷ್ಟವಾಗಿದ್ದರೆ ನಷ್ಟದೊಡನೆ ಹೊರಬನ್ನಿ. ನೀವು ದೀರ್ಘಾವಧಿ ಹೂಡಿಕೆದಾರರಾಗಿದ್ದರೆ, ಇರುವ ಹೂಡಿಕೆ ಮುಂದುವರಿಸಿ ಹಾಗೂ ಪ್ರತಿನಿತ್ಯದ ಏರಿಳಿತ ನೋಡುವುದುದನ್ನು ನಿಲ್ಲಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್:businessdesk@prajavani.co.in

ಕ್ರಿಪ್ಟೊ ಕರೆನ್ಸಿ: ತಪ್ಪೊಪ್ಪಿಕೊಂಡ ಭಾರತೀಯ

ನ್ಯೂಯಾರ್ಕ್ (ಪಿಟಿಐ): ಅಮೆರಿಕದಲ್ಲಿ ನಡೆದಿರುವ ಆಂತರಿಕ ಕ್ರಿಪ್ಟೊ ಕರೆನ್ಸಿ ವ್ಯಾಪಾರ ಪ್ರಕರಣದಲ್ಲಿ ತಾನು ಭಾಗಿಯಾಗಿರುವುದಾಗಿ ಭಾರತೀಯ ಸಂಜಾತ ವ್ಯಕ್ತಿಯು ತಪ್ಪೊಪ್ಪಿಕೊಂಡಿದ್ದಾನೆ.

ಸಿಯಾಟಲ್ ನಿವಾಸಿ, 26 ವರ್ಷದ ನಿಖಿಲ್ ವಹಿ ಸೋಮವಾರ ತಪ್ಪೊಪ್ಪಿಕೊಂಡಿದ್ದಾನೆ. 'ಕಾಯಿನ್‌ಬೇಸ್'ಗೆ ಸಂಬಂಧಿಸಿದ ರಹಸ್ಯ ಮಾಹಿತಿಗಳ ಮೂಲಕ ಕ್ರಿಪ್ಟೊ ಕರೆನ್ಸಿ ಸ್ವತ್ತುಗಳನ್ನು ಅಕ್ರಮವಾಗಿ ವ್ಯಾಪಾರ ಮಾಡಿದ, ಆ ಮೂಲಕ ಸುಮಾರು ₹11.92 ಕೋಟಿ ಆದಾಯ ಗಳಿಸಿದ ಆರೋಪ ಈತ ಹಾಗೂ ಇತರ ಇಬ್ಬರ ಮೇಲಿತ್ತು. ಈ ಪ್ರಕರಣದಲ್ಲಿ ಆರೋಪಿಗಳಿಗೆ ಗರಿಷ್ಠ 20 ವರ್ಷ ಜೈಲುಶಿಕ್ಷೆ ವಿಧಿಸಬಹುದಾಗಿದೆ.

ಪಾಕ್ ಪ್ರವಾಹ: ₹ 3 ಲಕ್ಷ ಕೋಟಿ ನಷ್ಟ

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಭಾರಿ ಪ್ರವಾಹದಿಂದಾಗಿ ಸುಮಾರು ₹ 3 ಲಕ್ಷ ಕೋಟಿಯಷ್ಟು ಆರ್ಥಿಕ ನಷ್ಟವುಂಟಾಗಿದೆ ಎಂದು ಪ್ರಾಥಮಿಕವಾಗಿ ಅಂದಾಜಿಸಲಾಗಿದೆ.

ಕಳೆದವಾರ ಪಾಕಿಸ್ತಾನದ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಅವರು ಸುಮಾರು ₹ 2 ಲಕ್ಷ ಕೋಟಿಯಷ್ಟು ಹಾನಿ ಸಂಭವಿಸಿರಬಹುದೆಂದು ಅಂದಾಜಿಸಿದ್ದರು. ಅವರು ಅಂದಾಜಿಸಿದ್ದಕ್ಕಿಂತ ಹೆಚ್ಚು ಆರ್ಥಿಕ ನಷ್ಟವುಂಟಾಗಿದೆ ಎಂದು ಮೂಲಗಳು ತಿಳಿಸಿವೆ.

ಭಾರತಕ್ಕೆ ಅಮೆರಿಕದ ವಾಣಿಜ್ಯ ಇಲಾಖೆ ನಿಯೋಗ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕ ಹಾಗೂ ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳ ನಡುವೆ ಸಹಯೋಗಕ್ಕೆ ಅವಕಾಶ ಅರಸಲು ಅಮೆರಿಕದ ವಾಣಿಜ್ಯ ಇಲಾಖೆಯ ಶಿಕ್ಷಣ ವ್ಯಾಪಾರ ನಿಯೋಗವು ಬೆಂಗಳೂರು, ಮುಂಬೈ ಮತ್ತು ನವದೆಹಲಿಗೆ ಭೇಟಿ ನೀಡಿದೆ.

ಅಮೆರಿಕದ 15 ರಾಜ್ಯಗಳ ಒಟ್ಟು 21 ಉನ್ನತ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು ನಿಯೋಗದಲ್ಲಿ ಇದ್ದಾರೆ. ಭಾರತಕ್ಕೆ ತನ್ನ ಶೈಕ್ಷಣಿಕ ಗುರಿ ತಲುಪಲು ಅಗತ್ಯವಿರುವ ಅನುಭವ ಅಮೆರಿಕದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿದೆ ಎಂದು ಅಮೆರಿಕದ ಚೆನ್ನೈ ಕಾನ್ಸುಲೇಟ್ ಜನರಲ್‌ನ ಪ್ರಕಟಣೆ ಹೇಳಿದೆ.

'ಶಿಕ್ಷಣ ಕ್ಷೇತ್ರದಲ್ಲಿ ಹೊಸ ಪಾಲುದಾರಿಕೆಯನ್ನು ಈ ನಿಯೋಗವು ಹುಡುಕಲಿದೆ. ಅಮೆರಿಕ ಮತ್ತು ಭಾರತದ ನಡುವಿನ ಬಲಿಷ್ಠ ಶೈಕ್ಷಣಿಕ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸಲಿದೆ' ಎಂದು ರಾಯಭಾರಿಯ ಪ್ರತಿನಿಧಿ ಪಟ್ರೀಶಾ ಎ. ಲಸೀನಾ ಹೇಳಿದ್ದಾರೆ. ನಿಯೋಗವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರತಿನಿಧಿಗಳನ್ನು ಭೇಟಿ ಮಾಡಲಿದೆ.

ನಿಯೋಗವು ಇದೇ 16ರವರೆಗೆ ಭಾರತದಲ್ಲಿ ಇರಲಿದೆ. ಹೆಚ್ಚಿನ ಮಾಹಿತಿಗೆ trade.gov/buyusa--india ವೆಬ್‌ಸೈಟ್ ಭೇಟಿ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಭದ್ರಾವತಿ	
ರಾಶಿ	45399-52199
ಚನ್ನಗಿರಿ	
ರಾಶಿ	47099-52799
ಚಿತ್ರದುರ್ಗ	
ಆಪಿ	51419-51829
ಬೆಟ್ಟೆ	40610-41099
ಕೆಂಪುಗೋಟು	31009-31459
ರಾಶಿ	50939-51369
ಕಾರ್ಕಳ	
ಹೊಸತು	40000-47500
ಹಳತು	46000-56000
ಪುತ್ತೂರು	
ಹೊಸತು	34500-47500
ಸಾಗರ	
ಬಿಳಿಗೋಟು	33629-33629
ಚಾಲಿ	38599-40609
ಕೋಕ	17989-17989
ಕೆಂಪುಗೋಟು	38099-38599
ರಾಶಿ	38989-52399
ಸಿಪ್ಪೆಗೋಟು	9789-23129
ಶಿವಮೊಗ್ಗ	
ಗೊರಬಲು	18000-39219
ರಾಶಿ	48009-52269
ಸಿದ್ದಾಪುರ	
ಬಿಳಿಗೋಟು	32869-36899
ಚಾಲಿ	40399-44299
ಕೋಕ	31669-36099
ಕೆಂಪುಗೋಟು	33299-36899
ರಾಶಿ	49869-52289
ತಟ್ಟಿಬೆಟ್ಟೆ	43509-51099
ಶಿರಸಿ	
ಬೆಟ್ಟೆ	39199-48699
ಬಿಳಿಗೋಟು	25929-38099
ಚಾಲಿ	39199-45099
ಕೆಂಪುಗೋಟು	28723-38299
ರಾಶಿ	49299-53099
ಯಲ್ಲಾಪುರ	
ಆಪಿ	60699-60699
ಬಿಳಿಗೋಟು	24699-36302
ಚಾಲಿ	38969-44799
ಕೋಕ	18009-31999
ಕೆಂಪುಗೋಟು	29618-36999
ರಾಶಿ	50389-56470
ತಟ್ಟಿಬೆಟ್ಟೆ	38890-48202

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16250	15800	16250	223.25 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9900	9800	9850	ಲಂಡನ್
ಆರ್‌ಸಿ	4800	4500	4700	2238ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

13-9-2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	11000-11100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690 (1670)
ಒಂದು ವಾರದ ಡೆಲಿವರಿ	1685 (1665)
ಸೋಯಾ ಕಚ್ಚಾ	1117 (1105)
ಪಾಮ್ ವಾರದ ಡೆಲಿವರಿ	958(933)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1300)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,500 (50,600)
ಬೆಳ್ಳಿ ಕೆ.ಜಿ 57,300 (56,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು 233



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,936
ಇಂದಿನ ಅಂತ್ಯ	18,070
▲	133
ದಿನದ ಕನಿಷ್ಠ	18,088

ವಿನಿಮಯ ದರ

$ ಡಾಲರ್	79.17
£ ಪೌಂಡ್	92.66
€ ಯುರೊ	80.46
¥ ಯೆನ್ (100ಕ್ಕೆ)	55.2

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹430
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹430

ಕೊಬ್ಬರಿ ಧಾರಣೆ

ಮಂಗಳೂರು	₹12000-14008
ಕೆ.ಆರ್. ಪೇಟೆ (ಇತರ)	₹8051-8100
ತುರುವೇಕೆರೆ	₹13700-14000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹400-681
ದ್ವಿತಳಿ (ಬಿ.ವಿ) ₹389-856

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹147
ಆರ್‌ಎಸ್‌ಎಸ್-5 ₹137
ಗುಡ್ ಲಾಟ್ ₹131
(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1680 (1660)
ಸೋಯಾ (ರಿಫೈನ್ಡ್)	₹1195(1190)
ಸೂರ್ಯಕಾಂತಿ (ರಿಫೈನ್ಡ್)	₹1360 (1370)
ಪಾಮೋಲಿನ್	₹960 (935)

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Self Employment

ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಕೈಗಾರಿಕೆ, ವ್ಯಾಪಾರ ಪ್ರಾರಂಭಿಸಲು ಸಾಲ ಸೌಲಭ್ಯಕ್ಕಾಗಿ ಬೇಕಾಗುವ ಪ್ರಾಜೆಕ್ಟ್ ರಿಪೋರ್ಟ್, Online ಅಪ್ಲಿಕೇಷನ್ ಮತ್ತಿಕೆರೆ. ಸಲಹೆಗಳಿಗೆ ಸಂಪರ್ಕಿಸಿರಿ ಭೈರೇಗೌಡ: 9379633981

Marketing & Sales

WANTED SALES EXECUTIVES
Fruitomans is one of the oldest & leading fruit products manufacturer in South India established since 1957.
Area: Bengaluru & Mangalore (preference for locals)
Age: less than 35 years Experience: 2-3 years in sales
• Capable to handle Android based tab to collect orders from shops
• Own two-wheeler is necessary.
• Attractive salary, TA & DA
Those interested contact
Bengaluru: 9844071186, Mangalore : 9019679378
Email- hr@fruitomans.com

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕೆಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225266/ 9611225388

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು, ಹುಡುಗರು ಬೇಕಾಗಿದ್ದಾರೆ ಊಟವಸತಿಯಿದೆ 10,000 - 15,000. 8951315839, 9880545002

Manager

MANAGER/ACCOUNTANT REQUIRED to manage 50 Acres farm land . Free accommodation . salary 15000 Hoasdurgha chitradurgha 9108270569

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಇತರೆ

Books & Periodicals

ಪರಸ್ಪರರನ್ನು ಅರಿಯಿರಿ, ಸೌಹಾರ್ದದಿಂದ ಬಾಳಿರಿ, ಪವಿತ್ರ ಕುರ್ ಆನ್ ಓದಲಿಚ್ಛಿಸುವಿರಾ? ಇಸ್ಲಾಮನ್ನು ಅರಿಯಲಿಚ್ಛಿಸುವಿರಾ? ಓದಲು ಪುಸ್ತಕಗಳನ್ನು ರವಾನಿಸಲಾಗುವುದು.ಪೂರ್ಣ ಹೆಸರು, ಸ್ಪಷ್ಟ ವಿಳಾಸ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ಬರೆಯಿರಿ. ಇಸ್ಮಿಕಾ, ಪಿ.ಬಿ.ನಂ.229, ಮಂಗಳೂರು-1, ಮೊಬೈಲ್:9060341799. Email:info@ismika.com, Web:www.ismika.com

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ರೈಲು/ಬಸ್ಸಿನಲ್ಲಿ ದೆಹಲಿ,ಹರಿದ್ವಾರ್ ಚಾರ್‌ಧಾಮ್ ಸಮೇತ 26.09.2022 10.10.2022 ನೇಪಾಳ,ಮುಕ್ತಿನಾಥ ಪೋಕ್ರಾ,ಲುಂಬಿನಿ 09.10.2022 12 ದಿನಗಳು. 09.11.2022 ಸೋಮನಾಥ ದ್ವಾರಕ ಓಂಕಾರೇಶ್ವರ್ ಭಾವನಗರ. 06.10.2022 ರ್‍ರಾಮೇಶ್ವರ ಮಧುರೈ ಕನ್ಯಾಕುಮಾರಿ ಇತ್ಯಾದಿ. (ಒಟ್ಟಿಗೆ ಹದಿನೈದು ಸೀಟು ರಿಸರ್ವ್ ಮಾಡಿದರೆ ಒಂದು ಸೀಟು ಉಚಿತ) ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು.4 26574131 9448508708

ಸುಸಜ್ಜಿತ ವ್ಯವಸ್ಥೆಯೊಂದಿಗೆ: 02.10.2022 ರಿಂದ 8 ದಿನಗಳ ಶಿಮ್ಲಾ,ಮನಾಲಿ. 06.10.2022 ರಿಂದ 12/9 ದಿನಗಳ ಕಾಶಿ,ಗಯಾ,ದೆಹಲಿ. 07.11.2022 13.11.2022 ರಿಂದ 8/10/16 ದಿನಗಳ ಜಗನ್ನಾಥ್‌ಪುರಿ ಕೊನಾರ್ಕ್, ಕೊಲ್ಕತ್ತ,ಕಾಶಿ,ನೇಪಾಳ ಮುಕ್ತಿನಾಥ್ 18.11.2022 ರಿಂದ 11 ದಿನಗಳ ಮಧ್ಯಪ್ರದೇಶ. 11.11.2022 ರಿಂದ 8/11/17 ದಿನಗಳ ಗುಜರಾತ್,ರಾಜಸ್ಥಾನ್ 02.11.2022 04.12.2022 ರಿಂದ 11 ದಿನಗಳ ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್. 11.12.2022 30.12.2022 ರಿಂದ 5 ದಿನಗಳ ದುಬೈ,ಅಬುಧಾಬಿ. 02.12.2022 ರಿಂದ 8 ದಿನಗಳ ಕಾಂಬೋಡಿಯಾ ವಿಯಟ್ನಂ ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

16.11.2022 11.01.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.11.2022 13.01.2023 ದುಬೈ 5 ದಿನಗಳು. 27.11.2022 ನೇಪಾಳ 8 ದಿನಗಳು. 06.10.2022 06.11.2022 09.12.2022 ಕಾಶಿ,ಗಯಾ,ಅಯೋಧ್ಯ 7 ದಿನಗಳು. 13.10.2022 12.11.2022 12.12.2022 ಗುಜರಾತ್ 8 ದಿನಗಳು. 06.11.2022 05.12.2022 ರಾಜಸ್ಥಾನ್ 9 ದಿನಗಳು. ಜೈನ್ ಟ್ರಾವೆಲ್ಸ್, ಬೆಂಗಳೂರು-3 9448402248 7022547922

07.11.2022 11 ದಿನಗಳ ಕಾಶಿ.ಗಯಾ,ಅಯೋಧ್ಯ ನೈಮಿಶಾರಣ್ಯ ಬೈದ್ಯನಾಥ್ ಜ್ಯೋತಿರ್ಲಿಂಗ. Multi excel semi Sleeper coach Bus/ flightನಲ್ಲಿ 10.11.2022 16 ದಿನಗಳ ಅಷ್ಟ ಜ್ಯೋತಿರ್ಲಿಂಗಗಳು ನಾಸಿಕ್,ಶಿರಡಿ ಓಂಕಾರೇಶ್ವರ್ ಮಹಾಕಾಲೇಶ್ವರ (ಉಜ್ಜಯಿನಿ) ದ್ವಾರಕಾ,ಸೋಮನಾಥ್ ಮಾತೃಗಯಾ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ 9342287551 8050629305

Travel Agencies

10/11/2022 6/10 ದಿನಗಳು AC ಬಸ್ಸಿನಲ್ಲಿ ಕಾಶಿ, ಗಯಾ, ಬುದ್ಧಗಯಾ, ಅಲಹಾಬಾದ್, ಅಯೊಧ್ಯ 15500/ (ಕೆಲವೇ ಸೀಟುಗಳಿವೆ) ಅಂಡಮಾನ್ ಹವಳದ್ವೀಪ 5/8 ದಿನಗಳು ಹಡಗು/ವಿಮಾನದಲ್ಲಿ. ರಾಯಲ್ ಪ್ಯಾಕೇಜ್. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್9739847429/ 9845560219.

ಭವಿಷ್ಯ

Astrology

★||ಶ್ರೀಚಾಮುಂಡೇಶ್ವರಿ||★ ಜ್ಯೋತಿಷ್ಯರು ಸ್ತ್ರೀಪುರುಷ ಪ್ರೇಮವಿಚಾರ, ಪ್ರೀತಿಯಲ್ಲಿಮೋಸ, ಆರೋಗ್ಯ, ದಾಂಪತ್ಯ, ಸಾಲಬಾಧೆ, ಸಂತಾನಫಲ, ಮದುವೆ, ಇನ್ಯಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. 8050061378

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 |
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ತೆಲಂಗಾಣದ ಎಲೆಕ್ಟ್ರಿಕ್ ಬೈಕ್ ಷೋರೂಂನಲ್ಲಿ ಅಗ್ನಿ ಅವಘಡ

8 ಮಂದಿ ಸಾವು: ತನಿಖೆಗೆ ಆದೇಶ

ಹೈದರಾಬಾದ್ (ಪಿಟಿಐ): ಇಲ್ಲಿನ ಸಿಕಂದರಾಬಾದ್ ಪ್ರದೇಶದಲ್ಲಿನ ಎಲೆಕ್ಟ್ರಿಕ್ ಬೈಕ್ ಷೋರೂಂನಲ್ಲಿ ಅಗ್ನಿ ಅವಘಡ ಸಂಭವಿಸಿದ ಪರಿಣಾಮ ಮೇಲ್ಮಹಡಿಯ ಹೋಟೆಲ್‌ನಲ್ಲಿದ್ದ ಮಹಿಳೆ ಸೇರಿದಂತೆ ಎಂಟು ಮಂದಿ ಸಾವಿಗೀಡಾದ ಘಟನೆ ಸೋಮವಾರ ಮಧ್ಯರಾತ್ರಿ ನಡೆದಿದೆ.

ಮೃತರಲ್ಲಿ ಕೆಲವರು ತಮಿಳುನಾಡು, ದೆಹಲಿ ಮತ್ತು ವಿಜಯವಾಡದವರು ಎಂದು ಗುರುತಿಸಲಾಗಿದೆ.

ಮೃತರಲ್ಲಿ ಬಹುತೇಕರು ಹೊಗೆಯಿಂದ ಉಸಿರುಗಟ್ಟಿ ಸಾವಿಗೀಡಾಗಿದ್ದಾರೆ. ಘಟನೆಯಲ್ಲಿ 11 ಮಂದಿ ಗಾಯಗೊಂಡಿದ್ದು ಅವರನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಹೋಟೆಲ್ ರೂಬಿ ಪ್ರೈಡ್‌ನ ನೆಲಮಾಳಿಗೆ (ಸೆಲ್ಲರ್) ಬೈಕ್ ಷೋರೂಂ ಇದ್ದು, ಅದರಲ್ಲಿ ಅಗ್ನಿ ಆಕಸ್ಮಿಕ ಸಂಭವಿಸಿದ್ದರಿಂದ ದಟ್ಟವಾದ ಹೊಗೆ ಆವರಿಸಿತು. ನಾಲ್ಕು ಮಹಡಿಗಳ ಹೋಟೆಲ್‌ನಲ್ಲಿ 23 ಕೊಠಡಿಗಳಿದ್ದು, ನೆಲಮಾಳಿಗೆಯಲ್ಲಿ ಕಾಣಿಸಿಕೊಂಡ ಹೊಗೆಯು ಮೇಲ್ಮಹಡಿಗಳ ವರೆಗೆ ದಟ್ಟವಾಗಿ ಹಬ್ಬಿದೆ. ಕೆಲವರು ಹೋಟೆಲ್‌ನ ಮೊದಲ ಮತ್ತು ಎರಡನೇ ಮಹಡಿಯಲ್ಲಿ ನಿದ್ರಿಸುತ್ತಿದ್ದರು. ಅಗ್ನಿ ಅವಘಡದಿಂದ ಎಚ್ಚರಗೊಂಡ ಅವರು ರಕ್ಷಣೆಗಾಗಿ ಹೋಟೆಲ್‌ನ ನೆಲಮಹಡಿಗೆ ಬಂದಾಗ ಅಲ್ಲಿ ದಟ್ಟ ಹೊಗೆಯಲ್ಲಿ ಸಿಲುಕಿ ಉಸಿರುಗಟ್ಟಿ ಸಾವಿಗೀಡಾಗಿದ್ದಾರೆ' ಎಂದು ಹೈದರಾಬಾದ್‌ನ ಪೊಲೀಸ್ ಕಮಿಷನರ್ ಸಿ.ವಿ. ಆನಂದ್ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

'ಅಗ್ನಿ ಅವಘಡಕ್ಕೆ ಸದ್ಯಕ್ಕೆ ನಿಖರವಾದ ಕಾರಣ ಇನ್ನೂ ತಿಳಿದು ಬಂದಿಲ್ಲ. ಷೋರೂಂನ ನೆಲಮಾಳಿಗೆಯಲ್ಲಿ ಎಲೆಕ್ಟ್ರಿಕಲ್ ಬೈಕ್‌ಗಳ ಬ್ಯಾಟರಿಗಳನ್ನು ಚಾರ್ಜಿಂಗ್‌ಗೆ ಇಟ್ಟಿದ್ದರಿಂದಲೇ ಅಥವಾ ಶಾರ್ಟ್ ಸರ್ಕಿಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡಿದೆಯೇ ಎಂಬುದು ಖಚಿತವಾಗಿಲ್ಲ. ಈ ಕುರಿತು ಅಗ್ನಿಶಾಮಕ ಇಲಾಖೆಯ ತನಿಖೆಯಿಂದ ಕಾರಣ ತಿಳಿಯಬಹುದು' ಎಂದು ಅವರು ಹೇಳಿದ್ದಾರೆ.

ದುರ್ಘಟನೆಯ ವೇಳೆ ಹೋಟೆಲ್‌ನಲ್ಲಿ 24 ಮಂದಿ ತಂಗಿದ್ದರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಕ್ರೇನ್ ಬಳಸಿ 11 ಮಂದಿಯನ್ನು ರಕ್ಷಿಸಿದ್ದಾರೆ.

ಬೆಂಕಿಯಿಂದ ಪಾರಾಗಲು ಕೆಲವರು ಹೋಟೆಲ್‌ಗಳ ಕಿಟಕಿಗಳಿಂದ ಜಿಗಿದರು ಎಂದು ಕೆಲ ಟಿ.ವಿ. ವಾಹಿನಿಗಳು ವರದಿ ಮಾಡಿವೆ.

ತನಿಖೆಗೆ ಆದೇಶ: ಬೈಕ್ ಷೋ ರೂಂನಲ್ಲಿ ಸಂಭವಿಸಿದ ಅಗ್ನಿ ದುರಂತದ ಕುರಿತು ಮಂಗಳವಾರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ತನಿಖೆಗೆ ಆದೇಶಿಸಿದೆ.

ಪ್ರಧಾನಿ ಪರಿಹಾರ ಘೋಷಣೆ: ದುರ್ಘಟನೆಯಲ್ಲಿ ಸಾವಿಗೀಡಾದವರಿಗೆ ಸಂತಾಪ ಸೂಚಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತರ ಕುಟುಂಬಗಳಿಗೆ ತಲಾ ₹ 2 ಲಕ್ಷ ಹಾಗೂ ಗಾಯಾಳುಗಳಿಗೆ ₹ 50 ಸಾವಿರ ನೀಡುವುದಾಗಿ ಹಾಗೂ ತೆಲಂಗಾಣ ಸರ್ಕಾರದಿಂದ ಮೃತರ ಕುಟುಂಬಗಳಿಗೆ ₹ 3 ಲಕ್ಷ ಪರಿಹಾರ ನೀಡಲಾಗುವುದು ತೆಲಂಗಾಣದ ಐಟಿ ಹಾಗೂ ಕೈಗಾರಿಕಾ ಸಚಿವ ಕೆ.ಟಿ. ರಾಮರಾವ್ ಅವರು ಘೋಷಿಸಿ ದ್ದಾರೆ.

ಪ್ರಕರಣ ದಾಖಲು: ಒಂದು ವರ್ಷದ ಹಿಂದೆ ನೆಲಮಾಳಿಗೆಯಲ್ಲಿ ಇ-ಬೈಕ್ ಷೋರೂಂ ಆರಂಭಿಸಲಾಗಿತ್ತು. ಇದಕ್ಕೆ ಯಾವುದೇ ರೀತಿಯ ಅನುಮತಿ ಪಡೆದಿರಲಿಲ್ಲ ಎನ್ನಲಾಗಿದೆ.

ಈ ಸಂಬಂಧ ಪೊಲೀಸರು ಷೋರೂಂ ಮತ್ತು ಹೋಟೆಲ್ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ.

ಸಿಕಂದರಾಬಾದ್‌ನಲ್ಲಿ ಸೋಮವಾರ ರಾತ್ರಿ ಅಗ್ನಿ ಅವಘಡ ಸಂಭವಿಸಿದ್ದ ಎಲೆಕ್ಟ್ರಿಕ್ ಬೈಕ್ ಷೋರೂಂನಲ್ಲಿ ಇಟ್ಟಿದ್ದ ಬೈಕ್‌ಗಳು ಬೆಂಕಿಗೆ ಆಹುತಿಯಾಗಿವೆ –ಪಿಟಿಐ ಚಿತ್ರ

ಇ–ಬ್ಯಾಟರಿ ಸ್ಫೋಟವೇ ಕಾರಣ: ಶಂಕೆ

ಹೈದರಾಬಾದ್: ಹೋಟೆಲ್‌ನ ನೆಲಮಾಳಿಗೆಯಲ್ಲಿದ್ದ ಎಲೆಕ್ಟ್ರಿಕ್ ಬೈಕ್ ಷೋರೂಂನಲ್ಲಿ ಬ್ಯಾಟರಿ ಸ್ಫೋಟವೇ ಅಗ್ನಿ ಅವಘಡಕ್ಕೆ ಕಾರಣ ಎಂದು ಪೊಲೀಸರು ಶಂಕಿಸಿದ್ದಾರೆ.

'ಬೈಕ್‌ವೊಂದರಲ್ಲಿನ ಇ- ಬ್ಯಾಟರಿ ಸ್ಫೋಟಗೊಂಡಿದ್ದು, ಇದರಿಂದ ಇತರ ವಾಹನಗಳಿಗೆ ಬೆಂಕಿ ತ್ವರಿತವಾಗಿ ಹರಡಿರಬಹುದು ಎಂದು ಶಂಕಿಸಲಾಗಿದೆ' ಎಂದು ಹೈದರಾಬಾದ್‌ನ ಡಿಸಿಪಿ (ಉತ್ತರ) ಚಂದನಾ ದೀಪ್ತಿ ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಈ ಹಿಂದೆ ಆಂಧ್ರ ಪ್ರದೇಶ, ತೆಲಂಗಾಣ ಹಾಗೂ ದೇಶದ ಇತರೆಡೆಗಳಲ್ಲೂ ಎಲೆಕ್ಟ್ರಿಕ್ ಬೈಕ್‌ಗಳ ಬ್ಯಾಟರಿಗಳು ಸ್ಫೋಟಗೊಂಡು ಹಲವರು ಸಾವಿಗೀಡಾದ ಪ್ರಕರಣಗಳು ವರದಿಯಾಗಿದ್ದವು.

ಮುಕುಲ್ ರೋಹಟಗಿ ಮುಂದಿನ ಅಟಾರ್ನಿ ಜನರಲ್

ನವದೆಹಲಿ: ಹಿರಿಯ ವಕೀಲ ಮುಕುಲ್ ರೋಹಟಗಿ ಅವರು ಮುಂದಿನ ಅಟಾರ್ನಿ ಜನರಲ್ ಆಗಿ ನೇಮಕ ಗೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರ ಅಧಿಕಾರದ ಅವಧಿಯು ಸೆಪ್ಟೆಂಬರ್ 30ರಂದು ಕೊನೆಗೊಳ್ಳಲಿದೆ. ಮುಕುಲ್ ಅವರು ಎರಡನೇ ಬಾರಿಗೆ ಅಟಾರ್ನಿ ಜನರಲ್ ಆಗಿ ನೇಮಕಗೊಳ್ಳಲಿದ್ದಾರೆ ಎಂದೂ ಹೇಳಿವೆ.

2014ರಲ್ಲಿ ಮುಕುಲ್ ಅವರು ಮೊದಲ ಬಾರಿಗೆ ಅಟಾರ್ನಿ ಜನರಲ್ ಆಗಿ ಕಾರ್ಯ ನಿರ್ವಹಿಸಿದ್ದರು.

ನೇಮಕ ಅಕ್ರಮ: ಇಬ್ಬರು ಶಿಕ್ಷಕರ ಬಂಧನ

ಶ್ರೀನಗರ: ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ (ಪಿಎಸ್‌ಐ) ನೇಮಕಾತಿಯಲ್ಲಿ ನಡೆದಿರುವ ಅಕ್ರಮಕ್ಕೆ ಸಂಬಂಧಿಸಿ ಜಮ್ಮು ಮತ್ತು ಕಾಶ್ಮೀರ ಸೇರಿದಂತೆ ದೇಶದ 36 ಸ್ಥಳಗಳಲ್ಲಿ ಕೇಂದ್ರೀಯ ತನಿಖಾ ದಳ (ಸಿಬಿಐ) ಏಕಕಾಲದಲ್ಲಿ ಶೋಧ ನಡೆಸಿದ್ದು, ಇಬ್ಬರು ಶಿಕ್ಷಕರನ್ನು ಬಂಧಿಸಿದೆ. ಶ್ರೀನಗರ, ಬೆಂಗಳೂರು ಮತ್ತು ದೆಹಲಿ ಸೇರಿದಂತೆ 36 ಕಡೆ ಶೋಧ ನಡೆಸಲಾಯಿತು.

'ಇಡಬ್ಲ್ಯುಎಸ್ ಮೀಸಲಾತಿ ಸಂವಿಧಾನಕ್ಕೆ ಬಗೆದ ದ್ರೋಹ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಆರ್ಥಿಕವಾಗಿ ಹಿಂದುಳಿದವರಿಗೆ (ಇಡಬ್ಲ್ಯುಎಸ್) ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇಕಡ 10ರಷ್ಟು ಮೀಸಲಾತಿ ನೀಡುವ ನಿರ್ಧಾರವು, ಸಂವಿಧಾನಕ್ಕೆ ಬಗೆದ ದ್ರೋಹ' ಎಂದು ಹಿರಿಯ ವಕೀಲ ಜಿ.ಮೋಹನ್ ಗೋಪಾಲ್ ಅವರು ಸುಪ್ರೀಂ ಕೋರ್ಟ್‌ಗೆ ಹೇಳಿದ್ದಾರೆ.

ಮುಂದುವರಿದ ವರ್ಗಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡುವ ಕೇಂದ್ರ ಸರ್ಕಾರದ ಕ್ರಮದ ವಿರುದ್ಧ ಸಲ್ಲಿಸಲಾಗಿರುವ ಹಲವು ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ನಡೆಸುತ್ತಿದೆ. ಮಂಗಳವಾರ ನಡೆದ ವಿಚಾರಣೆಯಲ್ಲಿ ಹಲವು ಅರ್ಜಿದಾರರ ಪರವಾಗಿ ಮೋಹನ್ ಗೋಪಾಲ್ ವಾದ ಮಂಡಿಸಿದರು.

ಈವರೆಗೆ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಮಾತ್ರ ಮೀಸಲಾತಿಯನ್ನು ನೀಡಲಾಗಿತ್ತು. ಆದರೆ ಇದೇ ಮೊದಲ ಬಾರಿಗೆ ಜಾತಿಯ ಆಧಾರದಲ್ಲಿ ಮೀಸಲಾತಿ ನೀಡಲಾಗಿದೆ. ಈ ಶೇ 10ರಷ್ಟು ಮೀಸಲಾತಿಯಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ದೊರೆಯುವುದಿಲ್ಲ. ಬದಲಿಗೆ ಮುಂದುವರಿದ ವರ್ಗಗಳಲ್ಲಿನ ಬಡವರಿಗೆ ಮಾತ್ರ ಮೀಸಲಾತಿ ದೊರೆಯುತ್ತದೆ. ಇದು ದೇಶವನ್ನು ವಿಭಜಿಸುತ್ತದೆ. ಸಂವಿಧಾನದ ಮೇಲೆ ನಡೆದ ದಾಳಿ ಇದು ಎಂದು ಮೋಹನ್ ಗೋಪಾಲ್ ಪ್ರತಿಪಾದಿಸಿದ್ದಾರೆ.

'ಇಡಬ್ಲ್ಯುಎಸ್‌ಗೆ ಶೇ 10ರಷ್ಟು ಮೀಸಲಾತಿ ನೀಡುವುದು, ಮುಂದುವರಿದ ವರ್ಗಗಳ ಬಡವರ ಆರ್ಥಿಕ ಸಬಲೀಕರಣ ಮಾತ್ರವಾಗುತ್ತದೆ. ಇದು ಸಂವಿಧಾನದ ಧ್ಯೇಯವಾದ ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ನಿರಾಕರಿಸುತ್ತದೆ. ಹೀಗಾಗಿ ಈ ನಿರ್ಧಾರವು ಸಂವಿಧಾನದ ಹೃದಯಕ್ಕೆ ಮಾಡಿದ ಗಾಯವಾಗಿದೆ' ಎಂದು ಹೇಳಿದ್ದಾರೆ.

> **ಸಂವಿಧಾನಕ್ಕೆ ತರಲಾಗಿರುವ 103ನೇ ತಿದ್ದುಪಡಿಯನ್ನು, ಸಾಮಾಜಿಕ ನ್ಯಾಯವನ್ನು ನಿರಾಕರಿಸುವ ಮತ್ತು ಸಂವಿಧಾನದ ಮೇಲೆ ನಡೆಸಿದ ದಾಳಿ ಎಂದೇ ನೋಡಬೇಕು**
> **ಜಿ.ಮೋಹನ್ ಗೋಪಾಲ್,**
> ಅರ್ಜಿದಾರರ ಪರ ವಕೀಲ

> **ಮೀಸಲಾತಿಯ ಪ್ರಮಾಣ ಶೇ 50ನ್ನು ಮೀರುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅದನ್ನೂ ಮೀರಿ ಹೆಚ್ಚುವರಿಯಾಗಿ ಶೇ 10ರಷ್ಟು ಮೀಸಲಾತಿ ಕಲ್ಪಿಸಲಾಗಿದೆ**
> **ಮೀನಾಕ್ಷಿ ಅರೋರಾ,**
> ಅರ್ಜಿದಾರರ ಪರ ವಕೀಲೆ

'ಜ್ಞಾನವಾಪಿ ಪ್ರಕರಣ: ತೀರ್ಪು ನಿರಾಶಾದಾಯಕ'

ನವದೆಹಲಿ (ಪಿಟಿಐ): ಜ್ಞಾನವಾಪಿ ಮಸೀದಿ ಪ್ರಕರಣದ ನಿರ್ವಹಣೆಗೆ ಸಂಬಂಧಿಸಿದಂತೆ ವಾರಾಣಸಿ ಜಿಲ್ಲಾ ನ್ಯಾಯಾಲಯವು ನೀಡಿರುವ ತೀರ್ಪನ್ನು ನಿರಾಶಾದಾಯಕ ಎಂದು ಪ್ರತಿಕ್ರಿಯಿಸಿರುವ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು (ಎಐಎಂಪಿಎಲ್‌ಬಿ), ಪೂಜಾ ಸ್ಥಳಗಳ ಕಾಯ್ದೆ 1991 ಅನ್ನು (ವಿಶೇಷ ನಿಬಂಧನೆಗಳು) ಪೂರ್ಣಪ್ರಮಾಣದಲ್ಲಿ ಜಾರಿಗೊಳಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದೆ.

ಜ್ಞಾನವಾಪಿ ಮಸೀದಿ ಆವರಣದಲ್ಲಿ ಇದೆ ಎಂದು ಹೇಳಲಾಗುವ ಶೃಂಗಾರ ಗೌರಿ ದೇಗುಲದಲ್ಲಿ ದಿನವೂ ಪೂಜೆ ಸಲ್ಲಿಸಲು ಅವಕಾಶ ಕೋರಿ ಸಲ್ಲಿಕೆಯಾಗಿರುವ ಅರ್ಜಿಯು ವಿಚಾರಣೆಗೆ ಅರ್ಹ ಎಂದು ವಾರಾಣಸಿ ಜಿಲ್ಲಾ ನ್ಯಾಯಾಲಯವು ಸೋಮವಾರ ತೀರ್ಪು ಕೊಟ್ಟಿದೆ.

ಜಿಲ್ಲಾ ನ್ಯಾಯಾಲಯದ ತೀರ್ಪು 'ನಿರಾಶಾದಾಯಕ ಹಾಗೂ ದುಃಖಕರ' ಎಂದು ಎಐಎಂಪಿಎಲ್‌ಬಿಯ ಪ್ರಧಾನ ಕಾರ್ಯದರ್ಶಿ ಮೌಲಾನಾ ಖಾಲಿದ್ ಸೈಫುಲ್ಲಾ ರಹಮಾನಿ ಹೇಳಿಕೆಯಲ್ಲಿ ಪ್ರತಿಕ್ರಿಯಿಸಿದ್ದಾರೆ.

'1991ರ ಮಧ್ಯಭಾಗದಲ್ಲಿ ಬಾಬರಿ ಮಸೀದಿ ವಿವಾದಕ್ಕೆ ಸಂಬಂಧಿಸಿದಂತೆ ಸಂಸತ್ತು, ಬಾಬರಿ ಮಸೀದಿ ಹೊರತುಪಡಿಸಿ, 1947ರಲ್ಲಿರುವಂತೆ ಎಲ್ಲಾ ಧಾರ್ಮಿಕ ಸ್ಥಳಗಳಲ್ಲಿ ಯಥಾಸ್ಥಿತಿಯನ್ನು ಮುಂದುವರಿಸಲಾಗುವುದು ಎಂದು ಮಾನ್ಯ ಮಾಡಿತ್ತು. ಆದರೆ, ಇದರ ವಿರುದ್ಧದ ಯಾವುದೇ ವಿವಾದವು ಮಾನ್ಯವಾಗಿಲ್ಲ. ನಂತರ ಬಾಬರಿ ಮಸೀದಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಪೂಜಾ ಸ್ಥಳಗಳ (ವಿಶೇಷ ನಿಬಂಧನೆಗಳು) ಕಾಯ್ದೆ 1991 ಅನ್ನು ಎತ್ತಿಹಿಡಿದಿದೆ ಮತ್ತು ಅದನ್ನು ಕಡ್ಡಾಯವಾಗಿ ಘೋಷಿಸಿತು' ಎಂದೂ ಅವರು ಹೇಳಿದ್ದಾರೆ.

'ನ್ಯಾಯಾಲಯವು ಆರಂಭದಲ್ಲಿಯೇ ಹಿಂದೂ ಗುಂಪುಗಳ ಅರ್ಜಿಯನ್ನು ವಿಚಾರಣೆಗೆ ಅರ್ಹ ಎಂದು ಒಪ್ಪಿಕೊಂಡಿದೆ. ಇದು ಕೋಮು ಸೌಹಾರ್ದಕ್ಕೂ ಧಕ್ಕೆ ತರುತ್ತದೆ' ಎಂದು ರಹಮಾನಿ ಅಭಿಪ್ರಾಯಪಟ್ಟಿದ್ದಾರೆ.

ಮೇಲ್ಮನವಿಗೆ ಸಿದ್ಧತೆ

ವಾರಾಣಸಿ: ತೀರ್ಪನ್ನು ಪ್ರಶ್ನಿಸಿ ಅಲಹಾಬಾದ್ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಕುರಿತು ಅಂಜುಮಾನ್ ಇಂತೆಜಾಮಿಯಾ ಸಮಿತಿಯು ಹಿರಿಯ ವಕೀಲರನ್ನು ಭೇಟಿ ಮಾಡಿತು. ಹಿಂದೂ ಕಕ್ಷಿದಾರರ ಪರ ವಕೀಲ ವಿಷ್ಣು ಜೈನ್, 'ನಾವೂ ಹೈಕೋರ್ಟ್‌ಗೆ ಹೋಗುತ್ತೇವೆ' ಎಂದಿದ್ದಾರೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬೆಸ್ಕಾಂ, ಈ ಕೆಳಕಂಡ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ವಿಚಾರಣೆ ಸಂಖ್ಯೆ: ಅಅವಿ/ಕಾಅ(ಕ)/ಸಕಾಅ(ಕ)/ಸಅ–1/22–23/07, ದಿನಾಂಕ: 12.09.2021. ವಿವರ: ಕಾ&ಪಾ ವೃತ್ತ, ದಾವಣಗೆರೆಯಲ್ಲಿ ದರ ಗುತ್ತಿಗೆ ಆಧಾರದಡಿಯಲ್ಲಿ ದೋಷ ಪೂರಿತ ಪರಿವರ್ತಕ ತೈಲವನ್ನು ಸುಧಾರಣೆಗೊಳಿಸುವುದು.
ಅಂದಾಜು ಪ್ರಮಾಣ: 1000 ಕಿ.ಲೀ. ಬಿಡ್ ದಸ್ತಾವೇಜು ನೀಡುವಿಕೆ ದಿನಾಂಕ: 15.09.2022, ಸಂಜೆ 4.00 ಗಂಟೆಯಿಂದ. ಬಿಡ್ ದಸ್ತಾವೇಜುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 30.09.2022, ಸಂಜೆ 4.00 ಗಂಟೆವರೆಗೆ. ಬಿಡ್ ದಸ್ತಾವೇಜುಗಳನ್ನು ತೆರೆಯುವ ದಿನಾಂಕ: 01.10.2022, ಸಂಜೆ 5.00 ಗಂಟೆಗೆ.
ಬಿಡ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://www.eproc.karnataka.gov.in ಗೆ ಭೇಟಿನೀಡಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆಸಕ್ತಿಯುಳ್ಳ ಬಿಡ್ದುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ನಂತರ, ಬಿಡ್ದುದಾರರು ಯಾವುದೇ ಸ್ಪಷ್ಟೀಕರಣಕ್ಕೆ ಇ-ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್: 080–25501216 ಮತ್ತು 080–25501227ಗೆ ಕರೆಮಾಡಿ ಪಡೆಯಬಹುದು.
ಸಹಿ/– ಅಧೀಕ್ಷಕ ಇಂಜಿನಿಯರ್ (ವಿ)., ಕಾ&ಪಾ, ವೃತ್ತ, ದಾವಣಗೆರೆ.
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ:1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಕರ್ನಾಟಕ ರಾಜ್ಯ ಪೊಲೀಸ್

ಕರ್ನಾಟಕ ರಾಜ್ಯದಲ್ಲಿ ಖಾಲಿ ಇರುವ ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್ (ಸಿಎಆರ್/ಡಿಎಆರ್) (ಪುರುಷ ಮತ್ತು ಪುರುಷ ತೃತೀಯಲಿಂಗ) (ಎನ್‌ಕೆಕೆ)–3064 ಮತ್ತು ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್ (ಸಿಎಆರ್/ಡಿಎಆರ್) (ಪುರುಷ ಮತ್ತು ಪುರುಷ ತೃತೀಯಲಿಂಗ) (ಕೆಕೆ)–420 ಒಟ್ಟು–3484 ಹುದ್ದೆಗಳಿಗೆ ಆನ್‌ಲೈನ್ (Online) ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ.
ಅರ್ಜಿ ಸಲ್ಲಿಸುವ ದಿನಾಂಕ: 19.09.2022 ರಿಂದ 31.10.2022.
ಟಿಪ್ಪಣಿ: ಪೊಲೀಸ್ ಇಲಾಖೆಯು ನೇಮಕಾತಿಯು ಸಂಪೂರ್ಣ ಪಾರದರ್ಶಕತೆಯಿಂದ ಕೂಡಿರುತ್ತದೆ. ಇಲಾಖೆಯು ನಿಗಧಿಪಡಿಸಿದ ಶುಲ್ಕವನ್ನು ಮಾತ್ರ ಬ್ಯಾಂಕ್ ಮತ್ತು ಅಂಚೆ ಕಛೇರಿಗಳಲ್ಲಿ ಪಾವತಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಅಧಿಕೃತ ವೆಬ್‌ಸೈಟ್ https://ksp.karnataka.gov.in/ or https://ksp-recruitment.in/ ನ್ನು ವೀಕ್ಷಿಸುವುದು.
ಸಹಿ/– ಡಿಜಿಪಿ, ನೇಮಕಾತಿ
DIPR/CP/2198/Zenkar/2022-23

ನಗರಸಭಾ ಕಾರ್ಯಾಲಯ ಕನಕಪುರ
ರಾಮನಗರ ಜಿಲ್ಲೆ. ದೂರವಾಣಿ : 080–2752 2428.
ಇಮೇಲ್: kanakapura_tmc@yahoo.co.in ವೆಬ್‌ಸೈಟ್: www.kanakapuratown.mrc.gov.in
ಸಂಖ್ಯೆ: ಕನಸ/ತಾಂ.ಶಾ–1/15ನೇ ಹ.ಕಾ./ಸಿಆರ್/42/2021–22 ದಿನಾಂಕ: 12–09–2022

ಮರು ಟೆಂಡರ್ ಪ್ರಕಟಣೆ (3ನೇ ಕರೆ)

2022–22 ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಟೆಂಡರ್ ಡಾಕ್ಯೂಮೆಂಟ್‌ನ ಷರತತು ಹಾಗೂ ಸೂಚನೆಗೊಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಟೆಂಡರ್‌ಗಳ ಟೆಂಡರ್ ಆಹ್ವಾನಿಸಲಾಗಿದೆ. ಇಂಡೆಂಟ್ ಸಂಖ್ಯೆ : DMA/2021-22/OW/WORK_INDENT125217/Call-3 ಅಂದಾಜು ಮೊತ್ತ ರೂ. 54.00 ಲಕ್ಷ, ಇ.ಎಂ.ಡಿ. ಮೊತ್ತ ರೂ. 1,08,000.00 ಟೆಂಡರ್ ದಿನಾಂಕದ ವಿವರಗಳು ಹಾಗೂ ಇತರೆ ಮಾಹಿತಿಗಳು ಕೆಳಕಂಡಂತಿವೆ. ಟೆಂಡರ್‌ನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : 11–09–2022 ರ ಬೆಳಿಗ್ಗೆ 11.00 ಗಂಟೆಯ ನಂತರ. ಪೂರ್ವ ಬಿಡ್ ಸಭೆಯ ದಿನಾಂಕ : 20–09–2022 ರ ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 27–09–2022 ರ ಸಾಯಂಕಾಲ 16.30 ಗಂಟೆಗೆ ಮತ್ತು ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. ಯಾವುದೇ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಕಛೇರಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.
ಸಹಿ/– ಪೌರಾಯುಕ್ತರು, ನಗರಸಭೆ, ಕನಕಪುರ.
ಡಿಐಪಿಆರ್/ರಾಮನಗರ/224/ಮಣಿಪಾಲ್/2022–23

ಗದಗ ಬೆಟಗೇರಿ ನಗರಸಭೆ ಕಾರ್ಯಾಲಯ–582101
ಜಿಲ್ಲಾ ಗದಗ ರಾಜ್ಯ : ಕರ್ನಾಟಕ ದೂರವಾಣಿ : 08372–259932
ಇ–ಮೇಲ್ : itstaff.ulb.gadag@gmail.com
ನಂ.ಗಬೆನಸ/ತಾಂ.ವಿ/ವಿ.ಶಾ/ವಹಿ/793/2022–23 ದಿನಾಂಕ: 08–09–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999–2000ರ ಪ್ರಕಾರ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಇಂಡೆಂಟ್ ನಂ– DMA/2022-23/EL/WORK_INDENT No/136635 ಹೊಂದಿರುವ ಕಾಮಗಾರಿಗೆ ದರಗಳನ್ನು ಆಹ್ವಾನಿಸಿದ್ದು ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ವೆಬ್‌ಸೈಟ್ www.eproc.karnataka.gov.in ಮುಖಾಂತರ ಟೆಂಡರ ಸಲ್ಲಿಸಬಹುದಾಗಿದ್ದು ಹಾಗೂ ಹೆಚ್ಚಿನ ವಿವರಗಳನ್ನು ಕಛೇರಿಯ ವೆಬ್‌ಸೈಟ್ www.gadag-betagericity.gov.in ದಲ್ಲಿ ನೋಡಬಹುದು.
ಇತರೆ ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರಮೆಂಟ್ ಹೆಲ್ಪಲೈನ್ ನಂಬರ್–080–23010900–1 ಗೆ ಸಂಪರ್ಕಿಸಬಹುದು.
ಸಹಿ/– ಶ್ರೀಮತಿ ಉಷಾ ಎಮ್ ದಾಸರ, ಅಧ್ಯಕ್ಷರು, ನಗರಸಭೆ ಗದಗ–ಬೆಟಗೇರಿ
ಸಹಿ/– ಶ್ರೀ ರಮೇಶ ಎಸ್ ಸುಣಗಾರ ಕೆ.ಎಂ.ಎ.ಎಸ್., ಪೌರಾಯುಕ್ತರು, ನಗರಸಭೆ ಗದಗ–ಬೆಟಗೇರಿ
ವಾಸಾಸಂಇ/ಗದಗ/ಎಂ.ಸಿ.ಎ/305/2022–23

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ–580 005
Fax : +91-836-2441188 Phone: +91-836-2214214
E mail: eo@uasd.in Epabx:+91-836-2214214,/216,332,242
ಸಂ.ಆಅ/ಇ–ಪ್ರೊ.ಬೀಜ/ಬೀ.ಘ/2022–23 ದಿನಾಂಕ: 12.09.2022

ಇ–ಪ್ರೊಕ್ಯೂರಮೆಂಟ ಟೆಂಡರ ಪ್ರಕಟಣೆ (ದ್ವಿತೀಯ ಕರೆ)

ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ ಅನುಪಯುಕ್ತ 192.65 ಕ್ವಿಂಟಲ್ ಸೋಯಾ ಅವರೆ ಕಾಳುಗಳ ವಿಲೇವಾರಿಗಳಿಗೆ ಐಟಂವಾರು ಟೆಂಡರನ್ನು ಅಧಿಕೃತ ಏಜೆನ್ಸಿ /ಗುತ್ತಿಗೆದಾರರುಗಳಿಂದ ಮರು ಅಹ್ವಾನಿಸಿರುತ್ತಾರೆ. ಸದರಿ ಟೆಂಡರನ್ನು http://eproc.karnataka.gov.in online ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ 9448497353 ರಲ್ಲಿ ಪಡೆಯುವುದು.

ಟೆಂಡರ್ ವೇಳಾಪಟ್ಟಿ

1	ವಿಚಾರಣೆಗಳಿಗಾಗಿ ಕೊನೆಯ ದಿನಾಂಕ ಹಾಗೂ ವೇಳೆ	16.09.2022	Up to	16.00 Hrs
2	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ	19.09.2022	Up to	16.00 Hrs
3	ಟೆಂಡರ್ ತೆರೆಯುವ ದಿನಾಂಕ ಹಾಗೂ ವೇಳೆ	20.09.2022	At	16.15 Hrs

ಸೂಚನೆ: ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ–ಪ್ರೊಕ್ಯೂರಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು
ಸಹಿ/– ಆಸ್ತಿ ಅಧಿಕಾರಿಗಳು
ವಾ.ಸಾ.ಇ./ಧಾ/553/2022–23/ದೇಶಪಾಂಡೆಪಬ್ಲಿಸಿಟಿ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಂಟಿ ನಿರ್ದೇಶಕರ ಕಾರ್ಯಾಲಯ
ಸಮಾಜ ಕಲ್ಯಾಣ ಇಲಾಖೆ, ತುಮಕೂರು ಜಿಲ್ಲೆ
ತುಮಕೂರು. ದೂರವಾಣಿ ಸಂ:0816–2278132 ಫ್ಯಾಕ್ಸ್ ಸಂಖ್ಯೆ:0816–2278132 E-mail- tumkur.dswo@gmail.com
ಸಂ:ಜಂನಿ:ಸಕಇ/ಮೊಕಿಅಂಇವಶಾಸಿಆರ್:01/2022–23 ದಿನಾಂಕ : 07.09.2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ತುಮಕೂರು ಜಿಲ್ಲೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ವಸತಿಶಾಲೆಗಳಿಗೆ ಪೀಠೋಪಕರಣಗಳು, ಹಾಸಿಗೆ ಹೊದಿಕೆ, ಬೆಡ್ ಸ್ಪ್ರೆಡ್ & ದಿಂಬುಗಳು, ಪ್ರೊಜೆಕ್ಟರ್ & ಸ್ಕ್ರೀನ್, ಪಾಠೋಪಕರಣಗಳು, ಪ್ರಯೋಗಾಲಯ ಸಾಮಗ್ರಿಗಳು, ನರ್ಸಿಂಗ್ ಕಿಟ್, ವಾಟರ್ ಪ್ಯೂರಿಫೈರ್‌ಗಳು, ಸೋಲಾರ್ ವಾಟರ್‌ಹೀಟರ್ ಮತ್ತು ಪಾತ್ರೆಪರಿಕರಗಳನ್ನು ಸರಬರಾಜು ಪಡೆಯಲು ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜು ಗಳನ್ನು ದಿನಾಂಕ: 08.09.2022 ರಿಂದ ದಿ:22.09.2022 ರವರೆಗೆ Website: www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. e-portal ನಲ್ಲಿ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:22.09.2022ರ 4.00 ಗಂಟೆಗೆ ನಿಗಧಿಪಡಿಸಿದೆ.
DIPR/TUM/495/MCA/2020-21 ಸಹಿ/– (ಟಿ.ಎಲ್.ಎಸ್.ಪ್ರೇಮ) ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ತುಮಕೂರು ಜಿಲ್ಲೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1/ವಿ.ವಿ.ಲೆ.ಶಿ/ಟೆಂಡರು/2022–23/847 ದಿನಾಂಕ: 09.09.2022

ಟೆಂಡರು ಪ್ರಕಟಣೆ
(ಇ–ಪ್ರೊಕ್ಯುರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ **ಜಿಲ್ಲಾ ಖನಿಜ ಪ್ರತಿಷ್ಠಾನ, ಶಿಕ್ಷಣ ಇಲಾಖೆ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆ** ಅಡಿಯಲ್ಲಿ ಅನುಮೋದನೆಗೊಂಡ ರಸ್ತೆ ಮತ್ತು ಕಟ್ಟಡ ನಿರ್ಮಾಣದ ಒಟ್ಟು 23 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ. ಸದರಿ ಕಾಮಗಾರಿಗಳಲ್ಲಿ **ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 04** ಕಾಮಗಾರಿಗಳನ್ನು ಮತ್ತು **ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ 02** ಕಾಮಗಾರಿಗಳನ್ನು ಕಾಯ್ದಿರಿಸಲಾಗಿದೆ.
ಟೆಂಡರ್ ನಮೂನೆಗಳನ್ನು www.eproc.karnataka.gov.in/e-portal/index.seam ಅಂತರ್ಜಾಲದಲ್ಲಿ ದಿನಾಂಕ 12–09–2022 ರಿಂದ ದಿನಾಂಕ 26–09–2022 ರಂದು ಸಂಜೆ 4.00 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 28–09–2022 ರ 16.00 ಗಂಟೆಯವರೆಗೆ** ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 29–09–2022 ರಂದು 17.00 ಗಂಟೆಗೆ** ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (www.eproc.karnataka.gov.in/e-portal/index.seam) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/440/ಎಂಸಿಎ/2022–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ, ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಎಇ–2:ಟೆಂಡರ್–57:2022–23 ದಿನಾಂಕ: 07.09.2022

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ ಲಕೋಟಿ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seamನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.
ಕಾಮಗಾರಿ ಹೆಸರು: ಇ–ಪ್ರೊಕ್ಯೂರ್‌ಮೆಂಟ್ ಮೂಲಕ–ದ್ವಿ ಲಕೋಟೆ ಪದ್ಧತಿ: ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ: (1) ಹೊಳಲ್ಕೆರೆ ತಾಲ್ಲೂಕು ಪಂಚಾಯಿತಿ ಕಛೇರಿಯ ಮುಂದುವರಿದ ಕಾಮಗಾರಿಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿ. ಅಂದಾಜು ಮೊತ್ತ: ರೂ. 275.00 ಲಕ್ಷಗಳು. (2) ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪಟ್ಟಣ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಕಟ್ಟಡ ನಿರ್ಮಾಣ. ಅಂದಾಜು ಮೊತ್ತ: ರೂ. 230.00 ಲಕ್ಷಗಳು.
ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 22.09.2022 ಸಮಯ 17:30. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 23.09.2022 ಸಮಯ 16:00. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 26.09.2022 ಸಮಯ 16:01. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 28.09.2022 ಸಮಯ 11:00.
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.
RO No. 515: DIPR/CTA/MCA/2022-23 ಸಹಿ/– ಕಾರ್ಯಪಾಲಕ ಅಭಿಯಂತರರು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ,
ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್ ಹಾವೇರಿ)
ಹಾವೇರಿ #21, 'ಬಿ' ಬ್ಲಾಕ್ ಜಿಲ್ಲಾಡಳಿತ ಭವನ, ದೇವಗಿರಿ ಹಾವೇರಿ.
Ph : 08375-249049 Fax : 08375-249009
Mob : 94498 43054 Email : dhohaveri@gmail.com
ಸಂಖ್ಯೆ: ಜಿಆಕುಕಹಾ/ಆರ್.ಸಿ.ಹೆಚ್/15th FC/ನಮ್ಮ ಕ್ಲಿನಿಕ್/01/2022–23 ದಿನಾಂಕ : 09.09.2022

ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಹಾವೇರಿ ಇವರು 2022–23 ನೇ ಸಾಲಿನಲ್ಲಿ, 15th Finance Commission ಅಡಿಯಲ್ಲಿ ಹಾವೇರಿ ಜಿಲ್ಲೆಯ 5 ನಮ್ಮ ಕ್ಲಿನಿಕ್‌ಗಳಿಗೆ ಅವಶ್ಯಕತೆಯಿರುವ ಪೀಠೋಪಕರಣ ಮತ್ತು Basic Equipment ಗಳನ್ನು ಪೂರೈಸುವದಕ್ಕೆ ಕೆ.ಟಿ.ಪಿ.ಪಿ, ನಿಯಮಾನುಸಾರ ಇ–ಟೆಂಡರ್ ಆಹ್ವಾನಿಸಲಾಗಿದ್ದು. ಟೆಂಡರ್ ಅಂದಾಜು ಮೊತ್ತ ರೂ. 10.00 ಲಕ್ಷಗಳು ಟೆಂಡರ್ ಕುರಿತ ಹೆಚ್ಚಿನ ವಿವರವನ್ನು www.eproc.karnataka.gov.in ಮೂಲಕ ಮತ್ತು ನಮ್ಮ ಕಚೇರಿಯನ್ನು ಕಛೇರಿ ಅವಧಿಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ, ಆಸಕ್ತ ನೊಂದಾಯಿತ ಅರ್ಹ ಪೂರೈಕೆದಾರರು ಈ ಕೆಳ ಸೂಚಿಸಿದ ವೇಳಾಪಟ್ಟಿಯನುಸಾರ ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ,
(1) ಟೆಂಡರ್ ಅಂದಾಜು ಮೊತ್ತ ರೂ. 10.00 ಲಕ್ಷ (2) ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ : 13–09–2022 ರಿಂದ (3) ಇ–ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 20–09–2022 ಸಾಯಂಕಾಲ 4.00 ಘಂಟೆಯವರೆಗೆ (4) ಇ–ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್) : 21–09–2022 ಸಾಯಂಕಾಲ 4.30 ಘಂಟೆಗೆ (5) ಇ–ಟೆಂಡರ್ ಹಣಕಾಸಿನ ಬಿಡ್ಡ ತೆರೆಯುವ ದಿನಾಂಕ : ತಿಳಿಸಲಾಗುವುದು. (6) ಇ.ಎಂ.ಡಿ ಮೊತ್ತ ರೂ. 25,000/– (7) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ) : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಹಾವೇರಿ
ಸಹಿ/– ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಹಾವೇರಿ
ವಾಸಾಸಂಇ/ಹಾವೇರಿ/ಎಂಸಿಎ/251/2022–23

ಕರ್ನಾಟಕ ಸರಕಾರ
ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ
(ದೂರವಾಣಿ ಸಂಖ್ಯೆ: 08482–228366, ಫ್ಯಾಕ್ಸ್: 08482–240322)
(ರಾಜೀವಗಾಂಧಿಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕರ್ನಾಟಕ, ಬೆಂಗಳೂರಿಗೆ ಸಂಯೋಜನೆಗೊಂಡಿದ್ದು, ಭಾರತ ಸರ್ಕಾರ, ನವದೆಹಲಿಯಿಂದ ಅಂಗೀಕೃತಗೊಂಡಿದೆ)
Website :www.brims-bidar.in & E-mail–directorbrimsbidar2007@gmail.com
ಸಂಖ್ಯೆ: BRIMS/Tender/Diet/HNS/Printing/Stationery & ETP/STP Maint./ /2022-23 Date: 12.09.2022

ಟೆಂಡರ್ ಪ್ರಕಟಣೆ. (ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ)

ಈ ಕೆಳಗೆ ನಮೂದಿಸಿದ ವಿವಿಧ ಸಾಮಗ್ರಿಗಳು ಸರಬರಾಜು ಮತ್ತು ETP/STP ನಿರ್ವಹಣೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ನಿರ್ದೇಶಕರು ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ, ರವರು 2022–23ನೇ ಸಾಲಿಗಾಗಿ ನೊಂದಾಯಿತ ಅರ್ಹ ಬಿಡ್‌ದಾರರಿಂದ ನಿಯಮಾವಳಿಯಂತೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಇಚ್ಚೇಯುಳ್ಳ ಬಿಡ್‌ದಾರರು ಇ–ಸಂಗ್ರಹಣೆಯ ಪೋರ್ಟಲ್ ಮೂಲಕ ಸದರಿ ಟೆಂಡರಿನ ವಿವರ ವೀಕ್ಷಿಸಬಹುದು/ಡೌನ್‌ಲೋಡ್ ಮಾಡಿಕೊಂಡು ಇ–ಪ್ರೋಕ್ಯೂರಮೇಂಟ್ ಮೂಲಕ ಸಲ್ಲಿಸಬಹುದು. (http://eproc.karnataka.gov.in)
ಟೆಂಡರ್ ವೇಳಾಪಟ್ಟ: 1) ಟೆಂಡರ್ ಸಲ್ಲಿಸುವ ಕೋನೆಯ ದಿನಾಂಕ : ದಿನಾಂಕ: 28–09–2022 ಸಂಜೆ: 4:30 ಗಂಟೆಯ ಒಳಗಾಗಿ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: ದಿನಾಂಕ: 29–09–2022 ಸಂಜೆ: 5:00 ಗಂಟೆಗೆ, 3) ವಾಣಿಜ್ಯ ಬಿಡ್ ತೆರೆಯುವ ದಿನಾಂಕ : ದಿನಾಂಕ: 30–09–2022 ಬೆಳ್ಳಿಗೆ 5:30 ಗಂಟೆಗೆ, 4) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ವಿಳಾಸ : ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಿದರ್

ಟೆಂಡರ್ ವಿವರ

ಕ್ರ.ಸಂ.	ಟೆಂಡರ್ ಹೆಸರು	ಟೆಂಡರ್ ಮೊತ್ತ ರೂ. ಲಕ್ಷಗಳಲ್ಲಿ	ಇ.ಎಂ.ಡಿ ಮೊತ್ತ ರೂ	ಟೆಂಡರ್ ಮಾದರಿಗಳ ಸಲ್ಲಿಸುವ ವಿವರ
1.	SUPPLY OF DIET, HNS, PRINTING, STATIONERYAND OTHER ITEMS AND MAINTANANCE OF ETP/STP PLANT AT BRIMS BIDAR FOR THE YEAR 2022-23. Indent No:- ME/2022-23/IND4726	100.00	200000.00	ಟೆಂಡರ್ ಮಾದರಿಗಳ ಸಲ್ಲಿಸುವ ಕೊನೆಯ ದಿನಾಂಕ 26.09.2022, ಸಂಜೆ 5:30 ವರೆಗೆ
2.	Maintenance of ETP/STP Plant at Bidar Institute of Medical Sciences Bidar. FOR THE YEAR 2022-23. BRIMS/TENDER/450ETP-STP/CR-02/2022-23	20.00	50000.00	–

ಗಮನಿಸಿ: ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಗಳಲ್ಲಿ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಹಣೆ (e-procurement) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್
ವಾ.ಸಾ.ಸಂ.ಇ/ಬೀದರ/235/ಎಂಸಿ&ಎ/2022–23

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ಗ್ರಾಮಾಂತರ, ಬೀರಸಂದ್ರ, ದೇವನಹಳ್ಳಿ ತಾಲ್ಲೂಕು
ದೂ: 080–29787463, ಮೊ: 9448367736
ಇ–ಮೇಲ್: eerdwsd.bngr1@gmail.com
ಸಂ.: ಕಾಪಾಅ/ಗ್ರಾ.ಕು.ನೀ. & ನೈರ್ಮಲ್ಯ ವಿಭಾಗ/ಬೆಂ.ಗ್ರಾ/ಟೆಂಡರ್/22–23/960 ದಿನಾಂಕ : 12.09.2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 14/2022–23, ದಿನಾಂಕ: 12.09.2022

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದಲ್ಲಿ **Empanelment of Third Party Agency under Jal Jeevan Mission for Rural Drinking Water Works Rural Drinking Water and Sanitation Division, Bengaluru Rural** ಸೂಕ್ತ ಏಜೆನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕರಾರು ನಿಯಮಗಳು ಹಾಗೂ ಇನ್ನಿತರ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ನಲ್ಲಿ ಪಡೆಯಬಹುದಾಗಿರುತ್ತದೆ. ಕರಾರು ನಿಯಮಗಳಂತೆ ಸಂಬಂಧಪಟ್ಟ ದಾಖಲಾತಿಗಳನ್ನು ದರಗಳೊಂದಿಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಬೀರಸಂದ್ರ, ದೇವನಹಳ್ಳಿ ಕಛೇರಿಯ ವೇಳೆಯಲ್ಲಿ (ರಜೆ ದಿನಗಳನ್ನು ಹೊರತುಪಡಿಸಿ) ಪಡೆದುಕೊಳ್ಳಬಹುದಾಗಿದೆ. ದಾಖಲೆಗಳ ಡೌನ್‌ಲೋಡಿಂಗ್ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಮಾಹಿತಿ ಈ ಕೆಳಗಿನಂತಿವೆ: (1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **15.09.2022ರ ಸಂಜೆ 4.00 ಗಂಟೆಯ ನಂತರ.** (2) ಪ್ರೀ–ಬಿಡ್ ಮೀಟಿಂಗ್ ಸ್ಥಳ/ದಿನಾಂಕ: ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ&ನೈ. ವಿಭಾಗ, ಬೀರಸಂದ್ರ, ದೇವನಹಳ್ಳಿ. **ದಿನಾಂಕ: 26.09.2022ರ ಬೆಳಿಗ್ಗೆ 11.00 ಗಂಟೆಗೆ.** (3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **06.10.2022 ಸಂಜೆ 4.05 ಗಂಟೆಯವರೆಗೆ.** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **07.10.2022 ಸಂಜೆ 4.05 ಗಂಟೆಯವರೆಗೆ.** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **12.10.2022 ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಯನ್ನು ಕಛೇರಿಯಿಂದ ಅಥವಾ ನಮ್ಮ ವೆಬ್‌ಸೈಟ್ http://eproc.karnataka.gov.in ಗೆ ಭೇಟಿ ನೀಡಿ ಪಡೆಯಬಹುದು.
ಸಹಿ/- (ಎಸ್.ಎಂ. ಸುಭಾನ್ ಸಾಹೇಬ್) ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ
ವಾಸಾಸಂಇ/ಯುನಿ-ಸಿ.ಪಿ/2186/ಎಂಸಿಎ/2022-23

ನಗರಾಭಿವೃದ್ಧಿ ಪ್ರಾಧಿಕಾರ ತುಮಕೂರು
ಬೆಳಗುಂಬ ರಸ್ತೆ, ತುಮಕೂರು–572103.
ಫ್ಯಾಕ್ಸ್ : 0816–2255761 ದೂರವಾಣಿ : 2272280
email: tudatmk2009@yahoo.co.in Website: tuda.co.in,
ಕ್ರಮಾಂಕ ಟಿಯುಡಿಎ/ಇ–ಹರಾಜು ಪ್ರಕಟಣೆ/01/2022–23 ದಿ: 09.09.2022

ಇ–ಹರಾಜು ಪ್ರಕಟಣೆ

ಮೆಳೇಕೋಟೆ–ವೀರಸಾಗರ ವಸತಿ ಬಡಾವಣೆಯ ಮೂಲೆ /ಮಧ್ಯಮ ನಿವೇಶನಗಳು

1)	ಇ–ಹರಾಜಿನ ಪ್ರಕ್ರಿಯೆಯು ಪ್ರಾರಂಭವಾಗುವ ದಿನಾಂಕ ಹಾಗೂ ಸಮಯ	ದಿನಾಂಕ: 01.09.2022 ಮುಂಜಾನೆ 11.00 ಗಂಟೆಯಿಂದ
2)	ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಪ್ರೋಸೆಸಿಂಗ್ ಶುಲ್ಕ ಮತ್ತು ಇ.ಎಂ.ಡಿ ಪಾವತಿಸುವ ಕೊನೆಯ ದಿನಾಂಕ ಹಾಗೂ ಸಮಯ	ದಿನಾಂಕ: 02.11.2022 ಸಾಯಂಕಾಲ 6.00 ಗಂಟೆವರೆಗೆ
3)	ಇ–ಹರಾಜಿನಲ್ಲಿ ಬಿಡ್ಡ್ ಮಾಡುವ ಸಮಯ	ದಿನಾಂಕ: 04.11.2022 ರ ಬೆಳಿಗ್ಗೆ 10.00ಗಂಟೆಯಿಂದ ಸಾಯಂಕಾಲ 6.00ಗಂಟೆಗೆ ಮುಕ್ತಾಯಗೊಳ್ಳುತ್ತದೆ. (ಡೆಲ್ಟಾ ಟೈಮ್ 0.05.00 ನಿಮಿಷ)

ಇ–ಹರಾಜಿಗಾಗಿ ಮೀಸಲಿಟ್ಟ ನಿವೇಶನಗಳ ಕನಿಷ್ಠ ದರವನ್ನು ಪ್ರತಿ ಚದುರ ಅಡಿ ಒಂದಕ್ಕೆ ರೂ. 1,960/– ರಂತೆ ನಿಗಧಿಪಡಿಸಲಾಗಿದೆ ತುಮಕೂರು ನಗರದಲ್ಲಿ ಪ್ರಾಧಿಕಾರವು ಅಭಿವೃದ್ಧಿ ಪಡಿಸಿರುವ ಮೆಳೇಕೋಟೆ–ವೀರಸಾಗರ ವಸತಿ ಬಡಾವಣೆಯಲ್ಲಿ 60 ಮೂಲೆ / ಮಧ್ಯಮ ನಿವೇಶನಗಳನ್ನು ದಿನಾಂಕ 04.09.2022 ರಂದು ಪ್ರಕಟಿಸಲಾಗಿತ್ತು. ಸದರಿ ಪ್ರಕಟಣೆಯ ದಿನಾಂಕವನ್ನು ದಿನಾಂಕ 01.09.2022 ರಿಂದ 04.11.2022 ರವರೆಗೆ ವಿಸ್ತರಿಸಿ, ಪ್ರಸ್ತುತ 65 ಮೂಲೆ/ಮಧ್ಯಮ ನಿವೇಶನಗಳನ್ನು ಇ–ಹರಾಜು ಮೂಲಕ ವಿಲೇಪಡಿಸಲು ಪ್ರಕಟಿಸಲಾಗಿರುತ್ತದೆ. ವೆಬ್‌ಸೈಟ್: eproc.karnataka.gov.in ಹಾಗೂ website:tuda.co.in ನಲ್ಲಿ ಇ–ಹರಾಜಿನ ಸಂಬಂಧ ಷರತ್ತು, ನಿಯಮ, ನಿಬಂಧನೆಗಳ ವಿವರಗಳು ಮೇಲ್ಕಂಡ ವೈಬ್‌ಸೈಟ್‌ಗಳಲ್ಲಿ ಪಡೆಯಬಹುದಾಗಿದ್ದು ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೇಳೆಯಲ್ಲಿ ಕಛೇರಿಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ ಹಾಗೂ ಇ–ಹರಾಜಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.
ಸಹಿ/– ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.
ಸಹಿ/– ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.
DIPR/TUM/502/MCA/2022-23

ವಿಶ್ವ ಕುಸ್ತಿ: ವಿನೇಶಾಗೆ ಆಘಾತ

ವಿನೇಶಾ

ಬೆಲ್‌ಗ್ರೇಡ್, ಸರ್ಬಿಯಾ (ಪಿಟಿಐ): ಭಾರತದ ವಿನೇಶಾ ಫೋಗಾಟ್ ಅವರು ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನ ಅರ್ಹತಾ ಸುತ್ತಿನಲ್ಲೇ ಆಘಾತ ಅನುಭವಿಸಿದ್ದಾರೆ.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ 53 ಕೆಜಿ ಫ್ರೀಸ್ಟೈಲ್ ವಿಭಾಗದಲ್ಲಿ ಸ್ಪರ್ಧಿಸಿದ್ದ ವಿನೇಶಾ ಮಂಗಳವಾರ 0–7ರಿಂದ ಮಂಗೋಲಿಯಾದ ಖುಲಾನ್ ಭಟ್ಖುಯುಗ್ ಎದುರು ಮಣಿದರು.

ಇತ್ತೀಚೆಗೆ ಕೊನೆಗೊಂಡ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಜಯಿಸಿದ್ದ ವಿನೇಶಾ, ಇಲ್ಲಿ ಅದೇ ರೀತಿಯ ಸಾಮರ್ಥ್ಯ ತೋರುವಲ್ಲಿ ವಿಫಲರಾದರು. 10ನೇ ಶ್ರೇಯಾಂಕದ ಕುಸ್ತಿಪಟುವಿಗೆ, ಕೊನೆಯ ಕ್ಷಣಗಳಲ್ಲಿ ಸಮತೋಲನ ಕಾಯ್ದುಕೊಳ್ಳಲು ಸಾಧ್ಯವಾಗಲಿಲ್ಲ.

ಬೌಟ್‌ನ ಮೊದಲ ಅವಧಿಯಲ್ಲಿ 3–0ಯಿಂದ ಮುನ್ನಡೆ ಗಳಿಸಿದ ಏಷ್ಯನ್ ಬೆಳ್ಳಿ ಪದಕ ವಿಜೇತ ಖುಲಾನ್, ಅಂತಿಮ ಸೆಕೆಂಡುಗಳಲ್ಲಿ ಭರ್ಜರಿ ನಾಲ್ಕು ಪಾಯಿಂಟ್ಸ್ ಕಲೆಹಾಕಿ ಗೆಲುವು ಒಲಿಸಿಕೊಂಡರು.

ಆಯ್ಕೆ ಟ್ರಯಲ್ಸ್‌ನಲ್ಲಿ ವಿನೇಶಾ ಎದುರು ಸೋತಿದ್ದ ಯುವ ಕುಸ್ತಿಪಟು ಅಂತಿಮ್ ಅವರು ಕಳೆದ ತಿಂಗಳು 23 ವರ್ಷದೊಳಗಿನವರ ಏಷ್ಯನ್ ಕೂಟದಲ್ಲಿ ಖುಲಾನ್ ಅವರನ್ನು ಮಣಿಸಿದ್ದರು.

ಅನ್ಶು ಮಲಿಕ್ ಅವರ ಅನುಪಸ್ಥಿತಿಯಲ್ಲಿ ವಿನೇಶಾ ಇಲ್ಲಿ ಪದಕ ಜಯಿಸುವ ನೆಚ್ಚಿನ ಕುಸ್ತಿಪಟು ಆಗಿದ್ದರು. ಹಾಲಿ ಚಾಂಪಿಯನ್, ಜಪಾನ್‌ನ ಅಕಾರಿ ಫುಜಿನಾಮಿ ಕೂಡ ಗಾಯದಿಂದ ಹಿಂದೆ ಸರಿದಿದ್ದರಿಂದ ವಿನೇಶಾ ಅವರಿಗೆ ಉತ್ತಮ ಅವಕಾಶ ಇತ್ತು.

50 ಕೆಜಿ ವಿಭಾಗದಲ್ಲಿ ಭಾರತದ ನೀಲಂ ಸಿರೋಹಿ ಕೂಡ ನಿರಾಸೆ ಅನುಭವಿಸಿದರು. ಅವರು 0–10ರಿಂದ ಎರಡು ಬಾರಿ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತೆ, ರೋಮಾನಿಯಾದ ಎಮಿಲಿಯಾ ಅಲಿನಾ ವುಕ್ ಎದುರು ಸೋತರು. 65 ಕೆಜಿ ಬೌಟ್‌ನಲ್ಲಿ ಫ್ರಾನ್ಸ್‌ನ ಕೌಂಬಾ ಲರೋಕ್ ಭಾರತದ ಶಫಾಲಿ ಅವರನ್ನು 'ಚಿತ್' ಮಾಡಿದರು.

'ಕೂಲಿಂಗ್ ಆಫ್ ಬೇಡವೇ, 70ವರ್ಷ ಮೀರಿದ ಪ್ರತಿನಿಧಿಗಳೇಕೆ'

ಬಿಸಿಸಿಐ; ಇಂದು ತೀರ್ಪು ಸಾಧ್ಯತೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ಸೌರವ್ ಗಂಗೂಲಿ ಹಾಗೂ ಕಾರ್ಯದರ್ಶಿ ಜಯ್ ಶಾ ಅವರು ನಿಯಮಾವಳಿ ಪರಿಷ್ಕರಣೆಗೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಮೇಲ್ಮನವಿಯ ಕುರಿತು ನ್ಯಾಯಪೀಠವು ಬುಧವಾರ ತೀರ್ಪು ಪ್ರಕಟಿಸುವ ಸಾಧ್ಯತೆ ಇದೆ.

'ಪದಾಧಿಕಾರಿಗಳಿಗೆ ಕೂಲಿಂಗ್ ಆಫ್ ಅವಧಿ ನಿಯಮವನ್ನು ರದ್ದುಪಡಿಸಬೇಕೆಂದು ಕೇಳುತ್ತಿರುವುದೇಕೆ? ಅದರಿಂದ ಪಟ್ಟಭದ್ರ ಹಿತಾಸಕ್ತಿಯನ್ನು ತಡೆಯಲು ಈ ನಿಯಮ ಸಹಾಯಕವಲ್ಲವೇ. ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ)ಯಲ್ಲಿ ಭಾರತವನ್ನು ಪ್ರತಿನಿಧಿಸಲು 70 ವರ್ಷ ಮೇಲ್ಪಟ್ಟವರೇ ಆಗಬೇಕೆಂದು ನೀವು ಬಯಸುವುದೇಕೆ' ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ಹಿಮಾ ಕೊಹ್ಲಿ ಅವರ ನ್ಯಾಯಪೀಠವು ಅರ್ಜಿದಾರರನ್ನು ಕುಟುಕಿತು.

'ಬಿಸಿಸಿಐ ಸ್ವಾಯತ್ತ ಸಂಸ್ಥೆಯಾಗಿದೆ. ಮಂಡಳಿಯ ಆಡಳಿತ ನಿರ್ವಹಣೆಯನ್ನು ಇಷ್ಟು ಸೂಕ್ಷ್ಮವಾಗಿ ವಹಿಸುವ ಅಗತ್ಯವೇನು' ಎಂದೂ ಪ್ರಶ್ನಿಸಿದೆ.

ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ನೇತೃತ್ವದ ಸಮಿತಿ ಮಾಡಿದ್ದ ಶಿಫಾರಸುಗಳನ್ನು ಆಧರಿಸಿ ಬಿಸಿಸಿಐಗೆ

ಸೌರವ್ ಗಂಗೂಲಿ ಮತ್ತು ಜಯ್ ಶಾ

ನಿಯಮಾವಳಿಯನ್ನು ರೂಪಿಸಲಾಗಿತ್ತು. ನಾಲ್ಕು ವರ್ಷಗಳ ಹಿಂದೆ ಅದನ್ನು ಜಾರಿಗೊಳಿಸಲಾಗಿತ್ತು. ಇದರ ಪ್ರಕಾರ ಬಿಸಿಸಿಐ ಅಥವಾ ರಾಜ್ಯ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾದವರು ಎರಡು ಸತತ ಅವಧಿಗಳ (ಪ್ರತಿ ಅವಧಿಯು ಮೂರು ವರ್ಷಗಳದ್ದು)ನಡುವೆ ಒಂದು ಅವಧಿಗೆ ಕೂಲಿಂಗ್ ಆಫ್ ನಿಯಮ (ವಿಶ್ರಾಂತಿ) ಪಾಲಿಸಬೇಕು.

'ಸದ್ಯ ಜಾರಿಯಲ್ಲಿರುವ ನಿಯಮಾವಳಿಯಲ್ಲಿರುವ ಕೂಲಿಂಗ್ ಆಫ್ ನಿಯಮವು ರಾಜ್ಯ ಸಂಸ್ಥೆಗಳಲ್ಲಿ ಒಂದು ವರ್ಷ ಹಾಗೂ ಬಿಸಿಸಿಐನಲ್ಲಿ ಒಂದು ವರ್ಷ ಪದಾಧಿಕಾರಿಯಾದ ನಂತರ ಅನ್ವಯವಾಗುತ್ತದೆ. ಇದರಿಂದಾಗಿ ಸತತ ಎರಡನೇ ಅವಧಿಗೆ ಮುಂದುವರಿಯಲು ಅವಕಾಶ ಇಲ್ಲವಾಗಿದೆ. ಆದರೆ ರಾಜ್ಯ ಹಾಗೂ ಬಿಸಿಸಿಐ ಸಂಸ್ಥೆಗಳು ಬೇರೆ ಬೇರೆ ಕಾರ್ಯಸ್ವರೂಪ ಹೊಂದಿವೆ. ಒಂದು ಅವಧಿಯಲ್ಲಿ ಉತ್ತಮ ನಾಯಕತ್ವವನ್ನು ಬೆಳೆಸಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಕ್ರಿಕೆಟ್ ವ್ಯವಸ್ಥೆಗೆ ಹಾನಿಯಾಗುವ ಸಾಧ್ಯತೆ ಇದೆ' ಎಂದು ಬಿಸಿಸಿಐ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಮಂಡಿಸಿದರು.

'ಸಮರ್ಥ ನಾಯಕತ್ವವನ್ನು ಬೇರುಮಟ್ಟದಿಂದ ಬೆಳೆಸಬೇಕು. ರಾಜ್ಯ ಸಂಸ್ಥೆಗಳು ಅಂತಹ ಅವಕಾಶವನ್ನು ನೀಡುತ್ತವೆ. ರಾಜ್ಯ ಸಂಸ್ಥೆಗಳಲ್ಲಿ ಅನುಭವ ಗಳಿಸಿ ಬಿಸಿಸಿಐ ಪದಾಧಿಕಾರಿಯಾಗುವ ಮಟ್ಟಕ್ಕೆ ಬೆಳೆಯಲು ಸಮಯ ಬೇಕು. ಆದರೆ, ಕೂಲಿಂಗ್ ಆಫ್ ನಿಯಮವನ್ನು ಮೂರು ವರ್ಷಗಳ ಒಂದೇ ಅವಧಿಯ ನಂತರ ಅನ್ವಯಿಸಿದರೆ ನಾಯಕತ್ವ ಬೆಳವಣಿಗೆಯು ಕುಂಠಿತವಾಗುತ್ತದೆ. ರಾಜ್ಯ ಸಂಸ್ಥೆಯಲ್ಲಿ ಸಕ್ರಿಯವಾಗಿರದವರು ಮಂಡಳಿಯ ಸದಸ್ಯತ್ವಕ್ಕೆ ಅರ್ಹರಾಗಿರುವುದಿಲ್ಲ' ಎಂದೂ ಅವರು ವಿವರಿಸಿದರು.

'ನಾವು ಈಗ ಚರ್ಚೆ ನಡೆಸುತ್ತಿದ್ದೇವೆ. ಇಲ್ಲಿ ನಾವು ಯಾವುದೇ ತೀರ್ಪನ್ನು ಕೊಡುತ್ತಿಲ್ಲ. ಆದರೆ ಇಲ್ಲಿ ನಡೆಯುವ ಎಲ್ಲ ಸಂವಾದ, ಚರ್ಚೆಗಳನ್ನೂ ಸಾಮಾಜಿಕ ಜಾಲತಾಣಗಳು ತೀರ್ಪು ಎಂದೇ ಗ್ರಹಿಸುತ್ತವೆ. ಸತ್ಯಾಂಶಗಳನ್ನು ಆಳವಾಗಿ ಮನದಟ್ಟು ಮಾಡಿಕೊಳ್ಳುವ ಇಂತಹ ಗಹನವಾದ ಚರ್ಚೆಗಳಿಂದ ಸಾಧ್ಯ' ಎಂದು ನ್ಯಾಯಮೂರ್ತಿ ಚಂದ್ರಚೂಡ್ ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಅವರು, 'ಐಸಿಸಿಯಲ್ಲಿ 70 ವರ್ಷ ಮೇಲಿನವರನ್ನೇ ಬಿಸಿಸಿಐ ಪ್ರತಿನಿಧಿಗಳನ್ನಾಗಿ ಕಳಿಸಬೇಕೆಂದು ಯಾಕೆ ಹೇಳುತ್ತಿರಿ. 70 ಮೀರಿದವರು ಚೆನ್ನಾಗಿ ಕೆಲಸ ಮಾಡುವುದಿಲ್ಲವೆಂದು ನಾವು ಹೇಳುತ್ತಿಲ್ಲ. ನಮ್ಮ ಅಟಾರ್ನಿ ಜನರಲ್ ಕೂಡ 70 ವರ್ಷ ಮೀರಿದವರು. ಈ ವಯಸ್ಸಿನ ಹಲವು ವೈದ್ಯರು ಅದ್ಭುತ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ಕ್ರೀಡೆಯಲ್ಲಿ ಈ ರೀತಿ ಬೇಕೆ' ಎಂದೂ ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೆಹ್ತಾ, 'ಐಸಿಸಿಯು ಪ್ರತಿಯೊಂದು ರಾಷ್ಟ್ರೀಯ ಕ್ರಿಕೆಟ್ ಮಂಡಳಿಗೆ ಅನುದಾನವನ್ನು ಹಂಚುತ್ತದೆ. ಬಿಸಿಸಿಐಗೆ ಎಷ್ಟು ಅನುದಾನ ಪಡೆಯಬೇಕು ಎಂಬ ಲೆಕ್ಕಾಚಾರಗಳನ್ನು ಮಾಡಲು 30–40 ವರ್ಷಗಳವರೆಗೆ ಕ್ರಿಕೆಟ್ ಆಡಳಿತದಲ್ಲಿ ಅನುಭವಿಗಳಾದವರಿಗೆ ಸಾಧ್ಯ. ಬೇರೆ ದೇಶಗಳ ಅನುಭವಿ ಹಾಗೂ ಹಿರಿಯ ವಯಸ್ಸಿನ ಪ್ರತಿನಿಧಿಗಳೊಂದಿಗೆ ಸ್ಪರ್ಧಿಸಲು ಅನುಭವ ಅಗತ್ಯವಿದೆ' ಎಂದರು.

ಬೆಂಗಳೂರಿನಲ್ಲಿ ನಡೆದ ಕೆಎಸ್‌ಸಿಎ ಗುಂಪು 1ರಿಂದ ಮೂರನೇ ಡಿವಿಷನ್ ನಾಸರ್ ಸ್ಮಾರಕ ಲೀಗ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ ಸೆಂಚುರಿ ಕ್ರಿಕೆಟರ್ಸ್ ತಂಡ: ನಿಂತವರು (ಎಡದಿಂದ) ಕೃಷ್ಣ, ಭರತ್, ಅಭಿನವ್, ಸಿಯೊನ್ ಸಾತ್ವಿಕ್, ಚೇತನ್, ಸಚಿನ್, ಶಶಿಧರ್, ಸೂರ್ಯ, ಇಗ್ನೇಶಿಯಸ್, ಹರ್ಷವರ್ಧನ್ ಖೂಬಾ, ಅಭಿರಥ್. ಕುಳಿತವರು– ಮನೋಜ್ ಕೆ.ಎಚ್. ಅಕ್ಷಯ್ ಸಿ.ಕೆ, ಮಂಜುನಾಥ್ ಎಸ್.ಪಿ (ನಾಯಕ), ರಾಹುಲ್ ಬಾಫನಾ (ಕಾರ್ಯದರ್ಶಿ), ಯೋಗೇಶ್ ಪಿ (ಕೋಚ್), ಅಮಿತ್ ವರ್ಮಾ ಮತ್ತು ಟಿ. ಪ್ರದೀಪ್. ತಂಡವು ಮಲ್ಲೇಶ್ವರಂ ಜಿಮ್‌ಖಾನಾ ಎದುರು 8 ವಿಕೆಟ್‌ಗಳಿಂದ ಗೆದ್ದಿತು.

ಸಿರಾಜ್‌ಗೆ 5 ವಿಕೆಟ್

ಸಿರಾಜ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ವೇಗಿ ಮೊಹಮ್ಮದ್ ಸಿರಾಜ್ ಅವರು ಕೌಂಟಿ ಕ್ರಿಕೆಟ್‌ನ ಪದಾರ್ಪಣೆ ಪಂದ್ಯದಲ್ಲಿಯೇ ಐದು ವಿಕೆಟ್ ಗಳಿಸಿ ಮಿಂಚಿದರು.

ಇಲ್ಲಿ ನಡೆಯುತ್ತಿರುವ ಒಂದನೇ ಡಿವಿಷನ್ ಪಂದ್ಯದಲ್ಲಿ ವಾರ್ವಿಕ್‌ಶೈರ್ ಪರ ಕಣಕ್ಕಿಳಿದಿರುವ ಸಿರಾಜ್ ಮಂಗಳವಾರ 24 ಓವರ್‌ಗಳಲ್ಲಿ 82 ರನ್ ನೀಡಿ ಸಾಮರ್‌ಸೆಟ್ ತಂಡದ ಐದು ವಿಕೆಟ್ ಪಡೆದರು. ಸಾಮರ್‌ಸೆಟ್ 219 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು.

ಸಂಜುಗೆ ಸಿಗದ ಸ್ಥಾನ; ಅಭಿಮಾನಿಗಳ ಆಕ್ರೋಶ

ಟಿ20 ವಿಶ್ವಕಪ್: ಆಯ್ಕೆದಾರರ ವಿರುದ್ಧ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ತಿಂಗಳು ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಗೆ ಆಯ್ಕೆ ಮಾಡಿರುವ ಭಾರತ ತಂಡದಲ್ಲಿ ವಿಕೆಟ್‌ಕೀಪರ್–ಬ್ಯಾಟರ್ ಸಂಜು ಸ್ಯಾಮ್ಸನ್ ಅವರಿಗೆ ಸ್ಥಾನ ನೀಡದಿರುವುದು ಅಭಿಮಾನಿಗಳ ವಲಯದಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ಸೋಮವಾರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ರಾಷ್ಟ್ರೀಯ ಆಯ್ಕೆ ಸಮಿತಿಯು ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡವನ್ನು ಪ್ರಕಟಿಸಿತ್ತು. ಅದರಲ್ಲಿ ಇಬ್ಬರು ವಿಕೆಟ್ ಕೀಪರ್‌ಗಳಾದ ರಿಷಬ್ ಪಂತ್ ಹಾಗೂ ಅನುಭವಿ ದಿನೇಶ್ ಕಾರ್ತಿಕ್ ಅವರಿಗೆ ಅವಕಾಶ ನೀಡಲಾಗಿದೆ. ಆದರೆ ಕೇರಳದ ಸಂಜು ಅವರನ್ನು ಪರಿಗಣಿಸಿಲ್ಲ.

ಹೋದ ತಿಂಗಳು ನಡೆದಿದ್ದ ವೆಸ್ಟ್ ಇಂಡೀಸ್ ಎದುರಿನ ಸರಣಿಯಲ್ಲಿ ಅವರು ಉತ್ತಮವಾಗಿ ಆಡಿದ್ದರು. ಬ್ಯಾಟಿಂಗ್‌ನಲ್ಲಿ ಮತ್ತು ಕೀಪಿಂಗ್‌ನಲ್ಲಿ ಮಿಂಚಿದ್ದರು. ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿಯೂ ಅವರ ನಾಯಕತ್ವದಲ್ಲಿ ರಾಜಸ್ಥಾನ ರಾಯಲ್ಸ್ ತಂಡವು ಕಳೆದ ಆವೃತ್ತಿಯಲ್ಲಿ ರನ್ನರ್ಸ್ ಅಪ್ ಆಗಿತ್ತು.

'ಇದು ನಾಚಿಕೆಗೇಡು' ಎಂದು ಕೆಲವರು ಟ್ವೀಟ್ ಮಾಡಿದ್ದಾರೆ.

'ಟಿ20 ವಿಕೆಟ್‌ಕೀಪಿಂಗ್ ಮತ್ತು ಫೀಲ್ಡಿಂಗ್‌ನಲ್ಲಿ ಸಂಜುಗೆ ವಿಶೇಷ ಪರಿಣತಿ ಇದೆ. ಬೌಂಡರಿಯತ್ತ ಸಾಗುವ ಚೆಂಡುಗಳನ್ನು ತಡೆಯುವ ಕಲೆ ಕರಗತ ಮಾಡಿಕೊಂಡಿದ್ದಾರೆ. ಫಿಟ್ ಆಗಿದ್ದಾರೆ. ತಣ್ಣನೆಯ ಸ್ವಭಾವದ ಸಂಜು ದೊಡ್ಡ ಹೊಡೆತಗಳನ್ನು ಲೀಲಾಜಾಲವಾಗಿ ಆಡಬಲ್ಲರು. ಇದನ್ನು ನಾವೆಲ್ಲ ನೋಡಿದ್ದೇವೆ. ಆದರೆ ಆಯ್ಕೆದಾರರು..'ಎಂದು ಅಭಿಷೇಕ್ ಎಂಬುವವರು ಟ್ವೀಟ್ ಮಾಡಿದ್ದಾರೆ.

ಸಂಜು ಸ್ಯಾಮ್ಸನ್

ಮಾದರಿ	ಪಂದ್ಯ	ರನ್	ಶ್ರೇಷ್ಠ	ಸ್ಟ್ರೈಕ್‌ರೇಟ್	ಶತಕ	ಅರ್ಧಶತಕ
ಟಿ20	16	296	77	135.16	-	1
ಐಪಿಎಲ್	138	3526	119	135.72	3	17

ಮತ್ತೂ ಕೆಲವರು 'ಸಂಜು ಸ್ಥಾನ ಕೊಡಬೇಕಾದರೆ ರಿಷಭ್ ಪಂತ್ ಅವರನ್ನು ಕೈಬಿಡಬೇಕೆ? ಆಸ್ಟ್ರೇಲಿಯಾದಲ್ಲಿ ರಿಷಭ್ ಉತ್ತಮ ಸಾಧನೆ ಮಾಡಿರುವ ಆಟಗಾರ. ಇನ್ನು ಡಿ.ಕೆ. (ದಿನೇಶ್ ಕಾರ್ತಿಕ್) ಕಳೆದ ಹಲವು ವರ್ಷಗಳಿಂದ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆದಿಲ್ಲ. ಆದರೆ ಇತ್ತೀಚೆಗೆ ಅವರು ಅಮೋಘ ಲಯದಲ್ಲಿದ್ದಾರೆ. ಅನುಭವಿಯೂ ಹೌದು. ಆದ್ದರಿಂದ ಅವರನ್ನು ಕೈಬಿಡುವಂತಿಲ್ಲ. ಹಾಗಿದ್ದರೆ ಸಂಜುಗಾಗಿ ಯಾರನ್ನು ಬಿಡಬೇಕಿತ್ತು' ಎಂಬ ವಾದವನ್ನೂ ಕೆಲವರು ಮಾಡಿದ್ದಾರೆ. ವೇಗಿ ಮೊಹಮ್ಮದ್ ಶಮಿ ಅವರನ್ನು ಕೈಬಿಟ್ಟಿರುವ ಕುರಿತೂ ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅದರಲ್ಲಿ ವೀಕ್ಷಕ ವಿವರಣೆಕಾರ ಹರ್ಷ ಭೋಗ್ಲೆ ಕೂಡ ಒಬ್ಬರು.

ರೇಣುಕಾ ಸಿಂಗ್‌ಗೆ ಬಡ್ತಿ

ದುಬೈ (ಪಿಟಿಐ): ಭಾರತ ತಂಡದ ಮಧ್ಯಮವೇಗಿ ರೇಣುಕಾ ಸಿಂಗ್ ಅವರು ಐಸಿಸಿ ಟಿ20 ಕ್ರಿಕೆಟ್ ರ‍್ಯಾಂಕಿಂಗ್‌ನ ಬೌಲರ್‌ಗಳ ವಿಭಾಗದಲ್ಲಿ ಐದು ಸ್ಥಾನಗಳ ಬಡ್ತಿ ಪಡೆದಿದ್ದು, 13ನೇ ಸ್ಥಾನಕ್ಕೇರಿದ್ದಾರೆ. ಸ್ಪಿನ್ನರ್ ದೀಪ್ತಿ ಶರ್ಮಾ ಏಳನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಇಂಗ್ಲೆಂಡ್ ತಂಡದ ವಿರುದ್ಧ ಚೆಸ್ಟರ್ ಲೀ ಸ್ಟ್ರೀಟ್‌ನಲ್ಲಿ ಕಳೆದ ವಾರ ನಡೆದ ಮೊದಲ ಟಿ20 ಪಂದ್ಯದಲ್ಲಿ ರೇಣುಕಾ ಅವರು ನಾಲ್ಕು ಓವರ್ ಬೌಲ್ ಮಾಡಿ 23 ರನ್ ನೀಡಿದ್ದರು. ಸದ್ಯ ಅವರ ಬಳಿ 612 ರೇಟಿಂಗ್ ಪಾಯಿಂಟ್‌ಗಳಿವೆ. ಈ ಪಂದ್ಯದಲ್ಲಿ ಭಾರತ ಒಂಬತ್ತು ವಿಕೆಟ್‌ಗಳಿಂದ ಸೋಲನುಭವಿಸಿತ್ತು.

ಅಗ್ರ 10 ಮಂದಿ ಬೌಲರ್‌ಗಳ ಪಟ್ಟಿಯಲ್ಲಿ ಭಾರತದ ದೀಪ್ತಿ ಒಬ್ಬರೇ ಇದ್ದಾರೆ. ಆಲ್‌ರೌಂಡರ್‌ಗಳ ವಿಭಾಗದಲ್ಲಿ ಅವರು ನಾಲ್ಕನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಬ್ಯಾಟರ್‌ಗಳ ವಿಭಾಗದಲ್ಲಿ ಮೂರು ಸ್ಥಾನ ಏರಿಕೆ

ರೇಣುಕಾ ಸಿಂಗ್– ಎಎಫ್‌ಪಿ ಚಿತ್ರ

ಕಂಡು 33ನೇ ಸ್ಥಾನದಲ್ಲಿದ್ದಾರೆ. ಈ ವಿಭಾಗದಲ್ಲಿ ವಿಕೆಟ್‌ಕೀಪರ್ ರಿಚಾ ಘೋಷ್ ನಾಲ್ಕು ಸ್ಥಾನಗಳ ಜಿಗಿತ ದಾಖಲಿಸಿ 75ನೇ ಸ್ಥಾನ ತಲುಪಿದ್ದಾರೆ.

ಸ್ಮೃತಿ ಮಂದಾನ (710 ಪಾಯಿಂಟ್ಸ್), ಶಫಾಲಿ ವರ್ಮಾ (686) ಮತ್ತು ಜೆಮಿಮಾ ರಾಡ್ರಿಗಸ್ (624) ಕ್ರಮವಾಗಿ ನಾಲ್ಕು, ಆರು ಮತ್ತು 10ನೇ ಸ್ಥಾನಗಳಲ್ಲಿದ್ದಾರೆ.

ರಾಜ್ಯ ಕಾರಾಗೃಹ ಇಲಾಖೆ ತಂಡಕ್ಕೆ ನಾಲ್ಕು ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಜರಾತ್‌ನ ಅಹಮದಾಬಾದ್‌ನಲ್ಲಿ ಇತ್ತೀಚೆಗೆ ನಡೆದ ಅಖಿಲ ಭಾರತ ಕಾರಾಗೃಹ ಇಲಾಖೆ ಅಧಿಕಾರಿಗಳ ಕ್ರೀಡಾಕೂಟದಲ್ಲಿ (ಪ್ರಿಸನ್ ಡ್ಯೂಟಿ ಮೀಟ್) ಕರ್ನಾಟಕ ತಂಡವು ನಾಲ್ಕು ಚಿನ್ನ, ಮೂರು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡಿದೆ. ವಿವಿಧ ರಾಜ್ಯಗಳ ಒಟ್ಟು 1319 ಅಧಿಕಾರಿಗಳು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು.

ತತಿಯಾನಾಗೆ ಮಣಿದ ಅಂಕಿತಾ

ಚೆನ್ನೈ ಓಪನ್ ಟೆನಿಸ್ ಟೂರ್ನಿ: ಜರ್ಮನಿ ಆಟಗಾರ್ತಿಯ ಜಯದ ಆರಂಭ

ಚೆನ್ನೈ (ಪಿಟಿಐ): ಭಾರತದ ಅಗ್ರ ರ‍್ಯಾಂಕಿನ ಆಟಗಾರ್ತಿ ಅಂಕಿತಾ ರೈನಾ ಅವರು ಚೆನ್ನೈ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದರು. ಮಂಗಳವಾರ ಇಲ್ಲಿ ನಡೆದ ಸಿಂಗಲ್ಸ್ ಪಂದ್ಯದಲ್ಲಿ ಅವರು 0–6, 1–6ರಿಂದ ಜರ್ಮನಿಯ ತತಿಯಾನಾ ಮರಿಯಾ ಎದುರು ಸೋತರು.

ಒಂದು ತಾಸು 15 ನಿಮಿಷಗಳ ಸೆಣಸಾಟದಲ್ಲಿ ಜರ್ಮನಿ ಆಟಗಾರ್ತಿ ಸಂಪೂರ್ಣ ಪಾರಮ್ಯ ಮೆರೆದರು. ಈ ಬಾರಿಯ ವಿಂಬಲ್ಡನ್ ಟೆನಿಸ್ ಟೂರ್ನಿಯ ಸೆಮಿಫೈನಲಿಸ್ಟ್ ಆಗಿರುವ ಅವರು, ಭಾರತದ ಆಟಗಾರ್ತಿಗೆ ಪುಟಿದೇಳುವ ಅವಕಾಶ ನೀಡಲಿಲ್ಲ.

ಮೊದಲ ಸುತ್ತಿನ ಮತ್ತೊಂದು ಹಣಾಹಣಿಯಲ್ಲಿ ಅಗ್ರಶ್ರೇಯಾಂಕದ ಆಟಗಾರ್ತಿ ಅಮೆರಿಕದ ಆ್ಯಲಿಸನ್ ರಿಸ್ಕ್ ಅಮೃತರಾಜ್ 6–2, 6–3ರಿಂದ ರಷ್ಯಾದ ಅನಸ್ತೇಸಿಯಾ ಗ್ಯಾಸನೊವಾ ಎದುರು ಜಯಭೇರಿ ಮೊಳಗಿಸಿದರು.

ಪಕೆಟ್ ಮಣಿಸಿದ ಥಂಡಿ: ಎಂಟನೇ ಶ್ರೇಯಾಂಕದ ಕ್ಲೊಯ್ ಪಕೆಟ್ ಅವರಿಗೆ ಆಘಾತ ನೀಡಿದ ಭಾರತದ ಕರ್ಮನ್‌ಕೌರ್ ಥಂಡಿ, ಎರಡನೇ ಸುತ್ತಿಗೆ ಕಾಲಿಟ್ಟರು.

ಮೊದಲ ಸುತ್ತಿನಲ್ಲಿ ಸೋಮವಾರ ಕರ್ಮನ್ 4-6 6-4 6-3ರಿಂದ ಫ್ರಾನ್ಸ್‌ನ ಕ್ಲೊಯ್ ಅವರನ್ನು ಮಣಿಸಿದರು.

ಜರ್ಮನಿಯ ತತಿಯಾನಾ ಮರಿಯಾ ಆಟದ ಪರಿ– ಪಿಟಿಐ ಚಿತ್ರ

ಇದರೊಂದಿಗೆ ತಮ್ಮ ವೃತ್ತಿಜೀವನದ ಶ್ರೇಷ್ಠ ಗೆಲುವು ದಾಖಲಿಸಿದರು.

ಜಿದ್ದಾಜಿದ್ದಿನ ಪಂದ್ಯದಲ್ಲಿ ಮೊದಲ ಸೆಟ್ ಕೈಚೆಲ್ಲಿದ ಬಳಿಕ, ಎರಡನೇ ಸೆಟ್‌ನಲ್ಲಿ ತಿರುಗೇಟು ನೀಡಿದರು. ವೇಗದ ಸರ್ವ್‌ಗಳನ್ನು ಪ್ರಯೋಗಿಸುವ ಮೂಲಕ ವಿಶ್ವ ರ‍್ಯಾಂಕಿಂಗ್‌ನಲ್ಲಿ 109ನೇ ಸ್ಥಾನದಲ್ಲಿರುವ ಆಟಗಾರ್ತಿಯನ್ನು ಕಂಗೆಡಿಸಿದರು. ಮೂರನೇ ಸೆಟ್‌ನಲ್ಲಿ ಮತ್ತಷ್ಟು ಚುರುಕಿನ ಆಟದ ಮೂಲಕ ಗೆಲುವು ಒಲಿಸಿಕೊಳ್ಳುವಲ್ಲಿ ಯಶಸ್ವಿಯಾದರು.

'ಇದು ಖಂಡಿತವಾಗಿಯೂ ದೊಡ್ಡ ಜಯ. ಮೊದಲ ಸೆಟ್ ಸೋತರೂ ಪುಟಿದೇಳುವ ವಿಶ್ವಾಸ ಇತ್ತು. ತವರಿನ ಅಭಿಮಾನಿಗಳ ಬೆಂಬಲವೂ ಬಹಳಷ್ಟಿತ್ತು' ಎಂದು ಕರ್ಮನ್ ಕೌರ್ ಪ್ರತಿಕ್ರಿಯಿಸಿದರು.

ಡಬ್ಲ್ಯುಟಿಟಿ ಕಂಟೆಂಡರ್ ಟಿಟಿ: ತೇಶುಭ್‌ಗೆ ಕಂಚು

ಬೆಂಗಳೂರು: ಭಾರತದ ತೇಶುಭ್ ದಿನೇಶ್ ಅವರು ಥಾಯ್ಲೆಂಡ್‌ನ ಬ್ಯಾಂಕಾಕ್‌ನಲ್ಲಿ ನಡೆದ ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಮಂಗಳವಾರ ನಡೆದ ಬಾಲಕರ 13 ವರ್ಷದೊಳಗಿನವರ ವಿಭಾಗದ ಸೆಮಿಫೈನಲ್‌ನಲ್ಲಿ ತೇಶುಭ್ 11-9, 10-12, 9-11, 8-11ರಿಂದ ಮಲೇಷ್ಯಾದ ಲಾಯಿ ಯೊಂಗ್ ರೆನ್ ಎದುರು ಎಡವಿದರು. ಮೊದಲ ಗೇಮ್ ಗೆದ್ದ ಕರ್ನಾಟಕದ ಆಟಗಾರ ನಂತರದ ಮೂರು ಗೇಮ್‌ಗಳನ್ನು ಕೈಚೆಲ್ಲಿದರು.

ಇದಕ್ಕೂ ಮೊದಲು ಎಂಟರ ಘಟ್ಟದ ಹಣಾಹಣಿಯಲ್ಲಿ ತೇಶುಭ್ 14-12, 12-10, 11-6ರಿಂದ ಹಾಂಗ್‌ಕಾಂಗ್‌ನ ವು ರ‍್ಯಾನ್ ಎದುರು ಗೆದ್ದಿದ್ದರು. ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 11-8, 7-11, 11-6, 11-5ರಿಂದ ಥಾಯ್ಲೆಂಡ್‌ನ ಅಪಿಪೂಮ್ ಅವರನ್ನು ಮಣಿಸಿದ್ದರು.

ಪದಕದೊಂದಿಗೆ ತೇಶುಭ್ ದಿನೇಶ್

ಅಲ್ಬನ್‌ಗೆ ಉಸಿರಾಟ ಸಮಸ್ಯೆ

ಮೊಂಜಾ, ಇಟಲಿ (ಎಪಿ): ಅಪೆಂಡಿಸೈಟಿಸ್ ಕಾರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಫಾರ್ಮುಲಾ ಒನ್ ಚಾಲಕ ಅಲೆಕ್ಸ್ ಅಲ್ಬನ್ ಸೋಮವಾರ ಉಸಿರಾಟದ ಸಮಸ್ಯೆಯಿಂದ ಬಳಲಿದರು. ಹೀಗಾಗಿ ಅವರನ್ನು ವೆಂಟಿಲೇಟರ್‌ನಲ್ಲಿ ಇರಿಸಲಾಗಿತ್ತು.

ಬ್ರಿಟನ್‌ನ ಅಲ್ಬನ್ ಶನಿವಾರ ಇಟಾಲಿಯನ್ ಗ್ರ್ಯಾನ್‌ಪ್ರಿಯಿಂದ ಹಿಂದೆ ಸರಿದಿದ್ದರು. ಬಳಿಕ ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ತೀವ್ರ ನಿಗಾ ಘಟಕದಲ್ಲಿ ದಾಖಲಾಗಿದ್ದ ಅವರಿಗೆ ಕೃತಕ ಉಸಿರಾಟ ಅಳವಡಿಸಲಾಗಿತ್ತು ಎಂದು ಅವರ ತಂಡ 'ವಿಲಿಯಮ್ಸ್' ಪ್ರಕಟಣೆಯಲ್ಲಿ ತಿಳಿಸಿದೆ.


ಅಲೆಕ್ಸ್ ಅಲ್ಬನ್

ಫುಟ್‌ಬಾಲ್: ತಮಾಂಗ್ ಹ್ಯಾಟ್ರಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಸಂಗ್ ದೋರ್ಜಿ ತಮಾಂಗ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಫುಟ್‌ಬಾಲ್ ಕ್ಲಬ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ (ಬಿಎಫ್‌ಎಸ್) ನಡೆಯುತ್ತಿರುವ ಟೂರ್ನಿಯಲ್ಲಿ ಮಂಗಳವಾರ ಡ್ರೀಮ್ ಯುನೈಟೆಡ್ 5–3ರಿಂದ ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ತಮಾಂಗ್ ಅವರು 46, 57 ಮತ್ತು 64ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಜೈ ಹರಿ ಬರ್ಮನ್ (35ನೇ ನಿಮಿಷ) ಮತ್ತು ರಾಬಿನ್ ಚೆಟ್ರಿ (51ನೇ ನಿಮಿಷ) ವಿಜೇತ ತಂಡಕ್ಕಾಗಿ ಗೋಲು ದಾಖಲಿಸಿದರು.

ಎಎಸ್‌ಸಿ ಆ್ಯಂಡ್ ಸೆಂಟರ್ ತಂಡಕ್ಕಾಗಿ ಚನಂಬಮ್ ಸಮಂದಾ ಸಿಂಗ್ (15ನೇ ನಿಮಿಷ), ಅಜಿತ್ ದೌಲತ್ ರಾಮ್ (71ನೇ ನಿಮಿಷ) ಮತ್ತು ತೊಂಗ್‌ಬ್ರಮ್ ಕೃಷ್ಣಕಾಂತ್ ಸಿಂಗ್ (90 + 2ನೇ ನಿಮಿಷ, ಪೆನಾಲ್ಟಿ ಕಾರ್ನರ್) ಅವರು ಗೋಲು ದಾಖಲಿಸಿದರು.

ಬುಧವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿರುವ ಪಂದ್ಯದಲ್ಲಿ ಬೆಂಗಳೂರು ಯುನೈಟೆಡ್ ಎಫ್‌ಸಿ– ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ಮುಖಾಮುಖಿಯಾಗಲಿವೆ.

ಬೆಂಗಳೂರು ಡ್ರೀಮ್ ಯುನೈಟೆಡ್‌ನ ಪಸಂಗ್ ತಮಾಂಗ್ (ಬಲ) ಮತ್ತು ಎಎಸ್‌ಸಿ ಸೆಂಟರ್ ತಂಡದ ಬೊಯ್‌ನಾವೊ ಸಿಂಗ್ ಚೆಂಡಿನ ಮೇಲೆ ಹತೋಟಿಗೆ ಯತ್ನಿಸಿದರು–ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಮಹಿಳಾ ಲೀಗ್: ಪರಿಕ್ರಮ ತಂಡಕ್ಕೆ ಜಯ

ಸೋನಾಲಿ ಮಂಡಲ್ ಗಳಿಸಿದ ಎರಡು ಗೋಲುಗಳು ಪರಿಕ್ರಮ ಎಫ್‌ಸಿ ತಂಡಕ್ಕೆ ಗೆಲುವು ತಂದುಕೊಟ್ಟವು. ಕೆಎಸ್‌ಎಫ್‌ಎ ಮಹಿಳಾ ಲೀಗ್‌ನಲ್ಲಿ ಆ ತಂಡವು 4–0ಯಿಂದ ರೂಟ್ಸ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ಬಿಎಫ್‌ಎಸ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಸೋನಾಲಿ 77 ಮತ್ತು 88ನೇ ನಿಮಿಷದಲ್ಲಿ ಗೋಲು ಗಳಿಸಿದರು. ಸ್ಫೂರ್ತಿ ಕೆ.ಯು. (2ನೇ ನಿ.) ಮತ್ತು ಪಾಖಿಲಾ ಬೋರೊ (9ನೇ ನಿಮಿಷ) ಪರಿಕ್ರಮ ಗೆಲುವಿಗೆ ಕೊಡುಗೆ ನೀಡಿದರು.

ಇನ್ನೊಂದು ಪಂದ್ಯದಲ್ಲಿ ಕೆಂಪ್ ಎಫ್‌ಸಿ 1–1ರಿಂದ ಮಿಸಾಕ ಯುನೈಟೆಡ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು. ಕೆಂಪ್ ತಂಡಕ್ಕಾಗಿ ಸುನಿತಾ ಸರ್ಕಾರ್ (61ನೇ ನಿ.) ಮತ್ತು ಮಿಸಾಕ ಪರ ನಿಸಿಲಾ ಮಜಾವ್ (67ನೇ ನಿ.) ಗೋಲು ಹೊಡೆದರು.

ಬುಧವಾರ ನಡೆಯುವ ಪಂದ್ಯಗಳಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ– ಪಿಂಕ್ ಪ್ಯಾಂಥರ್ಸ್ ಎಫ್‌ಸಿ, ರೆಬೆಲ್ಸ್– ಮಾತೃ ಪ್ರತಿಷ್ಠಾನ ಸೆಣಸಲಿವೆ.

ಫೆಡರೇಷನ್ ಕಪ್: ರಾಜ್ಯ ಕುಸ್ತಿ ತಂಡದ ಆಯ್ಕೆ ನಾಳೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ದೆಹಲಿಯಲ್ಲಿ ಸೆಪ್ಟೆಂಬರ್ 22 ಮತ್ತು 23ರಂದು ನಡೆಯಲಿರುವ 17 ವರ್ಷದೊಳಗಿನವರ ಫೆಡರೇಷನ್ ಕಪ್ ಕುಸ್ತಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡದ ಆಯ್ಕೆ ಟ್ರಯಲ್ಸ್ ಮೈಸೂರಿನಲ್ಲಿ ಗುರುವಾರ ನಡೆಯಲಿದೆ.

ಬಾಲಕ ಮತ್ತು ಬಾಲಕಿಯರಿಗಾಗಿ ಗ್ರೀಕೊ ರೋಮನ್ ಮತ್ತು ಫ್ರೀಸ್ಟೈಲ್ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ

ಮೈಸೂರಿನ ಮಹಾರಾಜ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ಬೆಳಿಗ್ಗೆ 7ಕ್ಕೆ ಆಯ್ಕೆ ಪ್ರಕ್ರಿಯೆ ಆರಂಭಗೊಳ್ಳಲಿದೆ. ಎಲ್ಲ ಕುಸ್ತಿಪಟುಗಳು ಹಾಗೂ ತರಬೇತುದಾರರು ಸಮಯಕ್ಕೆ ಸರಿಯಾಗಿ ಹಾಜರಿರಬೇಕು ಎಂದು ದಾವಣಗೆರೆ ಕ್ರೀಡಾ ವಸತಿ ಶಾಲೆಯ ತರಬೇತುದಾರ ಕೆ. ವಿನೋದ್ ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 7019909528 ಅಥವಾ 9845727392ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಶ್ವ ರ‍್ಯಾಂಕಿಂಗ್: ಪ್ರಣಯ್ ಜಿಗಿತ

ನವದೆಹಲಿ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಆಟಗಾರ ಎಚ್.ಎಸ್. ಪ್ರಣಯ್ ಅವರು ಬಿಡಬ್ಲ್ಯುಎಫ್ ವಿಶ್ವ ರ‍್ಯಾಂಕಿಂಗ್‌ನಲ್ಲಿ 16ನೇ ಸ್ಥಾನಕ್ಕೇರಿದ್ದಾರೆ.

ಮಂಗಳವಾರ ಪ್ರಕಟವಾಗಿರುವ ಕ್ರಮಾಂಕದಲ್ಲಿ ಅವರು ಎರಡು ಸ್ಥಾನಗಳ ಬಡ್ತಿ ಪಡೆದಿದ್ದಾರೆ. ಪ್ರಣಯ್ ಅವರು ಇತ್ತೀಚೆಗೆ ನಡೆದ ವಿಶ್ವ ಚಾಂಪಿಯನ್‌ಷಿಪ್ ಮತ್ತು ಜಪಾನ್ ಓಪನ್ ಸೂಪರ್ ಟೂರ್ನಿಗಳಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದರು. ಸದ್ಯ ಅವರ ಬಳಿ 64,330 ರೇಟಿಂಗ್ ಪಾಯಿಂಟ್‌ಗಳಿವೆ.

30 ವರ್ಷದ ಪ್ರಣಯ್ ಇತ್ತೀಚೆಗೆ ಭಾರತೀಯರ ಪೈಕಿ ಅಗ್ರ ಕ್ರಮಾಂಕದ ಸಿಂಗಲ್ಸ್ ಆಟಗಾರನಾಗಿ ಹೊರಹೊಮ್ಮಿದ್ದರು. ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್‌ಗೆ ಅರ್ಹತಾ ಟೂರ್ನಿಯಾಗಿರುವ ಗ್ವಾಂಗ್‌ಜು ಕೂಟದಲ್ಲಿ ಅವರು ಸ್ಪರ್ಧಿಸಲಿದ್ದಾರೆ.

ಕಿದಂಬಿ ಶ್ರೀಕಾಂತ್ ಕೂಡ ಎರಡು ಸ್ಥಾನ ಬಡ್ತಿ ಸಾಧಿಸಿದ್ದು, 12ನೇ ಸ್ಥಾನ ತಲುಪಿದ್ದಾರೆ. ಲಕ್ಷ್ಯ ಸೇನ್ ಒಂಬತ್ತನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್ ಮತ್ತು ಜಪಾನ್ ಓಪನ್ ಟೂರ್ನಿಗಳಲ್ಲಿ ಗಾಯದಿಂದಾಗಿ ಕಣಕ್ಕಿಳಿಯದ ಪಿ.ವಿ. ಸಿಂಧು ಅವರು ಏಳನೇ ಸ್ಥಾನಕ್ಕೇರಿದ್ದಾರೆ. ಅವರಿಗೆ ಒಂದು ಸ್ಥಾನ ಬಡ್ತಿ ಲಭಿಸಿದೆ. ಮತ್ತೊಬ್ಬ ಆಟಗಾರ್ತಿ ಸೈನಾ ನೆಹ್ವಾಲ್ 30ನೇ ಸ್ಥಾನದಲ್ಲಿದ್ದಾರೆ. ಅವರೂ ಮೂರು ಸ್ಥಾನಗಳ ಏರಿಕೆ ದಾಖಲಿಸಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ– ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಎಂಟನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಮಹಿಳಾ ಡಬಲ್ಸ್‌ನಲ್ಲಿ ಕರ್ನಾಟಕದ ಅಶ್ವಿನಿ ಪೊನ್ನಪ್ಪ ಮತ್ತು ಎನ್.ಸಿಕ್ಕಿ ರೆಡ್ಡಿ ಜೋಡಿ ಒಂದು ಸ್ಥಾನ ಇಳಿಕೆ ಕಂಡಿದ್ದು 28ನೇ ಸ್ಥಾನದಲ್ಲಿದೆ.

ಮಿಶ್ರ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ ಮತ್ತು ಇಶಾನ್ ಭಟ್ನಾಗರ್ ಅವರು ಜೀವನಶ್ರೇಷ್ಠ 33ನೇ ಕ್ರಮಾಂಕದಲ್ಲಿದ್ದಾರೆ. ಈ ಜೋಡಿಯು ಎರಡು ಸ್ಥಾನಗಳ ಬಡ್ತಿ ಪಡೆದಿದೆ.

ಎಚ್.ಎಸ್. ಪ್ರಣಯ್– ಎಎಫ್‌ಪಿ ಚಿತ್ರ

ಫುಟ್‌ಬಾಲ್: ಭಾರತ ತಂಡಕ್ಕೆ ಸೋಲು

ಕಠ್ಮಂಡು (ಪಿಟಿಐ): ಭಾರತ ಮಹಿಳಾ ಫುಟ್‌ಬಾಲ್ ತಂಡವು ಸ್ಯಾಫ್ ಚಾಂಪಿಯನ್‌ಷಿಪ್‌ನ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಬಾಂಗ್ಲಾದೇಶ ಎದುರು ಸೋಲನುಭವಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಭಾರತ 0–3ರಿಂದ ಬಾಂಗ್ಲಾ ವಿರುದ್ಧ ಮಣಿಯಿತು. ವಿಜೇತ ತಂಡದ ಪರ ಎಂ.ಎಸ್. ಜಹಾನ್ ಶೋಪ್ನಾ ಎರಡು ಮತ್ತು ಶ್ರೀಮತಿ ಸರ್ಕಾರ್ ಒಂದು ಗೋಲು ಹೊಡೆದರು.

ಭಾರತ ಈಗಾಗಲೇ ಸೆಮಿಫೈನಲ್ ತಲುಪಿರುವುದರಿಂದ ಈ ಸೋಲು ತಂಡದ ಮೇಲೆ ಯಾವುದೇ ಪರಿಣಾಮ ಬೀರಿಲ್ಲ